₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 11.01.2025 ಸಂಪುಟ: 67 ಸಂಚಿಕೆ: 246 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಜಿಮ್ ಕಸರತ್ತಿನ ವೇಳೆ ರಶ್ಮಿಕಾ ಮಂದಣ್ಣಗೆ ಗಾಯ

ಸಿಕಂದರ್ ಚಲನಚಿತ್ರದ ಚಿತ್ರೀಕರಣ ಸ್ಥಗಿತ

ಪುಟ ತೆರೆದಂತೆ...

ಇವರು ನಟೋರಿಯಸ್ ನಗರ ನಕ್ಸಲರು
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6



ಅರ್ಧಸತ್ಯಗಳು ಸುಳ್ಳಿಗಿಂತಲೂ ಅಪಾಯಕಾರಿ
ವಿಚಾರ ವೇದಿಕೆ
ಗಣೇಶ್‌ಭಟ್ ವಾರಾಣಸಿ
ಸಂ.ಗಮ | 7

ಮಾತಂದ್ರೆ ಮಾತು

ಕ್ಯಾನ್ಸರ್ ಗೆದ್ದು ಕ್ರಿಕೆಟ್‌ಗೆ ಮರಳಿದ ಆಲ್‌ರೌಂಡರ್ ಯುವರಾಜ್ ಸಿಂಗ್ ಅವರ ಕ್ರಿಕೆಟ್ ಜೀವನ ಮೊಟಕುಗೊಳ್ಳಲು ಪರೋಕ್ಷವಾಗಿ ವಿರಾಟ್ ಕೊಹ್ಲಿ ಹೊಣೆಗಾರರು. ತಂಡಕ್ಕೆ ಮರಳಿ ಬಂದಾಗ ತಮಗೆ ಫಿಟ್‌ನೆಸ್‌ನಲ್ಲಿ ಕೆಲವು ರಿಯಾಯಿತಿ ನೀಡುವಂತೆ ಯುವಿ ಮನವಿ ಮಾಡಿದ್ದರು. ಇದಕ್ಕೆ ತಂಡದ ಆಗಿನ ನಾಯಕ ಕೊಹ್ಲಿ ಒಪ್ಪಿರಲಿಲ್ಲ.

- ರಾಬಿನ್ ಉತ್ತಪ್ಪ
ಭಾರತ ತಂಡದ ಮಾಜಿ ಬ್ಯಾಟರ್

ದಾರಿದೀಪೋಕ್ತಿ

ನಿಮಗೆ ಸುಸ್ತಾದಾಗ ದಣಿವಾರಿಸಿಕೊಳ್ಳಬೇಕೇ ಹೊರತು, ಕೈಗೆತ್ತಿಕೊಂಡ ಕೆಲಸವನ್ನು ನಿಲ್ಲಿಸಬಾರದು. ಕೆಲಸ ಪೂರ್ತಿಯಾದಾಗಲೇ ದಣಿವಾರಿಸಿಕೊಳ್ಳಬೇಕು. ಈ ನಿಯಮವನ್ನು ಪಾಲಿಸಿದ್ದೇ ಆದಲ್ಲಿ, ನೀವು ಕೈಗೆತ್ತಿಕೊಂಡ ಯಾವ ಕೆಲಸವನ್ನೂ ಅರ್ಧಕ್ಕೆ ನಿಲ್ಲಿಸುವುದಿಲ್ಲ.

ವಕ್ರತುಂಡೋಕ್ತಿ

ಎಲ್ಲ ಗಂಡಸರಿಗೂ ಅವರವರ ಪತ್ನಿಯೇ ಶಕ್ತಿ. ಉಳಿದವರೇ ವೀಕ್ನೆಸ್.

ಫನ್‌ತರಂಗ

- ರಘುಪತಿ ಶೃಂಗೇರಿ -

ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಚಿರತೆ
ಸುದ್ದಿ





'ಪೂರ್ವದ ನೊಬೆಲ್' ಖ್ಯಾತಿಯ ಶಾ ಪ್ರಶಸ್ತಿ ಪುರಸ್ಕೃತ ಶ್ರೀನಿವಾಸ ಆರ್.ಕುಲಕರ್ಣಿ ಸಂದರ್ಶನ

ಬೆಂಗಳೂರಿನ ಟೆಲಿಸ್ಕೋಪ್ ಮೂಲಕ ವಿಶ್ವದ ಖಗೋಳ ಭೂಪಟಕ್ಕೆ ಭಾರತ

ಸಂದರ್ಶಕರು
ಹರೀಶ್ ಕೇರ, ರೂಪಾ ಗುರುರಾಜ್

ಶ್ರೀನಿವಾಸ್ ಆರ್.ಕುಲಕರ್ಣಿ ಅವರು ಅಮೆರಿಕದಲ್ಲಿ ನೆಲೆಸಿರುವ, ಕರ್ನಾಟಕದ ಹುಬ್ಬಳ್ಳಿ ಮೂಲದ ಖ್ಯಾತ ಖಗೋಳಶಾಸ್ತ್ರಜ್ಞ. ಖಗೋಳಶಾಸ್ತ್ರದಲ್ಲಿ ನೀಡಿದ ಕೊಡುಗೆಗಾಗಿ 2024ರ ಪ್ರತಿಷ್ಠಿತ 'ಶಾ' ಪ್ರಶಸ್ತಿ (Shaw Prize) ಇವರಿಗೆ ಸಂದಿದೆ. ಇದು 'ನೊಬೆಲ್' ಆಫ್ ದಿ ಈಸ್ಟ್ ಎಂದೇ ಖ್ಯಾತ. ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರೊಫೆಸರ್ ಆಗಿದ್ದ ಅವರು ರಾಯಲ್ ಸೊಸೈಟಿ ಆಫ್ ಲಂಡನ್, ಅಮೆರಿಕದ ಹಾಗೂ ಭಾರತದ ವೈಜ್ಞಾನಿಕ ಅಕಾಡೆಮಿಗಳ ಸದಸ್ಯರೂ ಹೌದು. ಇನ್ಫೋಸಿಸ್‌ನ ಸುಧಾಮೂರ್ತಿ ಸಹೋದರರನೂ ಆಗಿರುವ ಅವರ ಸಂದರ್ಶನ ಇಲ್ಲಿದೆ.

• 2024ರ ಶಾ ಪ್ರಶಸ್ತಿ ಪುರಸ್ಕೃತರಾದ ನಿಮಗೆ ಅಭಿನಂದನೆಗಳು. ಇದರ ಮಹತ್ವ ಏನು?
ನೊಬೆಲ್ ಪುರಸ್ಕಾರದಲ್ಲಿ ಖಗೋಳಶಾಸ್ತ್ರ, ಜೀವಶಾಸ್ತ್ರ ಹಾಗೂ ಗಣಿತ ಸೇರ್ಪಡೆ ಆಗಿರಲಿಲ್ಲ. ಈ ಕ್ಷೇತ್ರಗಳ ಮಹತ್ವದ ಮನವರಿಕೆ ಮಾಡಿಕೊಡಲು ಹಾಂಕಾಂಗ್‌ನ ಮನರಂಜನಾ ಮಾಧ್ಯಮ ದೊರೆ ರನ್ ರನ್ ಶಾ ಎಂಬುವವರು ನೊಬೆಲ್‌ಗೆ ಪೂರಕವಾಗಿ ಈ ಪ್ರಶಸ್ತಿ ಸ್ಥಾಪಿಸಿ ಈ ಮೂರು ಕ್ಷೇತ್ರಗಳಿಗೆ ನೀಡತೊಡಗಿದರು. ಇದರ ಬಹುಮಾನ ಧನದ ಮೊತ್ತ ನೊಬೆಲ್‌ಗಿಂತ ಸ್ವಲ್ಪ ಹೆಚ್ಚು ಇದೆ-1.2 ದಶಲಕ್ಷ ಡಾಲರ್. ಖಗೋಳಶಾಸ್ತ್ರದಲ್ಲಿ ನಾನು ನೀಡಿದ ಕೊಡುಗೆ ಗುರುತಿಸಿ ಇದನ್ನು ನನಗೆ ನೀಡಲಾಗಿದೆ.

• ಭಾರತ ಸರಕಾರ, ಇಸ್ರೋ ಜತೆಗೆ ಒಟ್ಟಾಗಿ ನೀವು ಏನಾದರೂ ಪ್ರಾಜೆಕ್ಟ್ ಮಾಡಿದ್ದೀರಾ?
ಹೌದು, 30 ಮೀಟರ್‌ನ ವಿಶ್ವದ ಬೃಹತ್ ಆಪ್ಟಿಕಲ್ ಟೆಲಿಸ್ಕೋಪ್ ಪ್ರಾಜೆಕ್ಟ್ ಮಾಡಿದ್ದೆ. 2010ರಲ್ಲಿ ಆಗ ಮನಮೋಹನ್ ಸಿಂಗ್ ಅವರ ಸರಕಾರ ಇತ್ತು. ಈ ವಿಷಯದಲ್ಲಿ ಅಮೆರಿಕ, ಚೀನಾ ಜಪಾನ್‌ಗಿಂತ ನಾವು ಯಾವಾಗಲೂ ಹಿಂದೆ ಬೀಳುತ್ತೇವೆ. ರಿಸ್ಕ್ ತಗೊಂಡು ಮಾಡೋಣ ಎಂದೆವು. ಸಿಂಗ್ ಒಪ್ಪಿದರು, ಅದು ಈಗ ಕೈಗೂಡುತ್ತಿದೆ. ಬೆಂಗಳೂರಿನ ಹತ್ತಿರದ ಹೊಸಕೋಟೆಯಲ್ಲಿ ಬೃಹತ್ ಟೆಲಿಸ್ಕೋಪ್ ಸ್ಥಾಪಿಸುವ ಕೆಲಸ ಆಗುತ್ತಿದೆ. ಕೆಲಸದ ಮೂರನೇ ಒಂದು ಭಾಗ ಆಗಿದೆ. ಆದರೆ ಜಮೀನು ವಿವಾದದಿಂದಾಗಿ ಅದು ಸ್ವಲ್ಪ ಹಿಂದೆ ಬಿದ್ದಿದೆ. ಇದರಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಜತೆಗೆ ಇನ್ನೂ 70 ಸಂಸ್ಥೆಗಳು ಸೇರಿಕೊಂಡಿವೆ. ಇದು ಪೂರ್ಣವಾದರೆ ನಾವು ಜಪಾನ್, ಅಮೆರಿಕ ಮೊದಲಾದ ರಾಷ್ಟ್ರಗಳನ್ನು ಸರಿಗಟ್ಟುತ್ತೇವೆ. ಇದು ನನಗೆ ತುಂಬಾ ಸಂತೋಷ ನೀಡಿದ ಸಂಗತಿ.

ಸಂಪೂರ್ಣ ಸಂದರ್ಶನ ಪುಟ → 7

ಉ. ಪ್ರದೇಶಕ್ಕೆ ಗರಿಷ್ಠ ₹31,039 ಕೋಟಿ, ರಾಜ್ಯಕ್ಕೆ ₹6,310 ಕೋಟಿ ಹಂಚಿಕೆ

ತೆರಿಗೆ ಪಾಲು ಯುಪಿಗೆ ಬೆಣ್ಣೆ ರಾಜ್ಯಕ್ಕೆ ಸುಣ್ಣ

ದೆಹಲಿ: ಕೇಂದ್ರ ಸರಕಾರವು ಲಂಬ ವಿಕೇಂದ್ರೀಕರಣ ನಿಯಮದಂತೆ ಎಲ್ಲ ರಾಜ್ಯ ಸರಕಾರಗಳಿಗೆ 1,73,030 ಕೋಟಿ ರು. ತೆರಿಗೆ ಪಾಲಿನ ಕಂತನ್ನು ಬಿಡುಗಡೆ ಮಾಡಿದೆ. 2024 ರ ಡಿಸೆಂಬರ್‌ನಲ್ಲಿ 89,086 ಕೋಟಿ ರು. ಗಳನ್ನು 28 ರಾಜ್ಯಗಳಿಗೆ ಕೇಂದ್ರ ಸರಕಾರವು ವಿತರಿಸಬೇಕಿತ್ತು. ಬದಲಾಗಿ 1,73,030 ಕೋಟಿ ಬಿಡುಗಡೆ ಮಾಡಿದೆ.

ಉತ್ತರ ಪ್ರದೇಶಕ್ಕೆ ಗರಿಷ್ಠ 31,039.84 ಕೋಟಿ ರು. ತೆರಿಗೆ ಹಂಚಿಕೆಯಾಗಿದ್ದು, ನಂತರದ ಸ್ಥಾನದಲ್ಲಿ ಬಿಹಾರ 17,403.36 ಕೋಟಿ ರು. ಪಡೆದಿದೆ. ಕರ್ನಾಟಕಕ್ಕೆ 6310.40 ಕೋಟಿ ರು. ಬಿಡುಗಡೆ ಯಾಗಿದೆ. 15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಆರ್ಥಿಕ ವರ್ಷದಲ್ಲಿ ಕೇಂದ್ರ ಸರಕಾರ ಸಂಗ್ರಹಿಸುವ ತೆರಿಗೆಯಲ್ಲಿ ಶೇ.41 ಮೊತ್ತವನ್ನು ರಾಜ್ಯ ಸರಕಾರಗಳಿಗೆ 14 ಕಂತುಗಳಲ್ಲಿ ಹಂಚಿಕೆ ಮಾಡಲಾಗುತ್ತದೆ. ರಾಜ್ಯಗಳಿಗೆ ಅಭಿವೃದ್ಧಿ ಹಾಗೂ ಬಂಡವಾಳ ವೆಚ್ಚಕ್ಕೆ ಹೆಚ್ಚಿನ ಹಣ ತೊಡಗಿಸಲು ಅನುಕೂಲ ಮಾಡಲು ಈ ಕಂತು ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ತೆರಿಗೆಗಳ ನಿವ್ವಳ ಆದಾಯದಲ್ಲಿ ಈ ಹಂಚಿಕೆ: ತೆರಿಗೆ ವಿಕೇಂದ್ರೀಕರಣವು ಕೇಂದ್ರ ಸರಕಾರವು ತಾನು ಸಂಗ್ರಹಿಸುವ ತೆರಿಗೆಗಳ ನಿವ್ವಳ ಆದಾಯವನ್ನು ರಾಜ್ಯಗಳಿಗೆ ವಿತರಿಸುವ ಪ್ರಕ್ರಿಯೆಯಾಗಿದೆ. ಹಣಕಾಸು ಆಯೋಗದ ಶಿಫಾರಸುಗಳ ಆಧಾರದ ಮೇಲೆ ಕೇಂದ್ರ ಸರಕಾರವು ರಾಜ್ಯಗಳಿಗೆ ನಿಯಮಿತ ಕಂತುಗಳಲ್ಲಿ ತೆರಿಗೆ ಮೊತ್ತವನ್ನು ಹಂಚಿಕೆ ಮಾಡುತ್ತದೆ. ಕಾರ್ಪೊರೇಟ್ ತೆರಿಗೆ, ವೈಯಕ್ತಿಕ ಆದಾಯ ತೆರಿಗೆ ಮತ್ತು ಕೇಂದ್ರ ಜಿಎಸ್‌ಟಿ ಸೇರಿದಂತೆ ಎಲ್ಲ ತೆರಿಗೆಗಳ ಒಟ್ಟು ನಿವ್ವಳ ಆದಾಯದಲ್ಲಿ ರಾಜ್ಯಗಳಿಗೆ ನೀಡಬೇಕಾದ ಪಾಲಿನ ಬಗ್ಗೆ ಹಣಕಾಸು ಆಯೋಗ ಶಿಫಾರಸು ಮಾಡುತ್ತದೆ.

→ 4

ಏನಿದು ಲಂಬ ವಿಕೇಂದ್ರೀಕರಣ?

2021-26ರ ಅವಧಿಗೆ ಕೇಂದ್ರ ಸರಕಾರದ ವಿಭಜಿತ ತೆರಿಗೆ ಸಂಗ್ರಹದ ಶೇ.41ರಷ್ಟು ರಾಜ್ಯಗಳಿಗೆ ಹಂಚಿಕೆ ಮಾಡಬೇಕು ಎಂದು 15ನೇ ಹಣಕಾಸು ಆಯೋಗ ಶಿಫಾರಸು ಮಾಡಿದೆ. ಇದನ್ನು ಲಂಬ ವಿಕೇಂದ್ರೀಕರಣ ಎಂದು ಕರೆಯಲಾಗುತ್ತದೆ. ಸಮತಲ ವಿಕೇಂದ್ರೀಕರಣ ಎಂದು ಕರೆಯಲ್ಪಡುವ ರಾಜ್ಯಗಳ ನಡುವೆ ನಿಧಿಗಳನ್ನು ವಿತರಿಸುವ ಮಾನದಂಡಗಳನ್ನು ಸಹ ಆಯೋಗವು ಶಿಫಾರಸು ಮಾಡಿದೆ. ಈ ಮಾನದಂಡಗಳಲ್ಲಿ ಆದಾಯದ ಅಂತರ ಮಾನದಂಡವೂ ಸೇರಿದ್ದು, ಇದು ಅತಿ ಹೆಚ್ಚು ತಲಾ ಆದಾಯವನ್ನು ಹೊಂದಿರುವ ರಾಜ್ಯದಿಂದ ರಾಜ್ಯದ ಆದಾಯದಲ್ಲಿನ ವ್ಯತ್ಯಾಸ ಪ್ರತಿ ಬಿಂಬಿಸುತ್ತದೆ.

ವೈಕುಂಠ ಏಕಾದಶಿ ಪ್ರಯುಕ್ತ ಬೆಂಗಳೂರಿನ ಇಸ್ಕಾನ್ ದೇವಸ್ಥಾನಕ್ಕೆ ಭೇಟಿ ನೀಡಿದ ಸಾವಿರಾರು ಭಕ್ತರು.
ಸುಧಾಕರ್ ಡಿ.

ಘಟನೆ ನಡೆದ 17 ದಿನಗಳ ನಂತರ ಪ್ರಕರಣದ ಐವರು ಆರೋಪಿಗಳ ವಿಚಾರಣೆ

ಪ್ರಿಯಾಂಕ್ ಖರ್ಗೆ ಆಪ್ತನ ಬಂಧನ

ಬೀದರ್: ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣ ಸಂಬಂಧ ಸಿಐಡಿ ಅಧಿಕಾರಿಗಳು ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ, ಕಲಬುರಗಿಯ ಮಾಜಿ ಕಾರ್ಪೊರೇಟರ್ ರಾಜು ಕಪನೂರ ಸೇರಿದಂತೆ ಐವರನ್ನು ಶುಕ್ರವಾರ ಸಂಜೆ ಬಂಧಿಸಿದ್ದಾರೆ.

ಮಾಜಿ ಜಿಪಂ ಉಪಾಧ್ಯಕ್ಷ ಗೋರಖನಾಥ ಸಜ್ಜನ್, ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಂದಕುಮಾರ ನಾಗಭುಜಂಗೆ, ಗುತ್ತಿಗೆದಾರ ರಾಮನ ಗೌಡ ಪಾಟೀಲ ಹಾಗೂ ಸತೀಶ ರತ್ನಾಕರ ದುಬಲಗುಂಡಿ ಅವರನ್ನು ಬಂಧಿಸಿ, ನಗರದ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯದ ಎದುರು ಹಾಜರುಪಡಿಸಿದರು. ನ್ಯಾಯಾಲಯವು ಅವರನ್ನು ಐದು ದಿನಗಳ ಕಸ್ಟಡಿಗೆ ನೀಡಿದೆ. ಘಟನೆ ನಡೆದ 17 ದಿನಗಳ ನಂತರ ಪ್ರಕರಣದ ಐವರು ಆರೋಪಿಗಳನ್ನು ಮೊದಲ ಬಾರಿಗೆ ವಿಚಾರಣೆಗೊಳಪಡಿಸಲಾಗಿದೆ.

ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ ರಾಜು ಕಪನೂರ ಅವರನ್ನು ಸಿಐಡಿ ಅಧಿಕಾರಿಗಳು ಶುಕ್ರವಾರ ಸಂಜೆ ಬಂಧಿಸಿ ಕರೆದೊಯ್ದರು.

ಜೆಡಿಎಸ್ ಇಬ್ಭಾಗ ಮಾಡಲು ಡಿಕೆಶಿ ಚಿಂತನೆ
ಪಕ್ಷ ಉಳಿಸಲು ಭಿನ್ನರ ಮೊರೆ ಹೋದ ಎಚ್‌ಡಿಕೆ

ಕಾಂಗ್ರೆಸ್ ಆಟ ದಳ ಪೀಕಲಾಟ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆಂತರಿಕ ಕಿತ್ತಾಟದ ಬೆನ್ನಲ್ಲೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಮ್ಮ 'ಬಲ' ಹೆಚ್ಚಿಸಿಕೊಳ್ಳಲು ಮುಂದಾಗಿದ್ದಾರೆ. ಇದರ ಭಾಗವಾಗಿ ಜೆಡಿಎಸ್‌ನಲ್ಲಿರುವ ಅತೃಪ್ತ ಶಾಸಕರಿಗೆ 'ಭರವಸೆ'ಗಳೊಂದಿಗೆ ಸೆಳೆಯಲು ಸದ್ದಿಲ್ಲದೇ ಸಿದ್ಧತೆ ನಡೆಸಿಕೊಂಡಿದ್ದಾರೆ.

ಕಾಂಗ್ರೆಸ್‌ನಲ್ಲಿ ಆಗಾಗ ಕೇಳಿಬರುವ ಅಧಿಕಾರ ಹಂಚಿಕೆ ವಿಚಾರ ಮುನ್ನೆಲೆಗೆ ಬಂದಾಗಲೆಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರು 'ಐದು ವರ್ಷವೂ ಸಿದ್ದು ಸಿಎಂ' ಎನ್ನುವ ಮಾತು ಹೇಳುತ್ತಿದ್ದಾರೆ. ಆದರೆ ಇದಕ್ಕೆ ಕೌಂಟರ್ ಕೊಡಲು ಡಿಕೆ ಬಣದಲ್ಲಿ 'ಸಂಖ್ಯೆ'ಯ ಕೊರತೆಯಿದೆ ಎನ್ನುವುದು ಕಾಂಗ್ರೆಸ್‌ನೊಳಗಿನ ಮಾತಾಗಿದೆ. ಆದ್ದರಿಂದ ಈ ಸಂಖ್ಯೆ ಹೆಚ್ಚಿಸಿಕೊಳ್ಳಲು, ಉಪಚುನಾವಣೆಯ ಗೋಜಲಿಲ್ಲದೇ, ಜೆಡಿಎಸ್ ಪಕ್ಷವನ್ನೇ ವಿಲೀನಗೊಳಿಸುವ ಲೆಕ್ಕಾಚಾರದಲ್ಲಿ ಡಿಕೆಶಿ ಇದ್ದಾರೆ ಎನ್ನಲಾಗಿದೆ.

ಸದ್ಯ ಜೆಡಿಎಸ್‌ನಲ್ಲಿ 18 ಶಾಸಕರಿದ್ದಾರೆ. ಉಪಚುನಾವಣೆ ಎದುರಿಸದೇ ಆ ಶಾಸಕರು ಕಾಂಗ್ರೆಸ್‌ಗೆ ಬರಬೇಕು ಎಂದರೆ ಕನಿಷ್ಠ 12 ಶಾಸಕರು ಪಕ್ಷಾಂತರಕ್ಕೆ ಮುಂದಾಗಬೇಕು. ಜೆಡಿಎಸ್‌ನಲ್ಲಿರುವ ಅತೃಪ್ತ ಶಾಸಕರನ್ನು ಗುರುತಿಸಿ, ಅವರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ಲೆಕ್ಕಾಚಾರದಲ್ಲಿ ಡಿಕೆಶಿ ಇದ್ದಾರೆ. ಈಗಾಗಲೇ ಕೆಲ ಹಂತದ ಚರ್ಚೆಗಳು ನಡೆದಿದ್ದು, 'ಭಾರಿ' ಆಫರ್ ನೀಡಿರುವುದರಿಂದ ಕೆಲ ಶಾಸಕರು ಬರಲು ತಯಾರಿದ್ದಾರೆ. ಕಾಂಗ್ರೆಸ್‌ನಲ್ಲಿ ಮುಂದಾಗುವ ಬದಲಾವಣೆಗಳನ್ನು ನೋಡಿಕೊಂಡು ಮುಂದಿನ ಹೆಜ್ಜೆ ಡಿಕೆ ಇರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

→ 5

ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷಾ ದಿನ ಫೈನಲ್

ಬೆಂಗಳೂರು: 2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆ-1 ಅಂತಿಮ ವೇಳಾಪಟ್ಟಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಶುಕ್ರವಾರ ಬಿಡುಗಡೆ ಮಾಡಿದೆ. ಮಾರ್ಚ್ 1ರಿಂದ 20ರವರೆಗೆ ದ್ವಿತೀಯ ಪಿಯು ಪರೀಕ್ಷೆ-1 ನಡೆಯುತ್ತಿದ್ದರೆ, ಮಾರ್ಚ್ 21ರಿಂದ ಏಪ್ರಿಲ್ 04 ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ನಡೆಯಲಿವೆ. ಡಿಸೆಂಬರ್‌ನಲ್ಲಿ ತಾತ್ಕಾಲಿಕ ವೇಳಾಪಟ್ಟಿ ಬಿಡುಗಡೆ ಮಾಡಲಾಗಿತ್ತು. ಇದೀಗ ಫೈನಲ್ ವೇಳಾಪಟ್ಟಿ ಪ್ರಕಟಿಸಲಾಗಿದೆ.

ನಕಲರ ಶಸ್ತ್ರಾಸ್ತ್ರಕ್ಕೆ ಶೋಧ: ಪರಂ

ಬೆಂಗಳೂರು: ಶರಣಾಗತರಾದ ನಕ್ಸಲರು ಶಸ್ತ್ರಾಸ್ತ್ರಗಳನ್ನು ಕಾಡಿನಲ್ಲಿ ಎಲ್ಲಿ ಬಿಸಾಕಿದ್ದಾರೆ ಎಂಬುದನ್ನು ಪೊಲೀಸರು ಪತ್ತೆ ಹಚ್ಚಲಿದ್ದಾರೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿದರು. ಶರಣಾಗತರಾಗಿರುವ ಗುಂಪಿನವರು ರವೀಂದ್ರ ಎಂಬಾತನನ್ನು ಹೊರ ಹಾಕಿದ್ದರು ಎನ್ನಲಾಗಿದೆ. ಯಾವ ಕಾರಣಕ್ಕೆ ಹೊರಹಾಕಿದ್ದರು ಎಂಬುದು ಗೊತ್ತಿಲ್ಲ. ತನಿಖೆ ನಡೆದಿದೆ. ಶರಣಾಗತರಾಗಿರುವ ಆರು ಜನರೇ ಕೊನೆ ಎಂಬುದಾಗಿದೆ. ಹೊರಗಡೆಯಿಂದ ಬಂದರೆ ನಿಗಾವಹಿಸಲಿದ್ದಾರೆ ಎಂದರು.

ಶಾಸಕ ಲಮಾಣಿ ಚಾಲಕ ಆತ್ಮಹತ್ಯೆ

ಗದಗ: ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಅವರ ನಿವಾಸದಲ್ಲಿಯೇ ಅವರ ಕಾರು ಚಾಲಕ ಸುನೀಲ್ ಲಮಾಣಿ (25) ಆತ್ಮ ಹತ್ಯೆಗೆ ಶರಣಾಗಿದ್ದಾರೆ. ಮೃತ ಸುನೀಲ್ ಲಮಾಣಿ ಹಾಗೂ ಚಂದ್ರು ಲಮಾಣಿ ಇಬ್ಬರೂ ಸಂಬಂಧಿ ಗಳಾಗಿದ್ದು, ಯಾವು ದೇ ಡೆತ್ ನೋಟ್ ಸಿಕ್ಕಿಲ್ಲ. ಮನೆ ಕಟ್ಟುವ ವಿಚಾರದಲ್ಲಿ ಸಹೋ ದರರ ನಡುವೆ ಕಲಹ ನಡೆದಿತ್ತು. ಇದರಿಂದಲೇ ಆತ್ಮಹತ್ಯೆ ಮಾಡಿ ಕೊಂಡಿರ ಬಹುದು ಎಂದು ಅಂದಾಜಿಸಲಾಗಿದೆ.

200ಕ್ಕೂ ಹೆಚ್ಚು ವಿಮಾನ ವ್ಯತ್ಯಯ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿ ಸುತ್ತ ಲಿನ ಪ್ರಾಂತ್ಯಗಳ ಮೇಲೆ ಶುಕ್ರವಾರ ದಟ್ಟ ಮಂಜು ಕವಿದ ಪರಿಣಾಮ ವಿಮಾನ ಹಾರಾಟ ಹಾಗೂ ರೈಲು ಸೇವೆ ವ್ಯತ್ಯಯಗೊಂಡಿದೆ. ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ನಿರ್ಗಮಿಸಬೇಕಿದ್ದ 210ಕ್ಕೂ ಹೆಚ್ಚು ವಿಮಾನಗಳು ವಿಳಂಬಗೊಂಡಿದ್ದು, ಐದು ವಿಮಾನಗ ಳನ್ನು ರದ್ದುಗೊಳಿಸಲಾಗಿದೆ. ವಿಮಾನ ನಿಲ್ದಾಣಕ್ಕೆ ಆಗಮಿಸಬೇಕಿದ್ದ ವಿಮಾನಗಳ ಪೈಕಿ 72 ವಿಮಾನಗಳು ವಿಳಂಬಗೊಂ ಡಿದ್ದು, ಒಂದು ವಿಮಾನ ರದ್ದುಗೊಳಿ ಸಲಾಗಿದೆ.

ಬೆಂಗಳೂರಲ್ಲಿ ಐಸಿಎಂಆರ್ ರೋಗನಿರ್ಣಯ ಲ್ಯಾಬ್

ಬೆಂಗಳೂರು: ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ದಕ್ಷಿಣ ಭಾರತದಲ್ಲಿ ಮೊದಲ ಸಾಂಕ್ರಾಮಿಕ ರೋಗ ಸಂಶೋಧನೆ ಮತ್ತು ರೋಗನಿರ್ಣಯ ಪ್ರಯೋಗಾಲಯಗಳನ್ನು ಸ್ಥಾಪಿಸಲು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯನ್ನು ಆಯ್ಕೆ ಮಾಡಿದೆ. ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಈ ರೀತಿಯ ಕೇಂದ್ರ ಆರಂಭವಾಗಲಿದ್ದು, ಇದರಿಂದ ರಾಜ್ಯದಲ್ಲಿ ಸಂಶೋಧನೆ ಕ್ಷೇತ್ರಕ್ಕೆ ನೆರವಾಗಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ ತಿಳಿಸಿದ್ದಾರೆ.

ಸಿಎಂ ಸಂಧಾನ ಯಶಸ್ವಿ, ಬೇಡಿಕೆ ಈಡೇರಿಕೆ ಭರವಸೆ

ಆಶಾ ಕಾರ್ಯಕರ್ತರ ಸಂಪು ಅಂತ್ಯ

- ಐದು ಸಾವಿರದಿಂದ 10 ಸಾವಿರಕ್ಕೆ ವೇತನ ಹೆಚ್ಚಳ
- ಅನಾರೋಗ್ಯ ಸಮಯದಲ್ಲಿ 3 ತಿಂಗಳವರೆಗೆ ವೇತನ ಸಹಿತ ರಜೆ

ಹೋರಾಟ ಮಾಡುವುದು ಸಂವಿಧಾನ ಬದ್ಧ ಹಕ್ಕು. ಪ್ರಜಾಸತ್ತಾತ್ಮಕ ಹೋರಾಟಗಳನ್ನು ಸರಕಾರ ಹತ್ತಿಕ್ಕುವುದಿಲ್ಲ. ಮುಷ್ಕರ ನಿರತ ಆಶಾ ಕಾರ್ಯಕರ್ತೆಯರ ಸಮಸ್ಯೆ ಆಲಿಸಿದ್ದು, ತಿಂಗಳಿಗೆ 10,000 ರು. ಹೆಚ್ಚುವರಿಯಾಗಿ ನೀಡುವ ಭರವಸೆ ನೀಡಲಾಗಿದೆ. ಅವರು ಅದಕ್ಕೆ ಒಪ್ಪಿದ್ದಾರೆ.
- ಸಿದ್ದರಾಮಯ್ಯ ಮುಖ್ಯಮಂತ್ರಿ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರ ಭರವಸೆಯ ಬೆನ್ನಲ್ಲೇ ಕಳೆದ ನಾಲ್ಕು ದಿನಗಳಿಂದ ರಾಜಧಾನಿ ಬೆಂಗಳೂರಿನಲ್ಲಿ ನಡೆಯುತ್ತಿದ್ದ ಆಶಾ ಕಾರ್ಯಕರ್ತೆ ಯರ ಮುಷ್ಕರ ಅಂತ್ಯವಾಗಿದೆ.

ಇದಕ್ಕೂ ಮೊದಲು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಸಚಿವ ದಿನೇಶ್ ಗುಂಡೂರಾವ್ ಸೇರಿ ಹಲವರು ಸಂಧಾನ ಸಭೆ ನಡೆಸಿದ್ದರು. ಆದರೆ ಅದ್ಯಾವುದಕ್ಕೂ ಮಣಿಯದೇ ಮುಷ್ಕರ ಮುಂದುವರಿಸಿದ್ದರಿಂದ ಸಿಎಂ ಸಿದ್ದರಾಮಯ್ಯ ಅವರು ಶುಕ್ರವಾರ ಸಂಧಾನ ಸಭೆ ನಡೆಸಿದರು. ಪ್ರಮುಖವಾಗಿ ವೇತನ ಹೆಚ್ಚಳದ ಬೇಡಿಕೆಗೆ ಸಿಎಂ ಒಪ್ಪಿಗೆ ನೀಡಿದ್ದರಿಂದ ಮುಷ್ಕರ ಹಿಂಪಡೆಯಲು ಸಂಘಟನೆ ತೀರ್ಮಾನಿಸಿದೆ.

ಆಶಾ ಕಾರ್ಯಕರ್ತೆಯರಿಗೆ ತಿಂಗಳಿಗೆ 10 ಸಾವಿರ ರು. ಗೌರವ ಧನವನ್ನು ಏ.1ರಿಂದ ಅನ್ವಯವಾಗುವಂತೆ ನೀಡಲು ಸರಕಾರ ಒಪ್ಪಿದೆ. ಈವರೆಗೆ ಆಶಾ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ಐದು ಸಾವಿರ ರು. ಹಾಗೂ ಕೇಂದ್ರ ಸರಕಾರದ 34 ಸೇವೆಗಳಿಗೆ ನೀಡುವ ಗೌರವಧನ ಸೇರಿ ಒಟ್ಟು 10 ಸಾವಿರ ರು. ಗಳನ್ನು ತಿಂಗಳಿಗೆ ನೀಡಲಾಗುವುದು ಎಂದು ಭರವಸೆ ನೀಡಲಾಗಿದೆ.

ಪೋರ್ಟಲ್ ಸುಧಾರಣೆಗೆ ಸೂಚನೆ: ಮಾಹಿತಿಯನ್ನು ಪೋರ್ಟಲ್‌ನಲ್ಲಿ ನಮೂದು ಮಾಡುವುದು ಕಷ್ಟವಾಗಿರುವ ಬಗ್ಗೆ ಸಿಎಂ ಗಮನ ಸೆಳೆದಾಗ ಪೋರ್ಟಲ್ ಸುಧಾರಣೆ ಮಾಡಿ ಸಮಸ್ಯೆ ಬಗೆಹರಿಸುವಂತೆ ಸಿಎಂ ಅಧಿಕಾರಿಗಳಿಗೆ ಸೂಚಿಸಿದರು. ಆಶಾ ಕಾರ್ಯಕರ್ತೆಯರ ಆರೋಗ್ಯ ಕೆಟ್ಟರೆ ಪ್ರತಿ ತಿಂಗಳು ಸಿಗುವ ರಜೆ ಕ್ರೋಢೀಕರಿಸಿ, ಗರಿಷ್ಠ 3 ತಿಂಗಳವರೆಗೆ ಗೌರವ ಧನ ನಿಲ್ಲಿಸದೆ ರಜೆ ಮಂಜೂರು ಮಾಡಲು ಸಿಎಂ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ರೀನ್ ನ್ಯಾನೋ ಟೆಕ್ ಕ್ಷೇತ್ರದಲ್ಲಿ ಅನಂತಕುಮಾರ್ ಹೆಗಡೆ ವಿಶ್ವಕ್ರಾಂತಿ

ಸಸ್ಯಜನ್ಯ ಔಷಧಿಗಳ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿ

ವಿಶ್ವದ ಮೊದಲ ಗ್ರೀನ್ ನ್ಯಾನೋ ಕೇಂದ್ರ ಬೆಂಗಳೂರಿನಲ್ಲಿ



ವಿಶ್ವವಾಣಿ ವಿಶೇಷ

ಬೆಂಗಳೂರು: ರಾಜಕೀಯದಿಂದ ವಿಶ್ರಾಂತಿ ಪಡೆಯುತ್ತಿರುವ ಹಿಂದುತ್ವದ ಫೈರ್ ಬ್ರ್ಯಾಂಡ್ ಮಾಜಿ ಸಂಸದ ಅನಂತಕುಮಾರ್ ಹೆಗಡೆ ಪ್ರಪಂಚದಲ್ಲೇ ಮೊದಲ ಬಾರಿಗೆ ಸದ್ದಿಲ್ಲದೆ ಹಸಿರು ನ್ಯಾನೋ ಕ್ರಾಂತಿ ಮಾಡಿದ್ದಾರೆ. ಇವರೊಂದಿಗೆ ಹಸಿರು ನ್ಯಾನೋದ ಪಿತಾಮಹ ವಿಜ್ಞಾನಿಯೊಬ್ಬರು ಕೈಜೋಡಿಸಿದ್ದು, ಕ್ಯಾನ್ಸರ್ ಸೇರಿದಂತೆ ಹಲವು ಕಾಯಿಲೆಗಳಿಗೆ ಕದಂಬ ಸಂಸ್ಥೆಯ ಔಷಧಿ ಹಾಗೂ ಇನ್ನಿತರ ಉತ್ಪನ್ನಗಳು ರಾಮಬಾಣವಾಗಿ ಹೊರಹೊಮ್ಮಿದೆ.

ಅತ್ಯಾಧುನಿಕ ನ್ಯಾನೋ ತಂತ್ರಜ್ಞಾನ ಹಾಗೂ ವೈಜ್ಞಾನಿಕ ಆವಿಷ್ಕಾರಗಳ ನೆರವಿನಿಂದ ವೇದಿಕ್ ಜ್ಞಾನವನ್ನು 21ನೇ ಶತಮಾನದ ತಂತ್ರಜ್ಞಾನಕ್ಕೆ ಹೊಂದಿಸಲು ವಿಶ್ವದಲ್ಲೇ ಮೊಟ್ಟ ಮೊದಲ ಬಾರಿಗೆ ಗ್ರೀನ್ ನ್ಯಾನೋ ರಿಯಾಕ್ಟರ್ ಸ್ಥಾಪಿಸಲಾಗಿದೆ. ನ್ಯಾನೋರ್ವೇದದ (ನ್ಯಾನೋ ಆಯುರ್ವೇದ) ಸುಮಾರು 8 ಪೇಟೆಂಟ್ ಸೇರಿ ತಮ್ಮ ಎಲ್ಲ ಗ್ರೀನ್ ನ್ಯಾನೋ ಉತ್ಪನ್ನಗಳಿಗೂ ಕದಂಬ ಸಂಸ್ಥೆ ರಾಷ್ಟ್ರೀಯ ಆರೋಗ್ಯ ಮಂಡಳಿಯ ಒಪ್ಪಿಗೆ ಪಡೆದುಕೊಂಡಿದೆ. ಗ್ರೀನ್ ನ್ಯಾನೋ ತಂತ್ರಜ್ಞಾನ ಮೂಲಕ ಔಷಧೀಯ ಗುಣಗಳುಳ್ಳ ಗಿಡಮೂಲಿಕೆಗಳಿಂದ ಮಾಲಿಕ್ಯೂಲ್ಸ್ (ಕಣ) ತೆಗೆದು ಔಷಧಗಳನ್ನು ತಯಾರಿಸಲಾಗಿದ್ದು, ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ಈ ಔಷಧ ಕಾಯಿಲೆಗಳ ಮೇಲೆ ಖಚಿತ ಪ್ರಭಾವ ಬೀರುವುದನ್ನು ಸಾಬೀತುಪಡಿಸುವ ಬಗ್ಗೆ ಆಧಾರಗಳನ್ನು ಕೊಡುವಂಥ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ.

ಸಂಪೂರ್ಣ ಸಂದರ್ಶನ ಪುಟ → 4

ಸಮಾಚಾರ ಸಣ್ಣದಲ್ಲ

ಜಾತ್ರೆಗೆ ಪ್ರಾಣಿ ಮತ್ತು ಪಕ್ಷಿ ಬಲಿ ನಿಷೇಧಿಸಿ ಆದೇಶ

ಹಾವೇರಿ: ಜಿಲ್ಲೆಯ ರಾಣೇಬೆನ್ನೂರ ನಗರದಲ್ಲಿ ಜ. 12ರಿಂದ 18ರವರೆಗೆ ಜರುಗುವ ಗಂಗಾಜಲ ಶ್ರೀ ಚೌಡೇಶ್ವರಿ ದೇವಿಯ ಜಾತ್ರೆಯಲ್ಲಿ, ದೇವಸ್ಥಾನದ ಆವರಣ ಅಥವಾ ರಾಣೇಬೆನ್ನೂರ ನಗರ ವ್ಯಾಪ್ತಿ ಮತ್ತು ಹೊರವಲಯದಲ್ಲಿ ಭಕ್ತಾಧಿಗಳು, ಸಾರ್ವಜನಿಕರು ದೇವರ ಹೆಸರಿನಲ್ಲಿ ಯಾವುದೇ ರೀತಿಯ ಪ್ರಾಣಿ ಮತ್ತು ಪಕ್ಷಿ ಬಲಿ ನೀಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ. ಹಾವೇರಿ ಉಪ ವಿಭಾಗಾಧಿಕಾರಿಗಳು , ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರು ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಈ ಕುರಿತು ಜಂಟಿ ಸಭೆ ನಡೆಸಿ, ನಿಯಮಾನುಸಾರ ಕ್ರಮಕೈಗೊಳ್ಳಲು ಸೂಚನೆ ನೀಡಿದ್ದಾರೆ.

ಹುಕ್ಕೇರಿ ಮಠದ ನಮ್ಮೂರ ಜಾತ್ರಾ, ರಥೋತ್ಸವ

ಹಾವೇರಿ: ಪ್ರತಿ ವರ್ಷದಂತೆ ಹೊಸ ವರ್ಷ ಸ್ವಾಗತಿಸಿಕೊಂಡು ನಾಡಿಗೆ ಧರ್ಮ,ನ್ಯಾಯ, ಸರ್ವರಿಗೂ ಸಮಾನತೆ, ಸಂಸ್ಕೃತಿ ಪಾಠ,ಪ್ರವಚನ ಮೂಲಕ ಸರ್ವರೂ ಸಮಾನರು ಎಂಬುವ ಮಹತ್ವ ಸಂದೇಶ ನೀಡಿರುವ ಶ್ರೀ ಹುಕ್ಕೇರಿ ಮಠದಿಂದ ಶುಕ್ರವಾರ ಅದ್ದೂರಿ ಜಾತ್ರಾ, ರಥೋತ್ಸವ ಜರುಗಿತು. ಜಗತ್ತಿಗೆ ಶಾಂತಿ ಸಂದೇಶವನ್ನು ರವಾನಿಸಿರುವ ಶ್ರೇಷ್ಠ ಮಠಗಳಲ್ಲಿ ಒಂದಾದ ಹುಕ್ಕೇರಿದ ಜಾತ್ರಾಮಹೋತ್ಸವ್ ಶುಕ್ರವಾರ ಸಂಜೆ ಅದ್ದೂರಿಯಾಗಿ ನೆರವೇರಿತು. ಹುಕ್ಕೇರಿ ಮಠ ಈಗಿನ ಸದಾಶಿವ ಶ್ರೀಗಳ ನೇತೃತ್ವದಲ್ಲಿ ನಡೆಯುತ್ತಿರುವ ಹುಕ್ಕೇರಿಮಠದ ಲಿಂ. ಶಿವಬಸವ ಸ್ವಾಮಿಗಳ 79ನೇ ಪುಣ್ಯಸ್ಮರಣೆ ಹಾಗೂ ಲಿಂ. ಶಿವಲಿಂಗ ಸ್ವಾಮಿಗಳ 16ನೇ ಪುಣ್ಯಸ್ಮರಣೋತ್ಸದ ಮಹಾ ರಥೋತ್ಸವ ಕಾರ್ಯಕ್ರಮ ಈ ಬಾರಿಯೂ ವಿಶೇಷ ಕಲಾ ತಂಡಗಳ ವಾದ್ಯ ಪ್ರಸಾರ ಹಾಗೂ ಸಂಗೀತ ಸ್ವರಗಳ ಇಂಪುನೊಂದಿಗೆ ನಗರದಲ್ಲಿ ಅತ್ಯಂತ ವಿಜ್ರಂಭನೆಯೊಂದಿಗೆ ನೆರವೇರಿತು. ಶ್ರೀಮಠ ಪರಂಪರೆದ ಮಹಾನ್ ಗೌರವ ,ಘನತೆ ಉಳಿಸಿಕೊಂಡು ಬಂದಿರುವ ಶ್ರೀಹುಕ್ಕೇರಿ ಮಠವು ಈ ಬಾರಿಯೂ ಜಾತ್ರಾ, ರಥೋತ್ಸವ ಕಾರ್ಯಕ್ರಮವು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಲಕ್ಷಾಂತರ ಭಕ್ತಾದಿಗಳು ರಥೋತ್ಸವ ಕಂಡು ಪೂಜೆ, ನಮಸ್ಕಾರ ಸಲ್ಲಿಸಿ ಪುನೀತರಾದರು. ಈ ಸಂದರ್ಭದಲ್ಲಿ ಶ್ರೀಮಠದ ಸದಾಶಿವ ಶ್ರೀಗಳು ಸೇರಿದಂತೆ ನಾಡಿನ ಪ್ರಸಿದ್ಧ ಮಠದ ಶ್ರೀಗಳು ಸ್ಥಳೀಯ ನಾಯಕರು, ಸಹಸ್ರಾರು ಭಕ್ತಾಧಿಗಳು ರಥೋತ್ಸವದಲ್ಲಿ ಹಾಜರಿದ್ದರು.

ಬಿಜೆಪಿ ವಿಶೇಷ ಸಭೆಯಲ್ಲಿ ರೂಪಾಲಿ ನಾಯ್ಕ ಭಾಗಿ

ಕಾರವಾರ: ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಭಾರತೀಯ ಜನತಾ ಪಕ್ಷದ ವಿಶೇಷ ಸಭೆಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಪಾಲ್ಗೊಂಡರು.

ಮಾಜಿ ಮುಖ್ಯಮಂತ್ರಿ, ಕೇಂದ್ರ ಸಂಸದೀಯ ಮಂಡಳಿ ಹಾಗೂ ಚುನಾವಣಾ ಸಮಿತಿ ಸದಸ್ಯರಾದ ಬಿ.ಎಸ್.ಯಡಿಯೂರಪ್ಪ ಸಭೆಯನ್ನು ಉದ್ಘಾಟಿಸಿ, ಪಕ್ಷ ಸದೃಢಗೊಳಿಸುವ ನಿಟ್ಟಿನಲ್ಲಿ ಜಿಲ್ಲಾ ಪ್ರವಾಸ ಕೈಗೊಳ್ಳುವುದಾಗಿ ತಿಳಿಸಿದರು.

ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರತಿ ಮಂಡಲ ಸಭೆ ನಡೆಸುವುದಾಗಿ ತಿಳಿಸಿದರು.

ಪಕ್ಷದ ಸಂಘಟನೆ, ಬರಲಿರುವ ಜಿಪಂ, ತಾಪಂ ಚುನಾವಣೆ ಸಿದ್ಧತೆಗಳ ಕುರಿತು ಪಕ್ಷದ ಮುಖಂಡರೊಂದಿಗೆ ರೂಪಾಲಿ ಎಸ್.ನಾಯ್ಕ ಮಾತುಕತೆ ನಡೆಸಿದರು.

ಸದ್ಯದಲ್ಲೇ ಎದುರಾಗಲಿರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸಲು ಸಜ್ಜಾಗುವುದೂ ಸೇರಿದಂತೆ ಪಕ್ಷ ಬಲ ಪಡಿಸುವ ನಿಟ್ಟಿನಲ್ಲಿ ಚರ್ಚಿಸಲಾಯಿತು.

ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ, ವಿಧಾನಸಭಾ ವಿರೋಧ ಪಕ್ಷ ನಾಯಕ ಆರ್. ಅಶೋಕ್, ವಿಧಾನ ಪರಿಷತ್ ವಿರೋಧ ಪಕ್ಷ ನಾಯಕ ಛಲವಾದಿ ನಾರಯಣಸ್ವಾಮಿ, ಸಂಘಟನೆಯ ಹಿರಿಯರಾದ ಪಿ.ವಿ.ಕೃಷ್ಣ ಭಟ್, ಮಾಜಿ ಸಚಿವರು, ಮಾಜಿ ಶಾಸಕರು, ವಿಧಾನ ಪರಿಷತ್ ಮಾಜಿ ಶಾಸಕರು, ಪಕ್ಷದ ಪ್ರಮುಖರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅನಧಿಕೃತ ಹೋಂ ಸ್ಟೇ ಬಗ್ಗೆ ಒಂದು ವಾರದೊಳಗೆ ವರದಿ ನೀಡಿ: ಡಿಸಿ

ಜಿಲ್ಲಾ ಪ್ರವಾಸೋದ್ಯಮ ಚಟುವಟಿಕೆಗಳ ಕುರಿತ ಸಭೆಯಲ್ಲಿ ಡಿಸಿ ಕೆ.ಲಕ್ಷ್ಮೀಪ್ರಿಯಾ ಸೂಚನೆ

ಕಾರವಾರ: ಜಿಲ್ಲೆಯಲ್ಲಿರುವ ಅನಧಿಕೃತ ಹೋಂ ಸ್ಟೇ ಗಳ ಕುರಿತಂತೆ ವಿವರವಾದ ವರದಿಯನ್ನು ಒಂದು ವಾರದ ಒಳಗೆ ಕ್ರೂಢೀಕರಿಸಿ ಸಲ್ಲಿಸುವಂತೆ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳಿಗೆ ಡಿಸಿ ಕೆ.ಲಕ್ಷ್ಮೀಪ್ರಿಯಾ ಸೂಚನೆ ನೀಡಿದರು.

ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಪ್ರವಾಸೋದ್ಯಮ ಚಟುವಟಿಕೆಗಳ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲೆಯಾದ್ಯಂತ ಅನಧಿಕೃತ ವಾಗಿ ಕಾರ್ಯ ನಿರ್ವಹಿಸುತ್ತಿರುವ ಹೋಂ ಸ್ಟೇ ಗಳ ಕುರಿತು ಸಂಬಂಧಪಟ್ಟ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತ್ ಗಳಿಂದ ನಿಖರವಾದ ಮಾಹಿತಿಯನ್ನು ಪಡೆಯುವಂತೆ ಸೂಚನೆ ನೀಡಿದರು.

ಕಾರವಾರದ ಬೀಚ್‌ನಲ್ಲಿರುವ ಟುಪಲೋವ್ ಯುದ್ಧ ವಿಮಾನವನ್ನು ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಳಿಸುವ ಕುರಿತಂತೆ, ಬಾಕಿ ಇರುವ ಅಗತ್ಯ ಕಾಮಗಾರಿ ಮತ್ತು ಅನುಮತಿಗಳನ್ನು ಪಡೆದು, ಸುರಕ್ಷತಾ ಕ್ರಮಗಳನ್ನು ದೃಢೀಕರಿಸಿಕೊಂಡು ಈ ತಿಂಗಳ ಅಂತ್ಯದೊಳಗೆ ಸಾರ್ವಜನಿಕ ವೀಕ್ಷಣೆಗೆ ವ್ಯವಸ್ಥೆ ಮಾಡುವಂತೆ ನಿರ್ದೇಶನ ನೀಡಿದರು.

ಜಿಲ್ಲೆಯ ಎಲ್ಲಾ ಕಡಲತೀರಗಳಲ್ಲಿ ಪ್ರವಾಸಿಗರ ಸುರಕ್ಷತೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವಂತೆ ಮತ್ತು ಅಗತ್ಯ ಕಾಮಗಾರಿ ಮತ್ತು ಸಾಧನ ಖರೀದಿಗೆ ಟೆಂಡರ್ ಕರೆದು ಈ ಕುರಿತು ಪ್ರಥಮಾದ್ಯತೆಯಲ್ಲಿ ಕಾರ್ಯನಿರ್ವಹಿಸುವಂತೆ ಹಾಗೂ ಜಿಲ್ಲೆಯ ಪ್ರವಾಸ ತಾಣಗಳ ಕುರಿತಂತೆ ಪ್ರವಾಸಿ ತಾಣಗಳು ಕುರಿತ ಉತ್ತಮ ಗುಣಮಟ್ಟದ ಛಾಯಾಚಿತ್ರಗಳನ್ನು ಒಳಗೊಂಡ ಕಾಫೀ ಟೇಬಲ್ ಬುಕ್ ಮುದ್ರಿಸುವ ಕುರಿತಂತೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಜಿಲ್ಲಾ ಪ್ರವಾಸೋದ್ಯಮ ಕುರಿತ್ವ ಜಿಲ್ಲಾಧಿಕಾರಿ ಸಭೆ ನಡೆಸಿದರು.

> ಜಿಲ್ಲೆಯಾದ್ಯಂತ ಅನಧಿಕೃತವಾಗಿ ನಡೆಯುತ್ತಿರುವ ಎಲ್ಲ ಹೋ ಸ್ಟೇ ಗಳನ್ನು ಪರಿಶೀಲನೆ ನಡೆಸಿ, ಪ್ರವಾಸೋದ್ಯಮ ಇಲಾಖೆಯಿಂದ ಅಗತ್ಯ ಅನುಮತಿಗಳನ್ನು ಪಡೆದು ಅಧಿಕೃತವಾಗಿ ನಡೆಸುವ ರೀತಿಯಲ್ಲಿ ನೋಡಿಕೊಳ್ಳುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು.
> -ಕೆ.ಲಕ್ಷ್ಮೀಪ್ರಿಯಾ, ಜಿಲ್ಲಾಧಿಕಾರಿ

ಜಿಲ್ಲೆಯಾದ್ಯಂತ ಪ್ರವಾಸಿ ಬೋಟಿಂಗ್ ಗಳಿಗೆ ಅನುಮತಿ ನೀಡಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಹಾಗೂ ರವೀಂದ್ರನಾಥ್ ಠಾಗೂರು ಕಡಲ ತೀರದ ಅಭಿವೃದ್ಧಿ ಮತ್ತು ಸ್ವಚ್ಛತೆ ಕಾಪಾಡು ಕುರಿತಂತೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ನಗರಸಭೆ ಅಧ್ಯಕ್ಷ ರವಿರಾಜ ಅಂಕೋಲೇಕರ್, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರ ಕಾಂದೂ, ಉಪ ವಿಭಾಗಾಧಿಕಾರಿ ಕನಿಷ್ಕ, ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ಜಯಂತ್, ಹಾಗೂ ವಿವಿಧ ಇಲಾಖಾಧಿಕಾರಿಗಳು ಹಾಜರಿದ್ದರು.

ಗಂಗಾವಳಿ ನದಿಯಲ್ಲಿನ ಮಣ್ಣು ತೆರವಿಗೆ ಅನುದಾನ ಬಿಡುಗಡೆ

ಕಾರವಾರ: ಶಿರೂರು ಗುಡ್ಡ ಕುಸಿತದಿಂದಾಗಿ ಗಂಗಾವಳಿ ನದಿಯಲ್ಲಿ ಶೇಖರವಾಗಿರುವ ಮಣ್ಣು ತೆರವು ಮಾಡಲು ಸಣ್ಣ ನೀರಾವರಿ ಇಲಾಖೆ ವತಿಯಿಂದ ಅಗತ್ಯ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ರಾಜ್ಯದ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್.ಭೋಸರಾಜು ಹೇಳಿದರು.

ಅವರು ಶುಕ್ರವಾರ ಶಿರೂರು ಗುಡ್ಡ ಕುಸಿತದ ಪ್ರದೇಶಕ್ಕೆ ಭೇಟಿ ನೀಡಿ ಮಾತನಾಡಿದರು. ಶಿರೂರು ಗುಡ್ಡ ಕುಸಿತದಿಂದ ನದಿಯಲ್ಲಿ ಶೇಖರವಾಗಿರುವ ಮಣ್ಣನ್ನು ತೆರವುಗೊಳಿಸದ್ದಿದ್ದಲ್ಲಿ ಮುಂದಿನ ಮಳೆಗಾಲದಲ್ಲಿ ಈ ಭಾಗದಲ್ಲಿ ಸಮಸ್ಯೆ ಉಂಟಾಗಲಿದ್ದು, ಈ ಮಣ್ಣು ತೆರವುಗೊಳಿಸಲು ಅಗತ್ಯವಿರುವ ಅನುದಾನದ ಕುರಿತು ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ತಕ್ಷಣ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು, ನದಿಯ ಹರಿವಿನಿಂದ ಮುಂದಿನ ಮಳೆಗಾಲದಲ್ಲಿ ತೊಂದರೆಯಾಗದಂತೆ ಎಚ್ಚರವಹಿಸಲಾಗುವುದು ಎಂದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗುಡ್ಡ ಕುಸಿತ ತಡೆಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿನ ಅನುದಾನ ಬಿಡುಗಡೆ ಕುರಿತಂತೆ ಜ. 16 ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಕಂದಾಯ ಸಚಿವ ರೊಂದಿಗೆ ಚರ್ಚಿಸಲಾಗುವುದು ಎಂದ ಸಚಿವರು, ಹೆಚ್ಚುವರಿ ಅನುದಾನದ ಅಗತ್ಯವಿದ್ದಲ್ಲಿ ಕೂಡಾ ಬಿಡುಗಡೆ ಮಾಡಲಾಗುವುದು, ರಾಜ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಉತ್ತರ ಕನ್ನಡ ಜಿಲ್ಲೆಯ, ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ ತಾಲೂಕುಗಳಲ್ಲಿ ನಡೆಯುತ್ತಿರುವ ಖಾರ್ಲ್ಯಾಂಡ್ ಕಾಮಗಾರಿಗಳ ಸ್ಥಳಕ್ಕೆ ಸಚಿವರು ಭೇಟಿ ನಿಡಿ, ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಎಜೆನ್ಸಿ ಲಿಮಿಟೆಡ್ ಅಧ್ಯಕ್ಷ ಕಾರವಾರ ಶಾಸಕ ಸತೀಶ್ ಕೆ. ಸೈಲ್ ಹಾಗೂ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಇದ್ದರು.

ಜಿಪಂ, ತಾಪಂ ಚುನಾವಣೆಗೆ ತಯಾರಿ ನಡೆಸಿ

ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಎಐಸಿಸಿ ಕಾರ್ಯದರ್ಶಿ ಮಯೂರ ಜಯಕುಮಾರ ಕರೆ

ಶಿರಸಿ: ಮುಂಬರುವ ಜಿಪಂ, ತಾಪಂಗಳ ಚುನಾವಣೆ ಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಬಾವುಟ ಎತ್ತುವ ಕೆಲಸ ಮಾಡಬೇಕು ಎಂದು ಎಐಸಿಸಿ ಕಾರ್ಯದರ್ಶಿ ಮಯೂರ ಜಯಕುಮಾರ ಕರೆ ನೀಡಿದರು.

ನಗರದ ಟಿಎಂಎಸ್ ಸಭಾಂಗಣದಲ್ಲಿ ಶುಕ್ರವಾರ ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿಣಿ ಯಲ್ಲಿ ಮಾತನಾಡಿದ ಅವರು, ಪಕ್ಷಕ್ಕಾಗಿ ದುಡಿಯು ವವರಿಗೆ ಅಧಿಕಾರ ನೀಡಬೇಕು. ಆ ಮೂಲಕ ಸಂಘಟನೆಗೆ ಒತ್ತು ನೀಡಿ ಮತ್ತೊಮ್ಮೆ ಎಲ್ಲಡೆ ಅಧಿಕಾರಕ್ಕೆ ಬರಬೇಕಿದೆ. ಸಂಘಟನೆ ಬಲಿಷ್ಠವಾಗಿ ದ್ದಲ್ಲಿ ಪಕ್ಷದ ಕಾರ್ಯಕರ್ತರು ಎದೆಯುಬ್ಬಿಸಿ ನಡೆಯಬಹುದು. ಇಲ್ಲದೇ ಹೋದಲ್ಲಿ ತಲೆ ತಗ್ಗಿಸಿ ನಡೆಯಬೇಕು. ಇದಕ್ಕಾಗಿ ಸಂಘಟನೆಯನ್ನು ಅತಿ ಎತ್ತರಕ್ಕೆ ತೆಗೆದುಕೊಂಡು ಹೋಗಬೇಕು ಎಂದರು.

ಕರ್ನಾಟಕ ಜನತೆಗೆ ಕಾಂಗ್ರೆಸ್ ಸರ್ಕಾರದ ಮೇಲೆ ವಿಶ್ವಾಸವಿದೆ. ಗ್ಯಾರಂಟಿ ಭರವಸೆಯನ್ನು ಈಡೇರಿಸಿದ್ದೇವೆ. ಇದರಿಂದ ಕಳೆದ ಉಪಚುನಾವಣೆ ಯಲ್ಲಿ ಗೆಲುವು ಸಾಧಿಸಿದ್ದೇವೆ. ಬಿಜೆಪಿಗರ ಆರೋಪಕ್ಕೆ ಮಸಿ ಬೆಳೆಯುವ ಕೆಲಸವನ್ನು ಜನರು ಉಪ ಚುನಾಬಣೆಯಲ್ಲಿ ಮಾಡಿದ್ದಾರೆ. ಅದು ಸಾಧ್ಯವಾಗಿದ್ದು ನಮ್ಮ ಸಂಘಟನೆ, ನಿಷ್ಠಾವಂತ ಕಾರ್ಯಕರ್ತರಿಂದ' ಎಂದ ಅವರು, '2023ರಲ್ಲಿ ಉತ್ತರ ಕನ್ನಡದಲ್ಲಿ ಕಾಂಗ್ರೆಸ್ ಉತ್ತಮ ವಾತಾವರಣ ಸೃಷ್ಟಿ ಮಾಡಿದೆ. ಆದರೆ ಸಂಸತ್ ಚುನಾವಣೆಯಲ್ಲಿ ಉತ್ತಮ ಫಲಿತಾಂಶ ನೀಡಿಲ್ಲ. ಆದರೂ ನಾವು ಕುಗ್ಗಿಲ್ಲ. ಒಗ್ಗಟ್ಟಾಗಿ ಕೆಲಸ ಮಾಡಬೇಕು. ಮುಂಬ ರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಈಗಿಂದಲೇ ತಯಾರಿ ನಡೆಸಬೇಕು. ಸಂಘಟನೆ ಬಲಪಡಿಸಲು ಮಹಿಳೆಯರೂ ಭಾಗಿಯಾಗಬೇಕು' ಎಂದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ 231 ಘಟಕಗಳಿಗೆ ಕ್ರಿಯಾಶೀಲವಾಗಿ ಕಾರ್ಯನಿರ್ವ ಹಿಸುವ ಅಧ್ಯಕ್ಷರ ನೇಮಕ ಮಾಡಿ ಹತ್ತು ದಿನದೊಳಗೆ ವರದಿ ನೀಡುವಂತೆ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಸೂಚಿಸಿದ ಅವರು, ಜಿಲ್ಲೆಯಲ್ಲಿ 14 ಬ್ಲಾಕ್, 25 ಜಿಲ್ಲಾ ಪಂಚಾಯಿತಿ ಕ್ಷೇತ್ರ, 121 ತಾಲ್ಲೂಕು ಪಂಚಾಯಿತಿ ಕ್ಷೇತ್ರ, 231 ಗ್ರಾಮ ಪಂಚಾ ಯಿತಿಗಳಿವೆ. ಈ ಎಲ್ಲ ಕಡೆ ಸಂಘಟನೆ ಬಲವರ್ಧನೆ ಮಾಡಲು ಮೊದಲು ಬ್ಲಾಕ್ ಗಟ್ಟಿ ಆಗಬೇಕು. ಬ್ಲಾಕ್ ಮಟ್ಟದಲ್ಲಿ ಕೆಲಸ ಮಾಡದೇ ಹೋದಲ್ಲಿ ಅವರನ್ನು ಜವಾಬ್ದಾರಿಯಿಂದ ಮುಕ್ತ ಮಾಡುತ್ತೇವೆ ಎಂದರು.

> ಪ್ರತಿಯೊಬ್ಬ ಕಾರ್ಯಕರ್ತ, ಪದಾಧಿಕಾರಿ ಪಕ್ಷ, ಸಂಘಟನೆಯ ಜವಾಬ್ದಾರಿ ತೆಗೆದುಕೊಂಡಾಗ ತಳಮಟ್ಟದಿಂದ ಪಕ್ಷ ಭದ್ರವಾಗಿ ಕಟ್ಟಲು ಸಾಧ್ಯ. ಪಕ್ಷಕ್ಕಿಂತ ವ್ಯಕ್ತಿ ದೊಟ್ಟವನಲ್ಲ, ಆದರೆ ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷ ಇದ್ದಾಗ ಚುನಾಯಿತ ಸದಸ್ಯನಾಗಲು ಸಾಧ್ಯ.
> ■ಭೀಮಣ್ಣ ನಾಯ್ಕ, ಶಾಸಕ

ಕಾಂಗ್ರೆಸ್ ಕಚೇರಿಗಳಲ್ಲಿ ಕಾರ್ಯನಿರ್ವಹಿಸು ವವರು 125 ಜನರಿದ್ದರೂ ಸಂಘಟನೆಯಲ್ಲಿ ಹಿಂದೆ ಉಳಿದಿದ್ದೇವೆ. ಅವರಿಂದಲೂ ಕೆಲಸ ತೆಗೆದುಕೊಳ್ಳ ಬೇಕು. ಜಿಲ್ಲಾ ಘಟಕದ ಉಪಾಧ್ಯಕ್ಷರಿಗೆ ಬ್ಲಾಕ್ ಹಂತದ ಉಸ್ತುವಾರಿ, ಉಳಿದವರನ್ನು ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ಸಂಪರ್ಕಾಧಿಕಾರಿಯಾಗಿ ಮಾಡಬೇಕು. ಅವರು ಬ್ಲಾಕ್ ಪದಾಧಿಕಾರಿಗಳ ಜತೆ ಕೆಲಸ ಮಾಡಬೇಕು. ಈ ಕಾರ್ಯ ತ್ವರಿತವಾಗಿ ಪೂರ್ಣಗೊಳಿಸಬೇಕು. ಸ್ವತಃ ನಾನು ಪ್ರತಿ ಬೂತ್ ಮಟ್ಟಕ್ಕೆ ಬಂದು ಅಧ್ಯಕ್ಷರ ಜತೆ ಮಾತನಾಡುತ್ತೇನೆ ಎಂದು ಹೇಳಿದರು.

ಶಾಸಕ ಭೀಮಣ್ಣ ನಾಯ್ಕ, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸಾಯಿನಾಥ ಗಾಂವ್ಕರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನಿವೇದಿತ್ ಆಳ್ವಾ, ಪ್ರಮುಖರಾದ ವಿ.ಎಸ್.ಪಾಟೀಲ, ನಾಗರಾಜ ನಾರ್ವೇಕರ್, ವೆಂಕಟೇಶ ಹೆಗಡೆ, ಸಂತೋಷ ಶೆಟ್ಟಿ, ಸುಜಾತಾ ಗಾಂವ್ಕರ್, ಆರ್.ಎಸ್.ನಾಯಕ ಇತರರಿದ್ದರು.

ಹಳ್ಳಿಯ ಅಭಿವೃದ್ಧಿಯಿಂದ ದೇಶದ ಅಭಿವೃದ್ಧಿ

ರಾಜೀವಗಾಂಧಿ ಸೇವಾ ಕೇಂದ್ರದ ಗ್ರಾ.ಪಂ ಕಟ್ಟಡ ಉದ್ಘಾಟಿಸಿದ ಬಸವರಾಜ ಬೊಮ್ಮಾಯಿ

ಹಾವೇರಿ: ಹಾನಗಲ್ ಗ್ರಾಮ ಪಂಚಾಯತಿಗಳನ್ನು ಗಟ್ಟಿಗೊಳಿಸಲು ನಿಟ್ಟಿನಲ್ಲಿ ನಾವೆಲ್ಲರೂ ಚಿಂತನೆ ಮಾಡುವ ಅವಶ್ಯಕತೆ ಇದೆ ಎಂದ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಶಿರಗೋಡ ಗ್ರಾಮದಲ್ಲಿ 2019 – 20ನೇ ಸಾಲಿನ ಗ್ರಾಮ ಪಂಚಾಯತಿ ಕಟ್ಟಡ ಅಭಿವೃದ್ಧಿ ಯೋಜನೆ ಹಾಗೂ ನರೇಗಾ ಯೋಜನೆಯ ಅನುದಾನದಲ್ಲಿ ನಿರ್ಮಿಸಿದ ನೂತನ ರಾಜೀವಗಾಂಧಿ ಸೇವಾ ಕೇಂದ್ರದ ಗ್ರಾಮ ಪಂಚಾಯತಿ ಕಟ್ಟಡವನ್ನು ಉದ್ಘಾಟಿಸಿ, ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗೆ ಹತ್ತಿರ ಇರುವ ಸರ್ಕಾರ ಗ್ರಾಮ ಪಂಚಾಯತಿ. ಅಭಿವೃದ್ಧಿ ಮಾಡುವ ವಿಚಾರದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಜನರಿಂದ ಜನರಿಗೋಸ್ಕರ ಅಧಿಕಾರ ಅನ್ನುವ ಕಾರಣಕ್ಕೆ ಅಧಿಕಾರ ವಿಕೇಂದ್ರಿಕರಣ ಮಾಡಲಾಗಿದೆ. ಜನರು ಅಧಿಕಾರದ ಸುತ್ತ ಸುತ್ತ ಬಾರದು, ಅಧಿಕಾರ ಜನರ ಸುತ್ತ ಸುತ್ತಬೇಕು ಎಂಬ ಮಾತಿದೆ. ಜನ ಇದ್ದಲ್ಲಿ ಅಭಿವೃದ್ಧಿ ಆಗಬೇಕು. ಇದು ಅಧಿಕಾರ ವಿಕೇಂದ್ರೀಕರಣ ಮೂಲ ತತ್ವ. ಇನ್ನೊಂದು ಮಹತ್ವದ ತತ್ವ ಯಾವುದೆಂದರೆ ಯೋಜನೆಗಳು ಕೆಳಗಡೆಯಿಂದ ಮೇಲೆ ಹೋಗಬೇಕು, ಮೇಲ್ಗಡೆಯಿಂದ ಯೋಜನೆಗೆ ಹಣಕಾಸು ಕೆಳಗಡೆ ಮುಟ್ಟಬೇಕು. ಈಗಲೂ ಕೂಡ ಕರ್ನಾಟಕ ಅಧಿಕಾರ ವಿಕೇಂದ್ರೀಕರಣ ಮುಂಚೂಣಿಯಲ್ಲಿರುವ ರಾಜ್ಯ, ದಿವಂಗತ ರಾಮಕೃಷ್ಣ ಹೆಗಡೆ ಮತ್ತು ನಜೀರ್ ಸಾಬ್ ಅವರ ಪ್ರಯತ್ನದಿಂದ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಅತಿ ಹೆಚ್ಚು ಅಂದರೆ ಒಂದು ತಿಂಗಳು ಚರ್ಚೆಯಾಗಿ ದಿ. ನಜೀರ್ ಸಾಬ್ ಅವರು ಎಲ್ಲರಿಗೂ ಮನವರಿಕೆ ಆಗುವಂತೆ ಉತ್ತರ ಕೊಟ್ಟ ಮೇಲೆ ಜಾರಿಯಾಯಿತು. ಅದು ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗಿ ಅಂದಿನ ಪ್ರಧಾನಿ ರಾಜೀವ್ ಗಾಂಧಿಯವರು ಅದಕ್ಕೆ ಸಂವಿಧಾನಾತ್ಮಕ ರಕ್ಷಣೆ ಕೊಡಬೇಕು ಎಂದು ತೀರ್ಮಾನಿಸಿ ಸಂವಿಧಾನದ 73, 74 ನೇ ತಿದ್ದುಪಡಿ ಮಾಡಿದರು ಎಂದು ಹೇಳಿದರು.

ನಮ್ಮ ಜಿಲ್ಲೆಗೆ 15 ನೇ ಹಣಕಾಸಿನ ದುಡ್ಡು ಎರಡನೇ ಹಂತು ಬಿಡುಗಡೆ ಮಾಡುವ ಸಲುವಾಗಿ ಕೇಂದ್ರ ಸಚಿವರ ಜೊತೆಗೆ ಮಾತನಾಡಿದ್ದು ಒಂದೆರಡು ವಾರದಲ್ಲಿ 25 ಕೋಟಿ ನಮ್ಮ ಜಿಲ್ಲೆಗೂ ಬರುತ್ತದೆ. ಅದರ ಜೊತೆಗೆ ಎಸ್ ಎಫ್ ಸಿ ರಾಜ್ಯ ಹಣಕಾಸಿನ ಹಣವೂ ಕೂಡ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಅಭಿವೃದ್ಧಿ ಮತ್ತು ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ ಕಟ್ಟಲು ಹಣ ಬರುತ್ತದೆ. ಹಾವೇರಿ ಜಿಲ್ಲೆಗೆ 20 ಕೋಟಿ ರೂ. ಆದಷ್ಟು ಬೇಗ ಬಿಡುಗಡೆಯಾಗುತ್ತದೆ" ನಮ್ಮ ಜಿಲ್ಲೆಗೆ ಬರಬೇಕಾದ ಹಣವನ್ನು ತರಲು ಎಲ್ಲರೂ ಸೇರಿ ಪ್ರಯತ್ನ ಮಾಡೋಣ ಎಂದರು.

ಈ ಸಂಧರ್ಭದಲ್ಲಿ ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು ಕಲಗುಡ್ಡ, ಶಾಸಕರಾದ ಶ್ರೀನಿವಾಸ ಮಾನೆ ಸೇರಿದಂತೆ ಗ್ರಾಮ ಪಂಚಾಯತಿಯ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಈ ಉಪಸ್ಥಿತರಿದ್ದರು. ಇನ್ನು ಇದೇ ಸಂಧರ್ಭದಲ್ಲಿ ಗ್ರಾಮ ಪಂಚಾಯತಿಯ ಎಲ್ಲ ಸದಸ್ಯರಿಗೆ ಸನ್ಮಾನಿಸಲಾಯಿತು.

ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮೇಲ್ದರ್ಜೆಗೆ ಏರಿಸಲು ಕ್ರಮ: ಸಚಿವ

ಕಾರವಾರ: ಕಾರವಾರದ ಕೋಡಿಭಾಗದಲ್ಲಿರುವ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್ ಭೋಸರಾಜು ತಿಳಿಸಿದರು.

ಅವರು ಶುಕ್ರವಾರ ಕಾರವಾರದ ಕೋಡಿಭಾಗದಲ್ಲಿರುವ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿ ಮಾತನಾಡಿದರು. ಪ್ರಸ್ತುತ ಕಾರವಾರದಲ್ಲಿರುವ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರವು ಕಡಿಮೆ ಸ್ಥಳವಕಾಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ವಿಜ್ಞಾನ ಕೇಂದ್ರವನ್ನು 10 ಎಕರೆ ಪ್ರದೇಶದಲ್ಲಿ ಮೇಲ್ದರ್ಜೆಗೆ ಏರಿಸಲು ಸೂಕ್ತ ಸ್ಥಳವಕಾಶವನ್ನು ಗುರುತಿಸುವಂತೆ ತಿಳಿಸಿದ ಸಚಿವರು ವಿಜ್ಞಾನ ಕೇಂದ್ರದ ನಿರ್ಮಾಣಕ್ಕೆ ಅಗತ್ಯವಿರುವ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಕಾರವಾರ ಶಾಸಕ ಹಾಗೂ ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕನ್ಸಲೆಂಟ್ ಆಂಡ್ ಏಜೆನ್ಸಿಸ್ ಅಧ್ಯಕ್ಷ ಸತೀಶ್ ಸೈಲ್, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಈಶ್ವರ ಕಾಂದೂ, ಅಪರ ಜಿಲ್ಲಾಧಿಕಾರಿ ಸಾಜೀದ್ ಅಹ್ಮದ್ ಮುಲ್ಲಾ, ಉಪವಿಭಾಗಾಧಿಕಾರಿ ಕನಿಷ್ಕ, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಕ್ಯೂರೇಟರ್ ರೋಹನ್ ರಾಜೇಂದ್ರಜಿ ಭುಜ್ಲೆ ಮತ್ತಿತ್ತರರು ಇದ್ದರು.

ಪಿ&ಎಸ್.ಸಿ ನಂ :28/2024

ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾವೇರಿ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು: 1) ರಾಜು ತಂದೆ ಭರಮಪ್ಪ ಬಾರ್ಕಿ. 2) ಹನುಮಂತಪ್ಪ ತಂದೆ ನಿಂಗಪ್ಪ ಬಾರ್ಕಿ.

ವಿರುದ್ಧ

ಎದುರುಗಾರರು : ಯಾರೂ ಇಲ್ಲ.

ಇಸ್ತಿಯಾರ ನಾಮಾ

ಈ ಪ್ರಕರಣದಲ್ಲಿ ಅರ್ಜಿದಾರರು ಈ ಮೂಲಕ ಪತ್ರಿಕ ಪ್ರಕಟಣೆ ಮೂಲಕ ಹೊರಡಿಸುವ ನೋಟಿಸು ಏನೆಂದರೆ ಸದರಿ ಅ ರ್ಜಿದಾರರು ಮಾನ್ಯ ನ್ಯಾಯಾಲಯದಲ್ಲಿ ಮೇಲ್ಕಾಣಿಸಿದ ಪ್ರಕರಣವನ್ನು ಪೋತಿ ನಿಂಗಪ್ಪ ಭರಮಪ್ಪ ಬಾರ್ಕಿ ಇತನು ದಿನಾಂಕ : 10-05-2024 ರಂದು ಬರೆಯಿಸಿ ಇಟ್ಟ ಮೃತ್ಯು ಪತ್ರದಲ್ಲಿ ವಿವರಿಸಿದ ಯಾವತ್ತೂ ಆಸ್ತಿಗೆ ಸದರಿ ಮೃತ್ಯು ಪತ್ರದಲ್ಲಿ ವಿವರಿಸಿದ ಪ್ರಕಾರ ಅರ್ಜಿದಾರರು ಮಾಲಿಕರಾಗಲು ಹಾಗೂ ನಿರ್ವಹಣೆಗೆ ಪ್ರೋಬೇಟ ಪತ್ರ ಪಡೆಯುವ ಕುರಿತು ಮೇಲ್ಕಾಣಿಸಿದ ಪ್ರಕರಣವನ್ನು ದಾಖಲಿಸಿದ್ದು ಸದರ ವಿಷಯವಾಗಿ ಯಾರಾದರೂ ತಕರಾರು ವಗೈರೆ ಮಾಡುವವರು ಇದ್ದರೆ ಮಾನ್ಯ ನ್ಯಾಯಾಲಯದಲ್ಲಿ ತಾರೀಖ :23-01-2025 ರಂದು ಬೆಳಿಗ್ಗೆ 11:00 ಗಂಟೆಗೆ ತಾವಾಗಲಿ ಅಥವಾ ತಮ್ಮ ಪರ ವಕೀಲರ ಪರವಾಗಿ ಆಗಲಿ ತಕರಾರು ಸಲ್ಲಿಸತಕ್ಕದ್ದು,ಇಲ್ಲವಾದಲ್ಲಿ ಮಾನ್ಯ ನ್ಯಾಯಾಲಯದವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾರದೂ ಯಾವುದೇ ರೀತಿ ತಕರಾರು ಇರುವುದಿಲ್ಲ ಅಂತಾ ಪರಿಗಣಿಸಿ ಮುಂದಿನ ಆದೇಶ ಮಾಡುವವರು ತಿಳಿಯಿರಿ. ಈ ಇಸ್ತಿಹಾರಿನ ನಾಮೆಯನ್ನು ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 07-01-2025 ರಂದು ಕೊಡಲಾಗಿದೆ.

ಸಹಿ/-ಶಿರಸ್ತೆದಾರರು
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾವೇರಿ ಇವರ ನ್ಯಾಯಾಲಯ

ಸಹಿ/-ಶ್ರೀ **ಎಸ್.ಐ.ಹೂಗಾರ**
ಅರ್ಜಿದಾರರ ಪರ ವಕೀಲರು, ಹಾನಗಲ್.

ಬಣ್ಣ ಮಿಶ್ರಿತ ಆಹಾರ ಪದಾರ್ಥ ಸೇವಿಸಬೇಡಿ

ಹಾವೇರಿ: ಹಾವೇರಿ ನಗರದಲ್ಲಿ ಬೊಂಬಾಯಿ ಮಿಠಾಯಿ(ಕಾಟನ್ ಕ್ಯಾಂಡಿ)ಗೆ ನಿಷೇಧಿತ ಕೃತಕ ಬಣ್ಣ ಬಳಸಿ ಮಾರಾಟ ಮಾಡುತ್ತಿರುವವರನ್ನು ಪತ್ತೆ ಹಚ್ಚಿ ರೂ ಐದು ಸಾವಿರ ದಂಡ ವಿಧಿಸಲಾಗಿದೆ.

ನಗರದ ಹುಕ್ಕೇರಿಮಠದ ಜಾತ್ರೆಯಲ್ಲಿ ಶುಕ್ರವಾರ ಹುಬ್ಬಳ್ಳಿಯಿಂದ ಆಗಮಿಸಿ ಕೆಲವು ಬೊಂಬಾಯಿ ಮಿಠಾಯಿ ವ್ಯಾಪಾರಿಗಳು ನಿಷೇಧಿತ ಕೃತಕ ಬಣ್ಣ ಬಳಸಿ ಮಾರಾಟ ಮಾಡುತ್ತಿದ್ದ ಸಮಯದಲ್ಲಿ, ಆಹಾರ ಸುರಕ್ಷತಾಧಿಕಾರಿ ಶ್ರೀಧರ ಅಗಸೀಬಾಗಿಲ ಅವರು ಪತ್ತೆಹಚ್ಚಿ ದಂಡವಿಧಿ, ನಿಷೇಧಿತ ಕೃತಕ ಬಣ್ಣ ಬಳಸದಂತೆ ಎಚ್ಚರಿಕೆ ನೀಡಿದ್ದಾರೆ.

ರಾಜ್ಯಾದ್ಯಾಂತ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಕೃತಕ ಬಣ್ಣಗಳ ಬಳಕೆ ನಿಷೇಧಿಸಲಾಗಿದ್ದು, ಜಿಲ್ಲೆಯಲ್ಲಿ ಈಗಾಗಲೇ ವಿಶೇಷ ಅಭಿಯಾನ ನಡೆಸಿ, ಕೃತಕ ಬಣ್ಣಗಳ ಬಳಕೆ ನಿಷೇಧ ಕುರಿತು ವ್ಯಾಪಾರಸ್ಥರಿಗೆ ನೋಟೀಸ್ ನೀಡುವುದರ ಮೂಲಕ ಅರಿವು ಮೂಡಿಸಲಾಗಿದೆ. ಸಂಶಯಾಸ್ಪದ ಆಹಾರ ಮಾದರಿಗಳನ್ನು ಪ್ರಯೋಗಾಲಯದಲ್ಲಿ ವಿಶ್ಲೇಷಣೆಗೆ ಒಳಪಡಿಸಿ, ಅಸುರಕ್ಷಿತ ಎಂದು ಕಂಡುಬಂದ ಪ್ರಕರಣಗಳಲ್ಲಿ ಜೆ.ಎಂ.ಎಫ್ .ಸಿ. ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಲಾಗಿದೆ.

ಕೆಲವು ಪ್ರಕರಣಗಳಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಜಿಲ್ಲಾ ಅಂಕಿತಾಧಿಕಾರಿಗಳ ಹಂತದಲ್ಲಿ ದಂಡ ವಿಧಿಸಲಾಗಿದೆ.

ಸಾರ್ವಜನಿಕರು ಯಾವುದೇ ಬಣ್ಣ ಮಿಶ್ರಿತ ಆಹಾರ ಪದಾರ್ಥಗಳನ್ನು ಸೇವಿಸಬಾರದು. ಅತ್ಯಂತ ಕಳಪೆ ಮಟ್ಟಣದ ಬಣ್ಣಗಳಾಗಿದ್ದು, ಆರೋಗ್ಯಕ್ಕೆ ಹಾನಿಕರವಾಗಿರುತ್ತದೆ ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಜಿಲ್ಲಾ ಅಂಕಿತಾಧಿಕಾರಿ ಡಾ.ನಾಗರಾಜ ಜಿ.ಎಚ್. ಅವರು ತಿಳಿಸಿದ್ದಾರೆ.

CHANGE OF NAME

I, **VIJAYLAXMI BENDIGERI** (Old Name) have changed my name and shall hereafter be known as **VIJAYALAXMI BUDAVANT BIJAPUR** (New Name) R/o 114, Spoorti, Sadashiv Nagar, Saptapur, Dharwad-07, Karnataka State, Vide affidavit sworn before notary Kanojanavar.I.G at Dharwad on 10/01/2025

ನಾಮನಿರ್ದೇಶಿತ ಸದಸ್ಯರ ನೇಮಕ; ಅರ್ಜಿ

ಕಾರವಾರ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಸಮುದಾಯಗಳ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳ ಬಗ್ಗೆ ಜಿಲ್ಲಾ ಮಟ್ಟದ ಸಮಿತಿಯಲ್ಲಿ ನಾಮನಿರ್ದೇಶಿತ ಸದಸ್ಯರ 5 ಪ್ರತಿನಿಧಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವ ಸಮಿತಿಯಲ್ಲಿ ನೇಮಕ ಮಾಡಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಲೆಮಾರಿ, ಅರೆ ಅಲೆಮಾರಿ ಸೂಕ್ಷ್ಮ ಅತಿ ಸೂಕ್ಷ್ಮ ಸಮುದಾಯದವರು ಅರ್ಜಿ, 2 ಪೋಟೋ ಜಾತಿ ಪ್ರಮಾಣ ಪತ್ರದ ಪ್ರತಿ, ಆಧಾರ ಕಾರ್ಡ, ರೇಷನ್ ಕಾರ್ಡ ಪ್ರತಿಯೊಂದಿಗೆ ಜ.21 ರ ಸಂಜೆ 5.30ರೊಳಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಈ ಹಿಂದೆ ಸಮಿತಿ ಸದಸ್ಯರಾದವರಿಗೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲಾ ಎಂದು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ಸುರಕ್ಷತೆ ಕಾರ್ಯಾಗಾರ ಯಶಸ್ವಿ

ಶಿರಸಿ: ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ನಿಮಿತ್ತ ಬುಧವಾರ ಇಲ್ಲಿನ ಎಂಇಎಸ್ ಐಟಿಐನಲ್ಲಿ ರಸ್ತೆ ಸುರಕ್ಷತೆ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಯಿತು.

ಉಪನ್ಯಾಸಕರಾಗಿ ಆಗಮಿಸಿದ ನಿವೃತ್ತ ಪ್ರಾದೇಶಿಕ ಉಪ ಆಯುಕ್ತ ಜಿ.ಎಸ್.ಹೆಗಡೆ ಹಲಸರಿಗೆ ಮಾತನಾಡಿ, ವಾಹನ ಚಲಾವಣೆ ಮಾಡುವಾಗ ಅನುಸರಿಸಬೇಕಾದ ರಸ್ತೆ ಸುರಕ್ಷತಾ ಕ್ರಮಗಳ ಕುರಿತು ತಿಳಿಸಿದರು.

ರಸ್ತೆ ಸಾರಿಗೆ ನಿಯಮಾನುಸಾರ ಅಪ್ರಾಪ್ತ ವಯಸ್ಕರು ವಾಹನ ಚಲಾಯಿಸಿದರೆ ವಾಹನ ಮಾಲಕರಿಗೆ ಶಿಕ್ಷೆ ಇದ್ದು, ಲೈಸೆನ್ಸ್ ಇಲ್ಲದೆ ವಾಹನ ಚಲಾವಣೆ ಮಾಡದಂತೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ವಾಹನ ಚಲಾಯಿಸುವಾಗ, ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ಮೊಬೈಲ್ ಬಳಸಿದಲ್ಲಿ ಘಟಿಸಬಹುದಾದ ಅಪಾಯಗಳ ಕುರಿತು ತಿಳಿಸಿದರು.

ರಸ್ತೆ ಸಾರಿಗೆ ನಿಯಮಗಳನ್ನು ಉಲ್ಲಂಘಿಸಿ ವಾಹನ ಚಲಾಯಿಸಿ ಅಪಘಾತಗಳಾದಲ್ಲಿ ಎದುರಿಸಬೇಕಾದ ಸಮಸ್ಯೆಗಳ ಕುರಿತು ಐಟಿಐ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಪ್ರತಿಯೊಬ್ಬರು 'ರಸ್ತೆ ಸುರಕ್ಷತೆ ನಾಯಕರಾಗಿ' ಎಂಬ ಧ್ಯೇಯ ವಾಕ್ಯದೊಂದಿಗೆ ರಸ್ತೆ ಸುರಕ್ಷತೆಯ ಕುರಿತು ಅರಿವು ಮೂಡಿಸಿದರು.ಐ.ಟಿ.ಐ. ತರಬೇತಿ ಪಡೆದ ಅಭ್ಯರ್ಥಿಗಳಿಗೆ ಕೈಗಾರಿಕೆಗಳಲ್ಲಿ ವಿಪುಲ ಉದ್ಯೋಗಾವಕಾಶಗಳಿದ್ದು, ಐ.ಟಿ.ಐ. ತರಬೇತಿಯ ನಂತರ ಫೀಲ್ಡ್ ವರ್ಕ್ ಅನುಭವದ ಕುರಿತು ಕಡ್ಡಾಯವಾಗಿ 1 ವರ್ಷ ಅಪ್ರಂಟೀಸ್ ತರಬೇತಿ ಪಡೆದು ಉದ್ಯೋಗಕ್ಕೆ ಸೇರಿಕೊಂಡಲ್ಲಿ ಹೆಚ್ಚಿನ ಅನುಭವದ ಜೊತೆಗೆ ಉತ್ತಮ ಉದ್ಯೋಗಾವಕಾಶಗಳು ಲಭ್ಯವಾ ಗುವ ಕುರಿತು ತಿಳಿಸಿದರು.

ಆಸಕ್ತಿ, ಅನುಭವ ಮತ್ತುಛಲ ನಮ್ಮನ್ನು ಯಶಸ್ಸಿನೆಡೆಗೆ ಕೊಂಡೊಯ್ಯುತ್ತದೆ. ನಮ್ಮ ನಡತೆಯೇ ಉತ್ತಮ ಉದ್ಯೋಗಾವಕಾಶಕ್ಕೆ ಮಾನದಂಡವಾಗಿದ್ದು ಎಲ್ಲಾ ವಿದ್ಯಾರ್ಥಿಗಳು ಉತ್ತಮ ನಡತೆಯನ್ನುಬೆಳೆಕೊಂಡುಕೌಶಲ ವನ್ನು ಹೊಂದುವಂತೆ ತಿಳಿಸಿದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಕಾರವಾರ: ಪ್ರಸಕ್ತ ಸಾಲಿನ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಎಸ್.ಎಸ್.ಪಿ ವಿದ್ಯಾರ್ಥಿವೇತನ, ಪಿ.ಎಚ್.ಡಿ ಪೆಲೋಶಿಪ್, **IIT, IIM, IISCs** ಉತ್ತೇಜನ, ಬಿ.ಎಡ್ ಕೋರ್ಸಿಗೆ ಪ್ರೋತ್ಸಾಹ ಧನ, ವಿದೇಶಿ ವಿದ್ಯಾರ್ಥಿವೇತನ, ಮತ್ತು ಬಿ.ಎಸ್ಸಿ/ ಜಿ.ಎನ್.ಎಮ್ ನರ್ಸಿಂಗ್ ಕೋರ್ಸಿಗೆ ಪ್ರೋತ್ಸಾಹಧನ ಯೋಜನೆಗಳಿಗೆ ಅಲ್ಪಸಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ) ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಜ.15 ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ https://dom.karnataka.gov.in ಸಹಾಯವಾಣಿ 8277799990 ಗೆ ಅಥವಾ ಹತ್ತಿರದ ತಾಲೂಕು ಅಲ್ಪ ಸಂಖ್ಯಾತರ ಮಾಹಿತಿ ಕೇಂದ್ರಕ್ಕೆ ಸಂಪರ್ಕಿಸಬಹುದು ಎಂದು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪತ್ರಿಕೋದ್ಯಮ ತರಬೇತಿಗೆ ಅರ್ಜಿ ಆಹ್ವಾನ

ಗದಗ: ಪರಿಶಿಷ್ಟ ಜಾತಿಯವರ ಆರ್ಥಿಕ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ ಇಲಾಖೆಗೆ ಒಳಪಡುವ ಕರ್ನಾಟಕ ರಾಜ್ಯ ಭೋವಿ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿಗೆ ಪತ್ರಿಕೋದ್ಯಮ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಎಸ್.ಎಸ್.ಎಲ್.ಸಿ/ ಪಿಯುಸಿ/ ಡಿಪ್ಲೊಮಾ ವ್ಯಾಸಂಗ ಪೂರ್ಣಗೊಳಿಸಿರುವ ಭೋವಿ ಸಮುದಾಯದ ಅಭ್ಯರ್ಥಿಗಳಿಗೆ ಪತ್ರಿಕೋದ್ಯಮ ಎಲೆಕ್ಟ್ರಾನಿಕ್ ವಿಷಯದಲ್ಲಿ ಪ್ರಾಯೋಗಿಕ ತರಬೇತಿ ಮತ್ತು ಫೀಲ್ಡ್ ಅನುಭವವನ್ನು ನೀಡಲು ಎಲೆಕ್ಟ್ರಾನಿಕ್ ಮಾಧ್ಯಮ ತರಬೇತಿಗೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜ.18 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಾರ್ಯಾಲಯ, ಜಿಲ್ಲಾ ಆಡಳಿತ ಭವನ 1ನೇ ಮಹಡಿ ರೂಮ್ ನಂ. 122/5 ಗದಗ ದೂರವಾಣಿ ಸಂಖ್ಯೆ: 08372-239557 ಇವರನ್ನು ಸಂಪರ್ಕಿಸ ಬಹುದಾಗಿದೆ.

ಯುವನಿಧಿ ಯೋಜನೆಗೆ ನೋಂದಣಿ ಆರಂಭ

ಧಾರವಾಡ: ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಧವಳಗಿರಿ, ಧಾರವಾಡದಲ್ಲಿ, ಅರಿವಿನ ನರವಿಜ್ಞಾನ ಅಪ್ಲಿಕೇಶನ್ ಗಳಿಗಾಗಿ ಸಿಗ್ನಲ್ ಪ್ರೊಸೆಸಿಂಗ್ ಕುರಿತು ಎಫ್ಡಿಪಿ ಕಾರ್ಯಾಗಾರ ನಡೆಸಲಾಯಿತು. ಶ್ರೀಧರ್ಮಸ್ಥಳ ಮಂಜು ನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯ ಧಾರವಾಡ, ಬೆಂಗಳೂರಿನ ಐಟಿಐಇ ನಾಲೆಡ್ಜ್ ಸೊಲ್ಯೂಷನ್ಸ್ ಸಹಯೋಗದಲ್ಲಿ, ಕಾಗ್ನಿಟಿವ್ ನ್ಯೂರೋಸೈನ್ಸ್ ಅಪ್ಲಿಕೇಶನಗಳಿಗಾಗಿ ಸಿಗ್ನಲ್ ಪ್ರೊಸೆಸಿಂಗ್ ಕುರಿತು 3 ದಿನಗಳ ಎಫ್ಡಿಪಿಯನ್ನು . 9ನೇ ಜನವರಿ 2025 ರಿಂದ 11ನೇ ಜನವರಿ 2025 ರವರೆಗೆ ನಡೆಸುತ್ತಿದೆ. ಇಇಜಿ, ಎಫ್ಎಂಆರ್ಐ ಮತ್ತು ಇತರ ನ್ಯೂರೋ ಇಮೇಜಿಂಗಳಂತಹ ಸಂಕೀರ್ಣ ನರ ಸಂಕೇತಗಳ ವ್ಯಾಖ್ಯಾನ ಮತ್ತು ವಿಶ್ಲೇಷಣೆಯನ್ನು ಸಕ್ರಿಯಗೊಳಿಸುವ ಮೂಲಕ ಅರಿವಿನ ನರವಿಜ್ಞಾನದಲ್ಲಿ ಸಿಗ್ನಲ್ ಪ್ರಕ್ರಿಯೆಯು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಈ ತಂತ್ರಗಳು ಸಂಶೋಧಕರಿಗೆ ಅರಿವಿನ ಕಾರ್ಯಗಳು, ನರವೈಜ್ಞಾನಿಕ ಅಸ್ವಸ್ಥತೆಗಳು ಮತ್ತು ಮೆದುಳಿನ- ಕಂಪ್ಯೂಟರ್ ಇಂಟರ್ಫೇಸ್ಗಳನ್ನು ಅರ್ಥಮಾ ಡಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾಮಿ ವಿವೇಕಾನಂದ ಜಯಂತಿ ನಾಳೆ

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜ.12 ರಂದು ಬೆಳಗ್ಗೆ 10.30 ಗಂಟೆಗೆ ಸ್ವಾಮಿ ವಿವೇಕಾನಂದ ಜಯಂತಿಯನ್ನು ಗದಗ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ ನಲ್ಲಿ ಸಾಂಕೇತಿಕವಾಗಿ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸುವುದರ ಮೂಲಕ ಸರಳವಾಗಿ ಆಚರಿಸಲಾಗುವುದು. ಜನ ಪ್ರತಿನಿಧಿಗಳು, ಆಸಕ್ತರು, ಸಾರ್ವಜನಿಕರು, ಯುವಕ-ಯುವತಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ ಕೋರಿದ್ದಾರೆ.

ಸಂಕ್ರಾಂತಿ ಹಬ್ಬಕ್ಕೆ ಬೇಕಾಗುವ ಸಾಮಗ್ರಿ ಲಭ್ಯ

ಧಾರವಾಡ: ಧಾರವಾಡದ ವಿದ್ಯಾಗಿರಿಯ ಜೆ.ಎಸ್.ಎಸ್ ಶ್ರೀಮಂಜುನಾಥೇಶ್ವರ ಸಿ.ಬಿ.ಎಸ್ .ಇ ಶಾಲೆಯಲ್ಲಿ ದಿನಾಂಕ ಜ.13 ರಂದು ಬೆಳಿಗ್ಗೆ 10.30 ಕ್ಕೆ ಸಂಕ್ರಾಂತಿ ಹಬ್ಬಕ್ಕೆ ಬೇಕಾಗುವ ವಿವಿಧ ರೀತಿಯ ವಸ್ತುಗಳು ಮಾರಾಟಕ್ಕೆ ಲಭ್ಯವಿರುತ್ತವೆ. ಸ್ವ-ಉದ್ಯೋಗ ಮಾಡುತ್ತಿರುವ ಮಹಿಳೆಯರು ವಿದ್ಯಾರ್ಥಿಗಳ ಸಹಾಯದಿಂದ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ವಿವಿಧ ರೀತಿಯ 40 ಕ್ಕೂ ಹೆಚ್ಚು ಸ್ಟಾಲುಗಳಲ್ಲಿ ಈ ಸಂತೆ ನಡೆಯಲಿದೆ. ದಯವಿಟ್ಟು ಈ ಸಮಾರಂಭಕ್ಕೆ ತಾವು ಆಗಮಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹುಬ್ಬಳ್ಳಿಗೆ ಬಂದ ಶ್ರೀ ಕುಂಥುಸಾಗರರು

ಹುಬ್ಬಳ್ಳಿ: ಶ್ರೀನವಗ್ರಹ ತೀರ್ಥ ಮಹಾಮಸ್ತಕಾಭಿಷೇಕ ಮಹೋತ್ಸವದ ಪ್ರಮುಖ ಸಾನಿಧ್ಯ ವಹಿಸಲಿರುವ ಹಿರಿಯ ಜೈನ ಆಚಾರ್ಯ, ಕುಂಥುಗಿರಿ ತೀರ್ಥ ಪ್ರವರ್ತಕ, ಗಣಾಧಿಪತಿ, ಗಣಧರಾಚಾರ್ಯ 108 ಶ್ರೀಕುಂಥುಸಾಗರ ಮಹಾರಾಜರು ಜನೇವರಿ 10ರಂದು ಹುಬ್ಬಳ್ಳಿ ನಗರಕ್ಕೆ ಮಂಗಲ ಪ್ರವೇಶ ಮಾಡಿದರು. ಹುಬ್ಬಳ್ಳಿ ದಿಗಂಬರ ಜೈನ ಸಮಾಜದ ಪರವಾಗಿ ಸ್ವಿಮ್ಮಿಂಗ್ ಪೂಲ್ ಸಮೀಪದ ಗಾಳಿ ದುರ್ಗಮ್ಮ ದೇವಸ್ಥಾನ ಬಳಿ ಆಚಾರ್ಯರನ್ನುಬರ 'ಮಾಡಿಕೊಳ್ಳಲಾಯಿತು.

ಕಾಟನ್ ಮಾರ್ಕೆಟ್, ನೀಲಿಜಿನ್ ರಸ್ತೆ, ಚನ್ನಮ್ಮ ವೃತ್ತ ತಾಡಪತ್ರಿ ಗಲ್ಲಿ ಮೂರು ಸಾವಿರ ಮಠ ಮಾರ್ಗವಾಗಿ ಮಹಾವೀರ ಗಲ್ಲಿಯ ಶಾಂತಿನಾಥ ಭವನಕ್ಕೆ ಶೋಭಾ ಯಾತ್ರೆಯ ಮೂಲಕ ಕರೆತರಲಾಯಿತು. ಈಗಾಗಲೇ ಹುಬ್ಬಳ್ಳಿಯಲ್ಲಿ ವಾಸ್ತವ್ಯ ಮಾಡಿರುವ ಎಲ್ಲ ಮುನಿಗಳು ಹಾಗು ಶ್ರಾವಕ ಶ್ರಾವಕಿಯರು ಆಚಾರ್ಯರನ್ನು ಬರ ಮಾಡಿಕೊಳ್ಳುವರು ಜ. 11ರಂದು ಅನೇಕ ಮುನಿಗಳೊಂದಿಗೆ ಮಧ್ಯಾಹ್ನ 4 ಗಂಟೆಗೆ ನವಗ್ರಹ ತೀರ್ಥವನ್ನು ಪ್ರವೇಶಿಸಲಿರುವ ಆಚಾರ್ಯಶ್ರೀಗಳಿಗೆ ಅದ್ದೂರಿ ಸ್ವಾಗತ ನೀಡಲಾಗುವುದು ಎಂದು ಶಾಂತಿನಾಥ ಕೆ ಹೊತಪೇಟೆ ಜೈನ ಸಮಾಜದ ಮುಖಂಡರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಸಲರ ಶರಣಾಗತಿ; ಸರಕಾರ ಪ್ರಚಾರ ಪಡೆದಿದೆ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಐಪಿಎಸ್ ಅಧಿಕಾರಿ ಜ್ಯೋತಿ ಪ್ರಕಾಶ ಮಿರ್ಜಿ

ಧಾರವಾಡ: ರಾಜ್ಯದಲ್ಲಿ ನಕ್ಸಲರ ಶರಣಾಗತಿ ವಿಚಾರದಲ್ಲಿ ರಾಜ್ಯ ಸರಕಾರ ವಿಧಾನಸೌಧದಲ್ಲಿ ಸಿಎಂ ಕಚೇರಿ ಮುಂದೆ ನಕ್ಸಲರನ್ನು ಶರಣಾಗತಿ ಮಾಡಿಸಿದ್ದು ಸರಿಯಲ್ಲಾ. ನಕ್ಸಲರನ್ನು ನೇರವಾಗಿ ಪೊಲೀಸ್ ಠಾಣೆಗೆ ಅಥವಾ ನ್ಯಾಯಾಲಯಕ್ಕೆ ಶರಣಾಗತಿ ಮಾಡಬೇಕು. ಅದನ್ನು ಬಿಟ್ಟು, ಪ್ರಚಾರ ಪಡೆಯಲು ಈ ರೀತಿ ಮಾಡಿದೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗಿದೆ ಎಂದು ಜೆಡಿಎಸ್ ರಾಜ್ಯಾ ಉಪಾಧ್ಯಕ್ಷ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಜ್ಯೋತಿ ಪ್ರಕಾಶ ಮಿರ್ಜಿ ಹೇಳಿದರು.

ಧಾರವಾಡದಲ್ಲಿ ಜೆಡಿಎಸ್ ಮುಖಂಡರೊಂದಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಕ್ಸಲರ ಶರಣಾಗತಿ ವಿಚಾರದಲ್ಲಿ ಹಿರಿಯ ಪೊಲೀಸ್ ಅಧಿಕಾರಿ ಹೇಮಂತ ನಿಂಬಾಳ್ಕರ್ ಉತ್ತಮ ಕೆಲಸ ಮಾಡಿದ್ದಾರೆ. ಆದ್ರೆ ಸರಕಾರವು ಇಡೀ ಪ್ರಕರದಲ್ಲಿ ಕ್ರೆಡಿಟ್ ತೆಗೆದುಕೊಂಡಿದ್ದರೆ ಉತ್ತಮ. ಅದನ್ನು ಬಿಟ್ಟು ಪ್ರಚಾರ ಪಡೆಯುವ ಕೆಲಸವನ್ನು ಮಾಡುತ್ತಿದೆ ಎಂದು ಸರಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸರಕಾರ ಗೃಹ ಲಕ್ಷ್ಮಿ ಯೋಜನೆ ಮೂಲಕ ಮಹಿಳೆಯರಿಗೆ ಹಣ ಕೊಡುತ್ತಿದೆ. ಆದ್ರೆ ಅವರ ಗಂಡದೀರು ಕುಡಿಯುವ ಕೆಲಸ ಮಾಡುತ್ತಿದ್ದು, ಅವರಿಂದ ಹಣ ಪಡೆಯುವ ಕೆಲಸ ಮಾಡುತ್ತಿದೆ. ಎಣ್ಣೆ ಎಲ್ಲಾ ಕಡೆಗಳಲ್ಲಿ ಜಾಸ್ತಿಯಾಗಿದೆ. ರಾಜ್ಯದಲ್ಲಿ ಗುತ್ತಿಗೆದಾರರಿಗೆ ರಕ್ಷಣೆ ಇಲ್ಲದಂತಾಗಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಎಸಸಿ-ಎಸ್ಟಿ ಸಮಾಜದ ಸಚಿವರಿಗೆ ಊಟ ಮಾಡಲಿಕ್ಕೆ ಹೈಕಮಾಂಡ್ ಪರಮಿಶನ್ ಪಡೆಯಬೇಕು.ಇಂತಹ ಪರಿಸ್ಥಿತಿ ಇದೆ. ನಾವು 13 ರಿಂದ 18 ಜನರು ಇದ್ದಾಗ ಜೆಡಿಎಸ್ ಪಕ್ಷದಲ್ಲಿ ಪಿಎಂ ಆಗಿದ್ದಾರೆ. 20 ಜನ ಇದ್ದಾಗ ಸಿಎಂ ಆಗಿದ್ದಾರೆ. ಜೆಡಿಎಸ್ ಪಕ್ಷದಲ್ಲಿ ಬಹಳಷ್ಟು ಮಂದಿ ರೆಕ್ಕೆ ಬಲಿತವರು ಇದ್ದಾರೆ. ಬೇರೆ ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋಗುವುದು ಸಾಮಾನ್ಯ. ಮುಂದಿನ ಅವಧಿಯಲ್ಲಿ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿದೆ ಎಂದರು.

ಧಾರವಾಡ ಮಹಾನಗರ ಪಾಲಿಕೆ ಪ್ರತ್ಯೇಕವಾಗಿದ್ದು, ನಾವು ಸ್ವಾಗತ ಮಾಡುತ್ತೇವೆ. ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ ಚುನಾವಣೆಗೆ ಪಕ್ಷವನ್ನು ತಳಮಟ್ಟದಿಂದ ತಯಾರಿ ಮಾಡುತ್ತೇವೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಐಪಿಎಸ್ ಅಧಿಕಾರಿ ಜ್ಯೋತಿ ಪ್ರಕಾಶ ಮಿರ್ಜಿ.

ಪೊಲೀಸರು ಸರಕಾರದ ಕೈಗೊಂಬೆ; ಮಿರ್ಜಿ ಆರೋಪ

ಬೆಳಗಾವಿ ಪೊಲೀಸರು ಶಾಸಕ ಸಿ.ಟಿ ಅವರನ್ನು ಬಂಧಿಸಿದ ರೀತಿ ನೋಡಿದ್ರೆ, ಗೊತ್ತಾಗುತ್ತೆ. ಪೊಲೀಸ್ ಇತಿಹಾಸದಲ್ಲಿಯೇ ಈ ರೀತಿ ನಾನು ಪ್ರಕರಣ ನೋಡಿಲ್ಲಾ. ಸಭಾಪತಿಗಳು ಯಾವುದೇ ಸಾಕ್ಷಿ ಹೇಳಲಿಕ್ಕೆ ಸಾಧ್ಯವಿಲ್ಲಾ. ನಾನೂ ಕೂಡ ಪೊಲೀಸ್ ಕಮೀಶನರ್ ಆಗಿದ್ದ ವೇಳೆಯಲ್ಲಿ ಬೆಳಗಾವಿಯಲ್ಲಿ ಮೇಯರ್ ಅವರನ್ನು ಗುಂಡಾ ಆ್ಯಕ್ಟ ನಲ್ಲಿ ಅರೆಸ್ಟ್ ಮಾಡಿದ್ದೆ. ಒತ್ತಡ ಬಂದಿತ್ತು, ನೇರವಾಗಿ ನ್ಯಾಯಾಲಯಕ್ಕೆ ಸರೆಂಡರ್ ಮಾಡಿದ್ದೆವು. ಆದ್ರೆ ಸಿ.ಟಿ.ರವಿ ಪ್ರಕರಣದಲ್ಲಿ ಕಾಡಿನಲ್ಲಿ ಸುತ್ತಾಡಿಸಿದ್ದು, ಪೊಲೀಸರು ಯಾವುದೇ ರಾಜಕೀಯ ವ್ಯಕ್ತಿಗಳ ಕೈವಾಡಕ್ಕೆ ಕೆಲಸ ಮಾಡಿದ್ದಾರೆ ಎಂದರು.

ಪ್ರತ್ಯೇಕ ಮಹಾನಗರ ಪಾಲಿಕೆ ಧಾರವಾಡದ ಮೊದಲ ಮೇಯರ್ ಜೆಡಿಎಸ್ ಪಕ್ಷದವರೇ ಇರುತ್ತಾರೆ ಎಂದು ಭವಿಷ್ಯ ನುಡಿದರು.

ಧಾರವಾಡ ಜಿಲ್ಲೆಯ ಜೆಡಿಎಸ್ ಪಕ್ಷದ ಹಿರಿಯ ಮುಖಂಡ ಗುರುರಾಜ ಹುಣಶಿಮರ್ ಮಾತನಾಡಿ, ನಾವು ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಆಗಿದ್ದನ್ನು ಸ್ವಾಗತ ಮಾಡುತ್ತೇವೆ. ಈ ಹಿಂದೆ ಬೊಮ್ಮಾಯಿ ಸಿಎಂ ಇದ್ದಾಗ ಅದು ಆಗಲಿಲ್ಲಾ.

ಇವಾಗ ಆಗಿದೆ. ಬ್ಯಾನರಗಳಲ್ಲಿ ತಮ್ಮ ಇರುವಿಕೆಯನ್ನು ತೋರಿಸಿಕೊಳ್ಳಲಿಕ್ಕೆ ಕೆಲವೊಂದು ನಾಯಕರು ಫೋಟೊ ಹಾಕಿಕೊಂಡಿದ್ದಾರೆ. ನಮ್ಮ ಸರಕಾರ ಇದ್ದಾಗ ಆಗಿಲ್ಲಾ. ಇವಾಗ ಸಿದ್ದರಾಮಯ್ಯಾ ಸರಕಾರ ಇದ್ದಾಗ ಆಗಿದೆ. ನಾವು ಅಭಿವೃದ್ಧಿಗೆ ಕೈ ಜೊಡಿಸುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ, ಜೆಡಿಎಸ್ ಗ್ರಾಮೀಣ ಅಧ್ಯಕ್ಷರಾದ ಬಿ.ಬಿ.ಗಂಗಾಧರಮಠ, ವಿನಾಯಕ ಗಾಡಿವಡ್ಡರ್, ನವೀನ ಮಡಿವಾಳರ್ ಪಾಲಿಕೆ ಸದಸ್ಯೆ ಲಕ್ಷ್ಮೀ ಹಿಂಡಸಗೇರಿ, ನಳಿನಕುಮಾರ, ಬಾದಶಾ ಮುದಗಲ್, ಗೋಪಾಲ ಉಪಸ್ಥಿತರಿದ್ದರು.

ಪುಟ್ಟರಾಜ ಗವಾಯಿ ಭವನ ನಿರ್ಮಾಣಕ್ಕಾಗಿ ಭಿಕ್ಷಾಟನೆ

ಗದಗ: ವೀರೇಶ್ವರ ಪುಣ್ಯಾಶ್ರಮದ ಆವರಣದಲ್ಲಿರುವ ಪಂ. ಪುಟ್ಟರಾಜ ಗವಾಯಿಗಳ ಸ್ಮಾರಕ ಭವನ ನಿರ್ಮಾಣ ಕಾಮಗಾರಿ ವಿಳಂಬಕ್ಕೆ ಕಾರಣವಾದ ಸರಕಾರದ ನಡೆ ಖಂಡಿಸಿ ಜೆಡಿಎಸ್ ಕಾರ್ಯಕರ್ತರು ಸಾಂಕೇತಿಕ ಭಿಕ್ಷಾಟನೆ ನಡೆಸುವ ಮೂಲಕ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಜೆಡಿಎಸ್ ರಾಜ್ಯ ವಕ್ತಾರ ವೆಂಕನಗೌಡ ಗೋವಿಂದಗೌಡ್ರ ನೇತೃತ್ವದಲ್ಲಿ ಶುಕ್ರವಾರ ಜೆಡಿಎಸ್ ಕಾರ್ಯಕರ್ತರು ವೀರೇಶ್ವರ ಪುಣ್ಯಾಶ್ರಮದಿಂದ ಎಪಿಎಂಸಿ ಹಾಗೂ ಮುಖ್ಯ ರಸ್ತೆಯಲ್ಲಿ ವ್ಯಾಪಾರಸ್ಥರು ಹಾಗೂ ಸಾರ್ವಜನಿಕರಿಂದ ಭಿಕ್ಷೆ ಸ್ವೀಕರಿಸಿದರು.

ಸಂದರ್ಭದಲ್ಲಿ ಮಾತನಾಡಿದ ವೆಂಕನಗೌಡ ಗೋವಿಂದಗೌಡ್ರ, ನಗರದ ಹೃದಯ ಭಾಗದಲ್ಲಿರುವ ಪುಟ್ಟರಾಜ ಸ್ಮಾರಕ ಭವನ ಅರ್ಧಕ್ಕೆ ನಿಂತಿದೆ. ಯಡಿಯೂರಪ್ಪ ಸರಕಾರ ಅಧಿಕಾರದಲ್ಲಿದ್ದಾಗ 5 ಕೋಟಿ ರೂ. ಬಿಡುಗಡೆಯಾಗಿತ್ತು. ಆದರೆ ಕಾಂಗ್ರೆಸ್ ಸರಕಾರ ಅಕಾರಕ್ಕೆ ಬಂದು ಎರಡು ವರ್ಷವಾದರೂ ಭವನ ನಿರ್ಮಾಣದ ಬಾಕಿ ಕಾಮಗಾರಿಗೆ ನಯಾಪೈಸೆ ಹಣ ಬಿಡುಗಡೆ ಮಾಡಿಲ್ಲ. ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಎಚ್.ಕೆ. ಪಾಟೀಲರು ಸ್ಮಾರಕ ಭವನ ನಿರ್ಮಾಣಕ್ಕೆ ಅನುದಾನ ನೀಡುವ ಭರವಸೆ ನೀಡಿದ್ದರು. ಅವರ ಭರವಸೆ ಈವರೆಗೂ ಈಡೇರಿಲ್ಲ.

ಮುಂಬರುವ ಬಜೆಟ್ ನಲ್ಲಿ ರಾಜ್ಯ ಸರಕಾರ ಸ್ಮಾರಕ 'ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡದಿದ್ದರೆ, ಅವಳಿ ನಗರದ ಮನೆ ಮನೆಗೆ ಹೋಗಿ ಭಿಕ್ಷಾಟನೆ ಮಾಡಿ ಸರಕಾರದ ಮಾನ ಹರಾಜು ಹಾಕುವ ಜೊತೆಗೆ ಭವನ ಪೂರ್ಣಗೊಳಿಸಲು ಬೇಕಾದ ಹಣವನ್ನು ಭಿಕ್ಷಾಟನೆ ಮೂಲಕ ಸಂಗ್ರಹಿಸಿ ಅದನ್ನು ಸರಕಾರಕ್ಕೆ ಕೊಟ್ಟು, ಕಾಮಗಾರಿ ಪೂರ್ಣಗೊಳಿಸಲು ಒತ್ತಾಯಿಸಲಾಗುವುದು ಎಂದು ತಿಳಿಸಿದ ಅವರು, ಶುಕ್ರವಾರ ಸಾಂಕೇತಿಕವಾಗಿ ನಡೆದ ಭಿಕ್ಷಾಟನೆಯಲ್ಲಿ ಸ್ವೀಕರಿಸಿದ 2350 ರು.ಗಳನ್ನು ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ತಲುಪಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಜೋಸೆಫ್ ಉದೋಜಿ, ಗಿರೀಶ ಸಂಶಿ, ಎಂ, ಎಸ್, ಪರ್ವತಗೌಡ್ರ, ಪುಂಡಲೀಕ ಪುಣೇಕರ, ಸಂತೋಷ ಪಾಟೀಲ, ರಮೇಶ ಹುಣಸಿಮರದ, ಕುಮಾರ ಜಿಗಳೂರ, ಮುತ್ತು ದರೋಜಿ, ಮೌಲಾಸಾಬ, ಮಂಜುನಾಥ ಹುಲ್ಲೂರ, ಬೀರಪ್ಪ ಪುರದ, ನಿಂಗಪ್ಪ ಸೋಮನಕಟ್ಟಿ, ಸೈಯದ ಹಳ್ಳಿಕೇರಿ, ಖಾಜಾಸಾಬ ಕಿತ್ತೂರ ಇತರರು ಇದ್ದರು.

ಗಣಿತ ಕಷ್ಟವಾದರೂ ಮಕ್ಕಳಿಗೆ ಕಲಿಸಬೇಕು

ಧಾರವಾಡ: ಕಬ್ಬಿಣ ಕಡಲೆ ಯಾದ ಗಣಿತ ವಿಷಯವನ್ನು ಮಕ್ಕಳಿಗೆ ಸರಳಿಕರಿಸಿ ಹೇಳುವ ಪ್ರಯತ್ನ ಮಾಡಬೇಕು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಪಿ.ಸುರೇಶ್ ಹೇಳಿದರು. ಧಾರವಾಡದ ಸಿ.ವ್ಹಿ. ರಾಮನ್ ವಿಜ್ಞಾನ ಹಾಗೂ ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ನಡೆದ ಗಣಿತ ಉಪನ್ಯಾಸಕರ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದ ಅವರು, ಗಣಿತ ವಿಷಯವೆಂದರೆ ಮಕ್ಕಳಿಗೆ ಕಬ್ಬಿಣದ ಕಡಲೆ ಆ ವಿಷಯವನ್ನು ಉಪನ್ಯಾಸಕರು ಲೆಕ್ಕಗಳನ್ನು ಅತಿ ಸುಲಭ ರೀತಿಯಲ್ಲಿ ಸರಳಿಕರಿಸಿ ಮಕ್ಕಳಿಗೆ ತಿಳಿಯುವ ಹಾಗೆ ತಿಳಿಸಬೇಕು ಎಂದರು.

ಗಣಿತ ಉಪನ್ಯಾಸಕರ ವೇದಿಕೆ ಅಧ್ಯಕ್ಷರಾದ ಡಾ. ಎಸ್ ಅರ್ ವಿಷ್ನುಶಿ ಸರ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಇಂದಿನ ಮಕ್ಕಳಲ್ಲಿ ಗುಣಾತ್ಮಕ ಬೆಳವಣಿಗೆಗೆ ಎಲ್ಲಾ ಗಣಿತ ಉಪನ್ಯಾಸಕರು ಬಹಳ ಆಸಕ್ತಿಯುತವಾಗಿ ಕರ್ತವ್ಯ ಪರತೆಯಿಂದ ಪಾಠವನ್ನು ಮಾಡಿ, ಈ ಶೈಕ್ಷಣಿಕ ವರ್ಷದ ಫಲಿತಾಂಶವನ್ನು ಅತ್ಯುತ್ತಮವಾಗಿಸಲು ಎಲ್ಲಾ ಉಪನ್ಯಾಸಕರು ಕೈಜೋಡಿಸಬೇಕೆಂದು ತಿಳಿಸಿದರು. ಗಣಿತ ಉಪನ್ಯಾಸಕರ ವೇದಿಕೆ ಕಾರ್ಯದರ್ಶಿಗ ಆರ್.ಬಿ ಚೌಹಾನ್ ಮಾತನಾಡಿ, ದ್ವಿತೀಯ ಪಿ.ಯು.ಸಿ ಮಾದರಿ ಪ್ರಶ್ನೆ ಪತ್ರಿಕೆ ನೀಲ ನಕ್ಷೆ ಕುರಿತು ಮಾತನಾಡಿದರು. ವೇದಿಕೆ ನಿರ್ದೇಶಕರಾದ ಎ.ಎ ಅತ್ತಾರ್ ಉಪನ್ಯಾಸ ಕಾರ್ಯಗಾರವನ್ನು ನಡೆಸಿಕೊಟ್ಟರು. ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಕೆಎಲ್ಇ ಕಾಲೇಜ ಬೆಳಗಾವಿ ಉಪನ್ಯಾಸಕರಾದ ಎಂ.ಎಲ್. ಪಾಟೀಲ್ ಅವರು ಕಾರ್ಯಗಾರದಲ್ಲಿ ಗಣಿತ ವಿಷಯವನ್ನು ಕುರಿತು ಉಪನ್ಯಾಸವನ್ನು ನಡೆಸಿಕೊಟ್ಟರು. ಸಿ.ವ್ಹಿ ರಾಮನ್ ಪದವಿಪೂರ್ವ ಮಹಾವಿದ್ಯಾಲಯ ಸಂಸ್ಥಾಪಕರಾದ ಗಿರೀಶ್ ಹಾದಿಮನಿ ಅವರು, ಸಮಾರಂಭವನ್ನು ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಚಾ ರ್ಯರಾದ ಅನುರಾಧಾ ಆರಾಧ್ಯಮಠ ಅವರು ಸ್ವಾಗತಿಸಿದರು. ಕನ್ನಡ ಉಪನ್ಯಾಸಕರಾದ ಮಾರುತಿ ಕದಂ ವಂದಿಸಿದರು. ಧಾರವಾಡ ಜಿಲ್ಲಾ ಕಾಲೇಜಿನ ಗಣಿತ ಉಪನ್ಯಾಸಕರು ಹಾಗೂ ಸಿ. ವ್ಹಿ.ರಾಮನ್ ಕಾಲೇಜಿನ ಸಿಬ್ಬಂದಿ ವರ್ಗದವರಾದ ಬಸವರಾಜ್ ,ಸುಧಾ ಸಂಗಮೇಶ್, ವಿಜಯಲಕ್ಷ್ಮಿ, ಸುಜಲ್ ಉಪಸ್ಥಿತರಿದ್ದರು.

ಬದುಕಿನಲ್ಲಿ ಮೌಲ್ಯ ಅನುಪಾಲನೆ ಅಗತ್ಯ

ಧಾರವಾಡ: ಭಾರತೀಯ ದಾರ್ಶನಿಕ ಜಗತ್ತು ಪ್ರತಿಪಾದಿಸಿದ ಮೇರು ಜೀವನ ಮೌಲ್ಯಗಳು ಮನುಕುಲದ ಜೊತೆಗಿವೆ.

ಮೌಲ್ಯಾಧಾರಿತ ಜೀವನ ವಿಧಾನಕ್ಕೆ ಯಾವಾಗಲೂ ಶ್ರೇಷ್ಠತೆಯ ಮೆರಗು ಪ್ರಾಪ್ತವಾಗುತ್ತದೆ. ಹಾಗಾಗಿ ಬದುಕಿನಲ್ಲಿ ಮೌಲ್ಯಗಳ ಅನುಪಾಲನೆ ಅಗತ್ಯವಾಗಿದೆ ಎಂದು ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಶ್ರೀಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಪ್ರತಿಪಾದಿಸಿದರು.

ಅಮ್ಮಿನಬಾವಿ ಗ್ರಾಮದ ಶ್ರೀಶಾಂತೇಶ್ವರ ಪ್ರೌಢ ಶಾಲೆಯಲ್ಲಿ ಅಮ್ಮಿನಬಾವಿ ಹಾಗೂ ಮರೇವಾಡ ಗ್ರಾಮಗಳ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 1995-96ನೆಯ ವರ್ಷದ ಹಳೆಯ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನಾ ಸಮಾರಂಭ ಉದ್ಘಾಟಿಸಿ ಮಾತನಾಡುತ್ತಿದ್ದರು. ಬದುಕಿಗೆ ಮೌಲ್ಯಗಳ ಅವಶ್ಯಕತೆ ಎಷ್ಟು ಮುಖ್ಯವೋ, ಹಾಗೇ ಗುರುವಿನ ಮಾರ್ಗದರ್ಶನವೂ ಅಷ್ಟೇ ಮುಖ್ಯ. ಲೌಕಿಕ ಇಲ್ಲವೇ ಅಲೌಕಿಕ ವಿದ್ಯಾರ್ಜನೆ ಇದ್ದರೂ ಸಹಿತ ಅಲ್ಲಿ ಗುರು ಮುಖೇನ ಕಲಿತ ವಿದ್ಯೆಯು ಪರಿಪೂರ್ಣವಾಗಿರುತ್ತದೆ ಎಂದರು.

ಗುರುವಂದನೆ- ಎಸ್.ಎಲ್.ಎಮ್ಮಿ, ಎನ್ .ಬಿ.ಪವಾರ, ಆರ್.ಎಸ್. ಗುಲಗಂಜಿಕೊಪ್ಪ, ಪುಷ್ಪಾ ಬಾಗಲವಾಡಿ, ವ್ಹಿ.ಬಿ. ಕೆಂಚನಗೌಡ್ರ, ಎಸ್.ವೈ ಪೂಜಾರ, ಚೆನ್ನಮ್ಮ ನೀರಲಕಟ್ಟಿ, ಸುಮನ್ ಬೋಂಗಾಳೆ, ಎನ್.ಸಿ. ಪಾಟೀಲ, ಚಿ. ರಾ.ಪದಕಿ, ಎಸ್.ಎಸ್. ಅಂಗಡಿ, ತುಳಸಾ ಮುತಾಲಿಕದೇಶಪಾಂಡೆ, ಜೀಜಾಬಾಯಿ ಜಾಧವ, ಗುರುಮೂರ್ತಿ ಯರಗಂಬಳಿಮಠ, ಚೆನ್ನಮ್ಮ ಬೈಲೂರ, ಪ್ರೇಮಾ ಗುಡಿ, ಮಲ್ಲಿಕಾರ್ಜುನ ಮಠಪತಿ ಅವರನ್ನು ಗೌರವಿಸಿ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸಿದರು.

ಶ್ರೀಶಾಂತೇಶ್ವರ ಪ್ರೌಢಶಾಲೆ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಎಂ.ವ್ಹಿ. ಹೊಸೂರ ಅಧ್ಯಕ್ಷತೆವಹಿಸಿದ್ದರು.

ಜಿ. ಎಂ. ಹಂಚಿನಾಳ ಹಾಗೂ ಎಂ. ವ್ಹಿ. ಅಂಗಡಿ ಅತಿಥಿಗಳಾಗಿದ್ದರು. ಎಸ್.ಟಿ. ಹಿರೇಮಠ, ಶಿವಾನಂದ ಅಕ್ಕೋಜಿ, ಚೆನ್ನಬಸಪ್ಪ ಮಾಟರ, ಉಮೇಶ ನಡುವಿನಹಳ್ಳಿ, ಶಿವಯೋಗಿ ಚಂದರಗಿ ಇತರರು ಇದ್ದರು. ನಿವೃತ್ತ ಸೈನಿಕರುಗಳಾದ ಶಿವಯೋಗಿ ಚಂದರಗಿ ಹಾಗೂ ಮೆಹಬೂಬಸುಬಾನಿ ನದಾಫ್ ಅವರನ್ನೂ ಗೌರವಿಸಲಾಯಿತು. ಸಂತೋಷ ಕಮತರ ಸ್ವಾಗತಿಸಿದರು. ಶೋಭಾ ಸುಳ್ಳದ ನಿರೂಪಿಸಿದರು. ಶಿವಲೀಲಾ ಹುಲ್ಲೂರ ವಂದಿಸಿದರು.

ಮಗನ ಸಾವಿನ ಕುರಿತು ಅನುಮಾನವಿದೆ ತನಿಖೆಯಾಗಲಿ: ನಾಗರಾಜ

ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಇರಲಿಲ್ಲ ಎಂದ ಸಂಬಂಧಿಕರು | ನಾವು ಬರುವ ಮೊದಲೇ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿರುವುದಕ್ಕೆ ಬೇಸರ

ಲಕ್ಷ್ಮೇಶ್ವರ: ಗದಗ ಜಿಲ್ಲೆಯ ಶಿರಹಟ್ಟಿ ಮತಕ್ಷೇತ್ರದ ಶಾಸಕ ಡಾ.ಚಂದ್ರು ಲಮಾಣಿ ಅವರ ಕಾರು ಚಾಲಕ ಸುನೀಲ ಜಯಪ್ಪ ಲಮಾಣಿ (25) ಶುಕ್ರವಾರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ಪಟ್ಟಣದ ಹುಬ್ಬಳ್ಳಿ ರಸ್ತೆಯ ಮಲ್ಲಾಡದ ಕಾಲನಿಯಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಅವರು ಇತ್ತೀಚಿಗೆ ಖರೀದಿಸಿದ್ದರೆನ್ನಲಾದ ಮನೆಯಲ್ಲಿ ಘಟನೆ ನಡೆದಿದೆ. ದಿಂಡೂರ ಗ್ರಾಮದ ಶಾಸಕರ ಸಂಬಂಧಿಯು ಆಗಿದ್ದ ಸುನೀಲ ಕಳೆದ ಎರಡ್ಮೂರು ವರ್ಷಗಳಿಂದ ಇವರ ಹತ್ತಿರ ಕೆಲಸ ಮಾಡುತ್ತಿದ್ದನು.

ಶಾಸಕರು ಗುರುವಾರವೇ ಬೆಂಗಳೂರಿಗೆ ಹೋಗಿದ್ದರಿಂದ ಚಾಲಕ ರಾತ್ರಿ ಊಟ ಮಾಡಿ ಮನೆಯಲ್ಲಿ ಒಬ್ಬನೇ ಮಲಗಿದ್ದಾನೆ. ಶುಕ್ರವಾರ ಬೆಳಿಗ್ಗೆ ಹೊತ್ತಾದರೂ ಬಾಗಿಲು ತೆರೆದಿರಲಿಲ್ಲ ಮತ್ತು ಫೋನ್ ಕರೆಯನ್ನೂ ಸ್ವೀಕರಿಸಲಿಲ್ಲ. ಅನುಮಾನಗೊಂಡು ನೋಡಿದಾಗ ನೇಣು ಹಾಕಿಕೊಂಡು ಮೃತಪಟ್ಟಿರುವ ಬಗ್ಗೆ ತಿಳಿದು ಬಂದಿದೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಸಿಪಿಐ ನಾಗರಾಜ ಮಾಡಳ್ಳಿ ಮತ್ತು ಪಿಎಸ್ಐ ನಾಗರಾಜ ಗಡದ ಪರಿಶೀಲನೆ ಬಳಿಕ ಮೃತದೇಹ ಮರಣೋತ್ತರ ಪರೀಕ್ಷೆಗೆ ಆಸ್ಪತ್ರೆಗೆ ಕಳುಹಿಸಿದ್ದಾರೆ.

ವಿಷಯದ ತಿಳಿದು ಆಸ್ಪತ್ರೆಗೆ ಆಗಮಿಸಿದ ಮೃತನ ಕೆಲ ಸಂಬಂಧಿಕರು ಸುನೀಲ ಆತ್ಮಹತ್ಯೆ ಮಾಡಿಕೊಳ್ಳಲು ಮೇಲ್ನೋಟಕ್ಕೆ ಯಾವುದೇ ಬಲವಾದ ಕಾರಣಗಳಿರಲಿಲ್ಲ. ತಂದೆ-ತಾಯಿ ಎಲ್ಲ ಸಂಬಂಧಿಕರಿದ್ದರೂ ನಾವೆಲ್ಲ ಬರುವವರೆಗೂ ಕಾಯದೇ ಆಸ್ಪತ್ರೆಗೆ ಮೃತದೇಹ ಸ್ಥಳಾಂತರಿಸಿರುವುದು ನಮಗೆಲ್ಲ ನೋವುಂಟು ಮಾಡಿದೆ. ನಮಗೇನೂ ತಿಳಿಯದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದುಃಖದಲ್ಲಿ ಮುಳಗಿದ ಸುನಿಲ್ ಲಮಾಣಿ ಕುಟುಂಬಸ್ತರು.

ಮಗನ ಸಾವಿನ ಬಗ್ಗೆ ಸದ್ಯ ಧಾರವಾಡದಲ್ಲಿ ಇರುವ ತಂದೆ ಜಯಪ್ಪ ಲಮಾಣಿ ಅವರು ಲಕ್ಷ್ಮೇಶ್ವರ ಠಾಣೆಯಲ್ಲಿ ಲಕ್ಷ್ಮೇಶ್ವರದ ಮನೆಯ ರೂಮಿನಲ್ಲಿನ ಫ್ಯಾನಿಗೆ ಹಗ್ಗದಿಂದ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದರಲ್ಲಿ ನಮಗೆ ಸಂಶಯವಿದ್ದು ಈ ಬಗ್ಗೆ ತನಿಖೆಯಾಗಬೇಕು ಎಂದು ವಿನಂತಿಸಿಕೊಂಡಿದ್ದಾರೆ. ತಂದೆಯ ವರದಿಯನ್ವಯ ಪಿಎಸ್ಐ ನಾಗರಾಜ ಗಡದ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶಾಸಕ ಲಮಾಣಿ ಸಂಜೆ ಬೆಂಗಳೂರಿನಿಂದ ನೇರವಾಗಿ ಸರ್ಕಾರಿ ಆಸ್ಪತ್ರೆಗೆ ಬಂದು ಮೃತದೇಹ ವೀಕ್ಷಿಸಿ ದುಃಖ ವ್ಯಕ್ತಪಡಿಸಿದರು. ಈ ವೇಳೆ ಪ್ರತಿಕ್ರಿಯಿಸಿದ ಶಾಸಕ ಡಾ.ಚಂದ್ರು ಲಮಾಣಿ ಅವರು ಗುರುವಾರ ಇಡೀ ದಿನ ಸುನೀಲ ಮತ್ತು ಆತನ ಸಹೋದರ ಆನಂದ ಇಬ್ಬರೂ ನಮ್ಮ ಆಸ್ಪತ್ರೆಯ ಹತ್ತಿರ ಸುರ್ದಿರ್ಘ ಮಾತನಾಡಿದ್ದಾರಂತೆ. ಸುನೀಲನೊಂದಿಗೆ ನಮಗೆ ಆತ್ಮೀಯ ಸಂಬಂಧವಿತ್ತು ನನ್ನ ಸಂಬಂಧಿ ಎಂದೇ ಪರಿಚಯಿಸುತ್ತಿದ್ದೆ. ಆತನ ಕುಟುಂಬದ ಬೇಕು ಬೇಡಿಕೆಗಳಿಗೆ ಸದಾ ಸ್ಪಂಧಿಸುತ್ತಾ ಬಂದಿದ್ದೇನೆ. ಎಲ್ಲರೊಂದಿಗೂ ಆತ್ಮೀಯವಾಗಿದ್ದ ಆತನ ಸಾವು ವೈಯಕ್ತಿಕವಾಗಿ ನನಗೆ ನೋವು ತಂದಿದೆ. ನಾನು ಬೆಂಗಳೂರಿನಲ್ಲಿದ್ದೆ ಘಟನೆಯ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲ. ಪೊಲೀಸರು ಘಟನಾ ಸ್ಥಳದ ಎಲ್ಲವನ್ನೂ ಚಿತ್ರೀಕರಿಸಿಕೊಂಡಿದ್ದಾರೆ ಆತನ ಮೋಬೈಲ್‌ನ್ನೂ ಪೊಲೀಸರಿಗೆ ಒಪ್ಪಿಸಿದ್ದೇವೆ. ಈ ಬಗ್ಗೆ ತನಿಖೆಯಾಗಲಿ ಅನ್ಯಾಯವಾಗಿದ್ದರೆ ಸಾವಿಗೆ ನ್ಯಾಯ ಸಿಗಲಿ ಎಂದರು.

ಮರಣೋತ್ತರ ಪರೀಕ್ಷೆಯ ಬಳಿಕ ಅಂತ್ಯ ಸಂಸ್ಕಾರಕ್ಕೆ ಮುಂಡರಗಿ ತಾಲೂಕಿನ ದಿಂಡೂರ ತಾಂಡಾಕ್ಕೆ ಮೃತದೇಹ ಕಳುಹಿಸಲಾಯಿತು.

ಉಪ್ಪಾರ ಸಮಾಜ ಸಾಧಕರಿಗೆ ಇಂದು ಸನ್ಮಾನ

ಧಾರವಾಡ: ಧಾರವಾಡದ ಕ್ಲಾಸಿಕ್ ಕೆಎಎಸ್ ಐಎಎಸ್ ಸ್ಟಡಿ ಸರ್ಕಲ್ ಸಂಸ್ಥೆಯಲ್ಲಿ ತರಬೇತಿ ಪಡೆದು ಮತ್ತು ಸ್ಪರ್ಧಾ ಸ್ಪೂರ್ತಿ ಮಾಸ ಪತ್ರಿಕೆ ಓದಿ ಹಾಗೂ ಕ್ಲಾಸಿಕ್ ಮಾದರಿ ಪರೀಕ್ಷೆ ಬರೆದು 545 PSI ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ಆಯ್ಕೆಯಾದ 50ಕ್ಕೂ ಹೆಚ್ಚು ಪಿಎಸ್ಐ ಮತ್ತು 200 ಕ್ಕೂ ಹೆಚ್ಚು ಪೊಲೀಸ್ ಕಾನ್ ಸ್ಟೇಬಲ್ ಸಾಧಕರನ್ನು, ಇದೇ ಜನವರಿ 11 ಶನಿವಾರ ನಡೆಯುವ ಕ್ಲಾಸಿಕ್ ಸಂಭ್ರಮ-2025 ಕಾರ್ಯಕ್ರಮದಲ್ಲಿ ಸನ್ಮಾನಿಸಲಾಗುತ್ತಿದೆ ಎಂದು, ಧಾರವಾಡದ ಕ್ಲಾಸಿಕ್ ಸಮೂಹ ಸಂಸ್ಥೆ, ಅಧ್ಯಕ್ಷರು ಹಾಗೂ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶಕರಾದ ಲಕ್ಷ್ಮಣ.ಎಸ್. ಉಪ್ಪಾರ ಅವರು ತಿಳಿಸಿದರು.

ಪ್ರತಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿ ಅವರು, ಈ ಕಾರ್ಯಕ್ರಮವು ಧಾರವಾಡದ ತಪೋವನದ ಬಳಿ ಇರುವ ಕ್ಲಾಸಿಕ್ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ನಡೆಯಲಿದ್ದು, ಕಾರ್ಯಕ್ರಮದ ಸಾನ್ನಿಧ್ಯವನ್ನು ಹುಬ್ಬಳ್ಳಿ ಮೂರು ಸಾವಿರ ಮಠದ ಶ್ರೀಮನ್‌ಮಹಾರಾಜ ನಿರಂಜನ ಪ್ರಭು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮೀಜಿ ಮತ್ತು ಅಥಣಿ ಗಚ್ಚಿನಮಠದ ಶ್ರೀಶಿವಬಸವ ಸ್ವಾಮೀಜಿ ವಹಿಸಲಿದ್ದಾರೆ ಎಂದು ಅವರು ಹೇಳಿದರು.

ಉದ್ಘಾಟಕರಾಗಿ ಹಿರಿಯ ನಿವೃತ್ತ ಪೊಲೀಸ್ ಅಧಿಕಾರಿ ಡಿಜಿಪಿ ಶಂಕರ ಬಿದರಿ ಅವರು ಭಾಗವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವರಾದ ಪ್ರಲ್ಹಾದ ಜೋಷಿ, ಹು-ಧಾ ಪಶ್ಚಿಮ ಶಾಸಕರಾದ ಅರವಿಂದ ಬೆಲ್ಲದ, ಧಾರವಾಡ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಗೋಪಾಲ ಬ್ಯಾಕೋಡ, ಮಂಗಳೂರು ನಗರ ಎಸಿಪಿ ಗೀತಾ ಕುಲಕರ್ಣಿ ಭಾಗವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ ಲಕ್ಷ್ಮಣ. ಎಸ್ ಉಪ್ಪಾರ ವಹಿಸಲಿದ್ದಾರೆ ಎಂದು ತಿಳಿಸಿದರು.

1997 ರಲ್ಲಿ ಆರಂಭವಾದ ಕ್ಲಾಸಿಕ್ ಸಂಸ್ಥೆಯು ಪ್ರಸ್ತುತ 27ನೇ ವರ್ಷಕ್ಕೆ ಕಾಲಿರಿಸಿದ್ದು ಅಂದಿನಿಂದ ಇಂದಿನವರೆಗೂ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಒಂದು ಲಕ್ಷಕ್ಕೂ ಅಧಿಕ ಯುವಜನರಿಗೆ ನಿರಂತರವಾಗಿ ತರಬೇತಿ ನೀಡುತ್ತಾ ಬಂದಿದೆ. ಈ ಸಂಸ್ಥೆಯಿಂದ ತರಬೇತಿ ಪಡೆದ ಸಾವಿರಾರು ಯುವಜನರು ವಿವಿಧ ಇಲಾಖೆಗಳಲ್ಲಿ ನೇಮಕಾತಿ ಹೊಂದಿ ತಮ್ಮ ಜೀವನವನ್ನು ರೂಪಿಸಿಕೊಂಡಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸ್ಪರ್ಧಾ ಸ್ಪೂರ್ತಿ ಮಾಸಪತ್ರಿಕೆಯ ಪ್ರಕಾಶಕರಾದ ರೇಣುಕಾ ಉಪ್ಪಾರ, ಪ್ರೊ ಎಂ ವೈ. ಸಾವಂತ್, ಸಂಪಾದಕರಾದ ಎಚ್ ಆರ್. ವಸ್ತ್ರದ, ಕು. ಸುಜಾತ ಪರಾಳಶೆಟ್ಟರ, ಮಂಜುನಾಥ ದಾಸ್ತಿಕೊಪ್ಪ, ಮಂಜುನಾಥ ಮಠಪತಿ, ಸಂಜೀವ ರೆಡ್ಡಿ, ಸಂತೋಷ ಶಿರಹಟ್ಟಿ ಮತ್ತಿತರು ಉಪಸ್ಥಿತರಿದ್ದರು.

ಬ್ಯಾಂಕಿಗೆ ಗ್ರಾಹಕರ ಸೇವೆಯೇ ಮುಖ್ಯ

ಗಜೇಂದ್ರಗಢ: ಶತಮಾನ ಕಂಡ ದಿ. ಲಕ್ಷ್ಮೀ ಅರ್ಬನ್ ಕೋ-ಆಪರೇಟಿವ್ಹ್ ಬ್ಯಾಂಕ್‌ನ ಶ್ರೇಯೋಭಿವೃದ್ಧಿಗೆ ಆಡಳಿತ ಮಂಡಳಿ ಪ್ರಾಮಾಣಿಕ ಸೇವೆ ಗೈಯಲಿದೆ ಈ ನಿಟ್ಟಿನಲ್ಲಿ ಬ್ಯಾಂಕ್ ಗ್ರಾಹಕರ ಸಹಕಾರ ಮುಖ್ಯವಾಗಿದೆ ಎಂದು ಬ್ಯಾಂಕಿನ ನೂತನ ಅಧ್ಯಕ್ಷ ಎಸ್.ಕೆ. ಚನ್ನಿ ಹೇಳಿದರು.

ಪಟ್ಟಣದ ರೋಣ ರಸ್ತೆ ಬಳಿಯ ದಿ. ಲಕ್ಷ್ಮೀ ಅರ್ಬನ್ ಕೋ-ಆಪರೇಟಿವ್ಹ್ ಬ್ಯಾಂಕ್‌ನ ಎಪಿಎಂಸಿ ಶಾಖೆಯಲ್ಲಿ ಶುಕ್ರವಾರ ನಡೆದ ನೂತನ ಆಡಳಿತ ಮಂಡಳಿ ಆಯ್ಕೆ ಸಭೆಯಲ್ಲಿ ಮಾತನಾಡಿದ ಅವರು,ಸಹಕಾರಿ ಇತಿಹಾಸದಲ್ಲಿ ಹಲವಾರು ಸಂಘಗಳು ಏಳು ಬೀಳುಗಳನ್ನು ಕಂಡಿರುತ್ತವೆ. ಆದರೆ ಗಜೇಂದ್ರಗಡದ ಪ್ರತಿಷ್ಠಿತ ದಿ. ಲಕ್ಷ್ಮೀ ಅರ್ಬನ್ ಬ್ಯಾಂಕ ಸಾವಿರಾರು ಸಹಕಾರಿಗಳು ಕೈ ಬಲ ಪಡಿಸಿದ ಪರಿಣಾಮವಾಗಿ 110 ವರ್ಷಗಳಿಂದ ಲಾಭದತ್ತ ಸಾಗುತ್ತಿದೆ. ಇಂತಹ ಶತಮಾನದ ಬ್ಯಾಂಕಿನ ಆಡಳಿತ ಮಂಡಳಿಗೆ ಈಚೆಗೆ ನಡೆದ ಚುನಾವಣೆಯಲ್ಲಿ ಈ ಹಿಂದಿನ ಆಡಳಿತವೇ ಮರಳಿ ಆಯ್ಕೆಯಾಗಿದೆ. ಹೀಗಾಗಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೈಯುವ ಉದ್ದೇಶದಿಂದ ಹೊಸ ಆಡಳಿತ ಮಂಡಳಿ ರಚನೆ ಮಾಡುವ ಮೂಲಕ ನನಗೆ ಮತ್ತಷ್ಟು ಜವಾಬ್ದಾರಿಯನ್ನು ನೀಡಿದ್ದಾರೆ. ನಿಮ್ಮೆಲ್ಲರ ಸಹಕಾರ, ಸಹಭಾಗಿತ್ವ ಮುಖ್ಯವಾಗಿದೆ ಎಂದರು.

ಬ್ಯಾಂಕಿನ ನೂತನ ಉಪಾಧ್ಯಕ್ಷ ಸಿದ್ದಪ್ಪ ಬಂಡಿ ಮಾತನಾಡಿ, ಯಾವುದೇ ಸಂಸ್ಥೆ ಯಶಸ್ಸಿನತ್ತ ಹೋಗಬೇಕಾದರೆ ಅಲ್ಲಿನ ಸಿಬ್ಬಂದಿ ಸಹಕಾರ, ಗ್ರಾಹಕರ ಸಹಭಾಗಿತ್ವ ಅತ್ಯಗತ್ಯ. ದಕ್ಷತೆ, ಪ್ರಾಮಾಣಿಕ ಸೇವೆಯ ಮೂಲಕ ಸಹಕಾರಿಗಳ ಪ್ರೀತಿ, ನಂಬಿಕೆ, ವಿಶ್ವಾಸಕ್ಕೆ ಪಾತ್ರವಾಗಿರುವ ದಿ, ಲಕ್ಷ್ಮೀ ಅರ್ಬನ್ ಕೋ-ಆಫ್, ಬ್ಯಾಂಕ್‌ಗೆ ನೂತನ ಆಡಳಿತ ಮಂಡಳಿ ರಚನೆಯಾಗಿದೆ. ಈ ಹಿಂದಿನ ಕಮೀಟಿ ಬ್ಯಾಂಕಿಗಾಗಿ ಶ್ರಮಿಸಿದ್ದಾರೆ. ಹಿರಿಯರ ಹಾದಿಯಲ್ಲಿಯೇ ಮುನ್ನಡೆಯುವ ಮೂಲಕ ಬ್ಯಾಂಕನ ಬೆಳವಣಿಗೆಗೆ ನಾವೆಲ್ಲರೂ ಶ್ರಮಿಸುತ್ತೇವೆ.

ಇಂಥ ಜನಪರ ಕಾರ್ಯಕ್ರಮಗಳು ಹೆಚ್ಚೆಚ್ಚು ನಡೆಯಲಿವೆ ಎಂದರು. ಇದೇ ಸಂದರ್ಭದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕಿ ಪುಷ್ಪಾ ಕಡಿವಾಳ, ಪ್ರಶಾಂತ್ ಮುಧೋಳ ನೂತನ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಪ್ರಕ್ರೀಯೆ ನಿರ್ವಹಿಸಿದರು. ಸುಹಾಸಕುಮಾರ ಪಟ್ಟೇದ, ಡಾ.ಬಿ.ವಿ. ಕಂಬಳ್ಯಾಳ, ಪಿ.ಎಸ್ ಕಡ್ಡಿ, ಪಿ.ವೈ. ತಳವಾರ, ಆರ್.ಬಿ. ನಿಡಗುಂದಿ, ಪಿ.ಬಿ. ಮ್ಯಾಗೇರಿ, ವಿ.ಎಸ್. ನಂದಿಹಾಳ, ಎಸ್.ಕೆ. ಕನಕೇರಿ, ಎಸ್ .ಯು. ಮೆಣಸಗಿ, ಆರ್.ಪಿ. ಹೂಲಿ, ಬ್ಯಾಂಕ ವ್ಯವಸ್ಥಾಪಕ ಆರ್.ಎಸ್. ಹೊಸಂಗಡಿ, ಎಂ.ಎಸ್. ಇಂಡಿ, ಪಿ.ಬಿ. ಮ್ಯಾಗೇರಿ, ಎನ್.ಕೆ. ಹೊಸಂಗಡಿ ಸೇರಿದಂತೆ ಇತರರು ಇದ್ದರು.

ಸಮಾಚಾರ ಸಣ್ಣದಲ್ಲ

ತಂದೆ, ಮಲತಾಯಿಯ ಹತ್ಯೆಗೈದ ಮಗ

ಹುಬ್ಬಳ್ಳಿ : ಆಸ್ತಿಗಾಗಿ ಮಾರಕಾಸ್ತ್ರದಿಂದ ಕೊಚ್ಚಿ ಹೆತ್ತ ತಂದೆ ಹಾಗೂ ಮಲತಾಯಿಯನ್ನು ವ್ಯಕ್ತಿ ಬರ್ಬರವಾಗಿ ಹತ್ಯೆಗೈದ ಘಟನೆ ಹುಬ್ಬಳ್ಳಿ ತಾಲೂಕಿನ ಕುಸುಗಲ್ ಗ್ರಾಮದಲ್ಲಿ ನಡೆದಿದೆ. ಮೃತರನ್ನು ಅಶೋಕ, ಶಾರದಮ್ಮ ಎಂದು ಗುರುತಿಸಲಾಗಿದೆ. ಆರೋಪಿ ಗಂಗಾಧರಪ್ಪ ಕೃತ್ಯ ಎಸಗಿ ಪರಾರಿಯಾಗಿದ್ದಾನೆ. ಮೃತ ಅಶೋಕನ ಮೊದಲ ಹೆಂಡತಿಯ ಮಗ ಗಂಗಾಧರಪ್ಪ ಬಾಗಲಕೋಟೆ ಜಿಲ್ಲೆಯ ಬೀಳಗಿಯಲ್ಲಿ ವಾಸಿಸುತ್ತಿದ್ದ. ಎರಡು ಎಕರೆ ಆಸ್ತಿಗಾಗಿ ಆಗಾಗ ತಂದೆ ಮತ್ತು ಮಗನ ನಡುವೆ ಜಗಳ ನಡೆಯುತ್ತಿತ್ತು. ಶುಕ್ರವಾರವೂ ಕೂಡ ಆರೋಪಿ ಮನೆಗೆ ಕುಡಿದು ಬಂದು ತಂದೆ ಜೊತೆ ಜಗಳ ಮಾಡಿದ್ದ. ಈ ವೇಳೆ ತಂದೆ ಆಸ್ತಿ ಕೊಡಲು ನಿರಾಕರಿಸಿದ್ದರಿಂದ ಮಾರಕಾಸ್ತ್ರದಿಂದ ಕೊಚ್ಚಿ ತಂದೆ ಹಾಗೂ ಮಲತಾಯಿಯ ಕೊಲೆ ಮಾಡಿ ಪರಾರಿಯಾಗಿದ್ದಾನೆ. ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಡಿಕ್ಕಿ: ಜಿಂಕೆ ಸಾವು

ಚಾಮರಾಜನಗರ: ಕಾರು ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟುತ್ತಿದ್ದ ಜಿಂಕೆಯೊಂದು ಸಾವಿಗೀಡಾದ ಘಟನೆ ಗುಂಡ್ಲುಪೇಟೆ ತಾಲೂಕಿನ ಕೇರಳ ರಾಷ್ಟ್ರೀಯ ಹೆದ್ದಾರಿ–766ರಲ್ಲಿ ನಡೆದಿದೆ. ಕಾರು ಚಾಲಕನನ್ನು ಬಂಧಿಸಲಾಗಿದೆ. ಕೇರಳದ ವಯನಾಡಿನ ಝೂಕೀರ್ ಬಂಧಿತ ಆರೋಪಿ. ಈತ ಕೇರಳದಿಂದ ಗುಂಡ್ಲುಪೇಟೆ ಕಡೆಗೆ ಸ್ವಿಫ್ಟ್ ಕಾರನ್ನು ವೇಗವಾಗಿ ಚಾಲನೆ ಮಾಡಿಕೊಂಡು ಬಂಡೀಪುರ ಅಭಯಾರಣ್ಯದ ಕಗ್ಗಳದಹುಂಡಿ ಬಳಿ ರಸ್ತೆ ದಾಟುತ್ತಿದ್ದ ಜಿಂಕೆಗೆ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿ ರಭಸಕ್ಕೆ ಜಿಂಕೆ ರಸ್ತೆಯಲ್ಲೆ ಪ್ರಾಣ ಕಳೆದುಕೊಂಡಿದೆ. ಅರಣ್ಯಾಧಿಕಾರಿ ಧಾವಿಸಿ ಚಾಲಕನನ್ನು ಬಂಧಿಸಿ, ಕಾರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸ್ಥಳಕ್ಕೆ ಗುಂಡ್ಲುಪೇಟೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್, ವಲಯ ಅರಣ್ಯಾಧಿಕಾರಿ ಕೆ.ಪಿ.ಸತೀಶ್ ಕುಮಾರ್, ಮದ್ದೂರು ವಲಯ ಉಪ ಅರಣ್ಯಾಧಿಕಾರಿ ಗೌಸ್, ಶಿವಕುಮಾರ್ ಭೇಟಿ ನೀಡಿದ್ದರು.

ಗ್ರೀನ್ ನ್ಯಾನೋ ಟೆಕ್ ಕ್ಷೇತ್ರದಲ್ಲಿ ಅನಂತ ಕ್ರಾಂತಿ

← ಮೊದಲಪುಟದಿಂದ

ಏನಿದು ನ್ಯಾನೋಕೇರ್ ಔಷಧಿ?

ಡಾ.ಕಟ್ಟೇಶ್ ಕಟ್ಟಿ ಹಾಗೂ ಅನಂತಕುಮಾರ್ ಅವರು ಅಭಿವೃದ್ಧಿಪಡಿಸಿರುವ ಈ ನ್ಯಾನೋಕೇರ್ ಔಷಧಗಳು ಭಾರತದ ಆಯುರ್ವೇದ ಹಾಗೂ ಪಾಶ್ಚಿಮಾತ್ಯ ಅಲೋಪತಿ ಔಷಧಗಳ ನಡುವಿನ ಸೇತುವೆಯಾಗಿದೆ. ಈ ನ್ಯಾನೋ ಆರೋಗ್ಯ ವಿಜ್ಞಾನವು ಕಾಯಿಲೆಗಳ ಚಿಕಿತ್ಸೆ ಹಾಗೂ ವೈದ್ಯಕೀಯ ಕ್ಷೇತ್ರಗಳಲ್ಲಿ ಭವಿಷ್ಯದಲ್ಲಿ ಕ್ರಾಂತಿ ಉಂಟು ಮಾಡಲಿದ್ದು, ಈಗಾಗಲೇ ಹಲವು ದೇಶಗಳಿಂದ ಇವರ ಉತ್ಪನ್ನಗಳಿಗೆ ಭಾರೀ ಬೇಡಿಕೆ ಸೃಷ್ಟಿಯಾಗಿದ್ದು, ಇನ್ನಿತರ ದೇಶಗಳ ವಿಜ್ಞಾನಿಗಳು ಹಾಗೂ ತಜ್ಞರು ಇವರ ಸಂಸ್ಥೆಗೆ ಭೇಟಿ ನೀಡಿ ಸಂಶೋಧನೆ ಹಾಗೂ ಉತ್ಪನ್ನಗಳಿಗೆ ಬೇಡಿಕೆ ಇಡುತ್ತಿದ್ದಾರೆ.

ನ್ಯಾನೋ ಮೆಡಿಸಿನ್ ಇತರೆ ಔಷಧಿಗಿಂತ ಭಿನ್ನ

ತಮ್ಮ ಗ್ರೀನ್ ನ್ಯಾನೋ ಕೇರ್ ಉತ್ಪನ್ನಗಳ ಬಗ್ಗೆ ಮಾತನಾಡಿದ ಮಾಜಿ ಕೇಂದ್ರ ಸಚಿವ ಅನಂತಕುಮಾರ ಹೆಗಡೆ, ಗ್ರೀನ್ ನ್ಯಾನೋ ತಂತ್ರಜ್ಞಾನದ ನೆರವಿನಿಂದ ನ್ಯಾನೋ ಗಾತ್ರದಲ್ಲಿ ಔಷಧಗಳನ್ನು ಮಾಡಬಹುದು. ಇದೊಂದು ಶುದ್ಧ ವಿಜ್ಞಾನ. ಮನುಷ್ಯನ ಜೀವ ಕಣಗಳು 12 ರಿಂದ 18ರಷ್ಟು ಮೈಕ್ರಾನ್ ನಷ್ಟು ಸೂಕ್ಷ್ಮ ಗಾತ್ರ ಹೊಂದಿರುತ್ತದೆ. ಕ್ಯಾನ್ಸರ್ ಟ್ಯೂಮರ್ ಕಣಗಳು ಅಷ್ಟೇ ಗಾತ್ರ ಹೊಂದಿರುತ್ತವೆ. ಈಗಿನ ಔಷಧಗಳು ಈ ಕಣಗಳಿಗಿಂತ ದೊಡ್ಡ ಗಾತ್ರ ಹೊಂದಿರುವುದರಿಂದ ಜೀವಕಣಗಳ ಒಳ ನುಸುಳಿ ಪ್ರಭಾವ ಬೀರಬಲ್ಲಷ್ಟು ಶಕ್ತಿಶಾಲಿ ಆಗಿಲ್ಲ. ಆದರೆ ನ್ಯಾನೋ ಔಷಧೀಯ ಕಣಗಳು ಜೀವಕಣಗಳಿಗಿಂತ ಅತ್ಯಂತ ಸೂಕ್ಷ್ಮವಾಗಿರುವುದರಿಂದ ಜೀವ ಕಣಗಳ ಒಳಗೆ ನುಸುಳಿ ಹೆಚ್ಚು ಪ್ರಭಾವ ಬೀರಬಲ್ಲವಂಥ ವಾಗಿವೆ. ಆದ್ದರಿಂದ ಸಾಧಾರಣ ಔಷಧೀಯ ಕಣಗಳಿಗಿಂತ ನ್ಯಾನೋ ಔಷಧೀಯ ಕಣಗಳು ಹೆಚ್ಚು ಪರಿಣಾಮಕಾರಿ ಎಂದರು.

ಈಗಿರುವ ಪದ್ಧತಿಯಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ಕಿಮೋಥೆರಪಿ, ರೇಡಿಯೋಥೆರಪಿ ಮಾಡಿದಾಗ ಇಡೀ ದೇಹದ ಇಮ್ಯುನಿಟಿ ಕುಗ್ಗುತ್ತದೆ. ಔಷಧಗಳು ಟ್ಯೂಮರ್ ಸೆಲ್ ಬದಲಿಗೆ ರಕ್ತ, ಆರೋಗ್ಯವಂತ ಜೀವ ಕಣಗಳ ಮೇಲೂ ದುಷ್ಪರಿಣಾಮ ಬೀರುತ್ತದೆ. ಇದನ್ನು ತಪ್ಪಿಸಲು ನ್ಯಾನೋ ಮೆಡಿಸಿನ್ ನೆರವಾಗುತ್ತದೆ. ಬಂಗಾರ, ಬೆಳ್ಳಿಯಂಥ ಲೋಹದ ಕಣಗಳನ್ನು ಔಷಧದಲ್ಲಿ ಬಳಕೆ ಮಾಡುವ ಪರಂಪರೆ ಎಲ್ಲಾ ಔಷಧೀಯ ಪದ್ಧತಿಗಳಲ್ಲೂ ಇದೆ. ಭಾರತ, ಚೀನಾ, ಈಜಿಪ್ಟ್, ಗ್ರೀಕ್ ಎಲ್ಲಾ ಆಯುರ್ವೇದ ಪದ್ಧತಿಗಳಲ್ಲೂ ಚಿನ್ನವನ್ನು ಭಸ್ಮದ ರೂಪದಲ್ಲಿ ಚಿಕಿತ್ಸೆಗೆ ಬಳಸುತ್ತಿದ್ದರು. ಅದಕ್ಕೆ ರಜತ ಭಸ್ಮ, ಸ್ವರ್ಣಭಸ್ಮ ಎಂಬ ಹೆಸರುಗಳೂ ಇವೆ. ಇದೀಗ ನಾವು ಇದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲು ಚಿನ್ನ ಮತ್ತು ನ್ಯಾನೋ ಕಣಗಳನ್ನು ನ್ಯಾನೋ ಕೇರ್ ಔಷಧಗಳಲ್ಲಿ ಹದಗೊಳಿಸುವ ಪ್ರಯತ್ನ ಮಾಡಿ ಯಶಸ್ವಿಯಾಗಿದ್ದೇವೆ ಎಂದು ಡಾ.ಕಟ್ಟೇಶ್ ಕಟ್ಟಿ ತಿಳಿಸಿದರು.

ಗ್ರೀನ್ ನ್ಯಾನೋ ಕ್ರಾಂತಿ

ಆರೋಗ್ಯ ಜಾಗೃತಿಗೆ ಗ್ರೀನ್ ನ್ಯಾನೋ ಮೂಲಕ ಹಸಿರು ಆಯಾಮ ನೀಡುತ್ತಿರುವ ಕದಂಬ ಸಂಸ್ಥೆ, ನ್ಯಾನೋ ಕ್ಷೇತ್ರ ಸಂಶೋಧಿಸುವ ಅನಂತ ಕೆಲಸಕ್ಕೆ ಕೈ ಹಾಕಿದ್ದಾರೆ. ಭವಿಷ್ಯದ ತಂತ್ರಜ್ಞಾನ ಎಂದೇ ಹೆಸರಾಗಿರುವ ಎಐ ನಂತೆ ಗ್ರೀನ್ ನ್ಯಾನೋ ಕೇರ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಇದಕ್ಕಾಗಿ ವಿಶ್ವದ ಮೊದಲ ಹಸಿರು ನ್ಯಾನೋ ರಿಯಾಕ್ಟರ್ ಸ್ಥಾಪನೆ ಮಾಡಿದ್ದು, ನೆಗೆಟಿವ್ ಕಾರ್ಬನ್ ಎಮಿಷನ್ ತಂತ್ರಜ್ಞಾನ ಹೊಂದಿರುವ ರಿಯಾಕ್ಟರ್‌ನಲ್ಲಿ ಗಿಡಮೂಲಿಕೆಗಳನ್ನು ಹಾಕಿ ಅದರಿಂದ ನ್ಯಾನೋ ಮಾಲಿಕ್ಯೂಲ್ (ಕಣ) ಹೊರ ತೆಗೆಯಲಾಗುತ್ತದೆ. ಇದರ ಮೂಲಕ ಪರಿಣಾಮಕಾರಿ ಔಷಧಗಳನ್ನು ತಯಾರಿಸಲಾಗುತ್ತಿದೆ. ಇದು ಗಂಭೀರ ಹಾಗೂ ಸಂಕೀರ್ಣ ಅನಾರೋಗ್ಯ ಸಮಸ್ಯೆಗಳಿಗೆ ರಾಮಬಾಣವಾಗಿ ಕೆಲಸ ಮಾಡಲಿದೆ ಎಂದು ಗ್ರೀನ್ ನ್ಯಾನೋ ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ.ಕಟ್ಟೇಶ್ ಕಟ್ಟಿ ಹೇಳಿದ್ದಾರೆ.

ಖಚಿತ ಚಿಕಿತ್ಸೆ, ಔಷಧಿಗಳ ಮೇಲೆ ಕಣ್ಗಾವಲು

ಗ್ರೀನ್ ನ್ಯಾನೋ ಔಷಧಗಳ ಬಗ್ಗೆ ವಿವರಣೆ ನೀಡಿರುವ ಡಾ.ಕಟ್ಟೇಶ್ ಕಟ್ಟಿ, ಕಳೆದ 40 ವರ್ಷಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ರೋಗಗಳ ಪತ್ತೆ (ಡಯಾಗ್ನೈಸ್) ಕ್ಷೇತ್ರದಲ್ಲಿ ಅತ್ಯದ್ಭುತ ಸಾಧನೆ ಆಗಿದೆ. ಆದರೆ ಚಿಕಿತ್ಸೆ ಹಾಗೂ ಕಾಯಿಲೆ ನಿವಾರಣೆ ಮಟ್ಟದಲ್ಲಿ ಸಾಧನೆಯಾಗಿದ್ದರೂ ಅದು ಸಾಲದು. ಇದೀಗ ನ್ಯಾನೋ ಔಷಧಗಳ ಮೂಲಕ ಕ್ಯಾನ್ಸರ್, ಮಧುಮೇಹ ಹಾಗೂ ಸೋಂಕು ಸಂಬಂಧಿತ ಸಮಸ್ಯೆಗಳಿಗೆ ಖಚಿತ ಚಿಕಿತ್ಸೆ ನೀಡಬಹುದು. ಇದನ್ನು ಈಗಾಗಲೇ ಕೆಲ ಪ್ರಾಣಿಗಳು, ರೋಗಿಗಳ ಮೇಲೆ ಪ್ರಯೋಗ ಮಾಡಿದ್ದು ಖಚಿತ ಫಲಿತಾಂಶ ಪಡೆದಿದ್ದೇವೆ ಎಂದರು.

ಏನೇನು ಉತ್ಪನ್ನ ಲಭ್ಯ?

ಸದ್ಯಕ್ಕೆ ಕ್ಯಾನ್ಸರ್ ಸಂಬಂಧಿತ ಕೆಲ ಔಷಧಿ, ಮಲೇರಿಯಾ, ಡೆಂಗ್ಯೂ ಔಷಧಿಗಳು , ಸೌಂದರ್ಯ ವರ್ಧಕ, ಕುಕ್ಕೀಸ್, ಹರ್ಬಲ್ ಟೀ ಕ್ಯಾಪ್ಸುಲ್, ಐಸ್ಕ್ರೀಂ ಮಿಕ್ಸ್, ಹರ್ಬಲ್ ವಾಟರ್, ನ್ಯಾನೋ ಹರ್ಬಲ್ ಚಾಕೊಲೇಟ್, ಪಾನೀಯಗಳ ಪ್ರಿಮಿಕ್ಸ್ ಕ್ಯಾಪ್ಸುಲ್ಸ್ , ಎನರ್ಜಿ ಬಾರ್, ವಿವಿಧ ರೀತಿಯ ಎಣ್ಣೆ, ತುಪ್ಪ, ಸ್ಯಾನಿಟೈಸರ್, ಕೇಶ ಆರೈಕೆ ಉತ್ಪನ್ನ, ಮಾಲಿನ್ಯ ಹೀರಿಕೊಳ್ಳುವ ಬಣ್ಣ ಸೇರಿ ಹಲವು ಉತ್ಪನ್ನಗಳನ್ನು ಸಿದ್ಧಪಡಿಸಿ ರಫ್ತು ಮಾಡಲಾಗುತ್ತಿದೆ.

ವಿಶ್ವದ ಮೊದಲ ಗ್ರೀನ್ ನ್ಯಾನೋ ಕೇಂದ್ರ

ಬೆಂಗಳೂರಿನ ಜಯನಗರ 4ನೇ ಬ್ಲಾಕ್‌ನಲ್ಲಿರುವ ವಿಶ್ವದ ಮೊದಲ ಗ್ರೀನ್ ನ್ಯಾನೋ ವೈದ್ಯಕೀಯ ಕೇಂದ್ರವನ್ನು ಅನಂತಕುಮಾರ್ ಹೆಗಡೆ ಅವರು ಕದಂಬ ಸಂಸ್ಥೆಯಡಿ ಸ್ಥಾಪಿಸಿದ್ದಾರೆ. ಈಗಾಗಲೇ 100ಕ್ಕೂ ಹೆಚ್ಚು ಔಷಧ ಅಭಿವೃದ್ಧಿಪಡಿಸಿದ್ದು, ಆಯುರ್ವೇದದಲ್ಲಿ ತಿಳಿಸಿರುವ ಗಿಡಮೂಲಿಕೆಗಳನ್ನು ಬಳಸಿಕೊಂಡು ವಿಶ್ವ ಆರೋಗ್ಯ ಕ್ಷೇತ್ರಕ್ಕೆ ಕೊಡುಗೆ ನೀಡಲು ಮುಂದಾಗಿದ್ದಾರೆ. ಅಲ್ಲದೆ ಔಷಧಿ ತಯಾರಿಸುವ ಸಂಬಂಧಿತ ಘಟಕವು ಬೆಂಗಳೂರಿನ ಪೀಣ್ಯದಲ್ಲಿ ಆರಂಭಿಸಲಾಗಿದ್ದು, ಅಲ್ಲಿಂದಲೇ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತದೆ. ಸದ್ಯಕ್ಕೆ ಆನ್‌ಲೈನ್ ಮೂಲಕವೇ ಉತ್ಪನ್ನಗಳನ್ನು ವಿತರಿಸಲಾಗುತ್ತಿದ್ದು, ಬೇಡಿಕೆ ಹೆಚ್ಚಾದಂತೆ ಎಲ್ಲ ಕಡೆ ದೊರೆಯಲಿದೆ. ಹೀಗಿದ್ದರೂ ಇದು ಹಣ ಮಾಡುವ ಉದ್ದೇಶದಿಂದ ಆರಂಭವಾಗಿರುವ ತಂತ್ರಜ್ಞಾನವಾಗಲಿ ಹಾಗೂ ಉದ್ದೇಶವಾಗಲಿ ಅಲ್ಲ ಎಂದು ಅನಂತಕುಮಾರ್ ಹೆಗಡೆ ತಿಳಿಸಿದರು.

ಯಾರಿದು ಡಾ.ಕಟ್ಟೇಶ್ ಕಟ್ಟಿ

ಧಾರವಾಡ ಮೂಲದವರಾದ ಡಾ.ಕಟ್ಟೇಶ್ ಕಟ್ಟಿ ಐಐಎಸ್‌ಸಿಯಲ್ಲಿ ಪದವಿ ಪಡೆದವರು. ಅಮೆರಿಕದಲ್ಲಿ ನೆಲಸಿರುವ ಮೂಲತಃ ನ್ಯೂಕ್ಲಿಯರ್ ಮೆಡಿಸಿನ್ ತಜ್ಞರಾದ ಅವರು ಇದೀಗ ಅಮೆರಿಕದ ಮಿಸೌರಿ ವಿವಿ ಕ್ಯಾನ್ಸರ್ ನ್ಯಾನೋ ತಂತ್ರಜ್ಞಾನದ ನಿರ್ದೇಶಕರಾಗಿದ್ದಾರೆ. ಗ್ರೀನ್ ನ್ಯಾನೋ ಟೆಕ್ನಾ ಲಜಿ ಪರಿಚಯಿಸುವ ಮೂಲಕ ಗ್ರೀನ್ ನ್ಯಾನೋ ತಂತ್ರಜ್ಞಾನದ ಪಿತಾಮಹರಾಗಿ ಹೆಸರು ಮಾಡಿದ್ದಾರೆ. ಅಂತಾರಾಷ್ಟ್ರೀಯ ಗ್ರೀನ್ ನ್ಯಾನೋ ತಂತ್ರಜ್ಞಾನದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಆಣ್ವಿಕ ರಚನೆಯಲ್ಲಿ ಅಗಾಧ ಸಾಧನೆ ಮಾಡಿದ್ದಾರೆ. ಪೆಪ್ಟೈಡ್ ಒಂದಕ್ಕೆ ಕಟ್ಟೇಶ್ ಪೆಪ್ಟೈಡ್ ಎಂದೇ ಹೆಸರು ಇಡಲಾಗಿದೆ. ಅಲ್ಲದೆ ಗ್ರೀನ್ ನ್ಯಾನೋ ಕೇರ್‌ನಲ್ಲಿ ಸ್ಥಾಪಿಸಿರುವ ನ್ಯಾನೋ ರಿಯಾಕ್ಟರ್‌ಗೆ ಕಟ್ಟಿ ರಿಯಾಕ್ಟರ್ ಎಂದು ಹೆಸರು ಇಡಲಾಗಿದೆ.

ನ್ಯಾನೋ ಎಂಬ ವೇದಿಕೆ ಒಂದು ಕ್ಷೇತ್ರಕ್ಕೆ, ಉತ್ಪನ್ನಕ್ಕೆ ಸೀಮಿತವಾಗಿಲ್ಲ. ನೆಲದಿಂದ ಆಂತರಿಕ್ಷದವರೆಗೆ ಎಲ್ಲದರಲ್ಲೂ ಬಳಕೆ ಮಾಡಬಹುದು. ನಮ್ಮ ಗ್ರೀನ್ ನ್ಯಾನೋ ಕ್ಷೇತ್ರದ ಔಷಧಿಗಳಿಗೆ ಬೇಕಾದ ವಿವಿಧ ರೀತಿಯ ಹಸಿರು ಸಸ್ಯೆ ಸೇರಿದಂತೆ , ಗಿಡಮೂಲಿಕೆಗಳು ನಮ್ಮ ದೇಶದಲ್ಲೇ ಅಗಾಧವಾಗಿ ದೊರಕುತ್ತಿದೆ. ಗ್ರೀನ್ ನ್ಯಾನೋ ಔಷಧಿಗಳು ದ್ರವರೂಪದಲ್ಲಿರುತ್ತದೆ.

– ಅನಂತಕುಮಾರ್ ಹೆಗಡೆ
ಕದಂಬ ಗ್ರೀನ್ ನ್ಯಾನೋ ಕೇರ್ ಸಂಸ್ಥಾಪಕರು

ಅನಂತಕುಮಾರ್ ಹೆಗಡೆಯವರು ನಮ್ಮೊಂದಿಗೆ ಸೇರಿದಂತೆ ಹಲವು ಪರಿಣಿತರೊಂದಿಗೆ ಸುಮಾರು 30 ವರ್ಷಗಳಿಂದ ಸತತ ಸಂಪರ್ಕದಲ್ಲಿದ್ದು ಹಲವು ವಿಚಾರಗಳತ್ತ ಗಮನ ಹರಿಸಿ ಈ ಉತ್ಪನ್ನ ಹೊರತರಲು ಶ್ರಮಿಸಿದ್ದಾರೆ. ಯಾವುದೇ ವೈದ್ಯರಾಗಲಿ ನ್ಯಾನೋ ಮೆಡಿಸಿನ್ ಮೂಲಕ ರೋಗಿಗಳನ್ನು ಉಪಚರಿಸಲು ತರಬೇತಿ ಪಡೆಯಬಹುದು. ಸೂಕ್ತ ಸಂಖ್ಯೆಯ ವೈದ್ಯರು ಬಂದರೆ 3 ಅಥವಾ 6 ತಿಂಗಳ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮ ಯೋಜಿಸಿದ್ದೇವೆ.

– ಡಾ.ಕಟ್ಟೇಶ್ ಕಟ್ಟಿ ಗ್ರೀನ್ ನ್ಯಾನೋ ಪಿತಾಮಹ

ಅಣು–ಕಣ/ಸಸ್ಯಜನ್ಯ

ತಂತ್ರಜ್ಞಾನ ಎಂದಿಗೂ ಮಾತನಾಡುವುದಿಲ್ಲ, ಬದಲಾಗಿ ಅದರ ಉತ್ಪನ್ನವೇ ಅಂತಿಮ. ಆರೋಗ್ಯ ಕೇತ್ರದಲ್ಲಿ ಹಲವಾರು ಸಂಶೋಧನೆಗಳು ನಡೆದಿದ್ದರೂ ಕೆಲವೊಂದು ಮಾತ್ರ ಬೆಳಕಿಗೆ ಬರುತ್ತದೆ. ಮತ್ತೆ ಹಲವು ದಾಖಲೆ, ಪ್ರಬಂಧಗಳು ಪ್ರಕಟವಾದ ಮೇಲೆ ಹಾಗೇಯೇ ಉಳಿದು ಬಿಡುತ್ತದೆ. ಆದರೆ ಹಲವು ನಾವು ದೇಶ ವಿದೇಶಗಳ ಹಲವು ಸಂಶೋಧಕರು, ತಜ್ಞರು ಹಾಗೂ ಆರೋಗ್ಯ ಕ್ಷೇತ್ರವೂ ಸೇರಿದಂತೆ ತಂತ್ರಜ್ಞಾನದಲ್ಲಿ ಹೆಸರು ಮಾಡಿದವರೊಂದಿಗೆ ನಿರಂತವಾಗಿ ಚರ್ಚಿಸಿ, ಪ್ರಯೋಗಗಳನ್ನು ಮಾಡಿ ಈ ಉತ್ಪನ್ನಗಳನ್ನು ಮಾಡಲಾಗಿದೆ. ನಮ್ಮ ಸಂಶೋಧನೆಯಿಂದ ಜನರಿಗೆ ಅನುಕೂಲವಾಗಲು ಮತ್ತಷ್ಟು ಸಂಶೋಧನೆಗಳನ್ನು ಮಾಡುತ್ತಿದ್ದೇವೆ ಎಂದಿದ್ದಾರೆ ಅನಂತ್ ಕುಮಾರ್ ಹೆಗಡೆ. ನಿರಂತರ ಅಧ್ಯಯನ ಪರಿಣಾಮವಾಗಿ ನಮ್ಮ ಉತ್ಪನ್ನ ಜಗತ್ತಿನ ಮುಂದಿದೆ. ನ್ಯಾನೋ ತಂತ್ರಜ್ಞಾನದ ಔಷಧಿ ಅಂದರೆ ಮುಂದಿನ 5–10 ವರ್ಷಗಳಲ್ಲಿ ಊಹೆಗೂ ನಿಲುಕದ ರೀತಿಯಲ್ಲಿ ಬೆಳೆಯಲಿದೆ. ಇದು ಮಣ್ಣಿನಿಂದ ಅಂತರಿಕ್ಷದವರೆಗೂ ಅನುಕೂಲವಾಗಬಲ್ಲದು. ವಿಷಕಾರಿ ದೂರ ಮಾಡಲು ಹಾಗೂ ರಾಸಾಯನಿಕ ಕಬಂಧಬಾಹುವಿನಿಂದ ಹೊರಬರಲು ಸಸ್ಯಜನ್ಯ ಆಧಾರಿತ ನ್ಯಾನೋ ತಂತ್ರಜ್ಞಾನ ಇದರಲ್ಲಿ ಬಳಸಿಕೊಳ್ಳಲಾಗಿದೆ. ಅಲ್ಲದೆ ನಮ್ಮ ಮೂಲ ಆಯುರ್ವೇದ ಪದ್ಧತಿ, ಚರಕ ಶಸ್ತ್ರಸಂಹಿತೆ, ಕಣಾದ ಮಹರ್ಷಿ ಸಿದ್ಧಾಂತ ರೂಪದಲ್ಲಿ ರಚಿಸಿದ್ದ ಗ್ರಂಥಕ್ಕೆ ಔಲೂಕ್ಯ ದರ್ಶನ ಹಾಗೂ ಅಣು, ಪರಮಾಣುಗಳ ರಚನೆಯ ಬಗ್ಗೆ ಅಭ್ಯಸಿಸಿ ಆಗಲೇ ಬೋಧಿಸಿದ್ದ ವಿಶೇಷಿಕ ಸೂತ್ರ ಎಂಬ ಗ್ರಂಥದಲ್ಲಿನ ವಿಚಾರಗಳನ್ನು ಅಭ್ಯಸಿಸಿ ಸಸ್ಯಜನ್ಯ ಉತ್ಪನ್ನಗಳನ್ನು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ರೌಡಿಶೀಟರ್ ಬದ್ರುದ್ದೀನ್ ಅದ್ದು ಸೆರೆ

ಮಂಗಳೂರು: ವಾಮಂಜೂರಿನ ಸೆಕೆಂಡ್ ಬಜಾರ್ ಅಂಗಡಿಯಲ್ಲಿ ಗುಂಡು ಹಾರಿ ಎದುರುಪದವು ಮಸೀದಿ ಧರ್ಮಗುರು ಸಫ್ವಾನ್ ಗಾಯಗೊಂಡ ಪ್ರಕರಣದಲ್ಲಿ, ಆರೋಪಿ ರೌಡಿಶೀಟರ್ ಬದ್ರುದ್ದೀನ್ ಯಾನೆ ಅದ್ದು ಎಂಬಾತನನ್ನು ಮಂಗಳೂರು ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ತೆರಿಗೆ ಪಾಲು ಯುಪಿಗೆ ಬೆಣ್ಣೆ ರಾಜ್ಯಕ್ಕೆ ಸುಣ್ಣ

← ಮೊದಲಪುಟದಿಂದ

ಯಾವ ರಾಜ್ಯಕ್ಕೆ ಎಷ್ಟೆಷ್ಟು ಹಂಚಿಕೆ?

1. ಆಂಧ್ರಪ್ರದೇಶ–₹7,002.52 ಕೋಟಿ
2. ಅರುಣಾಚಲ ಪ್ರದೇಶ–₹3,040.14 ಕೋಟಿ
3. ಅಸ್ಸಾಂ–₹5,412.38 ಕೋಟಿ
4. ಬಿಹಾರ–₹17,403.36 ಕೋಟಿ
5. ಛತ್ತೀಸಗಢ–₹5,895.13 ಕೋಟಿ
6. ಗೋವಾ–₹667.91 ಕೋಟಿ
7. ಗುಜರಾತ್–₹6,017.99 ಕೋಟಿ
8. ಹರಿಯಾಣ–₹1,891.22 ಕೋಟಿ
9. ಹಿಮಾಚಲ ಪ್ರದೇಶ–₹1,436.16 ಕೋಟಿ
10. ಜಾರ್ಖಂಡ್–₹5,722.10 ಕೋಟಿ
11. ಕರ್ನಾಟಕ–₹6,310.40 ಕೋಟಿ
12. ಕೇರಳ–₹3,330.83 ಕೋಟಿ
13. ಮಧ್ಯಪ್ರದೇಶ–₹13,582.86 ಕೋಟಿ
14. ಮಹಾರಾಷ್ಟ್ರ–₹10,930.31 ಕೋಟಿ
15. ಮಣಿಪುರ–₹1,238.90 ಕೋಟಿ
16. ಮೇಘಾಲಯ–₹1,327.13 ಕೋಟಿ
17. ಮೀಜೋರಾಂ–₹865.15 ಕೋಟಿ
18. ನಾಗಾಲ್ಯಾಂಡ್–₹984.54 ಕೋಟಿ
19. ಒಡಿಶಾ–₹7,834.80 ಕೋಟಿ
20. ಪಂಜಾಬ್–₹3,126.65 ಕೋಟಿ
21. ರಾಜಸ್ಥಾನ–₹10,426.78 ಕೋಟಿ
22. ಸಿಕ್ಕಿಂ–₹671.35 ಕೋಟಿ
23. ತಮಿಳುನಾಡು–₹7,057.89 ಕೋಟಿ
24. ತೆಲಂಗಾಣ–₹3,637.09 ಕೋಟಿ
25. ತ್ರಿಪುರಾ–₹1,225.04 ಕೋಟಿ
26. ಉತ್ತರಪ್ರದೇಶ–₹31,039.84 ಕೋಟಿ
27. ಉತ್ತರಾಖಂಡ–₹1,934.47 ಕೋಟಿ
28. ಪಶ್ಚಿಮ ಬಂಗಾಳ–₹13,017.06 ಕೋಟಿ

ಶ್ರೀರಾಮಸೇನೆ ಕಾರ್ಯಕರ್ತರ ವಿರುದ್ಧ ಪ್ರಕರಣ

ಬಾಗಲಕೋಟೆ: ಸಾವಳಗಿ ಸಮೀಪದ ಕಾಜಿಬೀಳಗಿ ಗ್ರಾಮದ ಗುಡ್ಡದಲ್ಲಿ ಬಂದೂಕು ಹಾಗೂ ಇತರ ಸಾಹಸ ತರಬೇತಿ ಪಡೆದ ಪ್ರಕರಣದಲ್ಲಿ ಶ್ರೀರಾಮಸೇನೆಯ 27 ಕಾರ್ಯಕರ್ತರ ವಿರುದ್ಧ ಸಾವಳಗಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಾವಳಗಿ ಸಮೀಪದ ಗುಡ್ಡದಲ್ಲಿ ಗನ್ ತರಬೇತಿ ಪಡೆದ ಚಿತ್ರ.

ಕಳೆದ ಡಿಸೆಂಬರ್ ಕೊನೆಯಲ್ಲಿ ಶ್ರೀರಾಮ ಸೇನೆಯ ಸಂಘಟನೆಯ ಕಾರ್ಯಕರ್ತರಿಗಾಗಿ ಕಾಶಿಲಿಂಗೇಶ್ವರ ದೇವಸ್ಥಾನದಲ್ಲಿ ವ್ಯಕ್ತಿತ್ವ ವಿಕಸನ ಶಿಬಿರ ಆಯೋಜಿಸಲಾಗಿತ್ತು. ಇದರಲ್ಲಿ ಗನ್ ತರಬೇತಿ, ಕರಾಟೆ ಸೇರಿದಂತೆ ವಿವಿಧ ಸಾಹಸ ತರಬೇತಿ ನೀಡಿದ್ದಲ್ಲದೆ ಅದರ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟು ಜನರಿಗೆ ಭಯಹುಟ್ಟಿಸುವ ರೀತಿಯಲ್ಲಿ ವರ್ತಿಸಿದ್ದಾರೆ ಎಂದು ಆಯೋಜಕರ ವಿರುದ್ಧ ದೂರಲಾಗಿದೆ.

ಈ ಹಿನ್ನೆಲೆಯಲ್ಲಿ ತರಬೇತಿ ಪಡೆದ ಪ್ರಕಾಶ ಪತ್ತಾರ, ಮಹೇಶ ಬಿರಾದಾರ, ಯಮನಪ್ಪ ಕೋರಿ, ಆನಂದ ಜಂಬಗಿಮಠ, ರಾಜು ಖಾನಪ್ಪನವರ, ಭರತ ಲದ್ದಿ, ಈರಪ್ಪ ಪೂಜಾರಿ ಸೇರಿದಂತೆ 27 ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಾಗಿದೆ. ನಿಂಗಪ್ಪ ಹೂಗಾರ ಎಂಬುವರ ದೂರಿನ ಮೇರೆಗೆ ಸಾವಳಗಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ಫೋನ್: 8050770004
ಇ–ಮೇಲ್ : bcwd.training@gmail.com
ಸಂಖ್ಯೆ: BCWD/T-4/CLAT/CR-4A/2024-25 ದಿನಾಂಕ:09.01.2025
ಪ್ರಕಟಣೆ
ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಿಯೋಜಿಸುವ ವಿದ್ಯಾರ್ಥಿಗಳಿಗೆ CLAT ಪರೀಕ್ಷಾ ಪೂರ್ವ ತರಬೇತಿ (class room coaching) ಯನ್ನು ನೀಡಲು ಅರ್ಹ ತರಬೇತಿ ಸಂಸ್ಥೆಗಳಿಂದ ಅಲ್ಪಾವಧಿ ಮರು ಟೆಂಡರ್ ಅನ್ನು ಆಹ್ವಾನಿಸಿದೆ.
ಹೆಚ್ಚಿನ ವಿವರಗಳಿಗೆ https://kppp.karnataka.gov.in ವೆಬ್‌ಸೈಟ್ ನೋಡಬಹುದಾಗಿದೆ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 17.01.2025 ರ ಅಪರಾಹ್ನ 3.30 ಗಂಟೆಯವರೆಗೆ.
ಕೆಪಿಪಿಪಿ ಸಹಾಯವಾಣಿ : +91–8046010000, +91–8068948777.
ಸಹಿ/– ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು
ವಾಸಾಸಂಇ/ವಾಪ್ರ/ಜಿಎ/4277/2024–25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ: ನಿಡಗುಂದಿ, ಜಿ: ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಆವಿಆ/ಶಾ.ಕೊ/2024–25/3014 ದಿನಾಂಕ:07.01.2025
ಶಾರ್ಟಟರ್ಮ ಕೊಟೇಶನ್
ಈ ವಿಭಾಗದ ಅಡಿಯಲ್ಲಿ ಬರುವ **"Survey, Design, Engineering, Installation and Commissioning of Electronic Security Surveillance, Access Control and Public Address system for Almatti Dam site including comprehensive maintenance on for five years"** ಕಾಮಗಾರಿಗೆ ದರ ಪಟ್ಟಿಗಳನ್ನು ಈ ಕಛೇರಿಗೆ ದಿನಾಂಕ: 20.01.2025 ರ ಸಾಯಂಕಾಲ 17.00 ಘಂಟೆಯೊಳಗೆ ಸಲ್ಲಿಸಲು ಸೂಚಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ,
1) IP Video surveillance analytics with connected accessories.
2) Facial Recognition & Number Plate recognition software & accessories
3) Panoramic 360 continuous detection & tracking system for river monitoring
4) Integrated Command & Control Software System for quick action & responses
5) DLP laser Video wall for 24/7 critical control room monitoring
6) Access Control System:
(HHMD) Hand held metal detector
(DFMD) Door frame metal detector
Barriers
Under Vehicle surveillance system
X-ray baggage scanner.
7) Public Address System
8) Walkie Talkie System
9) Ticketing System
ಸದರಿ ಕಾಮಗಾರಿಯ ಹೆಚ್ಚಿನ ಮಾಹಿತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಗೇಟ್ಸ್ ಉಪ ವಿಭಾಗ ಆಲಮಟ್ಟಿ ಇವರ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ. ದರಪಟ್ಟಿ ಕವರಗಳ ಮೇಲೆ ಸ್ಪಷ್ಟವಾಗಿ ದರಪಟ್ಟಿ ಎಂದು ಮೊಹರಬಂದ ಹಾಕಿರಬೇಕು. ಯಾವುದೇ ದರಪಟ್ಟಿ ಸ್ವೀಕರಿಸುವ ಮತ್ತು ರದ್ದುಪಡಿಸುವ ಹಕ್ಕು ಈ ಕಛೇರಿಗೆ ಇರುತ್ತದೆ.
ಸಂಪರ್ಕಿಸುವ e-mail ವಿಳಾಸ: dam_division@rediffmail.com
ಸಂಪರ್ಕಿಸುವ ದೂರವಾಣೆ ಸಂಖ್ಯೆ: Sri Vithal Jadhav, A.E. Mob No: 89713 61932.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/604/ಕೆಎಸ್‌ಎಂಸಿಎ/2024–25

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ–571 401
(Autonomous Medical Institution, Government of Karnataka)
Phone: 08232-231003, 222086, 231197, 224040,
Fax: 08232-211001
E-Mail Address: mimsmandyasupply@gmail.com, mimsmandya@gmail.com
ಇ–ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)
ಸಂಖ್ಯೆ:ಮಿಮ್ಸ್/ಸರಬ–1/ಇಎನ್‌ಟಿ/ಇ–ಟೆಂಡರ್/08/2024–25 ದಿನಾಂಕ: 07.01.2025
ಸಂಖ್ಯೆ: ಮಿಮ್ಸ್/ಸರಬ–1/ಕ್ಯಾಂಟೀನ್/ಇ–ಟೆಂಡರ್/07/2024–25, ದಿನಾಂಕ: 07.01.2025
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಇ.ಎನ್.ಟಿ. ವಿಭಾಗಕ್ಕೆ ಅವಶ್ಯವಿರುವ ವಿವಿಧ Instruments ಗಳನ್ನು ಸರಬರಾಜು ಪಡೆಯಲು ಉತ್ಪಾದಕರವರಿಂದ/ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ಹಾಗೂ ಸಂಸ್ಥೆಯ ಕ್ಯಾಂಟಿನ್ ಕಟ್ಟಡದಲ್ಲಿ ಮಾಹೆಯಾನ ಬಾಡಿಗೆ ಆಧಾರದ ಮೇಲೆ (3 ವರ್ಷದ ಅವಧಿಗೆ) ಉಪಹಾರ ನಡೆಸಲು ಗುತ್ತಿಗೆದಾರರನ್ನು ಪಡೆಯುವ ಸಲುವಾಗಿ ನೊಂದಾಯಿತ ಹೋಟೆಲ್ ಉದ್ದಿಮೆದಾರರಿಂದ ಮೊಹರಾದ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ದಿನಾಂಕ ಮತ್ತಿತರ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಪಡೆಯಬಹುದು. ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿ ಅಥವಾ ಸ್ಪಷ್ಟೀಕರಣಕ್ಕಾಗಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ನಿರ್ದೇಶಕರವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಮುಖ್ಯ ಆಡಳಿತಾಧಿಕಾರಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
DIPR/ADMDY-547/2024-25

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಕರ್ನಾಟಕ ಕೃಷಿ ಮಾರುಕಟ್ಟೆ ಅಧ್ಯಯನ ಸಂಸ್ಥೆ, ಕಟ್ಟಡದ ಆವರಣ,
ಕೊಠಡಿ ಸಂಖ್ಯೆ:10–13, ಹುಣಸೂರುರಸ್ತೆ, ಮೈಸೂರು –570006.
ದೂರವಾಣಿ ಸಂಖ್ಯೆ:0821–2460495 ಫ್ಯಾಕ್ಸ್ ಸಂಖ್ಯೆ:0821–2460495
ಇ–ಮೇಲ್: eerdwsd.mys@gmail.com
ನಂ:ಕಾಇಂ:ಗ್ರಾಕು.ನೀ.&ನೈ.ವಿ/ಮೈ/ಎಮ್.ಐ.ಎಸ್/2024–25/2110 ದಿ: 07.01.2025
ಪ್ರಕಟಣೆ
ಮೈಸೂರು ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಖಾಲಿ ಇರುವ ಜಿಲ್ಲಾ MIS ಸಮಾಲೋಚಕರ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ/ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು 28.01.2025 ರಂದು ಕೊನೆಯ ದಿನವಾಗಿದೆ. ಆಯ್ಕೆ ವಿಧಾನ ಮತ್ತು ಷರತ್ತುಗಳಿಗೆ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವಂತೆ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.
ಕ್ರ.ಸಂ.01 ಹುದ್ದೆಯ ಹೆಸರು: ಜಿಲ್ಲಾ MIS ಸಮಾಲೋಚಕರು. **ವಿದ್ಯಾರ್ಹತೆ ಮತ್ತು ಅನುಭವ:** The candidate is required to possess post Graduate in Statistics/M.C.A/M.SC.Computer Science/ BE Computer Science from a recognized university only. 3-5 Years of relevant experience in data management, data research preferably in the developmental sectors.
ಮಾಸಿಕ ಸಮಾಲೋಚಕರ ವೇತನ: Rs.25,000 to Rs.30,000/-
ಸಹಿ/– ಕಾರ್ಯಪಾಲಕ ಅಭಿಯಂತರರು
DIPR/DDMYS/1078/KSMCA/727/2024-25

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ. CIN:U4010KA2002SGC030436,
E-mail:eeetpgescom@gmail.com Website:gescom.in
ಸಂಖ್ಯೆ:–ಜೆಸ್ಕಾಂ/ಮು.ಇಂ.(ಕಾ)/ಅ.ಇಂ(ತಾಂ)/ಕಾ.ನಿ.ಇಂ/ಸ.ಕಾ.ನಿ.ಇಂ–1(ತಾ)/ಸಇಂ–1(ತಾ)/2024–25/52057–73
ದಿನಾಂಕ: 09–01–2025
:: ಅಲ್ಪಾವದಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ) ::
ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ರೂ. 10,000/– ಮೂಲಸೌಕರ್ಯ ಶುಲ್ಕವನ್ನು ಪಾವತಿಸಿದ ಮತ್ತು ಗ್ರಿಡ್‌ನಿಂದ 500 ಮೀಟರ್ ಒಳಗೆ ಅಸ್ತಿತ್ವದಲ್ಲಿರುವ ಮತ್ತು 22.09.2023ಕ್ಕೆ ವಿದ್ಯುತ್ ಸರಬರಾಜು ಮಾಡಲು ಬಾಕಿ ಇರುವ UAIP ಅರ್ಜಿದಾರರಿಗೆ ಮೂಲ ಸೌಕರ್ಯ ರಚಿಸಲು ಪಿಟಿಕೆ ರೇಟ್ ಕಾಟ್ರಾಂಕ್ಟ್ ಅಡಿಯಲ್ಲಿ 01 ವರ್ಷದ ಅವಧಿಗೆ (extendable by one more Year at the discretion of GESCOM) ಅರ್ಹ ಬಿಡ್‌ದಾರರುಗಳಿಂದ **ಬೀದರ ಜಿಲ್ಲೆಯ** (ಬೀದರ ವಿಭಾಗ & ಹುಮನಾಬಾದ ವಿಭಾಗ, Bid Enq no:TP-085/UAIP/2024-25/Bidar District and Approximate amount put to tender: **1499.80 Lakhs)** ಹಾಗೂ **ಬಳ್ಳಾರಿ ಜಿಲ್ಲೆ** (ಬಳ್ಳಾರಿ ಗ್ರಾಮೀಣ ವಿಭಾಗ, Bid Enq no:TP-086 / UAIP /2024-25 /Ballari District and Approximate amount put to tender: **124.32 Lakhs)** ಗಳಿಗೆ ಟೆಂಡರ್‌ನ್ನು ಅಹ್ವಾನಿಸಲಾಗಿದೆ.
ಆಸಕ್ತ ಬಿಡ್‌ದಾರರು ದಿನಾಂಕ: **15.01.2025** ರಂದು ಅಥವಾ ತದನಂತರ ಕರ್ನಾಟಕ ಸರ್ಕಾರದ ಈ ಕೆಳಕಂಡ ವೆಬ್ ಸೈಟ್‌ಗೆ ಲಾಗ್‌ಆನ್ ಮಾಡಲು ಕೋರಲಾಗಿದೆ https://kppp.karnataka.gov.in
ಸಹಿ/– ಮುಖ್ಯ ಇಂಜಿನಿಯರ್(ವಿ),
ಕಾರ್ಯಾಚರಣೆ, ನಿಗಮ ಕಛೇರಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/832/ಕೆ.ಎಸ್.ಎಂ.ಸಿ.&ಎ/2024–25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ನಂ: ಬೆಂಅಪ್ರಾ/ನಯೋಸ/CLU-279/2657/2024–25 ದಿನಾಂಕ: 10.01.2025
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಹೆಚ್.ಎಸ್. ನಾಗಮಣಿ ಮತ್ತು ಶ್ರೀ ಕೆ.ಜೆ. ವಿಕ್ರಮ್	ಆನೇಕಲ್	ಜಿಗಣಿ	ಹುಲಿಮಂಗಲ	347/1	1ಎ–38ಗು	ವ್ಯವಸಾಯ ವಲಯ	ವಸತಿ
					347/3	1ಎ–00ಗು		
					ಒಟ್ಟು	2ಎ–38ಗು (0ಎ–05ಗು ಖರಾಬು ಹೊರತುಪಡಿಸಿ)		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಕೆಎಎಸ್ ಪರೀಕ್ಷೆ ಮುಂದೂಡಿ ಎಂದು ಅಭ್ಯರ್ಥಿಗಳು ತಿಂಗಳುಗಳ ಕಾಲ ಹೋರಾಟ ನಡೆಸಿದಾಗ ಭಂಡತನಕ್ಕೆ ಬಿದ್ದ ಸರಕಾರ, ಬಳಿಕ ಅಕ್ರಮದ ಬಂಡವಾಳ, ಅನುವಾದದ ಲೋಪ ಬಯಲಾದಾಗ ಮರುಪರೀಕ್ಷೆ ನಡೆಸಿ ಅದರಲ್ಲೂ ಅದೇ ಎಡವಟ್ಟು ಮಾಡಿದೆ ಭಂಡ ಸರಕಾರ. ಸಂಧಿ-ಸಮಾಸ, ವ್ಯಾಕರಣ ಕುರಿತು ಭಾಷಣ ಬಿಗಿಯುವ ಸಿಎಂ ಸಿದ್ದರಾಮಯ್ಯನವರೇ, ಈ ಬಾರಿಯ ಕೆಎಎಸ್ ಮರುಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಶೇ.50 ರಷ್ಟು ದೋಷ ಕಂಡುಬಂದಿದೆ. ಪ್ರಶ್ನೆಪತ್ರಿಕೆಗಳನ್ನು ಇಂಗ್ಲಿಷ್‌ನಲ್ಲಿ ಸಿದ್ಧಪಡಿಸಿ ನಂತರ ಕನ್ನಡಕ್ಕೆ ಅನುವಾದ ಮಾಡುವ ಅಗತ್ಯವಾದರೂ ಏನಿತ್ತು..?

ಮೋಹನ ಕನ್ನಡಿಗ, ಬೆಂಗಳೂರು

ಕೇವಲ ಒಂದು ಟ್ವೀಟ್ ಮಾಡಿದ್ರೆ ಉಪಯೋಗ ಇಲ್ಲ. ಬಿಜೆಪಿಯವರಿಗೆ ನಿಜವಾಗಿಯೂ ಕನ್ನಡದ ಬಗ್ಗೆ ಗೌರವ, ಕಾಳಜಿ ಇದ್ದರೆ ಹೋರಾಟ ಮಾಡಿ ಕನ್ನಡ ಮಾಧ್ಯಮದ ಸ್ಪರ್ಧಾರ್ಥಿಗಳಿಗೆ ನ್ಯಾಯ ಕೊಡಿಸಿ. ಕಲ್ಯಾಣ ಕರ್ನಾಟಕ ಭಾಗದ ಪಿಡಿಓ ಪರೀಕ್ಷೆ ಅಕ್ರಮ ಬಗ್ಗೆ ನ್ಯಾಯ ಕೊಡಿಸಿ. ಆಗ ರಾಜ್ಯದಲ್ಲಿ ವಿರೋಧ ಪಕ್ಷ ಇದೆ ಎಂದು ನಾವು ನಂಬುವಂತೆ ಆಗುತ್ತೆ

ನಾಡ ಸಮಸ್ಯೆಗೆ ಸಿಎಂ ಪರಿಹಾರ



- ಸ್ಥಳ : ಬೆಳಗಾವಿ

ಸಮಸ್ಯೆಯೇನು..?

- ಬೆಳಗಾವಿ ಮಹಾನಗರ ಪಾಲಿಕೆ ವಾರ್ಡ್ ನಂ.53ರಲ್ಲಿ ನಿರ್ಮಿಸಿರುವ ಆರ್‌ಆರ್‌ಆರ್ ಘಟಕದಲ್ಲಿ ಆಕಸ್ಮಿಕವಾಗಿ ಬೆಂಕಿ ಹತ್ತಿಕೊಂಡಿರುವುದು.
- **ಪರಿಹಾರ:** ಬೆಳಗಾವಿ ಮಹಾನಗರ ಪಾಲಿಕೆ ವಾರ್ಡ್ ನಂ.53ರಲ್ಲಿ ನಿರ್ಮಿಸಿರುವ ಆರ್‌ಆರ್‌ಆರ್ ಘಟಕದಲ್ಲಿ ಆಕಸ್ಮಿಕವಾಗಿ ಬೆಂಕಿ ಹತ್ತಿಕೊಂಡ ಸ್ಥಳಕ್ಕೆ ಅಧಿಕಾರಿಗಳು ಭೇಟಿನೀಡಿ ಪರಿಶೀಲನೆ ನಡೆಸಿದ್ದು, ಯಾವುದೇ ಪ್ರಾಣ ಹಾನಿ ಆಗಿರುವುದಿಲ್ಲ.

ಸಮಾಚಾರ ಸಣ್ಣದಲ್ಲ

ಡಿಕೆಶಿ ಮುಂದಿನ ಸಿಎಂ; ವಿನಯ್ ಗುರೂಜಿ ಭವಿಷ್ಯ

ಚಿಕ್ಕೋಡಿ: ಸಿದ್ದರಾಮಯ್ಯನವರ ನಂತರ ಅವಕಾಶ ಸಿಗುವುದಾದರೆ ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ಶ್ರಮವಹಿಸಿರುವ ಡಿ.ಕೆ ಶಿವಕುಮಾರ್ ಅವರು ಅಜ್ಜಯ್ಯನ ಆಶೀರ್ವಾದದಿಂದ ಸಿಎಂ ಹುದ್ದೆ ಅಲಂಕರಿಸುತ್ತಾರೆ ಎಂದು ಚಿಕ್ಕಮಗಳೂರಿನ ಗೌರಿಗದ್ದೆ ಆಶ್ರಮದ ವಿನಯ್ ಗುರೂಜಿ ಭವಿಷ್ಯ ನುಡಿದಿದ್ದಾರೆ. ಶುಕ್ರವಾರ ಹುಕ್ಕೇರಿ ಹಿರೇಮಠದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ ಶಿವಕುಮಾರ್ ಸಾಕಷ್ಟು ಕೆಲಸ ಮಾಡಿದ್ದಾರೆ. ಸಂಘಟನಾತ್ಮಕವಾಗಿ ಅವರ ಕೊಡುಗೆ ಅಪಾರ. ಗುರುಭಕ್ತಿ ಹಾಗೂ ನಾಟಕೀಯವಲ್ಲದ ನಡೆಯಿಂದ ಪ್ರಾಮಾಣಿಕವಾಗಿ ಇದ್ದು ಸಿಎಂ ಹುದ್ದೆ ಅಲಂಕರಿಸುತ್ತಾರೆ ಎಂದರು.

ಕರ್ನಾಟಕದ ಇಬ್ಬರು ಮಾಲಾಧಾರಿಗಳು ಸಾವು

ಚಾಮರಾಜನಗರ: ತಮಿಳುನಾಡಿನ ಮೇಟುಪಾಳ್ಯಂ-ಸಿರುಮುಗೈ ರಸ್ತೆಯಲ್ಲಿ ಶಬರಿಮಲೆ ಯಾತ್ರಿಕರ ಕಾರು ಮರಕ್ಕೆ ಡಿಕ್ಕಿಯಾಗಿ ಕರ್ನಾಟಕದ ಇಬ್ಬರು ಅಯ್ಯಪ್ಪ ಮಾಲಾಧಾರಿಗಳು ಮೃತಪಟ್ಟಿದ್ದಾರೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ನಾಗರಾಜು (65) ಹಾಗೂ ವೆಂಕಟಾದ್ರಿ (55) ಮೃತಪಟ್ಟವರು. ಘಟನೆಯಲ್ಲಿ ಕೊಳ್ಳೇಗಾಲದವರೇ ಆದ ಸ್ವಾಮಿ, ಮಹೇಶ್ ಹಾಗೂ ಕುಮಾರ್ ತೀವ್ರವಾಗಿ ಗಾಯಗೊಂಡು ಮೇಟುಪಾಳ್ಯಂ ಆಸ್ಪತ್ರೆಗೆ ದಾಖಲಾಗಿದ್ದಾರೆ. ಸಿರುಮುಗೈ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೌಡಿಶೀಟರ್ ಮೇಲೆ ಗುಂಡಿನ ದಾಳಿ

ಬೆಳಗಾವಿ: ಅಪರಿಚಿತರಿಂದ ರೌಡಿಶೀಟರ್ ಮೇಲೆ ಗುಂಡಿನ ದಾಳಿ ನಡೆದ ಘಟನೆ ಶುಕ್ರವಾರ ಬೆಳಗ್ಗೆ ಗಣೇಶಪುರದ ಹೊರವಲಯದಲ್ಲಿ ಸಂಭವಿಸಿದೆ. ಶಾಹುನಗರದ ರೌಡಿಶೀಟರ್ ಪ್ರಫುಲ್ ಪಾಟೀಲ್ ಮೇಲೆ ಅಪರಿಚಿತರು ಗುಂಡಿನ ದಾಳಿ ನಡೆಸಿದ್ದು ಗಂಭೀರವಾಗಿ ಗಾಯಗೊಂಡ ವ್ಯಕ್ತಿ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಬೆಳಗಾವಿ ಹೊರವಲಯದ ಬೆಳಗುಂದಿ ಗ್ರಾಮದ ಕಡೆಗೆ ಕಾರಿನಲ್ಲಿ ಚಲಿಸುವ ವೇಳೆ ಹಂತಕರು ಗುಂಡಿನ ದಾಳಿ ನಡೆಸಿ ಪ್ರಫುಲ್ ಹತ್ಯೆಗೆ ಯತ್ನಿಸಿದ್ದಾರೆ. ದಾಳಿಯಲ್ಲಿ ಕಾರಿನ ಕಿಟಕಿ ಗಾಜು ಸಂಪೂರ್ಣವಾಗಿ ಒಡೆದು ಹೋಗಿದ್ದು, ಕೂದಲೆಳೆ ಅಂತರದಲ್ಲಿ ರೌಡಿಶೀಟರ್ ಪಾರಾಗಿದ್ದಾನೆ. ಬೆಳಗಾವಿ ಗ್ರಾಮೀಣ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಸಿದ್ದರಾಮಯ್ಯ ಅವರೇ ಐದು ವರ್ಷಕ್ಕೆ ಸಿಎಂ: ಡಿ.ಕೆ.ಶಿವಕುಮಾರ್ ಮುಂದಿನ ಚುನಾವಣೆ ಗೆದ್ದು 5 ವರ್ಷ ಸಿಎಂ ಆಗಲಿ | ಚಲುವರಾಯಸ್ವಾಮಿ ಸಭೆ ಬಗ್ಗೆ ಮಾತಿಲ್ಲ ಏಕೆ: ಸಚಿವ ಕೆ.ಎನ್. ರಾಜಣ್ಣ ಪ್ರಶ್ನೆ

ಐದು ವರ್ಷವೂ ಸಿದ್ದುವೇ ಸಿಎಂ: ಆಪ್ತರ ಬ್ಯಾಟಿಂಗ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಆರಂಭಗೊಂಡಿರುವ ಡಿನ್ನರ್ ಮೀಟಿಂಗ್‌ನ ಮುಂದುವರಿದ ಭಾಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರೆಲ್ಲ, ಸಿದ್ದರಾಮಯ್ಯ ಅವರೇ ಐದು ವರ್ಷಕ್ಕೆ ಸಿಎಂ ಎನ್ನುವ ಮೂಲಕ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಸದ್ಯಕ್ಕಿಲ್ಲ ಎಂಬ ಸಂದೇಶ ರವಾನಿಸುವ ಪ್ರಯತ್ನ ನಡೆಸಿದ್ದಾರೆ.

ಮುಖ್ಯಮಂತ್ರಿ ಬದಲಾವಣೆ ಕೂಗಿಗೆ ಬಲ ಕೊಡುವ ಮೊದಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರು ಸಿದ್ದರಾಮಯ್ಯ ಪರ ಬ್ಯಾಟ್ ಬೀಸುತ್ತಿದ್ದು, ಯಾವುದೇ ಕಾರಣಕ್ಕೂ ಮುಖ್ಯಮಂತ್ರಿಗಳ ಬದಲಾವಣೆಯಿಲ್ಲ. ಮುಂದಿನ ಐದು ವರ್ಷಗಳ ಕಾಲ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ. ಐದು ವರ್ಷದ ಬಳಿಕ ಬೇಕಿದ್ದರೆ ಡಿಕೆಶಿ ಅದೃಷ್ಟ ಪರೀಕ್ಷೆ ಮಾಡಲಿ ಎನ್ನುವ ಮಾತುಗಳನ್ನು ಹಲವು ನಾಯಕರು ಆಡುತ್ತಿದ್ದಾರೆ.

ಎರಡೂವರೆ ವರ್ಷಕ್ಕೆ ಏಕೆ..?: ಸಹಕಾರ ಸಚಿವ ಕೆ.ಎನ್. ರಾಜಣ್ಣ ಮಾತನಾಡಿ, ಡಿ.ಕೆ. ಶಿವಕುಮಾರ್ ಅವರು ಎರಡುವರೆ ವರ್ಷದ ಮುಖ್ಯಮಂತ್ರಿ ಸ್ಥಾನಕ್ಕೆ ಏಕೆ ಪ್ರಯತ್ನಿಸುತ್ತಿದ್ದಾರೆ? ಮುಂದಿನ ಐದು ವರ್ಷದ ಅವಧಿಗೆ ಮುಖ್ಯಮಂತ್ರಿಯಾಗಿ ಎನ್ನುವ ಮೂಲಕ ಆಗಿ ಟಾಂಗ್ ನೀಡಿದ್ದಾರೆ.

> ಹೈಕಮಾಂಡ್ ಕೃಪೆಯಿಲ್ಲದಿದ್ದರೆ ಎಷ್ಟೇ ದೊಡ್ಡ ಮುಖಂಡರಾಗಿದ್ದರೂ ಪ್ರಯೋಜನವಿಲ್ಲ. ಅಧಿಕಾರ ಹಂಚಿಕೆಯ ಬಗ್ಗೆ ಯಾವುದೇ ಮಾತುಕತೆ ನನ್ನ ಗಮನಕ್ಕೆ ಬಂದಂತೆ ಆಗಿಲ್ಲ. ಹೈಕಮಾಂಡ್ ಕೂಡಾ ಸಾರ್ವಜನಿಕವಾಗಿ ಈ ಬಗ್ಗೆ ಏನನ್ನೂ ಹೇಳಿಲ್ಲ. ವರಿಷ್ಠರ ಜತೆಗಿನ ಮಾತುಕತೆಯಲ್ಲಿ ಯಾರ್‍ಯಾರೋ ಇದ್ದರೋ, ಅವರು ಮಾತ್ರ ಸಿಎಂ ಒಡಂಬಡಿಕೆಯ ಬಗ್ಗೆ ಉತ್ತರವನ್ನು ಕೊಡಬಲ್ಲರು.
>
> **-ಕೆ.ಎನ್. ರಾಜಣ್ಣ,** ಸಹಕಾರ ಸಚಿವ

ಡಿ.ಕೆ.ಶಿವಕುಮಾರ್ ಹಣೆಯಲ್ಲಿ ಬರೆದಿದ್ದರೆ ಮುಖ್ಯಮಂತ್ರಿಯಾಗುತ್ತಾರೆ ಎನ್ನುವ ಎಸ್.ಟಿ.ಸೋಮಶೇಖರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗೇ ಬಿಡುತ್ತಾರೆ ಎಂದೇನು ಹೇಳಿಲ್ಲ. ಆಗಲ್ಲ ಅಂತಾನೂ ಹೇಳಿಲ್ಲ. ಅವರ ಹಣೆಯಲ್ಲಿ ಬರೆದಿದ್ದರೆ ಆಗ್ತಾರೆ ಎಂದಿದ್ದಾರೆ. ಹಣೆಯಲ್ಲಿ ಬರೆದಿದ್ದರೆ ಆಗುತ್ತದೆ. ಎಲ್ಲರದ್ದು ವಿಧಿ ಏನು ಅಂತ ಮೊದಲೇ ತೀರ್ಮಾನ ಆಗಿರುತ್ತದೆ. ಅದರ ಪ್ರಕಾರ ಆಗುತ್ತದೆ. ಡಿಕೆ ಶಿವಕುಮಾರ್ ಎರಡೂವರೆ ವರ್ಷಕ್ಕೆ ಯಾಕೆ ಪ್ರಯತ್ನಿಸುತ್ತೀರಿ? ಮುಂದಿನ ಐದು ವರ್ಷದ ಅವಧಿಗೆ ಸಿಎಂ ಆಗಲಿ ಎನ್ನುವ ಮೂಲಕ ಮುಖ್ಯಮಂತ್ರಿ ಬದಲಾವಣೆ ಅನವಶ್ಯಕ ಎನ್ನುವ ಸಂದೇಶ ರವಾನಿಸಿದರು.

ಚಲುವರಾಯಸ್ವಾಮಿ ಸಭೆ ಬಗ್ಗೆ ಏಕೆ ಮಾತಿಲ್ಲ?: ಸಚಿವ ಸತೀಶ್ ಜಾರಕಿಹೊಳಿ, ಪರಮೇಶ್ವರ ಅವರ ಡಿನ್ನರ್ ಪಾರ್ಟಿಯ ಬಗ್ಗೆ ಮಾತನಾಡುತ್ತಿರುವ ಅನೇಕರು, ಕೃಷಿ ಸಚಿವ ಚಲುವರಾಯಸ್ವಾಮಿ ಕೂಡಾ ಸಭೆ ನಡೆಸಿದ್ದರು. ಅದರ ಬಗ್ಗೆ ಏಕೆ ಪ್ರಶ್ನಿಸುವುದಿಲ್ಲ? ಸಚಿವ ಸಂಪುಟ ಸಭೆಯ ದಿನ ನಾವೆಲ್ಲಾ ಊಟಕ್ಕೆ ಸೇರಿದ್ದೆವು. ಚಲುವರಾಯಸ್ವಾಮಿ ಅವರೂ ಸಭೆಯನ್ನು ಕರೆದಿದ್ದರು. ಅದರಲ್ಲಿ ಕೂಡಾ ಬಹಳಷ್ಟು ಶಾಸಕರು ಭಾಗಿಯಾಗಿದ್ದರು. ಅದರ ಬಗ್ಗೆ ಏಕೆ ಯಾರ ಆಕ್ಷೇಪಣೆಯೂ ಇಲ್ಲ ಪರೋಕ್ಷವಾಗಿ ತಿರುಗೇಟು ನೀಡಿದ್ದಾರೆ.

ನಾವು ಸಿದ್ದರಾಮಯ್ಯನವರು ಸೇರಿ ನಾಲ್ಕು ಜನ ಊಟ ಮಾಡಿದರೆ ಯಾರಿಗೆ ಏನೂ ಆತಂಕವಿಲ್ಲ. ಪಕ್ಷದ ಹೈಕಮಾಂಡ್ ಆಶೀರ್ವಾದ ಎಲ್ಲಿಯವರೆಗೆ ಇರುತ್ತೋ, ಅಲ್ಲಿಯವರೆಗೆ ಯಾರಿಗೆ ಏನೂ ತೊಂದರೆಯಿಲ್ಲ. 1979ರಲ್ಲಿ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ಎಲ್ಲಾ ಶಾಸಕರು ಅವರ ಪರವಾಗಿಯೇ ಇದ್ದರು, ಆದರೆ ಇಂದಿರಾ ಗಾಂಧಿಯವರ ಅವಕೃಪೆಗೆ ಒಳಗಾಗಿದ್ದರಿಂದ ಪಕ್ಷದಿಂದಲೇ ಅವರನ್ನು ತೆಗೆದು ಹಾಕಿದರು. ಇದು ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಇತಿಹಾಸ ಎಂದು ನೆನಪಿಸಿಕೊಂಡರು.

ಶತ್ರುನಾಶಕ್ಕೆ ದೇವರ ಮೊರೆ ಹೋಗೋದು ಕೇಳಿಲ್ಲ : ಎಚ್‌ಡಿಕೆ
ರಕ್ಷಣೆ -ನೆಮ್ಮದಿಗೆ ಹೋಮ : ಡಿಕೆ ಶಿವಕುಮಾರ್ ಸ್ಪಷ್ಟನೆ

ವಿವಾದಕ್ಕೆ ಕಾರಣವಾದ ಶತ್ರುನಾಶ ವಿಶೇಷ ಪೂಜೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಟೆಂಪಲ್ ರನ್ ವಿಷಯ ಇದೀಗ ಕೇಂದ್ರ ಸಚಿವ ಕುಮಾರಸ್ವಾಮಿ ಹಾಗೂ ಡಿಕೆಶಿ ನಡುವಿನ ಮತ್ತೊಂದು ಸುತ್ತಿನ ವಾದ-ಪ್ರತಿವಾದಕ್ಕೆ ಕಾರಣವಾಗಿದೆ.

ಡಿ.ಕೆ.ಶಿವಕುಮಾರ್ ಟೆಂಪಲ್ ರನ್ ಮಾಡಿರುವ ಬಗ್ಗೆ ಮಾತನಾಡಿರುವ ಎಚ್.ಡಿ. ಕುಮಾರಸ್ವಾಮಿ, 'ಎಲ್ಲರನ್ನು ದೇವರೇ ಕಾಪಾಡಬೇಕು. ಅಧಿಕಾರ ಬೇಕು ಅಂತ ಅಲ್ಲಿ ಎಲ್ಲೋ ಶತ್ರುನಾಶಕ್ಕೆ ಹೋಗುವುದು. ಅಲ್ಲೂ ಕೂಡಾ ದೇವರನ್ನು ಕೇಳೋದು ಅಧಿಕಾರ ಕೊಡಪ್ಪ, ಶತ್ರುನಾಶ ಮಾಡು ಅಂತಾನೆ 'ಅನ್ನೋ ಮೂಲಕ ಹೆಸರು ಹೇಳದೇ ಡಿಕೆಶಿವಕುಮಾರ್ ಶತ್ರು ಸಂಹಾರ ಪೂಜೆ ಮಾಡಿದ್ದಾರೆ ಎಂದು ಆರೋಪಿಸಿದರು.

ಇವತ್ತು ವೈಕುಂಠ ಏಕಾದಶಿಯ ದಿನ ವೈಕುಂಠದ ಬಾಗಿಲು ತೆಗೆಯುತ್ತೆ ಅಂತ ಪ್ರತೀತಿ ಇದೆ. ದೇವರಲ್ಲಿ ಪ್ರಾರ್ಥನೆ ಮಾಡಿ ಒಳ್ಳೆದು ಮಾಡಲಿ ಕೊಡಪ್ಪ ಅಂತ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಇವತ್ತು ಪವಿತ್ರವಾದ ದಿನ. ಆ ವಿಷ್ಣು ದೇಶ ಆಳುವವರಿಗೆ, ರಾಜ್ಯ ಆಳುವವರಿಗೆ ಎಲ್ಲರಿಗೂ ಸದ್ಬುದ್ಧಿ ಕೊಟ್ಟು ಜನತೆಯ ಸಮಸ್ಯೆಗೆ ಒಳ್ಳೆಯ ಕೆಲಸ ಮಾಡುವ ವಾತಾವರಣ ನಿರ್ಮಾಣ ಮಾಡಲಿ ಎಂದು ಕೇಳಿಕೊಳ್ಳುತ್ತೇನೆ ಎಂದು ತಿಳಿಸಿದರು.

ರಕ್ಷಣೆ -ನೆಮ್ಮದಿಗೆ ಹೋಮ : ಡಿಕೆಶಿ ಸ್ಪಷ್ಟನೆ

ಇನ್ನು ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಡಿ.ಕೆ.ಶಿವಕುಮಾರ್, ನನ್ನ ರಕ್ಷಣೆಗಾಗಿ, ಮನಸ್ಸಿನ ನೆಮ್ಮದಿಗೆ, ಸಮಾಧಾನಕ್ಕಾಗಿ ಹೋಮ ಮಾಡಿಸಿದ್ದೇನೆ. ನಾನು ಪ್ರತಿದಿನವೂ ಪೂಜೆ, ಹೋಮ, ದೇವರ ದರ್ಶನ ಮಾಡುವ ವ್ಯಕ್ತಿ. ನನಗೆ ಧರ್ಮ, ದೇವರು, ನಮ್ಮ ಆಚರಣೆಗಳ ಮೇಲೆ ನಂಬಿಕೆಯಿದೆ. ಇದರಲ್ಲಿ ಯಾವುದೇ ವಿಶೇಷವಿಲ್ಲ. ನಾನು ಪ್ರತಿದಿನ ದೇವರಿಗೆ ನಮಸ್ಕಾರ ಮಾಡದೇ ಮನೆಯಿಂದ ಹೊರಗೆ ಬರುವುದಿಲ್ಲ. ನಾನು ಯಾವ ಶಕ್ತಿಯನ್ನು ನಂಬುತ್ತೇನೆಯೊ ಅದರ ಮೇಲೆ ಭಕ್ತಿ, ಪ್ರೀತಿ ಇದ್ದೇ ಇರುತ್ತದೆ ಎಂದು ಹೇಳಿದರು.

ಶತ್ರುಗಳ ನಾಶಕ್ಕೆ ಶಿವಕುಮಾರ್ ಹೋಮ ಮಾಡಿಸಿದ್ದಾರೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಹೇಳಿದ್ದಾರೆ. ಆದರೆ ನಾನು ಪ್ರತಿದಿನವೂ ನನಗೆ ಒಳ್ಳೆಯದಾಗಲಿ ಎಂದು ಪೂಜೆ ಮಾಡುತ್ತಿರುತ್ತೇನೆ. ನನಗೆ ತೊಂದರೆ ಕೊಡುವವರಿಂದ ರಕ್ಷಣೆ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತಿರುತ್ತೇನೆ ಎಂದರು.

> ಡಿಕೆಶಿಯಿಂದ ಪ್ರತ್ಯಂಗಿರಾ ಹೋಮ ಮಾಡಿಸಿದ್ದಾರೆ. ನನಗೆ ಪೂಜೆ, ಪುನಸ್ಕಾರ, ನಮನ ವಾಮಾಚಾರದ ಬಗ್ಗೆ ನಂಬಿಕೆ ಇಲ್ಲ. ಅಸಹಾಯಕರಿಗೆ ಒಳ್ಳೆಯದು ಮಾಡಿದರೆ ಅದೇ ಒಳ್ಳೆಯದು. ಹಿಂದೆ ನನ್ನ ವಿರುದ್ಧ ಮಾಟ, ವಾಮಾಚಾರದ ಪ್ರಯೋಗ ನಡೆದಿತ್ತು. ಆ ಅನುಭವ ನನಗಾಗಿದೆ.
>
> **-ಕೆ.ಎನ್. ರಾಜಣ್ಣ,** ಸಹಕಾರ ಸಚಿವ

ರಸ್ತೆಗೆ ಈಗಾಗಲೇ ಹೆಸರಿದ್ದರೆ ನನ್ನ ಹೆಸರು ಇಡುವುದು ಬೇಡ: ಸಿದ್ದರಾಮಯ್ಯ

ಆರೋಗ್ಯ ಮಾರ್ಗ ವಿವಾದಕ್ಕೆ ತೆರೆ ಎಳೆದ ಮುಖ್ಯಮಂತ್ರಿ

ಮೈಸೂರು: ಮೈಸೂರಿನ ರಸ್ತೆಯೊಂದಕ್ಕೆ ತಮ್ಮ ಹೆಸರಿಡುವ ಬಗ್ಗೆ ಎದ್ದಿದ್ದ ಗೊಂದಲಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ತೆರೆ ಎಳೆದಿದ್ದಾರೆ. ವಿಚಾರ ನನಗೆ ಈವರೆಗೆ ಗೊತ್ತಿಲ್ಲ ಎಂದು ಸ್ಪಷ್ಟಪಡಿಸಿದ ಸಿಎಂ, ಆ ರಸ್ತೆಗೆ ಈಗಾಗಲೇ ಹೆಸರಿದ್ದರೆ ನನ್ನ ಹೆಸರು ಇಡುವುದು ಬೇಡ ಎಂದು ಸೂಚಿಸಿದ್ದಾರೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನನಗೆ ಈ ಹಿಂದೆ ಡಾಕ್ಟರೇಟ್ ಕೊಡ್ತೀನಿ ಅಂದರು. ನಾನು ಡಾಕ್ಟರೇಟ್ ಪದವಿಗೆ ಅರ್ಹನಲ್ಲ, ಬೇಡ ಎಂದು ನಯವಾಗಿಯೇ ತಿರಸ್ಕರಿಸಿದ್ದೆ. ಆದರೆ, ರಸ್ತೆಗೆ ಹೆಸರಿಡುವ ವಿಚಾರದ ಬಗ್ಗೆ ಆಕ್ಷೇಪವಿಲ್ಲ. ಈ ವಿಚಾರವೇ ನನಗೆ ಗೊತ್ತಿಲ್ಲ ಎಂದು ಹೇಳುವ ಮೂಲಕ ಕಳೆದ ಕೆಲ ದಿನಗಳಿಂದ ಉಂಟಾಗಿದ್ದ ಎಲ್ಲ ಗೊಂದಲ, ವಿವಾದಗಳಿಗೆ ತೆರೆ ಎಳೆದರು.

ಶಸ್ತ್ರಾಸ್ತ್ರ ಪತ್ತೆ: ಇತ್ತೀಚೆಗೆ ಶರಣಾದ ನಕ್ಸಲರ ಬಳಿ ಶಸ್ತ್ರಾಸ್ತ್ರಗಳು ಇವೆ. ಪೊಲೀಸರು ಮಹಜರು ಮಾಡಿ ಅವುಗಳನ್ನು ತೆಗೆದುಕೊಂಡು ಬರುತ್ತಾರೆ. ಶಸ್ತ್ರಾಸ್ತ್ರಗಳು ಎಲ್ಲಿವೆ ಎಂಬುದು ಗೊತ್ತಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ನಕ್ಸಲರು ಸಿಎಂ ಕಚೇರಿಯಲ್ಲಿ ಶರಣರಾಗಿದ್ದಕ್ಕೆ ಬಿಜೆಪಿಯ ವಿರೋಧ ಕುರಿತು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ನಕ್ಸಲ್‌ವಾದ ಇರಬಾರದೆಂಬುದು ನಮ್ಮ ಉದ್ದೇಶ. ಯಾವುದೇ ಹೋರಾಟ ಶಾಂತಿಯುತವಾಗಿರಬೇಕು. ಶಸ್ತ್ರಗಳ ಮೂಲಕ ಹೋರಾಟ ನಡೆಯಬಾರದು. ಶೋಷಣೆಗಳ ವಿರುದ್ಧ ಪ್ರತಿಭಟಿಸಲು ಎಲ್ಲರಿಗೂ ಹಕ್ಕಿದೆ ಎಂದರು.

ಶೃಂಗೇರಿಯಲ್ಲಿ ಮತ್ತೊಬ್ಬ ನಕ್ಸಲ್ ಇದ್ದಾನೋ ಇಲ್ಲವೋ ಗೊತ್ತಿಲ್ಲ. ಆತನಿಗೂ ಮುಖ್ಯ ವಾಹಿನಿಗೆ ಬರುವಂತೆ ನಾನು ಮನವಿ ಮಾಡುತ್ತೇನೆ ಎಂದರು.

ನಾಳೆಯಿಂದ ತಿಂಥಿಣಿ ಬ್ರಿಡ್ಜ್‌ನಲ್ಲಿ ಹಾಲುಮತ ಸಂಸ್ಕೃತಿ ವೈಭವ

ರಾಯಚೂರು: ದೇವದುರ್ಗ ತಾಲೂಕಿನ ತಿಂಥಿಣಿ ಬ್ರಿಜ್ ನ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಜ. 12 ರಿಂದ ಮೂರು ದಿನಗಳ ಕಾಲ ಹಾಲುಮತ ಸಿದ್ದನಾಥ ಸಂಸ್ಕೃತಿ ವೈಭವ ಹಮ್ಮಿಕೊಳ್ಳಲಾಗಿದೆ ಎಂದು

ಪೀಠಾಧಿಪತಿ ಸಿದ್ದರಾಮಾನಂದಪುರಿ ಸ್ವಾಮಿಜಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಕ್ರಾಂತಿ ಅಂಗವಾಗಿ ಪಂಚರತ್ನದ ಜತೆ ಬೀರದೇವರ ಪಲ್ಲಕ್ಕಿ ಮೆರವಣಿಗೆ ಧ್ವಜಾರೋಹಣದೊಂದಿಗೆ ಸಂಸ್ಕೃತಿ ವೈಭವಕ್ಕೆ ಚಾಲನೆ ನೀಡಲಾಗುವುದು. ಸಿದ್ಧ ಶೈವನಾಥ ಸಂಪ್ರದಾಯದ ಅರ್ಚಕರಿಗೆ ತರಬೇತಿ ನೀಡಲು ಶಿವ ಸಿದ್ದಯೋಗ ವಿದ್ಯಾ ಮಂದಿರ ಶಿಲಾನ್ಯಾಸ ಕಾರ್ಯಕ್ರಮ ಮತ್ತು ಅರ್ಚಕರ ಸಮಾವೇಶ ಆಯೋಜಿಸಲಾಗಿದೆ. ಸಿಎಂ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ ಎಂದರು.

ರಾಜ್ಯದಲ್ಲಿ ಸಿಎಂ ಸ್ಥಾನ ಖಾಲಿ ಇಲ್ಲ: ಎಂಬಿಪಿ

ಹೊಸಪೇಟೆ: ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ, ಸಿದ್ದರಾಮಯ್ಯ ಅವರೇ ಐದು ವರ್ಷ ಪೂರ್ತಿ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಸ್ಪಷ್ಟವಾಗಿ ಹೇಳಿದ್ದಾರೆ. ಹೊಸಪೇಟೆಯಲ್ಲಿ ಸಿರಸಂಗಿ ಲಿಂಗರಾಜ ದೇಸಾಯಿ ಅವರ 164ನೇ ಜಯಂತ್ಯೋತ್ಸವದಲ್ಲಿ ಪಾಲ್ಗೊಳ್ಳಲು ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಎರಡೂವರೆ ವರ್ಷದ ಬಳಿಕ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವ ಬಗ್ಗೆ ಯಾವ ಒಪ್ಪಂದ ಆಗಿರುವ ಬಗ್ಗೆ ಮಾಹಿತಿ ಇಲ್ಲ, ಪೂರ್ಣ ಅವಧಿಗೆ ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ ಎಂದರು.

ಡಿನ್ನರ್ ಪಾರ್ಟಿ ಮಾಡುವುದರಲ್ಲಿ ತಪ್ಪೇನಿಲ್ಲ, ಅದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯ ಇಲ್ಲ ಎಂದು ಸಚಿವರು ಸಮರ್ಥಿಸಿಕೊಂಡರು. ಕನ್ನಡ ವಿವಿ ನೆಲ ಸಂರಕ್ಷಣೆಗೆ ಬದ್ಧ. ಹಂಪಿ ಕನ್ನಡ ವಿಶ್ವವಿದ್ಯಾಲಯ ಸಮೀಪ ನಿರ್ಮಾಣವಾಗಲಿರುವ ರೆಸಾರ್ಟ್ ಒಂದಕ್ಕಾಗಿ ವಿಶ್ವವಿದ್ಯಾಲಯಕ್ಕೆ ಒಳಪಟ್ಟ ಸ್ಥಳ ಕಬಳಿಸಲು ಅವಕಾಶ ನೀಡುವುದಿಲ್ಲ. ಕೆಐಎಡಿಬಿ ಈ ನಿಟ್ಟಿನಲ್ಲಿ ನೋಟಿಸ್ ನೀಡಿದ್ದರೂ ವಿಶ್ವವಿದ್ಯಾಲಯಕ್ಕೆ ಸೇರಿದ ಸ್ಥಳಕ್ಕೆ ಚ್ಯುತಿ ಬರಲು ಬಿಡುವುದಿಲ್ಲ ಎಂದು ತಿಳಿಸಿದರು.

ಕಾಂಗ್ರೆಸ್ ಆಟ ದಳ ಪೀಕಲಾಟ

← ಮೊದಲಪುಟದಿಂದ

ಜಾರಕಿಹೊಳಿಯೇ ಎಚ್‌ಡಿಕೆಗೆ ಆಧಾರ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಜೆಡಿಎಸ್ ಶಾಸಕರನ್ನು ಸೆಳೆಯಲು ಪ್ರಯತ್ನ ಆರಂಭಿಸುತ್ತಿದ್ದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ತಮ್ಮ ಶಾಸಕರನ್ನು ಉಳಿಸಿಕೊಳ್ಳಲು ಎಲ್ಲಿಲ್ಲದ ಪ್ರಯತ್ನ ಆರಂಭಿಸಿದ್ದಾರೆ. ಉಪಚುನಾವಣೆ ಎದುರಿಸದೇ ಪಕ್ಷ ವಿಲೀನಕ್ಕೆ ಡಿಕೆಶಿ ಪ್ಲಾನ್ ಮಾಡಿರುವುದರಿಂದ ಬಹುದೊಡ್ಡ ಸಂಖ್ಯೆಯಲ್ಲಿ ಜೆಡಿಎಸ್ ಶಾಸಕರು ಹೊರಹೋಗುವುದು ನಿಶ್ಚಿತ. ಆದ್ದರಿಂದ ಇದೀಗ ಜೆಡಿಎಸ್‌ನ 36 ಶಾಸಕರನ್ನು ಪಕ್ಷದಲ್ಲಿಯೇ ಉಳಿಸಿಕೊಳ್ಳಲು ತಮ್ಮ ಪ್ರಯತ್ನದೊಂದಿಗೆ ರಮೇಶ್ ಜಾರಕಿಹೊಳಿ ನೆರವು ಪಡೆಯುವ ಲೆಕ್ಕಾಚಾರದಲ್ಲಿದ್ದಾರೆ ಎಂದು ಹೇಳಲಾಗಿದೆ.

ದೆಹಲಿ ಪ್ರವಾಸದಲ್ಲಿದ್ದ ಯತ್ನಾಳ್ ಬಣದ ಕೆಲವರೊಂದಿಗೆ ಕುಮಾರಸ್ವಾಮಿ ಚರ್ಚೆ ನಡೆಸಿದ್ದು, ಜೆಡಿಎಸ್ ಶಾಸಕರು ಕಾಂಗ್ರೆಸ್‌ಗೆ ಹೋಗದಂತೆ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ ಎನ್ನಲಾಗಿದೆ. ಈ ಹಿಂದೆ ಸಮ್ಮಿಶ್ರ ಸರಕಾರದ ಪತನಕ್ಕೆ ಕಾರಣವಾಗಿದ್ದ ರಮೇಶ್ ಜಾರಕಿಹೊಳಿ ಅವರ ಸಹಾಯ ಪಡೆದಿರುವುದು ಮೈತ್ರಿ ಪಕ್ಷದಲ್ಲಿ ಕುತೂಹಲಕ್ಕೆ ಕಾರಣವಾಗಿದೆ. ಕುಮಾರಸ್ವಾಮಿ ಅವರ ಈ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ರಮೇಶ್ ಜಾರಕಿಹೊಳಿ ಅವರು, ಇದಕ್ಕೆ ಪ್ರತಿಯಾಗಿ ರಾಜ್ಯ ಬಿಜೆಪಿಯಲ್ಲಿ ತಮ್ಮ ಬಣ ಅಧಿಪತ್ಯ ಸಾಧಿಸಲು ಬಿಜೆಪಿ ವರಿಷ್ಠರ ಬಳಿ ಬ್ಯಾಟ್ ಬೀಸಬೇಕು ಎನ್ನುವ ಬೇಡಿಕೆ ಇಟ್ಟಿದ್ದಾರೆ.

ಸಿದ್ದು ಆಪ್ತ ಸಚಿವರಿಂದ ಮುಂದುವರಿದ ಬ್ಯಾಟಿಂಗ್

ಜೆಡಿಎಸ್ ಶಾಸಕರ ಬಲದೊಂದಿಗೆ 'ಆಪ್ತ'ರ ಸಂಖ್ಯೆ ಹೆಚ್ಚಿಸಿಕೊಳ್ಳುವ ಲೆಕ್ಕಾಚಾರದಲ್ಲಿ ಡಿ.ಕೆ.ಶಿವಕುಮಾರ್ ಅವರಿದ್ದರೆ ಇನ್ನೊಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಚಿವರು, ಡಿಕೆಶಿ ವಿರುದ್ಧ ಟಾಕ್‌ವಾರ್ ಮುಂದುವರಿಸಿದ್ದಾರೆ. ಸಹಕಾರ ಸಚಿವ ಕೆ.ಎನ್. ರಾಜಣ್ಣ ಮಾತನಾಡಿ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗೇ ಬಿಡುತ್ತಾರೆ ಎಂದು ಯಾರೂ ಹೇಳಿಲ್ಲ. ಆಗುವುದಿಲ್ಲವೆಂದು ಹೇಳಿಲ್ಲ. ಎಲ್ಲರದ್ದು ವಿಧಿ ಏನು ಅಂತ ಮೊದಲೇ ತೀರ್ಮಾನವಾಗಿರುತ್ತದೆ. ಅದರ ಪ್ರಕಾರ ಆಗುತ್ತದೆ. ಡಿ.ಕೆ.ಶಿವಕುಮಾರ್ ಎರಡೂವರೆ ವರ್ಷಕ್ಕೆ ಯಾಕೆ ಪ್ರಯತ್ನಿಸುತ್ತೀರಿ? ಮುಂದಿನ ಐದು ವರ್ಷದ ಅವಧಿಗೆ ಸಿಎಂ ಆಗಲಿ ಟಾಂಗ್ ನೀಡಿದ್ದಾರೆ. ಇನ್ನೊಂದೆಡೆ ಸಚಿವ ಎಂ.ಬಿ. ಪಾಟೀಲ್, ಸಿದ್ದರಾಮಯ್ಯ ಅವರೇ ಮುಂದಿನ ಐದು ವರ್ಷಗಳ ಅವಧಿಗೆ ಮುಖ್ಯಮಂತ್ರಿ ಎನ್ನುವ ಮೂಲಕ ಡಿ.ಕೆ. ಶಿವಕುಮಾರ್ ಅವರಿಗೆ ಈ ಅವಧಿಯಲ್ಲಿ ಸಿಎಂ ಸ್ಥಾನ ಸಿಗುವುದಿಲ್ಲ ಎಂದು ಪರೋಕ್ಷವಾಗಿ ಹೇಳಿದ್ದಾರೆ.

ಪಾರಿವಾಳ ಬೆಟ್ಟಿಂಗ್: ಬಾಲಕ ನೇಣಿಗೆ ಶರಣು

ಒಂದೇ ದಿನ ನಾಲ್ವರ ಆತ್ಮಹತ್ಯೆ

ತುಮಕೂರು: ತುಮಕೂರು ಜಿಲ್ಲೆಯಲ್ಲಿ ಒಂದೇ ದಿನ ನಾಲ್ವರು ಆತ್ಮಹತೆಯ ಕ್ಷುಲ್ಲಕ ಕಾರಣಕ್ಕೆ 7ನೇ

ತರಗತಿ ವಿದ್ಯಾರ್ಥಿ ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾದ ಘಟನೆ ವಿಜಯನಗರ ಬಡಾವಣೆಯಲ್ಲಿ ನಡೆದಿದೆ. ಬಿಜೆಪಿ ಸಾಮಾಜಿಕ ಜಾಲತಾಣದ ಸಂಚಾಲಕಿ ಶಕುಂತಲಾ ನಟರಾಜ್ ಪುತ್ರ ತ್ರಿಶಾಲ್ (13) ಆತ್ಮಹತ್ಯೆಗೆ ಶರಣಾದ ಬಾಲಕ. ಈತ ಸರ್ವೋದಯ ಶಾಲೆ ವಿದ್ಯಾರ್ಥಿ. ಶುಕ್ರವಾರ ಬೆಳಗ್ಗೆ ಮನೆಯಲ್ಲಿ ಯಾರೂ ಇಲ್ಲದ ವೇಳೆ ಸಮವಸ್ತ್ರದಲ್ಲೇ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಪಾರಿವಾಳದ ಬೆಟ್ಟಿಂಗ್ ಕಾರಣ?: ಪಾರಿವಾಳದ ಬೆಟ್ಟಿಂಗ್ ವಿಚಾರಕ್ಕೆ ಸ್ನೇಹಿತರ ನಡುವೆ ಗಲಾಟೆಯಾ ಗಿದೆ. ಅದೇ ವಿಚಾರಕ್ಕೆ ನೊಂದು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಶಂಕಿಸಲಾಗಿದೆ. ಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲಬಾಧೆ : ನಾಲೆಗೆ ಹಾರಿದ ಮಹಿಳೆ

ತಿಪಟೂರಿನ ಗಾಂಧಿನಗರ ಹತ್ತಿರದ ಭೋವಿ ಕಾಲೋನಿಯಲ್ಲಿ ವಾಸಿಸುತ್ತಿದ್ದ ಮಹಿಳೆಯೊಬ್ಬರು ವೈಯಕ್ತಿಕ ಸಾಲದ ಬಾಧೆ ತಾಳದೆ ಹೇಮಾವತಿ ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಸಾದಿಕ್ ಬೇಗಂ (42) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಕೆಲ ಸಂಘಗಳಲ್ಲಿ ಮತ್ತು ಫೈನಾನ್ಸ್‌ಗಳಲ್ಲಿ ಸಾಲ ಮಾಡಿಕೊಂಡಿದ್ದು ಸಾಲಗಾರರ ಒತ್ತಡ ಆತ್ಮಹತ್ಯೆಗೆ ಕಾರಣ ಎನ್ನಲಾಗಿದೆ. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ವಿಡಿಯೋ ಚಿತ್ರೀಕರಣ ಮಾಡಿದ್ದು, ಕೆ.ಬಿ. ಕ್ರಾಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಯಿ, ಮಗಳು ಆತ್ಮಹತ್ಯೆ ?

ಗುಬ್ಬಿ: ಎಮ್ಮೆ ಮೇಯಿಸಲು ಹೋಗಿದ್ದ ತಾಯಿ ಮತ್ತು ಮಗಳು ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ನಿಟ್ಟೂರು ಹೋಬಳಿಯ ಅದಲಗೆರೆ ಗ್ರಾಮದ ಕೆರೆಯಲ್ಲಿ ನಡೆದಿದೆ. ನಿಟ್ಟೂರು ಹೋಬಳಿ ವಿರುಪಾಕ್ಷಿಪುರದ ಪ್ರೇಮಕುಮಾರಿ (50) ಹಾಗೂ ಪೂರ್ಣಿಮಾ (30) ಮೃತರು. ತಾಯಿ ಹಾಗೂ ಮಗಳು ಕೃಷಿಯೇತರ ಕೆಲಸದಲ್ಲಿ ಜೀವನ ನಡೆಸುತ್ತಿದ್ದು ,ಮಗಳು ಪೂರ್ಣಿಮಾ ಬುದ್ಧಿಮಾಂದ್ಯಳು.ಆಕೆಗೆ ಮದುವೆಯಾಗಿಲ್ಲ ಎಂಬ ಕಾರಣಕ್ಕೆ ಮಾನಸಿಕವಾಗಿ ನೊಂದು ಇಬ್ಬರೂ ಕೆರೆಗೆ ಹಾರಿ ಪ್ರಾಣಬಿಟ್ಟಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ. ತೋಟದ ಬಳಿ ಗುರುವಾರ ಹೋದ ಇಬ್ಬರು ಸಮೀಪದ ಅದಲಗೆರೆ ಗ್ರಾಮದ ಕೆರೆಗೆ ಬಿದ್ದಿದ್ದು ಮೃತ ದೇಹಗಳು ಶುಕ್ರವಾರ ಪತ್ತೆಯಾಗಿವೆ. ಸ್ಥಳಕ್ಕೆ ತುಮಕೂರು ಜಿಲ್ಲಾ ಅಪರ ಪೊಲೀಸ್ ವರಿಷ್ಠಾಧಿಕಾರಿ ಅಬ್ದುಲ್ ಖಾದರ್ ಭೇಟಿ ನೀಡಿದ್ದರು. ಚೇಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷ್ಣ ಹೆಸರಲ್ಲಿ ಅನಾಮಧೇಯರ ದೂರು

ಮೈಸೂರು: ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಹೆಸರನ್ನು ಹೇಳಿಕೊಂಡು ಪೊಲೀಸರಿಗೆ ಅನಾಮಧೇಯ ಪತ್ರಗಳು ಹೋಗುತ್ತಿವೆ ಎಂಬ ಆರೋಪ ಕೇಳಿಬಂದಿದೆ.

ಮೈಸೂರಿನ ಜಯಪುರ ಪೊಲೀಸ್ ಠಾಣೆಗೆ ಗಿರೀಶ್ ಎಂಬುವರ ವಿರುದ್ಧ ದೂರು ಹೋಗಿದೆ. ವಾಸ್ತವವಾಗಿ ಗಿರೀಶ್ ಯಾರು ಎಂಬುದೇ ಸ್ನೇಹಮಯಿ ಕೃಷ್ಣರಿಗೆ ಗೊತ್ತಿಲ್ಲ. ವಿಚಾರಣೆಗೆ ಹೋದಾಗಲೇ ತಮ್ಮ ಹೆಸರು ದುರ್ಬಳಕೆಯಾಗಿರುವುದು ಅವರಿಗೆ ಗೊತ್ತಾಗಿದೆ.

ಹೆಸರು ದುರ್ಬಳಕೆಗೆ ಗರಂ: ತಮ್ಮ ಹೆಸರನ್ನು ಹಲವರು ದುರ್ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಕೃಷ್ಣ, ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಪ್ರಶಿಕ್ಷಣಾರ್ಥಿಯ ಬಳಿ ಹಣ ಕೇಳಿದ ಬಗ್ಗೆ ದೂರು ಹೋಗಿದೆ. ಒಳ್ಳೆಯತನಕ್ಕೆ ನನ್ನ ಹೆಸರು ಬಳಸಿಕೊಂಡು ಅದರಿಂದ ಸಮಾಜಕ್ಕೆ ಒಳ್ಳೆಯದಾದರೆ ಸಮಸ್ಯೆ ಇಲ್ಲ. ನಿಮ್ಮ ಬಳಿ ದಾಖಲೆಗಳಿದ್ದರೆ ನನಗೆ ಕೊಡಿ, ನಿಮ್ಮ ಪರ ನಾನು ಹೋರಾಟ ಮಾಡುತ್ತೇನೆ. ಆದರೆ ನನ್ನ ಹೆಸರು ದುರ್ಬಳಕೆಯಾದರೆ ಕಾನೂನು ಹೋರಾಟ ಮಾಡುತ್ತೇನೆ ಎಂದು ಎಚ್ಚರಿಕೆ ಕೊಟ್ಟಿದ್ದಾರೆ.

ನನ್ನ ಹೆಸರನ್ನು ಏಕೆ ಬಳಸಿಕೊಳ್ಳುತ್ತಿದ್ದಾರೆ ಗೊತ್ತಾಗುತ್ತಿಲ್ಲ?

ವಾಹನಗಳ ತಪಾಸಣೆ ಮಾಡುವಾಗ ಸಂಚಾರ ವಿಭಾಗದ ಪೊಲೀಸರಿಗೆ ಸಿಕ್ಕಿಬಿದ್ದರೆ ನನ್ನ ಹೆಸರು ಹೇಳಿ ಶುಲ್ಕ ಕಟ್ಟದೇ ಹೋಗುತ್ತಿದ್ದಾರೆ. ಮೈಸೂರಿನ ಅರ್ಜುನ್ ಗುರೂಜಿ ವಿರುದ್ಧವೂ ದೂರು ಹೋಗಿದೆ. ನನ್ನ ಹೆಸರನ್ನು ಏಕೆ ಬಳಸಿಕೊಳ್ಳುತ್ತಿದ್ದಾರೆ ಗೊತ್ತಾಗುತ್ತಿಲ್ಲ. ತಮ್ಮ ವೈಯಕ್ತಿಕ ವಿಚಾರಕ್ಕೆ ನನಗೆ ಕೆಟ್ಟ ಹೆಸರು ತರಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ಕೊಟ್ಟರೆ ಕ್ರಮ ತೆಗೆದುಕೊಳ್ಳುವುದು ಕಷ್ಟವಾಗುತ್ತಿದೆ ಎಂದು ಸ್ನೇಹಮಯಿ ಕೃಷ್ಣ ಬೇಸರ ವ್ಯಕ್ತಪಡಿಸಿದ್ದಾರೆ.

> ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಹೋರಾಟ ಮಾಡುತ್ತಿರುವ ನನ್ನ ಹೆಸರನ್ನು ಬಳಸಿಕೊಂಡರೆ ತಮ್ಮ ಕೆಲಸ ಆಗುತ್ತದೆ ಎಂದು ಜನರು ಭಾವಿಸಿದ್ದಾರೆ. ಕ್ಷುಲ್ಲಕ ವಿಚಾರಗಳಿಗೆ ನನ್ನ ಹೆಸರು ಬಳಸಿಕೊಳ್ಳುತ್ತಿರುವುದು ಸರಿಯಲ್ಲ.
>
> **-ಸ್ನೇಹಮಯಿ ಕೃಷ್ಣ,** ಸಾಮಾಜಿಕ ಕಾರ್ಯಕರ್ತ

ಎತ್ತಿನಗಾಡಿಗೆ ಬೈಕ್ ಡಿಕ್ಕಿ: ತಾಯಿ, ಮಗ ಸಾವು

ಹಾವೇರಿ: ನಿಲ್ಲಿಸಿದ್ದ ಎತ್ತಿನಗಾಡಿಗೆ ಬೈಕ್ ಡಿಕ್ಕಿ ಹೊಡೆದು ತಾಯಿ ಹಾಗೂ ಮಗ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಹಿರೇಕೆರೂರು ತಾಲೂಕಿನ ಕೋಡ ಗ್ರಾಮದ ಬಳಿ ಗುರುವಾರ ರಾತ್ರಿ ಸಂಭವಿಸಿದೆ. ಮೃತರನ್ನು ಬ್ಯಾಡಗಿ ತಾಲೂಕಿನ ಕೆರೂಡಿ ಗ್ರಾಮದ ಕುಸುಮಾ (56) ಮತ್ತು ಕುಮಾರ (34) ಎಂದು ಗುರುತಿಸಲಾಗಿದೆ. ಹಂಸಭಾವಿಯ ತಮ್ಮ ಸಂಬಂಧಿಕರ ಮನೆಗೆ ಹೊರಟಿದ್ದ ವೇಳೆ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹಂಸಭಾವಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಫಲಿಸಿದ ಉಪಾಧ್ಯಾಯನ ಗಾಂಧಿಗಿರಿ, ಮಕ್ಕಳು ಮತ್ತೆ ಶಾಲೆಗೆ | ಪ್ರತಿಭಟನೆಗೆ ಮಣಿದು ಮಕ್ಕಳನ್ನು ಶಾಲೆಗೆ ಕಳುಹಿಸಿದ ಪಾಲಕರು | ಕನಕಪ್ಪ ಕಾರ್ಯಕ್ಕೆ ಮೆಚ್ಚುಗೆ

ಶಾಲೆ ಬಿಟ್ಟ ಮಕ್ಕಳು ಮರಳಿ ಬಂದರು

ವೀರೇಶ ಎಸ್. ಕೆಂಭಾವಿ, ಯಾದಗಿರಿ

ಸರಕಾರದ ಕೆಲಸ ದೇವರ ಕೆಲಸ ಎಂಬ ಮಾತಿಗೆ ಬದ್ಧರಾಗಿ ವೃತ್ತಿ ಬದುಕಲ್ಲಿ ಸೇವೆ ಸಲ್ಲಿಸುವ ನೌಕರರು ವಿರಳ ಎಂಬ ಮಾತಿದೆ. ಆದರೆ, ಇಲ್ಲೊಬ್ಬ ಶಿಕ್ಷಕರು ತನ್ನ ವಿದ್ಯಾರ್ಥಿಗಳು ಶಾಲೆ ಬಿಟ್ಟು ಜಮೀನುಗಳಿಗೆ ಕೂಲಿ ಕೆಲಸಕ್ಕೆ ಹೋಗಿದ್ದಕ್ಕೆ ಮನನೊಂದು ಮರಳಿ ಶಾಲೆಗೆ ಕಳುಹಿಸುವಂತೆ ಆಗ್ರಹಿಸಿ ಮಕ್ಕಳ ಮನೆ ಮುಂದೆ ಏಕಾಂಗಿಯಾಗಿ ಧರಣಿ ಕುಳಿತು ಪಾಲಕರ ಮನವೊಲಿಸುವಲ್ಲಿ ಸಫಲರಾಗಿದ್ದಾರೆ.

ಯಾದಗಿರಿ ತಾಲೂಕಿನ ವೆಂಕಟೇಶ ನಗರ (ಅಲ್ಲೀಪುರ ತಾಂಡಾ) ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರು ಕನಕಪ್ಪ ದಾಸರ ಧರಣಿ ಕುಳಿತ ಶಿಕ್ಷಕರಾಗಿದ್ದು, ಇತ್ತೀಚೆಗೆ ಶಾಲೆ ಬಿಟ್ಟು ಕೂಲಿ ಕೆಲಸಕ್ಕೆ ಹೋಗಿದ್ದ ವಿದ್ಯಾರ್ಥಿಗಳಾದ ದಿನೇಶ್, ಮಹೇಶ್ ರನ್ನು ಮರಳಿ ಶಾಲೆಗೆ ಕರೆ ತರುವಲ್ಲಿ ಯಶಸ್ವಿಯಾಗಿದ್ದಾರೆ .

ಕೂಲಿ ಕೆಲಸಕ್ಕೆ ತೆರಳಿದ್ದ ಮಕ್ಕಳು: ಇಬ್ಬರು ವಿದ್ಯಾರ್ಥಿಗಳು ಇತ್ತೀಚೆಗೆ ಶಾಲೆ ಬಾರದೆ ಜಮೀನುಗಳಿಗೆ ಕೂಲಿ ಕೆಲಸ ಮಾಡಲು ತೆರಳಿದ್ದರು. ಇದನ್ನು ಗಮನಿಸಿದ ಶಿಕ್ಷಕ ಕನಕಪ್ಪ, ಮಕ್ಕಳನ್ನು ಮರಳಿ ಶಾಲೆಗೆ ಕಳುಹಿಸಬೇಕೆಂದು ಪಾಲಕರನ್ನು ಒತ್ತಾಯಿಸಿ ಅವರ ಮನೆ ಮುಂದೆಯೇ ಧರಣಿ ಆರಂಭಿಸಿದ್ದರು. ಶಿಕ್ಷಕನ ಧರಣಿಗೆ ಮಣಿದ ಪಾಲಕರು ಮಕ್ಕಳನ್ನು ಪುನಃ ಶಾಲೆಗೆ ಕಳುಹಿಸಿದ್ದಾರೆ.

ಕೂಲಿ ಹೋಗಿದ್ದ ವಿದ್ಯಾರ್ಥಿಗಳನ್ನು ಶಾಲೆಗೆ ಕಳುಹಿಸಲು ಆಗ್ರಹಿಸಿ ಮಕ್ಕಳ ಮನೆ ಮುಂದೆ ಧರಣಿ ಕುಳಿತ ಶಿಕ್ಷಕ.

> ಇಂದಿನ ಯುಗದಲ್ಲಿ ಶಿಕ್ಷಣ ಅತಿಅವಶ್ಯವಾಗಿದೆ. ಇದಕ್ಕಾಗಿ ಶಾಲೆ ಬಿಟ್ಟು ಕೂಲಿ ಕೆಲಸಕ್ಕೆ ಹೋಗುವ ಮಕ್ಕಳನ್ನು ಕರೆತರಲು ಪಾಲಕರ ಮನವೊಲಿಸುವುದು ಬಹಳ ಕಷ್ಟವಾಗಿದೆ. ಹೀಗಾಗಿ ಶಾಲೆಗೆ ಬಾರದ ವಿದ್ಯಾರ್ಥಿಗಳನ್ನು ಕರೆತರಲು ಧರಣಿ ಮಾಡಲಾಯಿತು.
>
> **ಕನಕಪ್ಪ ದಾಸರ,** ಮುಖ್ಯಗುರು

ಸ್ವಂತಹಣ ಖರ್ಚುಮಾಡುವ ಶಿಕ್ಷಕ

ಇದಲ್ಲದೆ ಹಲವು ಸಮಾಜಮುಖಿ ಕಾರ್ಯ ಸಹ ಈ ಶಿಕ್ಷಕ ಮಾಡುತ್ತಿದ್ದು, ಜೀವನೋಪಾಯಕ್ಕಾಗಿ ಬೇರೆಡೆಗೆ ವಲಸೆ ಹೋಗುವ ಪಾಲಕರೊಡನೆ ಶಾಲೆ ಬಿಟ್ಟು ಹೋಗುವ ವಿದ್ಯಾರ್ಥಿಗಳನ್ನು ಪತ್ತೆಹಚ್ಚಿ ಸ್ವಂತಖರ್ಚಿನಲ್ಲಿ ಅಲ್ಲಿಗೆ ತೆರಳಿ ಪಾಲಕರ ಮನವೊಲಿಸಿ ಕರೆತಂದು ಬಂದು ವಿದ್ಯಾರ್ಜನೆ ಸಹ ಕನಕಪ್ಪ ದಾಸರ ಮಾಡುತ್ತಿದ್ದಾರೆ.

ಶಾಲೆಗೆ ಬಂದೆವಾ, ಪಾಠ ಮಾಡಿದೆವಾ, ಮನೆಗೆ ಹೋದೆವಾ ಎನ್ನುವ ಶಿಕ್ಷಕರ ನಡುವೆ ಬಿಸಿಲಿನಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದ ಮಕ್ಕಳನ್ನು ಶಾಲೆಗೆ ಮರಳಿ ಕರೆತಂದ ಮುಖ್ಯಶಿಕ್ಷಕ ಕನಕಪ್ಪ ದಾಸರ ಅವರ ಕಾರ್ಯಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ. ಇದು ಮತ್ತೊಬ್ಬರಿಗೆ ಸ್ಫೂರ್ತಿ ನೀಡಲಿ ಎಂದು ಸಾಮಾಜಿಕ ಜಾಲತಾಣಗಳಲ್ಲಿ ನೆಟ್ಟಿಗರು ಪ್ರಶಂಸೆಗಳ ಸುರಿಮಳೆ ಸುರಿಸಿದ್ದಾರೆ.

ರಾತ್ರಿ ವೇಳೆ ಮನೆಯಲ್ಲಿ ಪಾಠ, ಸ್ವಂತಖರ್ಚಿನಲ್ಲಿ ಪ್ರತಿಭಾವಂತರಿಗೆ ಶಿಕ್ಷಣ

ಶಾಲೆ ಬಿಟ್ಟ ನಂತರವೂ ಮಕ್ಕಳನ್ನು ಮನೆಗೆ ಕರೆದು ರಾತ್ರಿವರೆಗೂ ವಿದ್ಯಾಭ್ಯಾಸವನ್ನು ಮಾಡಿಸುವ ಶಿಕ್ಷಕ ಕನಕಪ್ಪ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಮ್ಮ ಸ್ವಂತಖರ್ಚಿನಲ್ಲಿ ದೂರದ ಊರುಗಳಿಗೆ ವ್ಯಾಸಂಗಕ್ಕೆ ಬಿಟ್ಟುಬಂದಿದ್ದಾರೆ. ಇವರ ಈ ಮಹತ್ತರ ಕಾರ್ಯ ಮುಂದಿನ ದಿನಗಳಲ್ಲಿ ಮಕ್ಕಳ ಭವಿಷ್ಯ ರೂಪಿಸಲು ಸಹಕಾರಿಯಾಗಲಿದೆ ಎನ್ನುತ್ತಾರೆ ಪಾಲಕರು.

ವಿಶ್ವವಾಣಿ

ಸಂಪಾದಕೀಯ

ಆಶಾ ಕಾರ್ಯಕರ್ತೆಯರಲ್ಲಿ ಆಶಾವಾದ

ಕಳೆದ ಎಂಟು ವರ್ಷಗಳಿಂದ ಒಂದೇ ಬೇಡಿಕೆ ಇಟ್ಟುಕೊಂಡು ಹೋರಾಟ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಕೊನೆಗೂ ಒಂದು ಹಂತದ ಜಯ ಸಿಕ್ಕಿದೆ. 10,000 ರು. ಮಾಸಿಕ ಗೌರವ ಧನ ನಿಗದಿ ಸೇರಿದಂತೆ ಆಶಾ ಸಂಘಟನೆಯ ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರಕಾರ ತಾತ್ವಿಕ ಒಪ್ಪಿಗೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ನಿಟ್ಟಿನಲ್ಲಿ ಆಶಾ ಸಂಘಟನೆ ಮುಖಂಡರ ಜತೆ ನಡೆಸಿದ ಸಂಧಾನ ಯಶಸ್ವಿಯಾಗಿದೆ. ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯದ ನಾನಾ ಭಾಗಗಳಿಂದ ಬಂದ ಸಾವಿರಾರು ಆಶಾ ಕಾರ್ಯಕರ್ತೆಯರು ಕಳೆದ ಆರು ದಿನಗಳಿಂದ ಕೊರೆಯುವ ಚಳಿ ನಡುವೆಯೂ ಅನಿರ್ದಿಷ್ಟಾವಧಿ ಹೋರಾಟ ಆರಂಭಿಸಿದ್ದರು. ಆರೋಗ್ಯ ಇಲಾಖೆಯ ಆಯುಕ್ತರಾದ ಶಿವಕುಮಾರ್ ಮತ್ತು ಹಿರಿಯ ಅಧಿಕಾರಿ ಡಾ. ಪ್ರಭುದೇವ್ ಗೌಡ ಮುಷ್ಕರ ನಡೆಸುತ್ತಿದ್ದ ಫ್ರೀಡಂ ಪಾರ್ಕ್‌ಗೆ ಭೇಟಿ ಸರಕಾರದ ನಿರ್ಧಾರವನ್ನು ತಿಳಿಸವುದರೊಂದಿಗೆ ಮುಷ್ಕರಕ್ಕೆ ತೆರೆ ಎಳೆದಿದ್ದಾರೆ. ಇಲಾಖೆಯ ಪ್ರಧಾನ ಕೊಂಡಿಯಾದ ಆಶಾ ಕಾರ್ಯಕರ್ತರನ್ನು ಆರಂಭದಲ್ಲಿ 2 ಗಂಟೆ ಕೆಲಸಕ್ಕೆಂದು ನೇಮಿಸಿಕೊಳ್ಳಲಾಗಿತ್ತು. ನಂತರ ಒಂದೊಂದೇ ಹೆಚ್ಚುವರಿ ಕೆಲಸಗಳೊಂದಿಗೆ 14 ಗಂಟೆಗಳ ದುಡಿಮೆ ನೀಡಲಾಗಿತ್ತು. ಆರಂಭದಲ್ಲಿ ಬಾಣಂತಿ ಮಹಿಳೆಯರನ್ನು ಆಸ್ಪತ್ರೆಗೆ ತಲುಪಿಸುವ ಕೆಲಸಕ್ಕೆಂದು ನೇಮಿಸಿಕೊಂಡು ಈಗ ಅವರಿಂದ 32 ರೀತಿಯ ಕೆಲಸಗಳನ್ನು ಮಾಡಿಸಲಾಗುತ್ತಿದೆ. ಕೆಲಸದ ಅವಧಿ ಆರು ಪಟ್ಟು ಹೆಚ್ಚಾದರೂ, ಗೌರವಧನ ಮಾತ್ರ ಹೆಚ್ಚಾಗಿಲ್ಲ ಎನ್ನುವುದು ಕಾರ್ಯಕರ್ತರ ಆರೋಪವಾಗಿತ್ತು. ಬೆಲೆ ಏರಿಕೆಗಳ ಹೊಡೆತದ ನಡುವೆಯೂ ಅತೀ ಕಡಿಮೆ ಕೂಲಿಗೆ ಆಶಾ ಕಾರ್ಯಕರ್ತೆಯರು ದುಡಿಯುತ್ತಿದ್ದರು. ತಮಗೆ ನೀಡಲಾಗುತ್ತಿರುವ ಗೌರವಧನವನ್ನು 15 ಸಾವಿರ ರು.ಗಳಿಗೆ ಹೆಚ್ಚಿಸಬೇಕೆನ್ನುವುದು ಅವರ ಪ್ರಧಾನ ಬೇಡಿಕೆಯಾಗಿತ್ತು. ಇದೀಗ ಮಾಸಿಕ ರೂ.10,000 ನಿಶ್ಚಿತ ಗೌರವಧನದ ಜೊತೆಗೆ ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ಪ್ರೋತ್ಸಾಹಧನ, ನಿವೃತ್ತಿ ಪರಿಹಾರ ನೀಡುವ ಕುರಿತು ಮುಂದಿನ ದಿನಗಳಲ್ಲಿ ಪರಿಶೀಲನೆ, ಗಂಭೀರ ಕಾಯಿಲೆಗಳಿಗೆ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲಾದ ಸಂದರ್ಭದಲ್ಲಿ ಮೂರು ತಿಂಗಳ ವೇತನ ಸಹಿತ ರಜೆ ಕುರಿತು ಪರಿಶೀಲನೆ ಬಗ್ಗೆ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಜರುಗಿದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಆರೋಗ್ಯ ಮೂಲಭೂತ ಹಕ್ಕು. ಈ ಹಕ್ಕು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ದೊರಕಿಸುವಲ್ಲಿ ಆಶಾ ಕಾರ್ಯಕರ್ತೆಯರ ಪಾತ್ರ ಹಿರಿದು. ಈ ನಿಟ್ಟಿನಲ್ಲಿ ಇವರ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸಿ ಸರಕಾರ ಸೂಕ್ತ ನಿರ್ಧಾರಕ್ಕೆ ಬರಬೇಕಿದೆ.

ಸೊಂಪಾದಕೀಯ

ಎವೆರಿ ಡೇ ಈಸ್ ನಾಟ್ WED-nesday

ಮದುವೆಗಳು ಸ್ವರ್ಗದಲ್ಲಿ ನಿಶ್ಚಯ ಆಗಿರುತ್ತವೆ ಅಂತ ಹೇಳುತ್ತಾರೆ. ಆದರೆ ಇನ್ನು ಕೆಲವರು, 'ಮದುವೆಗಳು ಮನೆಗಳಲ್ಲಿ ನಿಶ್ಚಯ ಆಗುತ್ತವೆ. ಛತ್ರಗಳಲ್ಲಿ ನಡೆಯುತ್ತವೆ' ಅಂತಾರೆ. ಆದರೆ ಇತ್ತೀಚೆಗೆ, ಛತ್ರಗಳಲ್ಲಿ ನಡೆಯಬೇಕಾದ ಮದುವೆಗಳೂ ನಡೆಯೋದು ಕಷ್ಟ ಅನ್ನೋ ಥರ ಆಗಿದೆ. ಯಾಕಂದ್ರೆ, ಎಲ್ಲ ಸುಸೂತ್ರವಾಗಿ ರೆಡಿ ಆದಮೇಲೂ ಕೊನೆಯ ಕ್ಷಣದಲ್ಲಿ ಮದುವೆಗಳು ಕ್ಯಾನ್ಸಲ್ ಆಗುತ್ತಿವೆ. ಮೊನ್ನೆ ಕೊರಟಗೆರೆಯಲ್ಲಿ ಇದೇ ರೀತಿ ಅಂತಿಮ ಕ್ಷಣದಲ್ಲಿ ವಧು ತನ್ನ ಮನಸ್ಸು ಬದಲಾಯಿಸಿದ್ದರಿಂದ ಮದುವೆಯೊಂದು ನಿಂತುಹೋಗಿದೆ. ಅಂದರೆ, ಆಗಬೇಕಾದ ಹುಡುಗನ ಜತೆ ಆಗದೆ, ಬೇರೊಬ್ಬ ಹುಡುಗನ ಜತೆ ವಧುವಿನ ಮದುವೆ ಆಗಿದೆ ಅನ್ನೋದು ಇನ್ನೂ ಇಂಟರೆಸ್ಟಿಂಗ್ ವಿಷಯ. ಹಿಂದಿನ ದಿನ ರಾತ್ರಿ ಕೂಡಾ ಯಾರಿಗೂ ಲಗ್ನಕ್ಕೆ ವಿಘ್ನ ಬರುತ್ತೆ ಅಂತ ಗೊತ್ತಾಗಿಲ್ಲ. ಯಾಕಂದ್ರೆ ಆರತಕ್ಷತೆಯಲ್ಲೂ ವಧು ನೀಟಾಗಿ ಅಕ್ಷತೆ ಹಾಕಿಸಿಕೊಂಡು ಕಾರ್ಯಕ್ರಮ ಮುಗಿಸಿದ್ದಾಳೆ. ಮರುದಿನ ಬೆಳಗ್ಗೆ 9 ಗಂಟೆಗೆ ಹಸೆಮಣೆಯಲ್ಲಿ ವರನಿಂದ ತಾಳಿ ಕಟ್ಟಿಸಿಕೊಳ್ಳುವ ಸಮಯ. ವಧೂ ಅದಕ್ಕೂ ತಯಾರಾಗಿಯೇ ಕುಳಿತಿದ್ದಳು. ಆದರೆ, ಸರಿಯಾಗಿ ತಾಳಿ ಕಟ್ಟೋ ಸಮಯಕ್ಕೆ, 'ತಾಳಿ' ಅಂತ ಹುಡುಗಿಯ ಪ್ರಿಯಕರ ಎಂಟ್ರಿ ಕೊಟ್ಟಿದ್ದಾನೆ. ಅವನನ್ನು ನೋಡಿದ ವಧು, ಕೊನೆಯ ಕ್ಷಣದಲ್ಲಿ ನಂಗೆ ಈ ಮದ್ವೆ ಬೇಡ ಅಂತ ವರಾತ ತೆಗೆದಿದ್ದಾಳೆ. ಹಳೆಯ ಪ್ರೀತಿ ತಾಳಿ ಕಟ್ಟೋ ಸಮಯದಲ್ಲಿ ಮರುಕಳಿಸಿದ ಕಾರಣಕ್ಕೆ ಮದುವೆ ಆಗೋ ಹುಡುಗನನ್ನು ಹೊರಗೆ ಕಳುಹಿಸಿ, ಪ್ರಿಯಕರನಿಂದಲೇ ತಾಳಿ ಕಟ್ಟಿಸಿಕೊಂಡಿದ್ದಾಳೆ ಹುಡುಗಿ. ಹುಡುಗನ ಕಡೆಯವರು ಪಾಪ, ನಿಮ್ಮ ಹುಡುಗಿಗಾಗಿ ನಾವು ಮಾಡಿದ ಖರ್ಚನ್ನು ನಮಗೆ ಕೊಡಿ ಅಂತ ಖರ್ಚಿಗೆ ಕಾಸು ತೆಗೆದುಕೊಂಡವರಂತೆ ಅಲ್ಲಿಂದ ಹೊರಬಂದಿದ್ದಾರೆ. ಒಟ್ಟಿನಲ್ಲಿ ಕೈಗೆ ಬಂದಿದ್ದು ಬಾಯಿಗೆ ಬರಲಿಲ್ಲ ಎನ್ನುವಂತೆ, ನಿಶ್ಚಿತಾರ್ಥದವರೆಗೆ ಬಂದಿದ್ದು, ಮದುವೆವರೆಗೆ ಬಾರದೆ ವರ ನಿರಾಶನಾಗಿದ್ದಾನೆ. ಇದನ್ನೆಲ್ಲಾ ನೋಡಿದವರು, 'ಹುಡುಗ, ಹುಡುಗಿ ಜಾತಕ ನೋಡಿ, ನಿಶ್ಚಿತಾರ್ಥ ನಡೆದು, ಬೆಳಗ್ಗೆ ಹಸೆಮಣೆ ಏರೋದು ಅಂತ ಫಿಕ್ಸ್ ಆಗಿದ್ದರೂ, ತಾಳಿ ಕಟ್ಟುವ ಶುಭವೇಳೆ ಮುಗಿಯುವವರೆಗೂ ಮದುವೆ ಆಗೋದು ಗ್ಯಾರಂಟಿ ಇಲ್ಲ, ಯಾಕಂದ್ರೆ, ಎವೆರಿ ಡೇ ಈಸ್ ನಾಟ್ WED-nesday ಎನ್ನುತ್ತಿದ್ದಾರೆ.

ಸಂಪಾದಕರ ಸದ್ಯಶೋಧನೆ

ಪತ್ರಿಕೆ ಮತ್ತು ರಾಜಕೀಯ ವರದಿ

ಖ್ಯಾತ ಪತ್ರಕರ್ತ ದಿವಂಗತ ವೈಎನ್‌ಕೆ ಅವರು ಬರೆದ 'ಇದು ಸುದ್ದಿ, ಇದು ಸುದ್ದಿ' ಪುಸ್ತಕವನ್ನು ಕೆಲ ದಿನಗಳ ಹಿಂದೆ ಓದುತ್ತಿದ್ದೆ. ಇದು ಸುಮಾರು 38 ವರ್ಷಗಳ ಹಿಂದೆ ಪ್ರಕಟವಾದ ಒಂದು ಅಪರೂಪದ ಕೃತಿ. ಅದರಲ್ಲಿ ವೈಎನ್‌ಕೆ ಒಂದೆಡೆ ಹೀಗೆ ಬರೆಯುತ್ತಾರೆ- ''ಕನ್ನಡ ಪತ್ರಿಕೆಗಳಲ್ಲಿ ರಾಜಕೀಯ ಸುದ್ದಿ ಬರೆಯುವ ಸಾಕಷ್ಟು ಪತ್ರಕರ್ತರಿದ್ದಾರೆ. ಆದರೆ ಕಲೆ, ವಿಜ್ಞಾನ, ಸಂಗೀತ, ಕೃಷಿ ಬಗ್ಗೆ ಬರೆಯುವವರು ಕಮ್ಮಿ. ವಿಜ್ಞಾನದ ಮಹಾ ಸಂಶೋಧನೆಗಳ ವಿವರಗಳು ಪತ್ರಿಕೆಯಲ್ಲಿ ಹೆಚ್ಚು ವರದಿಯಾಗುವುದಿಲ್ಲ. ನೊಬೆಲ್ ಪ್ರಶಸ್ತಿ ಪಡೆದವರು ಏನು ಮಾಡಿದ್ದಾರೆ, ಅವರ ಯಾವ ಸಂಶೋಧನೆಗೆ ಆ ಪ್ರಶಸ್ತಿ ನೀಡಿದ್ದಾರೆ, ಆ ಸಂಶೋಧನೆ ನಮಗೆ ಎಷ್ಟು ಪ್ರಸ್ತುತ, ಅದರ ಮಹತ್ವ ಏನು ಎಂಬ ವಿವರಗಳು ಇರುವುದಿಲ್ಲ''. ಇದು ನಿಜ. ಈಗಲೂ ಅದೇ ಪರಿಸ್ಥಿತಿ ಇದೆ. ಕನ್ನಡದಲ್ಲಿ ವಿಜ್ಞಾನದ ವಿಷಯಗಳನ್ನು ಬರೆಯುವ ಉತ್ತಮ ಲೇಖಕರು ಬಂದಿದ್ದಾರೆ. ಆದರೆ ಅಂಥ ವಿಷಯವನ್ನು ಬರೆಯುವ ಪತ್ರಕರ್ತರ ಸಂಖ್ಯೆ ಕಮ್ಮಿಯೇ. ರಾಜಕಾರಣದ ಬಗ್ಗೆ ಬರೆಯಲು ಸುದ್ದಿಮನೆಯಲ್ಲಿ ನೂಕುನುಗ್ಗಲು. ಆ ವಿಷಯವನ್ನು ಬರೆಯಲು ಬಹಳ ಶಾಣ್ಯಾತನ ಬೇಕಿಲ್ಲ. ಅದೇ ವಿಜ್ಞಾನ, ತಂತ್ರಜ್ಞಾನ, ಸಂಗೀತ, ಕಲೆಗಳ ಬಗ್ಗೆ ಬರೆಯಲು ಸ್ವಲ್ಪವಾದರೂ ಓದಿಕೊಂಡಿರಬೇಕು. ರಾಜಕಾರಣಿಗಳ ಪತ್ರಿಕಾಗೋಷ್ಠಿಗೆ ಹೋಗಲು ವಿಶೇಷ ಅರ್ಹತೆ ಬೇಕಿಲ್ಲ. ಅವರು ಹೇಳಿದ್ದನ್ನು ಬರೆದುಕೊಂಡು ಬರಲು ಅಥವಾ ಅವರಿಗೆ ಪ್ರಶ್ನೆಗಳನ್ನು ಕೇಳಲು ವಿಶೇಷ ಪ್ರೌಢಿಮೆ ಬೇಕಿಲ್ಲ. ಕೆಲ ರಾಜಕೀಯ ಪಕ್ಷಗಳ ನಾಯಕರ ಪತ್ರಿಕಾಗೋಷ್ಠಿಯಲ್ಲಿ ಯಾವ ಪತ್ರಕರ್ತರಾದರೂ ಪಾಲ್ಗೊಳ್ಳಬಹುದು. ಅದೇ ನೀವು ಇಸ್ರೋ ಅಧ್ಯಕ್ಷ, ಇಂಗ್ಲಿಷ್ ಸಾಹಿತಿ, ಪಾಪ್ ಸಂಗೀತಗಾರ, ಹಿಂದುಸ್ಥಾನಿ ಗಾಯಕ, ಕೃಷಿ ವಿಜ್ಞಾನಿ, ನೊಬೆಲ್ ಪ್ರಶಸ್ತಿ ಪುರಸ್ಕೃತರ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಲು ಒಂದು ಅರ್ಹತೆ ಬೇಕು. ಮೊದಲನೆಯದಾಗಿ ಅವರು ಯಾರು, ಅವರ ಹಿನ್ನೆಲೆಯೇನು ಎಂಬುದಾದರೂ ಗೊತ್ತಿರಬೇಕು. ಅವರು ಹೇಳಿದ್ದನ್ನು ಅರ್ಥ ಮಾಡಿಕೊಳ್ಳುವಷ್ಟಾದರೂ ಜ್ಞಾನ ಇರಬೇಕು. ಇಲ್ಲದಿದ್ದರೆ, ಇಸ್ರೋ ಅಧ್ಯಕ್ಷರ ಪತ್ರಿಕಾಗೋಷ್ಠಿಯಲ್ಲಿ, ವರದಿಗಾರನೊಬ್ಬ, ''ಸರ್, ಚಂದ್ರಲೋಕಕ್ಕೆ ಹೋಗಲು ಎಷ್ಟು ಲೀಟರ್ ಡೀಸೆಲ್ ಅಥವಾ ಪೆಟ್ರೋಲ್ ಬೇಕಾಗುತ್ತದೆ ಮತ್ತು ಅದು ಬೆಂಗಳೂರಿನಿಂದ ಎಷ್ಟು ಹೊತ್ತಿನ ಪ್ರಯಾಣ?'' ಎಂದು ಕೇಳಿದಂತಾಗುತ್ತದೆ. ಹೀಗಾಗಿ ಇಂಥವರ ಕಾರ್ಯಕ್ರಮ ವರದಿ ಮಾಡಲು ಅನೇಕರು ಒಲ್ಲದ ಮನಸ್ಸಿನಿಂದ ಹೋಗುತ್ತಾರೆ. ಅದೇ ಸಿದ್ದರಾಮಯ್ಯ ಅಥವಾ ಯಡಿಯೂರಪ್ಪನವರ ಪತ್ರಿಕಾಗೋಷ್ಠಿಗೆ ಯಾರನ್ನು ಕಳಿಸಿದರೂ ನಡೆಯುತ್ತದೆ. ಇನ್ನು ರಾಜ್ಯ ನಾಯಕರು, ಮಂತ್ರಿಗಳು ಜಿಲ್ಲೆಗಳಿಗೆ ಹೋಗುತ್ತಾರಲ್ಲ, ಆಗ ಅಲ್ಲಿನ ವರದಿಗಾರರು ಇವರನ್ನು ಮುತ್ತಿಕೊಳ್ಳುತ್ತಾರೆ. ಹುಬ್ಬಳ್ಳಿ, ರಾಯಚೂರು, ಕಲಬುರ್ಗಿಗೆ ಈ ನಾಯಕರು ರೈಲಿನಲ್ಲಿ ಹೋಗುತ್ತಾರಲ್ಲ, ಬೆಳಗ್ಗೆ ಐದು ಗಂಟೆಗೆ ಅಲ್ಲಿ ಇಳಿಯುವ ಹೊತ್ತಿಗೆ ಹತ್ತಾರು ಪತ್ರಕರ್ತರು ರೈಲು ನಿಲ್ದಾಣದಲ್ಲೇ ಇರುತ್ತಾರೆ. ಅದರಲ್ಲೂ ಟಿವಿ ಕೆಮರಾಮನ್ ಮತ್ತು ವರದಿಗಾರರು ತಪ್ಪದೇ ಹಾಜರ್. ಇನ್ನು ಅವರು ತಂಗಿದ ಅತಿಥಿಗೃಹ ಅಥವಾ ಹೋಟೆಲಿನಲ್ಲಿ ಬೆಳಗ್ಗೆ ಹತ್ತು ಗಂಟೆಯ ಹೊತ್ತಿಗೆ 30-40 ಪತ್ರಕರ್ತರು ಸೇರಿರುತ್ತಾರೆ. ಕೆಲವರು ತಮಗೆ ಮಾತ್ರ ಸಂದರ್ಶನ ನೀಡುವಂತೆ ಕೋರುತ್ತಾರೆ. ಅದೇ ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ ಮಾಡಲು ನೊಬೆಲ್ ವಿಜ್ಞಾನಿಯೊಬ್ಬ ಆಗಮಿಸಿದರೆ, ಯಾರೂ ಅತ್ತ ಸುಳಿಯುವುದಿಲ್ಲ. ಇನ್ನು ಸಂದರ್ಶನದ ಕೋರಿಕೆಯಂತೂ ದೂರವೇ ಉಳಿಯಿತು. ಪತ್ರಿಕೆಗಳಲ್ಲಿ ಉಳಿದ ವಿಷಯಗಳಿಗಿಂತ ರಾಜಕೀಯ ಸುದ್ದಿಯೇ ವಿಜೃಂಭಿಸಲು ಕಾರಣವೇನು ಎಂಬುದು ಗೊತ್ತಾಯಿತಲ್ಲ?

ಇವರು ನಟೋರಿಯಸ್ ನಗರ ನಕ್ಸಲರು

ಕಾಡಿನಲ್ಲಿ ಬಂದೂಕು ಹಿಡಿದ ನಕ್ಸಲರಿಗಿಂತಲೂ, ನಗರ ಪ್ರದೇಶದಲ್ಲಿದ್ದುಕೊಂಡು ಸಮಾಜವಿರೋಧಿ ಚಟುವಟಿಕೆಯಲ್ಲಿ ತೊಡಗುವವರ ಪರವಾಗಿ ನಿಲ್ಲುವ ನಗರ ನಕ್ಸಲರು ಅತ್ಯಂತ ಅಪಾಯಕಾರಿ. ಇವರು ಸುಳ್ಳು ನಿರೂಪಣೆಗಳ ಮೂಲಕ ದೇಶವಿರೋಧಿ ಕೃತ್ಯಕ್ಕೆ ಕೈಹಾಕುತ್ತಾರೆ, ಜಾರ್ಜ್ ಸೊರೋಸ್‌ನಂಥವರು ಸಮಾಜದಲ್ಲಿ ಭಾರತ-ವಿರೋಧಿ ನಿರೂಪಣೆಗಳನ್ನು ಬಿತ್ತುವುದಕ್ಕೆ ಸಹಾಯ ಮಾಡುತ್ತಾರೆ.

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಖಿಲಾಫತ್ ಚಳವಳಿಯ ಬೆಂಬಲಿಗರಾಗಿದ್ದ ಮುಸಲ್ಮಾನರನ್ನು ಒಳಗೊಂಡಂಥ ಭಾರತೀಯ ಕಮ್ಯುನಿಸ್ಟ್ ಪಕ್ಷವು ರಷ್ಯಾದಲ್ಲಿ ಹುಟ್ಟುವ ಮೂಲಕ ಕಮ್ಯುನಿಸ್ಟ್ ಸಿದ್ಧಾಂತವು ಭಾರತಕ್ಕೆ 1920ರ ದಶಕದಲ್ಲಿ ಕಾಲಿಟ್ಟಿತು. ಆದರೆ ಭಾರತೀಯರಿಗೆ ಅಂದು ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಹೋರಾಟ ಮಾತ್ರ ಕಣ್ಣ ಮುಂದಿತ್ತು. ಬ್ರಿಟಿಷರನ್ನು ಭಾರತದಿಂದ ತೊಲಗಿಸಲು ಬೇಕಾಗಿದ್ದುದು ರಾಷ್ಟ್ರೀಯತೆಯ ಮಹಾಪ್ರವಾಹವೇ ಹೊರತು, ರಷ್ಯಾದ ಕಮ್ಯುನಿಸಂ ಎಂಬ ತೊರೆಯಲ್ಲ.

ನಂತರ ಬ್ರಿಟಿಷರು 1939ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದರು. ನಿಷೇಧದ ನಂತರ ಹಂಚಿಹೋಗಿದ್ದ ಎಡಚರ ನಾಯಕರು ಅಧಿಕೃತವಾಗಿ ಕಾಂಗ್ರೆಸ್ ಪಕ್ಷವನ್ನು ಸೇರಿಕೊಂಡರು ಮತ್ತು ಸೇರಿದ ಕೆಲವೇ ತಿಂಗಳಲ್ಲಿ ಅದರಲ್ಲಿ ಒಡಕು ತಂದರು. ಅವರನ್ನು ಹೊರದಬ್ಬುವಷ್ಟರಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿಯು ಸಂಪೂರ್ಣವಾಗಿ ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶದಲ್ಲಿ ಎಡಚರರ ಕೈಸೇರಿತ್ತು. ನಂತರ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ರಷ್ಯನ್ನರಿಗೆ ಬ್ರಿಟಿಷರ ವಿರುದ್ಧ ಸೆಣಸಬೇಕಿತ್ತು. ಭಾರತದಲ್ಲಿದ್ದಂಥ ಎಡಚರರನ್ನು ಬಳಸಿಕೊಂಡು ಬ್ರಿಟಿಷರ ವಿರುದ್ಧ ಹೋರಾಟ ಮಾಡಬೇಕೆಂಬ ಆಜ್ಞೆಯು ರಷ್ಯಾದಿಂದ ಎಡಚರರಿಗೆ ಬಂದಿತ್ತು. ಭಾರತದಿಂದ ಬ್ರಿಟಿಷರು ತೊಲಗಿದ ಮೇಲೆ ರಷ್ಯಾ ತನ್ನ ಎಡಚರ ನೀತಿಯನ್ನು ಭಾರತದಲ್ಲಿ ವಿಸ್ತಾರಗೊಳಿಸಲು ಸಜ್ಜಾಗಿತ್ತು.

ಭಾರತದಲ್ಲಿದ್ದಂಥ ಎಡಚರರು ಕಮ್ಯುನಿಸ್ಟ್ ನೀತಿಯನ್ನು ರಷ್ಯಾ ಮೂಲಕ ಹೇರಲು ಬ್ರಿಟಿಷರ ವಿರುದ್ಧ ನಿಂತರೇ ಹೊರತು ಸ್ವಾತಂತ್ರ್ಯ ಹೋರಾಟಕ್ಕಾಗಿ ಅಲ್ಲವೇ ಅಲ್ಲ. ಈ ಸಂಗತಿಯನ್ನು ತಿರುಚಿದ ನಗರ ನಕ್ಸಲರು, ಕಮ್ಯುನಿಸ್ಟ್ ಪಕ್ಷವು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿತ್ತೆಂಬ ಸುಳ್ಳನ್ನು ಜನರ ತಲೆಗೆ ತುಂಬಿದರು. ಅಷ್ಟರಲ್ಲಿ ಸುಭಾಷ್‌ಚಂದ್ರ ಬೋಸರ ಗೆಲುವಿನ ಕಹಳೆ ದೇಶದಾದ್ಯಂತ ಅಲೆಯಾಗಿ ಅಪ್ಪಳಿಸಿತ್ತು. ಸುಭಾಷರ ಗೆಲುವನ್ನು ಕಂಡು ಬ್ರಿಟಿಷರು ಬೆದರಿದ್ದರು. ನಂತರ 'ಕ್ವಿಟ್ ಇಂಡಿಯಾ' ಘೋಷಣೆಯಾಯಿತು. ಅಷ್ಟರೊಳಗೆ, ರಷ್ಯಾ ದೇಶದಿಂದ ಎಡಚರರಿಗೆ ಬಂದಿದ್ದ ಆಜ್ಞೆ ಬದಲಾಗಿತ್ತು. ಆಗ ಎಡಚರರು ಬ್ರಿಟಿಷರ ಪರವಾಗಿ ನಿಂತರು. ಈ ವಿಷಯವನ್ನು ಎಡಚರ ಬೆಂಬಲಿತ ನಗರ ನಕ್ಸಲರು ಹೇಳುವುದಿಲ್ಲ, ಬದಲಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಮೇಲೆ ಆರೋಪ ಹೊರಿಸಿ ಸುಳ್ಳುಸುದ್ದಿ ಹಬ್ಬಿಸುತ್ತಾರೆ. ಎಡಚರರು 'ಕ್ವಿಟ್ ಇಂಡಿಯಾ' ಚಳವಳಿಯನ್ನು ವಿರೋಧಿಸಿದ್ದರು. ಎಡಚರರ ಯೋಗ್ಯತೆಯನ್ನು ಅಷ್ಟು ಹೊತ್ತಿಗಾಗಲೇ ಭಾರತೀಯರು ಅಳೆದಾಗಿತ್ತು. ಅವರನ್ನು ದೇಶವಿರೋಧಿಗಳೆಂದು ಜನರು ಅಷ್ಟರಲ್ಲಿ ತೀರ್ಮಾನಿಸಿ ಆಗಿತ್ತು.

ಲೆನಿನ್‌ನ ಕಾರ್ಮಿಕವಾದವು ರಾಷ್ಟ್ರೀಯತೆಗಿಂತಲೂ ಮಹತ್ವದ್ದು ಎಂಬ ತತ್ವವನ್ನು ಎಡಚರರು ನಂಬಿದ್ದರು. ಇದೇ ತತ್ವದ ಬೆನ್ನತ್ತಿದ್ದ ಎಡಚರರು ಪಾಕಿಸ್ತಾನದ ರಚನೆಗೂ ಕುಮ್ಮಕ್ಕು ನೀಡಿದರು. ತಮ್ಮ ಆಲೋಚನೆಗಳಿಗಾಗಿ ಭಾರತವನ್ನು ಚೂರಾಗಿಸುವುದೇ ಸರಿಯಾದ ಮಾರ್ಗವೆಂದರು. ಜೆಎನ್‌ಯುನಲ್ಲಿ ನಡೆದ ಘಟನೆಗಳನ್ನು ನೆನಪಿಸಿಕೊಳ್ಳಿ. ಕಾಶ್ಮೀರ ಪ್ರತ್ಯೇಕತೆಯ ಬಗ್ಗೆ ಉಮರ್ ಖಾಲೀದ್ ಮಾತನಾಡಿ, ಭಾರತವನ್ನು ಟುಕ್ಡೆ ಟುಕ್ಡೆ ಮಾಡಬೇಕೆಂದು ಘೋಷಣೆ ಕೂಗಿದಾಕ್ಷಣ ಎಡಚರನಾಗಿದ್ದ ಕನ್ನಯ್ಯ ಕುಮಾರ್ ಆತನ ಬೆಂಬಲಕ್ಕೆ ನಿಂತ. ಅಂದು ಇವರ ಪರವಾಗಿ ನಿಂತವರು ನಗರ ನಕ್ಸಲರು. ಈಶಾನ್ಯ ಭಾರತಕ್ಕೆ ಸಂಪರ್ಕ ಕಲ್ಪಿಸುವ 'ಚಿಕನ್ ನೆಕ್' ಭಾಗವನ್ನು ಬಂದ್ ಮಾಡುವುದಾಗಿ ಶಾರ್ಜೀಲ್ ಇಮಾಮ್ ಹೇಳಿದ. ಹಾಗೆ ಹೇಳುವಾಗ ಅವನ ಪಕ್ಕದಲ್ಲಿ ನಿಂತಿದ್ದವರೆಲ್ಲರೂ ಎಡಚರ ಬೆಂಬಲಿಗರು. ನಂತರ ಅವನನ್ನು ಸಮರ್ಥಿಸಿಕೊಳ್ಳಲು ಮಾಧ್ಯಮಗಳ ಮುಂದೆ ಬಂದು ಮಾತನಾಡುವವರು, ಆತನ ಪರವಾಗಿ ನ್ಯಾಯಾಲಯದಲ್ಲಿ ವಕಾಲತ್ ಹಾಕುವವರು ಎಡಚರ ಬೆಂಬಲಿಗರು. ಮೊದಲೆಲ್ಲ ರಷ್ಯಾದಿಂದ ಹೊರಡುತ್ತಿದ್ದ ಆಜ್ಞೆಗಳು, ಈಗ ಚೀನಾದಿಂದ ಹೊರಡುತ್ತಿವೆ. ನಗರ ನಕ್ಸಲರ ಮನಸ್ಥಿತಿ ಹೇಗಿತ್ತೆಂದರೆ, ಕಾಶ್ಮೀರದಲ್ಲಿ ನಡೆದ ಪಂಡಿತರ ಹತ್ಯಾಕಾಂಡವನ್ನು ಖಂಡಿಸುವ ಬದಲು ಅಲ್ಲಿನ ಪ್ರತ್ಯೇಕತಾವಾದಿಗಳ ಪರವಾಗಿ ನಿಂತು, ಅವರನ್ನು ಹೋರಾಟಗಾರರೆಂದು ಕರೆದರು. 'ಕಾಶ್ಮೀರವು ಎಂದೂ ಭಾರತಕ್ಕೆ ಸೇರಿದ್ದಲ್ಲ' ಎಂದು ಎಡಚರ ಪತ್ರಕರ್ತೆ ಅರುಂಧತಿ ರಾಯ್ ಹೇಳುತ್ತಾರೆ. ಈಕೆ, ಯಾಸಿನ್ ಮಲಿಕ್ ನಡೆಸುತ್ತಿದ್ದಂಥ ಹತ್ಯಾಕಾಂಡವನ್ನು ಬೆಂಬಲಿಸಿದ್ದ ಮಹಿಳೆ. ಕಾಶ್ಮೀರದಲ್ಲಿ ಸೈನಿಕರ ಗಾಡಿಗಳ ಮೇಲೆ ಕಲ್ಲು ತೂರುವವರನ್ನು ಸಮರ್ಥಿಸಿಕೊಂಡು ಮಾನವ ಹಕ್ಕುಗಳನ್ನು ಮುನ್ನೆಲೆಗೆ ತಂದು, ಕಲ್ಲು ತೂರುವವರ ಪರವಾಗಿ ನಿಲ್ಲುತ್ತಾರೆ ನಗರ ನಕ್ಸಲರು. ಇವರು ದೇಶ ಕಾಯುವ ಸೈನಿಕರನ್ನು ಅತ್ಯಾಚಾರಿಗಳೆಂದು ಕರೆದರು. ದಾಂತೇವಾಡದಲ್ಲಿ ನಡೆದ ನಕ್ಸಲರ ದಾಳಿಯಲ್ಲಿ ಸೈನಿಕರು ಹುತಾತ್ಮರಾದರೆ ಎಡಚರ ಪತ್ರಕರ್ತೆ ಬರ್ಖಾ ದತ್ ನಕ್ಸಲರ ಪರವಾಗಿ ಮಾತನಾಡುತ್ತಾರೆ.

ರಾಷ್ಟ್ರೀಯತೆ, ಅಭಿವೃದ್ಧಿ, ಸೈನ್ಯದ ವಿಷಯಗಳಲ್ಲಿ ಎಡಚರರು ಇಂದಿಗೂ ಭಾರತ-ವಿರೋಧಿಗಳಾಗಿಯೇ ಗುರುತಿಸಿಕೊಂಡಿದ್ದಾರೆ. ಕಾಡಿನಲ್ಲಿ ಬಂದೂಕು ಹಿಡಿದ ನಕ್ಸಲರಿಗಿಂತಲೂ, ನಗರ ಪ್ರದೇಶದಲ್ಲಿದ್ದುಕೊಂಡು ಸಮಾಜವಿರೋಧಿ ಚಟುವಟಿಕೆಯಲ್ಲಿ ತೊಡಗುವವರ ಪರವಾಗಿ ನಿಲ್ಲುವ ನಗರ ನಕ್ಸಲರು ಅತ್ಯಂತ ಅಪಾಯಕಾರಿ. ಇವರು ಸುಳ್ಳು ನಿರೂಪಣೆಗಳ ಮೂಲಕ ದೇಶವಿರೋಧಿ ಕೃತ್ಯಕ್ಕೆ ಕೈಹಾಕುತ್ತಾರೆ, ಜಾರ್ಜ್ ಸೊರೋಸ್‌ನಂಥವರು ಸಮಾಜದಲ್ಲಿ ಭಾರತ-ವಿರೋಧಿ ನಿರೂಪಣೆಗಳನ್ನು ಬಿತ್ತುವುದಕ್ಕೆ ಸಹಾಯ ಮಾಡುತ್ತಾರೆ. ಇವರು ಸಾಲುಸಾಲು ಸುಳ್ಳುಗಳ ಮೂಲಕ ಜನರನ್ನು ದಾರಿತಪ್ಪಿಸುವ ಕೆಲಸವನ್ನು ಮಾಡುತ್ತಲೇ ಬಂದಿದ್ದಾರೆ. ಇವರು ಬಾಬಾಸಾಹೇಬರ ಆಶಯಗಳ ವಿರುದ್ಧ ನಡೆದುಕೊಂಡು ಬಾಬಾಸಾಹೇಬರ ಹೆಸರನ್ನೇ ಮುನ್ನೆಲೆಗೆ ತರುತ್ತಾರೆ, ತಮ್ಮ ಭಾಷಣಗಳಲ್ಲಿ ವಿಶೇಷ ಪದಪುಂಜಗಳನ್ನು ಬಳಸುತ್ತಾರೆ, ಸಾಮರಸ್ಯದ ವಿರುದ್ಧ ಬ್ರಾಹ್ಮಣ್ಯದ ಪದಬಳಕೆ ಮಾಡುತ್ತಾರೆ, ರಾಷ್ಟ್ರೀಯತೆಯ ವಿರುದ್ಧ ಕೋಮುವಾದವೆಂಬ ಪದಬಳಕೆ ಮಾಡುತ್ತಾರೆ, ಭಯೋತ್ಪಾದಕರ ಪರವಾಗಿ ನಿಂತು ಮಾನವ ಹಕ್ಕುಗಳ ಪದಪ್ರಯೋಗ ಮಾಡುತ್ತಾರೆ.

ರಷ್ಯಾದ ಕಮ್ಯುನಿಸ್ಟ್ ಸೌಧ ಕುಸಿದುಬಿದ್ದ ನಂತರ ಚೀನಾ ದೇಶದ ಕಡೆಗೆ ಮುಖಮಾಡಿದ ಎಡಚರರು, ಭಾರತ ಮತ್ತು ಚೀನಾ ನಡುವಿನ ಯುದ್ಧದಲ್ಲಿ ಮಡಿದ ಚೀನಿ ಸೈನಿಕರ ಬೆಂಬಲಕ್ಕೆ ನಿಂತು, ಭಾರತ ಸೋತರೆ ಕಾರ್ಮಿಕರ ರಾಷ್ಟ್ರ ಮಾಡಬಹುದೆಂಬ ದೇಶವಿರೋಧಿ ಸಮರ್ಥನೆ ಕೊಟ್ಟಿದ್ದರು. ಎಡಚರರ ಸಲಹೆಯ ಮೇರೆಗೆ ನೆಹರು 'ಇಂಡಿಯಾ-ಚೀನಾ ಭಾಯಿ ಭಾಯಿ' ಎಂದು ಹೇಳಿ ಸೈನ್ಯದ ನಿಶ್ಶಕ್ತೀಕರಣ ಮಾಡಿದ್ದರು. ಪರಿಣಾಮ, ಭಾರತದ ಬಹುದೊಡ್ಡ ಭೂಭಾಗ ಚೀನಿಯರ ಪಾಲಾಯಿತು. 1962ರ ಚೀನಾ ಯುದ್ಧದ ಸಂದರ್ಭದಲ್ಲಿ, ಯುದ್ಧ ಸಾಮಗ್ರಿಗಳಿದ್ದ ವಿಮಾನವನ್ನು ಅಮೆರಿಕದ ಅಧ್ಯಕ್ಷರು ಭಾರತದ ಕೋಲ್ಕತ್ತಾಕ್ಕೆ ಕಳುಹಿಸಿದ್ದರು. ಆದರೆ ಕೋಲ್ಕತ್ತಾ ವಿಮಾನ ನಿಲ್ದಾಣದಲ್ಲಿ ತಮ್ಮ ಪ್ರಾಬಲ್ಯ ಹೊಂದಿದ್ದ ಎಡಚರರು ಕೂಲಿಯಾಳುಗಳ ಮುಷ್ಕರಕ್ಕೆ ಕರೆನೀಡಿ, ವಿಮಾನದಲ್ಲಿದ್ದಂಥ ಯುದ್ಧಸಾಮಗ್ರಿಗಳು ಹೊರಬರದಂತೆ ಸುಮಾರು ಒಂದು ವಾರಗಳ ಕಾಲ ನೋಡಿಕೊಂಡರು. ಅತ್ತ ಗಡಿಯಲ್ಲಿ ಸೈನಿಕರು ಯುದ್ಧಸಾಮಗ್ರಿಗಳಿಲ್ಲದೆ ಹುತಾತ್ಮರಾಗಬೇಕಾಯಿತು.

ತಮ್ಮ ವ್ಯವಸ್ಥೆಯನ್ನು ಬಳಸಿಕೊಂಡು ಚೀನಿಯರ ಪರವಾಗಿ ನಿಂತು, 'ಭಾರತ-ವಿರೋಧಿ' ಕೆಲಸ ನಡೆಸುವ ಎಡಚರರ ಚಾಳಿ ಹೊಸತೇನಲ್ಲ. ಹಾಗಂತ ಚೀನಾ ಕಮ್ಯುನಿಸ್ಟ್ ರಾಷ್ಟ್ರವಾಗಿ ಉಳಿದಿಲ್ಲ. ಚೀನಾ ದೇಶದಲ್ಲಿ ಸಾವಿರಾರು ಮಂದಿ ಬಿಲಿಯನೇರ್‌ಗಳಿದ್ದಾರೆ. ಅಲ್ಲಿನ ಆಡಳಿತ ಪಕ್ಷ ಮಾತ್ರ 'ಕಮ್ಯುನಿಸ್ಟ್' ಹೆಸರಿನಲ್ಲಿರುವುದು ಬಿಟ್ಟರೆ, ಇಡೀ ದೇಶದ ಸಂಪತ್ತು ಬಂಡವಾಳಶಾಹಿಗಳ ಬಳಿಯಲ್ಲಿದೆ. ಒಂದಲ್ಲ, ಎರಡಲ್ಲ ಹಲವು ಬಾರಿ ಭಾರತವನ್ನು

ಶಾರ್ಜೀಲ್ ಇಮಾಮ್

ಚೂರುಚೂರು ಮಾಡುವ, ಭಾರತದ ಸಾರ್ವಭೌಮತ್ವವನ್ನು ನಾಶಮಾಡುವ ಕೆಲಸವನ್ನು ವಿದೇಶಿ ಶಕ್ತಿಗಳ ಆಜ್ಞೆಯಿಂದ ನಗರ ನಕ್ಸಲರು ಮಾಡುತ್ತಲೇ ಬಂದಿದ್ದಾರೆ. ಭಾರತದ ಮೇಲಿನ ಬ್ರಿಟಿಷರ ಆಕ್ರಮಣವನ್ನು ಸಮರ್ಥಿಸಲು ಬಳಸಿದ್ದ 'ಆರ್ಯ' ಮತ್ತು 'ದ್ರಾವಿಡ' ಎಂಬ ಸುಳ್ಳುವಾದವನ್ನು ಹೆಚ್ಚಾಗಿ ಮಾಡುವವರು ಎಡಚರರು. ಭಾರತವನ್ನು ಉತ್ತರ ಭಾರತ ಮತ್ತು ದಕ್ಷಿಣ ಭಾರತವಾಗಿ ಒಡೆಯುವ ಬ್ರಿಟಿಷರ ಈ ಸಿದ್ಧಾಂತವನ್ನು ಎಡಚರರು ಇಂದಿಗೂ ಹೇಳುತ್ತಲೇ ಇರುತ್ತಾರೆ. 'ಭಾರತಕ್ಕೆ ಬಂದಂಥ ಮೊದಲ ಆರ್ಯ ದೊರೆಯ ಹೆಸರೇನು?' ಎಂದು ಎಡಚರ ಪ್ರಾಧ್ಯಾಪಕರನ್ನು ಕೇಳಿದರೆ ಅವರ ಬಳಿ ಉತ್ತರವಿಲ್ಲ. 'ಆರ್ಯರ ವಾಸ್ತುಶಿಲ್ಪ ಯಾವುದು? ಅವರು ಯಾವ ಸಂಸ್ಥೆಗಳನ್ನು ಕಟ್ಟಿದ್ದರು? ಆರ್ಯರ ಕೊನೆಯ ರಾಜನ ಹೆಸರೇನು? ಆರ್ಯರು ಮಾಡಿದ ಯುದ್ಧಗಳು ಯಾವುವು? ಕ್ರಿಸ್ತಪೂರ್ವ ಯಾವ ಇಸವಿಯಲ್ಲಿ ಆರ್ಯರು ಭಾರತಕ್ಕೆ ಬಂದರು ಅಥವಾ ನಾಶವಾದರು?' ಎಂದು ಪ್ರಶ್ನಿಸಿದರೆ ಇವರ ಬಳಿ ಉತ್ತರವಿಲ್ಲ. ಯಾವುದಕ್ಕೂ ಉತ್ತರಿಸದೆ ಆರ್ಯ ಮತ್ತು ದ್ರಾವಿಡ ಎಂಬ ಸುಳ್ಳನ್ನು ಹೇಳುವ ಮೂಲಕ ಭಾರತವನ್ನು ವಿಭಜಿಸುವ ಕೆಲಸವನ್ನು ಇವರು ಮಾಡುತ್ತಲೇ ಬಂದಿದ್ದಾರೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು, 2026ರ ಹೊತ್ತಿಗೆ ದೇಶದಲ್ಲಿನ ನಕ್ಸಲ್ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದಾಗಿ ಘೋಷಿಸಿದ್ದು, ಶರಣಾಗುವ ನಕ್ಸಲರಿಗೆ ವಿಶೇಷ ಪ್ಯಾಕೇಜ್ ಘೋಷಿಸಿದೆ. ಅತಿಹೆಚ್ಚು ನಕ್ಸಲ್‌ಪೀಡಿತ ರಾಜ್ಯವಾಗಿರುವ ಛತ್ತೀಸ್‌ಗಢದ ಬಸ್ತರ್ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ನಕ್ಸಲ್ ಚಟುವಟಿಕೆಗಳು ಹತೋಟಿಗೆ ಬಂದಿದ್ದರೂ, ಸಂಪೂರ್ಣ ನಿರ್ಮೂಲನೆಯಾಗಿಲ್ಲ. ಬಸ್ತರ್ ಜಿಲ್ಲೆಯಲ್ಲಿ 80 ಕಿ.ಮೀ. ರಸ್ತೆ ನಿರ್ಮಿಸಲು 30 ವರ್ಷಗಳ ಸಮಯ ಹಿಡಿಯಿತು. ನಕ್ಸಲರು ಆ ಮಟ್ಟದ ಭಯದ ವಾತಾವರಣವನ್ನು ನಿರ್ಮಿಸಿದ್ದರು. ನಕ್ಸಲ್ ನಿಗ್ರಹಪಡೆಗಳಿಗೆ ಸಿಗದ ನಕ್ಸಲರು, 'ನಗರ ನಕ್ಸಲರ' ಕೈಗೆ ಸುಲಭವಾಗಿ ಸಿಗುತ್ತಿದ್ದರು. ನಗರ ನಕ್ಸಲರ ಬೆಂಬಲವಿಲ್ಲದೆ, ಕಾಡಿನಲ್ಲಿದ್ದುಕೊಂಡು ಸರಕಾರದ ವಿರುದ್ಧ ನಿಲ್ಲಲು ಸಾಧ್ಯವಿಲ್ಲ. ಕರ್ನಾಟಕದಲ್ಲಿ ಮುಖ್ಯಮಂತ್ರಿಗಳ ಮುಂದೆ ಶರಣಾದ ನಕ್ಸಲರ ಹಿಂದಿನ ಕಾಣದ ಕೈಗಳು ಯಾರೆಂಬ ವಿಷಯದ ತನಿಖೆಯಾಗಬೇಕಿದೆ. ನಗರ ನಕ್ಸಲರ ಬೆಂಬಲವಿಲ್ಲದೆ ಕಾಡುಗಳಲ್ಲಿ ಚಟುವಟಿಕೆಗಳನ್ನು ನಡೆಸಲು ಸಾಧ್ಯವಿಲ್ಲ. ಮುಖ್ಯಮಂತ್ರಿಗಳ ಮುಂದೆ ಶರಣಾದ ನಕ್ಸಲರ ಬಳಿ ಇದ್ದಂಥ ಅಪಾಯಕಾರಿ ಆಯುಧಗಳು ಏನಾದವು? ವಿಕ್ರಂ ಗೌಡ ಎನ್‌ಕೌಂಟರ್ ನಡೆದ ಎರಡೇ ತಿಂಗಳಲ್ಲಿ ಉಳಿದ ನಕ್ಸಲರು ಅಷ್ಟು ಸುಲಭವಾಗಿ ಹೇಗೆ ಶರಣಾದರು? ಅವರ ಹಿಂದಿರುವ ನಗರ ನಕ್ಸಲರು ಯಾರು? ಈ ಪ್ರಶ್ನೆಗಳಿಗೆ ಸರಕಾರ ಉತ್ತರಿಸಲೇಬೇಕಿದೆ. ಕಾಡಿನಲ್ಲಿ ಬಂದೂಕು ಹಿಡಿಯುವ ನಕ್ಸಲರಿಗಿಂತಲೂ, ಸಮಾಜದಲ್ಲಿ ಅಶಾಂತಿ ಸೃಷ್ಟಿಸಿ ದೇಶವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗುವವರ ಪರ ನಿಲ್ಲುವ ನಗರ ನಕ್ಸಲರು ಅತ್ಯಂತ ಅಪಾಯಕಾರಿ ಎಂಬುದನ್ನು ಇತಿಹಾಸದ ಘಟನೆಗಳು ಹೇಳಿವೆ.

ಕಮ್ಯುನಿಸ್ಟ್ ಪಕ್ಷವು 30 ವರ್ಷಗಳ ಕಾಲ ಅಧಿಕಾರದಲ್ಲಿದ್ದಂಥ ಪಶ್ಚಿಮ ಬಂಗಾಳ ಅಭಿವೃದ್ಧಿಯನ್ನೇ ಕಾಣಲಿಲ್ಲ, ರಷ್ಯಾ ದೇಶವಂತೂ ಆರ್ಥಿಕತೆಯ ವಿಷಯದಲ್ಲಿ ಜಗತ್ತಿನ 'ಟಾಪ್-5' ದೇಶಗಳಲ್ಲಿಯೂ ಇಲ್ಲ. ವೆನಿಜುವೆಲಾ ದೇಶವಂತೂ ದಿವಾಳಿಯಾಗಿಹೋಯಿತು. ಕಮ್ಯುನಿಸ್ಟ್ ಸಿದ್ಧಾಂತವನ್ನು ನಂಬಿ ಅಭಿವೃದ್ಧಿ ಹೊಂದಿದ ಜಗತ್ತಿನ ಒಂದೇ ಒಂದು ದೇಶವಿಲ್ಲ. ಚೀನಾದ ಕಮ್ಯುನಿಸಂ ಕೇವಲ ರಾಜಕೀಯಕ್ಕಷ್ಟೇ ಸೀಮಿತ. ದೆಹಲಿಯ ಸಂಸತ್ತಿನ ಒಳನುಗ್ಗಿದ್ದ ಮೈಸೂರಿನ ಮನೋರಂಜನ್ ಎಂಬ ಯುವಕನ ಮನೆಯಲ್ಲಿ ಸಿಕ್ಕ ಹಲವು ಪುಸ್ತಕಗಳು ಎಡಚರ ತತ್ವಗಳದ್ದೇ ಆಗಿವೆ. ಚೇ ಗುವೇರಾ ಬರೆದ 'ಗೊರಿಲ್ಲಾ ವಾರ್‌ಫೇರ್', ಚೀನಾ ದೇಶದ ಹಳೆಯ ಮಿಲಿಟರಿ ಆಧರಿತ ಪುಸ್ತಕ 'ಆರ್ಟ್-ವಾರ್', ಎಡಚರರು ವಿರೋಧಿಸುವ 'ಅಂಬಾನಿ ಆ್ಯಂಡ್ ಸನ್ಸ್' ಪುಸ್ತಕ, ಭೂಗತ ಪಾತಕಿ ಮತ್ತು ಉಗ್ರ ದಾವೂದ್ ಇಬ್ರಾಹಿಂ ಕುರಿತಾದ ಪುಸ್ತಕಗಳು ಅವು.

ನಗರ ನಕ್ಸಲರ ದೇಶವಿರೋಧಿ ಧೋರಣೆಗಳು, ಶತ್ರುರಾಷ್ಟ್ರಗಳ ಜತೆ ಕೈಜೋಡಿಸಿ ಭಾರತದಲ್ಲಿ ಷಡ್ಯಂತ್ರ ನಡೆಸಿ ಭಯದ ವಾತಾವರಣ ಸೃಷ್ಟಿಸುವ ತಂತ್ರಗಾರಿಕೆಗಳು ಹೊಸದೇನಲ್ಲ. ಇಡೀ ಜಗತ್ತೇ ಹೊಸಕಿಹಾಕಿರುವ ಕಮ್ಯುನಿಸ್ಟ್ ಸಿದ್ಧಾಂತವನ್ನು ಮುನ್ನೆಲೆಗೆ ತರುವ ವ್ಯರ್ಥ ಪ್ರಯತ್ನಗಳು ಅವರಿಂದ ಆಗಾಗ ನಡೆಯುತ್ತಲೇ ಇರುತ್ತವೆ. ಕಾಂಗ್ರೆಸ್ ಪಕ್ಷವು ಅಧಿಕಾರಕ್ಕಾಗಿ, ನೆಹರು ಕಾಲದಿಂದಲೂ ಅವರಿಗೆ ಶ್ರೀರಕ್ಷೆಯಾಗಿ ನಿಂತಿರುವ ಕಾರಣ, ಕಾಡಿನ ನಕ್ಸಲರನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿದ ನಂತರವೂ ನಗರ ನಕ್ಸಲರು ಸಮಾಜದಲ್ಲಿ ಅರಾಜಕತೆ ಸೃಷ್ಟಿಸುವ ಕೆಲಸವನ್ನು ಮಾಡುತ್ತಲೇ ಇದ್ದಾರೆ.

ವಿಶ್ವಕ್ಕೆ ವಿವೇಕದ ಆನಂದ ನೀಡಿದ ಧೀಮಂತ

ತನ್ನಿಮಿತ್ತ

ಸುರೇಂದ್ರ ಪೈ, ಭಟ್ಕಳ
vveditoped@gmail.com

ನಮ್ಮ ದೇಶದ ಬಗ್ಗೆ ನಮಗೆಲ್ಲರಿಗೂ ಒಂದು ಕನಸು, ಚಿತ್ರಣ ಇರುತ್ತವೆ. ಶತಮಾನಗಳಿಂದಲೂ ಪರಕೀಯರ ಆಕ್ರಮಣಕ್ಕೆ ಒಳಗಾಗಿ ಕಂಗೆಟ್ಟ ನಮ್ಮ ಆತ್ಮಸ್ಥೈರ್ಯವನ್ನು ಹೆಚ್ಚಿಸಿ, ಭಾರತದ ಭವ್ಯ ಪರಂಪರೆ, ಇತಿಹಾಸ, ಗತವೈಭವವನ್ನು ಮರುಕಳಿಸುವಂತೆ ಮಾಡುವುದು ಸುಲಭದ ಕೈಂಕರ್ಯವಲ್ಲ. ಭಾರತವೆಂದರೆ ಹಾವಾಡಿಗರ ನಾಡು, ಗೊಡ್ಡು ಸನ್ಯಾಸಿಗಳ ಬೀಡು, ಅನಾಗರಿಕತೆ ಮತ್ತು ಮೂಢನಂಬಿಕೆಗಳ ಕೊಂಪೆ ಎಂದೆಲ್ಲಾ ಅಂದುಕೊಂಡಿದ್ದ ಪಾಶ್ಚಾತ್ಯರಿಗೆ ಭಾರತದ ಸನ್ಯಾಸಿಯೊಬ್ಬರು ಕಣ್ತೆರೆಸಿದರು. 'ಭಾರತವು ಅನಾಗರಿಕರ ರಾಷ್ಟ್ರವಲ್ಲ, ಬದಲಿಗೆ ನಾಗರಿಕತೆ ಎಂದರೇನು ಎಂಬುದನ್ನು ಜಗತ್ತಿಗೇ ಕಲಿಸಿದ ರಾಷ್ಟ್ರ' ಎಂದು ತಿಳಿಸಿ, ಜ್ಞಾನದೀಕ್ಷೆಯನ್ನು ನೀಡಿದ ಆ ಮಹಾನ್ ಸಂತರೇ ಸ್ವಾಮಿ ವಿವೇಕಾನಂದರು. ಇಂದು (ಜ.12) ಅವರ 163ನೇ ಜನ್ಮದಿನ.

ಭಾರತದ ಶ್ರೇಷ್ಠ ಆಧ್ಯಾತ್ಮಿಕ ನಾಯಕರಲ್ಲಿ ಒಬ್ಬರಾದ ವಿವೇಕಾನಂದರಿಗೆ ನಮ್ಮ ತತ್ವಶಾಸ್ತ್ರದ ವೈಭವವನ್ನು ಜಗದಗಲಕ್ಕೂ ಸಾರಿದ ಕೀರ್ತಿಯಿದೆ. ವಿವೇಕಾನಂದ ಎಂಬ ಹೆಸರಲ್ಲೇ 'ವಿವೇಕ' ಅಥವಾ 'ಜ್ಞಾನ'ದ ಪುಳಕವಿದೆ, ಶಕ್ತಿಯಿದೆ, ಸೆಳೆತವಿದೆ. ಇವರ ಒಂದೊಂದು ಮಾತೂ ಬದುಕಿನ ಪ್ರತಿಕ್ಷಣಕ್ಕೂ ಸ್ಫೂರ್ತಿ.

1863ರ ಜನವರಿ 12ರಂದು ಕೋಲ್ಕತ್ತಾದ ಶ್ರೀಮಂತ ಬಂಗಾಳಿ ಕುಟುಂಬದಲ್ಲಿ ಜನಿಸಿದ ವಿವೇಕಾನಂದರ ಮೂಲಹೆಸರು- ನರೇಂದ್ರನಾಥ ದತ್ತ. ತಂದೆ ವಿಶ್ವನಾಥ ದತ್ತ, ತಾಯಿ ಭುವನೇಶ್ವರಿ ದೇವಿ. ಬಾಲ್ಯದಲ್ಲಿ ನರೇಂದ್ರ ಬಹಳ ತುಂಟನಾಗಿದ್ದು ವಿನೋದ-ಉಲ್ಲಾಸಗಳಲ್ಲಿ ಕಾಲ ಕಳೆಯುತ್ತಿದ್ದ. ಜತೆಗೆ ಆಧ್ಯಾತ್ಮಿಕ ವಿಷಯಗಳ ಬಗ್ಗೆಯೂ ಅವನಿಗೆ ತೀವ್ರಾಸಕ್ತಿಯಿತ್ತು. ತಾಯಿ ಹೇಳುತ್ತಿದ್ದ ರಾಮಾಯಣ-ಮಹಾಭಾರತದ ಕಥೆಗಳು ನರೇಂದ್ರನ ಮನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವು. ದಿನಗಳೆದಂತೆ ಅಸೀಮ ಧೈರ್ಯ, ಬಡವರ ಬಗ್ಗೆ ಕನಿಕರ, ಪರಿವ್ರಾಜಕರನ್ನು ಕಂಡರೆ ಅಪಾರ ಆಕರ್ಷಣೆ ಈ ವಿಶೇಷ ಲಕ್ಷಣಗಳು ಅವನಲ್ಲಿ ಕಾಣಿಸಿಕೊಳ್ಳತೊಡಗಿದವು. ಯಾವುದೇ ಹೇಳಿಕೆಯನ್ನು ಹಾಗೇ ಒಪ್ಪದೆ, ಅದರ ಕುರಿತಾದ ಯುಕ್ತಿ-ಪ್ರಮಾಣಗಳ ಬಗ್ಗೆ ತಿಳಿಸುವಂತೆ ನರೇಂದ್ರ ಆಗ್ರಹಿಸುತ್ತಿದ್ದ. ಪ್ರೌಢಹಂತಕ್ಕೆ ಬರುವಷ್ಟರಲ್ಲಿ ಕ್ರೀಡಾಪಟುವಿನ ಮೈಕಟ್ಟು, ಅನುರಣಿಸುವ ಧ್ವನಿ ಆತನದಾಯಿತು. ಕ್ರೀಡೆ, ತತ್ವಶಾಸ್ತ್ರ, ಸಂಗೀತ ವಿದ್ಯೆಗಳಲ್ಲಿ ಪ್ರಾವೀಣ್ಯ ಪಡೆದ. ಕಾಲೇಜು ಸೇರುವ ಹೊತ್ತಿಗೆ, ಪಾಶ್ಚಾತ್ಯ ಚಿಂತನೆಯನ್ನು ಅಭ್ಯಸಿಸಿ ಅದರ ಹಿರಿಮೆಯನ್ನೂ ಅರಿಯುವ ಅವಕಾಶ ಒದಗಿತು ಮತ್ತು ಇದು ನರೇಂದ್ರನಲ್ಲಿ ವಿಮರ್ಶಾತ್ಮಕ ಸ್ವಭಾವವು ನೆಲೆಗೊಳ್ಳಲು ಕಾರಣವಾಯಿತು.

19 ವರ್ಷದವರಿದ್ದಾಗಲೇ ತಾರ್ಕಿಕ ಶಕ್ತಿ, ತೀಕ್ಷ್ಣಬುದ್ಧಿ ಮತ್ತು ಕ್ಷಾತ್ರತೇಜವನ್ನು ಧರಿಸಿದ್ದ ವಿವೇಕಾನಂದರಿಗೆ ಪ್ರತಿಯೊಂದು ಪ್ರಶ್ನೆಗೂ ತಾರ್ಕಿಕ ಉತ್ತರವನ್ನು ನಿರೀಕ್ಷಿಸುವ ಹುಮ್ಮಸ್ಸಿತ್ತು. 'ದೇವರು, ದೇವರು ಎಂದು ಹೇಳುತ್ತೀರಲ್ಲಾ, ಎಲ್ಲಿದ್ದಾನೆ ದೇವರು? ನನಗೆ ಪುರಾವೆ ಬೇಕು ತೋರಿಸಿ' ಎಂದು ರಾಮಕೃಷ್ಣ ಪರಮಹಂಸರನ್ನು ಕೇಳಿ, ತಮ್ಮ ಕುತೂಹಲಕ್ಕೆ ಉತ್ತರ ದೊರೆತ ಬಳಿಕವೇ ಅವರನ್ನು ಗುರುಗಳೆಂದು ಸ್ವೀಕರಿಸಿ, ಪರಮಶಿಷ್ಯ ಎನಿಸಿಕೊಂಡವರು ವಿವೇಕಾನಂದರು. 'ಜಡತನ' ಎಂಬ ಬಳ್ಳಿಯಿಂದ ಬಂಧಿಸಲ್ಪಟ್ಟು ಲೋಕದ ಪರಿವೆಯೇ ಇಲ್ಲದೆ ನಿದ್ರೆಗೆ ಜಾರಿದಂತಿದ್ದವರನ್ನೆಲ್ಲಾ 'ಏಳಿ ಎದ್ದೇಳಿ, ಗುರಿಮುಟ್ಟುವ ತನಕ ನಿಲ್ಲದಿರಿ' ಎಂಬ ಕರೆಯ ಮೂಲಕ ಬಡಿದೆಬ್ಬಿಸಿದ ವಿವೇಕಾನಂದರ ವ್ಯಕ್ತಿತ್ವದಲ್ಲಿ ಅದೇನೋ ಚುಂಬಕಶಕ್ತಿಯಿತ್ತು. ಹೀಗಾಗಿ ಸಾವಿರ ನದಿಗಳು ಹರಿದು ಕಡಲು ಸೇರುವಂತೆ, ಸಹಸ್ರ, ಸಹಸ್ರ ಸಂಖ್ಯೆಯ ಜನರಲ್ಲಿ 'ವಿವೇಕಾನಂದ' ಎಂಬ ಮಹಾನ್ ಕಡಲನ್ನು ಸೇರುವ ಬಯಕೆ ಪುಟಿಯಲು ಶುರುವಾಯಿತು.

ದಿನಗಳೆದಂತೆ ಅಧ್ಯಾತ್ಮದತ್ತ ಹೆಚ್ಚೆಚ್ಚು ಒಲವು ಬೆಳೆಸಿಕೊಂಡ ವಿವೇಕಾನಂದರು ಲೌಕಿಕ ಸುಖಗಳನ್ನು ತ್ಯಜಿಸಿ ಸನ್ಯಾಸಿಯಾದರು. ಭಾರತೀಯ ವೇದಾಂತ ಮತ್ತು ಯೋಗದ ತತ್ವಚಿಂತನೆಗಳನ್ನು ಜಗತ್ತಿಗೆ ಪರಿಚಯಿಸಲು ಸಂಕಲ್ಪಿಸಿದ ವಿವೇಕಾನಂದರು, 1893ರಲ್ಲಿ ಅಮೆರಿಕದ ಶಿಕಾಗೊದಲ್ಲಿ ನಡೆದ 'ವಿಶ್ವ ಧರ್ಮ ಸಮ್ಮೇಳನ'ದಲ್ಲೂ ಪಾಲ್ಗೊಂಡರು. ಅಲ್ಲಿ ಅವರು ಮಾಡಿದ ಭಾಷಣ ಇಂದಿಗೂ ಪ್ರಸಿದ್ಧ. ಅದರಲ್ಲೂ ಅವರು ಆರಂಭದಲ್ಲಿ ಉದ್ಗರಿಸಿದ, 'ಅಮೆರಿಕದ ನನ್ನ ಸೋದರ-ಸೋದರಿಯರೇ…' ಎಂಬ ಸಾಲು ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ನಾಟಕೀಯತೆ ಇಲ್ಲದ ಆ ಸರಳ ಶಬ್ದಗಳಿಗೆ ಇಡೀ ಅಮೆರಿಕವೇ ತಲೆದೂಗಿತು. ಹೀಗೆ ಲಕ್ಷಾಂತರ ಜನರ ಮನಗೆದ್ದ ವಿವೇಕಾನಂದರು, ಜಗತ್ತು ಭಾರತವನ್ನು ನೋಡುವ ದೃಷ್ಟಿಕೋನವನ್ನೇ ಶಾಶ್ವತವಾಗಿ ಬದಲಾಯಿಸಿದರು ಎಂದರೆ ಅತಿಶಯೋಕ್ತಿಯಲ್ಲ.



ಯುವಜನರಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದ ವಿವೇಕಾನಂದರ ಚಿಂತನೆ, ಸಂದೇಶಗಳು ಎಂದೆಂದಿಗೂ ಪ್ರಸ್ತುತ. ಇದೇ ಕಾರಣಕ್ಕೆ ಅವರ ಜನ್ಮದಿನವನ್ನು 'ರಾಷ್ಟ್ರೀಯ ಯುವದಿನ'ವಾಗಿಯೂ ಆಚರಿಸಲಾಗುತ್ತದೆ. ರಾಷ್ಟ್ರಪ್ರೇಮ, ಭಾರತೀಯ ಸಂಸ್ಕೃತಿಯ ಅಪಾರ ಜ್ಞಾನವನ್ನು ಹೊಂದಿದ್ದ ವಿವೇಕಾನಂದರು ದೇಶದ ಮೂಲೆಮೂಲೆಗೂ ಸಂಚರಿಸಿ ಎಲ್ಲರಲ್ಲೂ ಸ್ಫೂರ್ತಿ ತುಂಬಿದರು. ''ಕೇವಲ ಗಡ್ಡ-ಮೀಸೆ ಮೂಡಿಬಿಟ್ಟರೆ ಯುವಕರಾಗಿಬಿಡುವುದಿಲ್ಲ; ಜತೆಗೆ ಅಪಾರ ಜ್ಞಾನವನ್ನೂ ಸಂಪಾದಿಸಿ, ರಾಷ್ಟ್ರಹಿತಕ್ಕೋಸ್ಕರ ಸಮಯವನ್ನು ಮೀಸಲಿಟ್ಟು, ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ವ್ಯವಸ್ಥೆಯೊಂದನ್ನು ಸರಿದಾರಿಯಲ್ಲಿ ಕೊಂಡೊಯ್ಯುವತ್ತ, ಒಂದೊಮ್ಮೆ ವ್ಯವಸ್ಥೆ ಸರಿಯಿಲ್ಲದಿದ್ದರೆ ಯಾರಿಗೂ ಅಸಮಾಧಾನವಾಗದಂತೆ ಅದನ್ನು ವಿರೋಧಿಸಿ, ಸಮರ್ಥವಾಗಿ ಸರಿಪಡಿಸುವಂಥ ಸಾಮರ್ಥ್ಯವನ್ನು ಮೈಗೂಡಿಸಿಕೊಂಡು, ಎಂಥ ಸಂದರ್ಭವೇ ಬಂದರೂ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದೇ ಬದುಕುವವನೇ ನಿಜವಾದ ಯುವಕ'' ಎನ್ನುವ ಮೂಲಕ ವಿವೇಕಾನಂದರು ಸತ್ಯ ಮತ್ತು ಕರ್ತವ್ಯಪ್ರಜ್ಞೆಯ ಸಂದೇಶವನ್ನು ಸಾರಿದರು.

''ನಿಜವಾದ ಬದ್ಧತೆಯುಳ್ಳ ನೂರು ಮಂದಿ ಯುವಕರನ್ನು ನನಗೆ ಕೊಡಿ, ನಾನು ಈ ದೇಶದ ದೆಸೆಯನ್ನೇ ಸಂಪೂರ್ಣ ಬದಲಾಯಿಸುತ್ತೇನೆ. ಪಠ್ಯಪುಸ್ತಕದಲ್ಲಿ ಇರುವುದಷ್ಟೇ ಜ್ಞಾನವಲ್ಲ, ಅದರ ಜತೆಜತೆಗೆ ನಾವು ಸಂಪಾದಿಸಬೇಕಾಗಿರುವುದು ಲೋಕಜ್ಞಾನವನ್ನು. ಸಾಮಾನ್ಯಜ್ಞಾನ ಮತ್ತು ಲೋಕಜ್ಞಾನಗಳಿಲ್ಲದೆ ಕನಸಿನ ಭಾರತವನ್ನು ನಿರ್ಮಿಸಲಾಗದು'' ಎಂದಿದ್ದರು ವಿವೇಕಾನಂದರು. ಆದರೆ, ಅವರು ಅಂದು ತಮ್ಮ 'ಧ್ಯಾನಸ್ಥ' ಕಂಗಳಲ್ಲಿ ಕಂಡ ಭಾರತವು ಇಂದು ನಮ್ಮ ಮುಂದಿದೆಯೇ ಎಂಬುದರ ಬಗ್ಗೆ ಆಲೋಚಿಸಬೇಕಾದ ಅನಿವಾರ್ಯತೆ ನಮಗೆ ಒದಗಿದೆ. ಯುವಜನರು ವಿವೇಕಾನಂದರ ಕನಸಿನ ಕೂಸುಗಳಾಗಿದ್ದರು. ಯುವಜನರೆಂದರೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿರಬೇಕು. ಆದರೆ ಇಂದಿನ ಯುವಜನರ ಪರಿಸ್ಥಿತಿಯನ್ನು ಒಮ್ಮೆ ಅವಲೋಕಿಸಿದರೆ, ಭವ್ಯಭಾರತವನ್ನು ಕಟ್ಟುವ ಕನಸನ್ನು ಕೈಬಿಡಬೇಕಾದೀತೇ? ಎನಿಸುತ್ತದೆ. ಏಕೆಂದರೆ, ಇಂದಿನ ಯುವಜನರಲ್ಲಿ ಹೆಚ್ಚಿನವರು ವಿವೇಕಾನಂದರ ಆಶಯಕ್ಕೆ ವಿರುದ್ಧವಾಗಿಯೇ ಬದುಕುತ್ತಿದ್ದಾರೆ. ತಂಬಾಕು, ಗುಟ್ಕಾ, ಮದ್ಯ, ಸಿಗರೇಟು ಮುಂತಾದ ಮಾದಕ ವಸ್ತುಗಳಲ್ಲೇ ಪರಮಸುಖವನ್ನು ಕಂಡುಕೊಳ್ಳಲು ಹಾತೊರೆಯುತ್ತಾ, ಕ್ರೋಧ-ಅಸೂಯೆ-ಜಾತಿ ವೈಷಮ್ಯದ ಸುಳಿಯಲ್ಲೇ ಸಿಲುಕಿ ಸಾಮಾಜಿಕ ಸ್ವಾಸ್ಥ್ಯವು ಹದಗೆಡಲು ಕಾರಣರಾಗುತ್ತಿದ್ದಾರೆ. ಬಾಹ್ಯಾಕರ್ಷಣೆಗಳಿಗೆ ಬಲಿಯಾಗಿ ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದಾರೆ, ಮಾನವೀಯ ಮೌಲ್ಯಗಳಿಗೆ ಬೆಲೆಕೊಡದೆ, ಕ್ಷಣಿಕ ಸುಖಕ್ಕಾಗಿ ಜೀವನವನ್ನೇ ಬಲಿಕೊಡುತ್ತಿದ್ದಾರೆ.

ಹಾಗಾದರೆ, ವಿವೇಕಾನಂದರ ಕನಸು ಕೇವಲ ಕನಸಾಗಿಯೇ ಉಳಿಯಬೇಕೇ? ಖಂಡಿತ ಇಲ್ಲ, ಯುವವಸ್ಸುಗಳಲ್ಲಿ ಸೀಮೋಲ್ಲಂಘನದ ತವಕ ಹೆಚ್ಚಾಗಬೇಕು, 'ನಮ್ಮಿಂದಲೂ ಏನಾದರೂ ಸಾಧನೆ ಸಾಧ್ಯವಿದೆ' ಎಂಬ ಆತ್ಮವಿಶ್ವಾಸ ಉದ್ದೀಪನಗೊಳ್ಳಬೇಕು. ಸ್ವಾರ್ಥವನ್ನು ಬಿಟ್ಟು ಸಮಾಜದ ಕಡೆಗೆ ಲಕ್ಷ್ಯವನ್ನಿಡಬೇಕು. ಆಗ ಮಾತ್ರವೇ ವಿವೇಕಾನಂದರ ಕನಸು ನನಸಾಗಲು ಸಾಧ್ಯ.

ವಿವೇಕಾನಂದರು ದೇಹತ್ಯಾಗ ಮಾಡುವ ಸಂದರ್ಭ ಬಂದಾಗ ಶಿಷ್ಯರೊಬ್ಬರು, ''ಸ್ವಾಮೀಜಿ, ನೀವು ಹೋಗಲೇಬೇಕೇ?'' ಎಂದು ಕೇಳಿದಾಗ ವಿವೇಕಾನಂದರು, ''ಹೌದು, ದೊಡ್ಡ ಮರದ ನೆರಳಿನಲ್ಲಿ ಇತರ ಗಿಡಗಳು ಬೆಳೆಯಲಾರವು. ಚಿಕ್ಕವರು ಬೆಳೆಯಲು ಅವಕಾಶ ಮಾಡಿಕೊಡುವುದಕ್ಕಾಗಿ ನಾನು ಹೋಗಲೇಬೇಕು'' ಎಂದು ಉತ್ತರಿಸಿದರಂತೆ! ಸ್ವಾಮಿ ವಿವೇಕಾನಂದರು ಒಂದು ಶತಮಾನಕ್ಕೂ ಹಿಂದಿನಿಂದಲೂ ಒಂದು ಮಹಾನ್ ಪ್ರೇರಣೆಯಾಗಿ ಉಳಿದಿದ್ದೇಕೆ ಎಂಬುದನ್ನು ನಿರ್ದಿಶಿಸುವ ಇಂಥ ಅನೇಕ ಘಟನೆಗಳು ಅಧ್ಯಯನಕ್ಕೆ ಲಭ್ಯವಿವೆ. ಅವನ್ನು ಗ್ರಹಿಸಿ, ಮೈಗೂಡಿಸಿಕೊಂಡು, ಕಾರ್ಯರೂಪಕ್ಕೆ ತರುವ ಇಚ್ಛಾಶಕ್ತಿ ನಮ್ಮದಾಗಬೇಕಷ್ಟೇ.

'ವಿವೇಕ' ಎಂದರೆ ಜ್ಞಾನ, ಗ್ರಹಣಶಕ್ತಿ. ಜ್ಞಾನದಿಂದ ಉಂಟಾಗುವ ಸಂತಸವೇ ಆನಂದ. ಅದೇ 'ವಿವೇಕಾನಂದ'. ನಾವು ಗ್ರಹಿಸುವುದು ಮಾತ್ರವೇ ನಮ್ಮ ಪಾಲಿಗೆ ಅಸ್ತಿತ್ವದಲ್ಲಿರುತ್ತದೆ ಎಂಬುದನ್ನು ಅರಿಯುವುದು ಸಾರ್ವಕಾಲಿಕ ಸತ್ಯದರ್ಶನ. ಈ ಸೃಷ್ಟಿಯ ಪ್ರತಿಯೊಂದರಲ್ಲೂ ಸಕಾರಾತ್ಮಕ ಶಕ್ತಿಯನ್ನು ಹೆಕ್ಕಿ ತೆಗೆಯುವ ಇಚ್ಛಾಶಕ್ತಿಯಿದ್ದ ಸ್ವಾಮಿ ವಿವೇಕಾನಂದರ ಜೀವನಾದರ್ಶಗಳನ್ನು ಪಾಲಿಸುತ್ತಾ, ಅವನ್ನು ಮುಂದಿನ ತಲೆಮಾರಿಗೂ ಹಸ್ತಾಂತರಿಸುತ್ತಾ, ಭವ್ಯಭಾರತವನ್ನು ಕಟ್ಟುವತ್ತ ಸಾಗೋಣ…

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಚಿಂತನಾರ್ಹ ಬರಹ

ದೇಶಗಳ ಸಾಲ ಮತ್ತು ಜಿಡಿಪಿ ಬಗೆಗಿನ ಶಿಶಿರ್ ಹೆಗಡೆಯವರ 'ಶಿಶಿರಕಾಲ' ಅಂಕಣಬರಹ (ವಿಶ್ವವಾಣಿ ಜ.10) ಉತ್ತಮವಾಗಿತ್ತು. ಇದಕ್ಕೆ ಪೂರಕವಾಗಿ, ಈಗಿನ ವಿದ್ಯಮಾನಕ್ಕೆ ಅಗತ್ಯವೆನಿಸಿದ ಕೆಲ ಅಂಶಗಳನ್ನು ಓದುಗರ ಗಮನಕ್ಕೆ ತರಲು ಬಯಸುವೆ.

ದೇಶಗಳು ಸಾಲಮಾಡಿಯೇ ಅಭಿವೃದ್ಧಿಯ ಗತಿಯನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಸಾಮಾನ್ಯಜ್ಞಾನ. ಆದರೆ, ಉತ್ತಮ ಜಿಡಿಪಿ ನಿರ್ವಹಣಾ ಸೂತ್ರದಿಂದಾಗಿ ಸಾಲವಿಲ್ಲದೆಯೂ ಬೆಳವಣಿಗೆಯ ದಾರಿಯಲ್ಲಿ ವೇಗವಾಗಿ ಸಾಗಬಹುದು ಎಂಬುದನ್ನು ಕೆಲವು ದೇಶಗಳು ಸಾಬೀತುಮಾಡಿವೆ. ಹಾಂಗ್ ಕಾಂಗ್ ಈ ಸೂತ್ರಕ್ಕೆ ಅತ್ಯುತ್ತಮ ಉದಾಹರಣೆ.

ಒಮ್ಮೆ, ಇನ್ಫೋಸಿಸ್ ಷೇರುದಾರರ ವಾರ್ಷಿಕ ಸಭೆಯಲ್ಲಿ ನಾರಾಯಣ ಮೂರ್ತಿಯವರು ಸಭಿಕರ ಪ್ರಶ್ನೆಗೆ ಉತ್ತರಿಸುತ್ತಾ, ''ನಮ್ಮ ಕಂಪನಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲು ಬಹಳಷ್ಟು ಬ್ಯಾಂಕುಗಳು ಮುಂದೆ ನಿಂತಿವೆ; ಆದರೆ ನಮ್ಮಲ್ಲಿ ಒಳ ಉತ್ಪನ್ನಗಳೇ ಸಾಕಷ್ಟಿರುವಾಗ ಸಾಲದ ಹೊರೆ ಏಕೆ?'' ಎಂದಿದ್ದರು. ಶೇ.77ಕ್ಕಿಂತ ಹೆಚ್ಚಿನ ಸಾಲ-ಜಿಡಿಪಿ ಅನುಪಾತ ಹೊಂದಿರುವ ದೇಶಗಳು ಕಾಲಾನಂತರದಲ್ಲಿ ಆರ್ಥಿಕ ಕುಸಿತವನ್ನು ಎದುರಿಸಿವೆ ಎಂದು ವಿಶ್ವಬ್ಯಾಂಕಿನ ಸಂಶೋಧನೆಯು ತೋರಿಸಿದೆ. ಭಾರತವು ಇದುವರೆಗೂ ಸಾಲದ ಹೊರೆಯನ್ನು ನಿರ್ಬಂಧದಲ್ಲಿ ಇರಿಸಿ ಹಣಕಾಸಿನ ನಿರ್ವಹಣೆಯನ್ನು ಉತ್ತಮವಾಗಿ ಮಾಡುತ್ತಿದೆ. ಆದರೂ 2024ರಲ್ಲಿ ಭಾರತದ ಹೆಗಲೇರಿರುವ ಬಡ್ಡಿಯ ಹೊರೆ 10.80 ಲಕ್ಷ ಕೋಟಿ ರು.ನಷ್ಟಿದೆ. ಇದು ಸುಮಾರು ಶೇ.24ರಷ್ಟು ಜಿಡಿಪಿಗೆ ಸಮ. ಸಾಲವನ್ನು ಆದಷ್ಟು ಕಡಿಮೆ ಮಾಡಿದರೆ ಬಡ್ಡಿಯ ವ್ಯತ್ಯಯ ಕಡಿಮೆಯಾಗಿ, ಬೆಳವಣಿಗೆಗೆ ಅದೇ ಮೊತ್ತವನ್ನು ವ್ಯಯಿಸಬಹುದು. ಈ ನಿಟ್ಟಿನಲ್ಲಿಯೇ ಸಾಗುತ್ತೇವೆಂದು ಆಶಿಸೋಣ.

ವಿಶ್ವಸಂಸ್ಥೆಯು ದಶಕಗಳ ಹಿಂದೆಯೇ 'ಹಸಿರು ಜಿಡಿಪಿ' ಎಂಬ ಪ್ರಸ್ತಾವನೆಯನ್ನು ಮಂಡಿಸಿತ್ತು. ಜಿಡಿಪಿಯು ಉತ್ಪಾದನೆ ಮತ್ತು ಬಳಕೆಯನ್ನು ಸೆರೆಹಿಡಿಯುತ್ತದೆ, ಆದರೆ ಪರಿಸರ ಹಾನಿ, ಸಂಪನ್ಮೂಲಗಳ ಸವಕಳಿ ಅಥವಾ ದೇಶದ ಒಟ್ಟಾರೆ ಯೋಗಕ್ಷೇಮದಂಥ ನಿರ್ಣಾಯಕ ಅಂಶಗಳನ್ನು ನಿರ್ಲಕ್ಷಿಸುತ್ತದೆ. ಕತ್ತರಿಸಿದ ಮರದ ಪೀಠೋಪಕರಣಗಳು ಎಷ್ಟು ಮೌಲ್ಯಯುತವಾಗಿವೆ ಎಂಬುದನ್ನು ಇದು ನಮಗೆ ಹೇಳುತ್ತದೆ; ಆದರೆ ಹಸಿರಾಗಿ ನಿಂತಿರುವ ಮರವು ಪರಿಸರಕ್ಕೆ ಮರಳಿ ನೀಡುವ ಮೌಲ್ಯದ ಮೊತ್ತದ ಪರಿಣಾಮವನ್ನು ತಿಳಿಸುವುದಿಲ್ಲ. 'ಹಸಿರು ಜಿಡಿಪಿ'ಯು ಮಾಲಿನ್ಯ ಮತ್ತು ಅರಣ್ಯನಾಶದಂಥ ಪರಿಸರೀಯ ವೆಚ್ಚಗಳನ್ನು ಸಾಂಪ್ರದಾಯಿಕ ಜಿಡಿಪಿಯಿಂದ ಕಳೆಯುವ ಪರಿಕಲ್ಪನೆಯಾಗಿದೆ. ಇವುಗಳನ್ನು ಗಣನೆಗೆ ತೆಗೆದುಕೊಂಡಲ್ಲಿ, ಪರಿಸರವನ್ನು ರಕ್ಷಿಸಲು ಅದು ಸರಕಾರಗಳಿಗೆ ಸಹಕಾರಿಯಾಗುತ್ತದೆ. ಭಾರತವೂ ಹಸಿರು ಜಿಡಿಪಿ ಅಂಶಗಳನ್ನು ಪ್ರಕಟಿಸಿದರೆ, ಸಾಲದ ಮೊತ್ತಕ್ಕೆ ಅಸಮಾನ ಅನುಪಾತವನ್ನು ಕಾಣಬಹುದು. ಅಮೆರಿಕ ಹಾಗೂ ಚೀನಾ ದೇಶಗಳು, ತಮ್ಮ ಜಿಡಿಪಿಯನ್ನು ಅಸಮಂಜಸವಾಗಿ ಸೃಷ್ಟಿಸುತ್ತದೆ ಎಂಬ ಕಾರಣಕ್ಕೆ 'ಹಸಿರು ಜಿಡಿಪಿ'ಯನ್ನು ತಿರಸ್ಕರಿಸಿದವು. ಶೈಕ್ಷಣಿಕ ಆಸಕ್ತಿಗಾದರೂ ದೇಶಗಳು ಹಸಿರು ಜಿಡಿಪಿಯನ್ನು ಪ್ರಕಟಿಸಬೇಕು.

- ಪ್ರಕಾಶ ಹೆಗಡೆ, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಶಂಕರ ಪಾಟೀಲ, ಗದಗ**
ಭಟ್ರೇ, ಗಂಡಸರು ನಿವೃತ್ತರಾದರೆ ಹೆಂಗಸರಿಗೆ ಖುಷಿನಾ?
– **ಖುಷಿ ಎಲ್ಲಿ ಬಂತು.. ಅರ್ಧರ್ಧ ಗಂಟೆಗೆ ಕಾಫಿ ಮಾಡಿ ಸಾಯಬೇಕಲ್ಲ!!?**

- **ವಸಂತ ಹೊನಕೆರೆ, ಬಾಗಲಕೋಟೆ**
ಭಟ್ರೇ, ಆತ ಬಾಸ್ ಹೇಳುವ ಜೋಕಿಗೆ ನಗುವುದೇ ಇಲ್ಲವಲ್ಲ?
– **ಹಾಗಾದ್ರೆ, ಆತನ ರಿಟೈರ್ಮೆಂಟ್ ದಿನ ಸಮೀಪಿಸುತ್ತಿರಬೇಕು!**

- **ಬಸವರಾಜ ಹೊರಡಿ, (ಇಮೇಲ್ ಮೂಲಕ)**
ಭಟ್ರೇ, ಪರೀಕ್ಷೆಯಲ್ಲೇಕೋ ಸ್ಕೋರ್ ಮಾಡಲಿಲ್ಲ ಅಂತ ಕೇಳಿದರೆ, ಪಕ್ಕದ ಮನೆ ಹುಡುಗ ಸ್ಕೋರ್ ಮಾಡಿದ್ದಾನಾ ಅಂತಾನಲ್ಲ?
– **ಹಾಗಾದ್ರೆ, ಭವಿಷ್ಯದಲ್ಲಿ ರಾಜಕಾರಣಿ ಆಗಬಹುದು!**

- **ವಿದ್ಯಾ ಭಾಗವತ, ಹೊನ್ನಾವರ**
ಭಟ್ರೇ, ಗೊರಕೆ ಹೊಡೆಯುವ ಗಂಡನ ಜತೆ ಸಂಸಾರ ಹೇಗೆ ಮಾಡೋದು?
– **ಇದು ವೈಯಕ್ತಿಕ ಅಲ್ಲ, ಜಾಗತಿಕ ಸಮಸ್ಯೆಯಮ್ಮ, ಕ್ರಮೇಣ ನಿನಗೂ ರೂಢಿಯಾಗುತ್ತೆ!**

- **ರುದ್ರಣ್ಣ ನಾಯಕನಕಟ್ಟೆ, (ಇಮೇಲ್ ಮೂಲಕ)**
ಭಟ್ರೇ, ಜಗತ್ತಿಗೇ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಬೇಕು ಅಂತ ನಿರ್ಧರಿಸಿದ್ದೇನೆ, ಹೇಗೆ?
– **ಆಗ ನನಗೆ ಒಳ್ಳೆಯದಾಗಲಿ ಎಂದು ಪ್ರತ್ಯೇಕವಾಗಿ ಪ್ರಾರ್ಥಿಸಬೇಕಾದ ಅಗತ್ಯವಿಲ್ಲ!**

- **ಕೆ.ಸಿದ್ದಪ್ಪ, ಗಂಡಸಿ**
ಸರ್, ತೋಳ ಬಂದು ಧರ್ಮದ ಬಗ್ಗೆ ಉಪದೇಶ ನೀಡಿದರೆ ಏನಾಗಬಹುದು?
– **ಆಗ ಕೋಳಿಯನ್ನು ಕಳುವು ಮಾಡುವುದು ದಾನ ಎಂದು ಕರೆಯಿಸಿಕೊಳ್ಳಬಹುದು!**

- **ರಮೇಶಕುಮಾರ ಬಣಜಿ, (ಇಮೇಲ್ ಮೂಲಕ)**
ಭಟ್ರೇ, ಪತ್ನಿಗೂ, ಮಾಜಿ ಪತ್ನಿಗೂ ಏನು ವ್ಯತ್ಯಾಸ?
– **ಮದುವೆ ಚಾಲ್ತಿಯಲ್ಲಿರುವ ತನಕ ಪತ್ನಿ, ಜೀವ ಹೋಗುವ ತನಕ ಮಾಜಿ ಪತ್ನಿ!**

- **ರಶ್ಮಿ, ಬೆಂಗಳೂರು**
ಭಟ್ರೇ, ನನ್ನ ಬಾಯ್‌ಫ್ರೆಂಡ್ ತೀರಾ ತಿಕ್ಕಲನಂತೆ ವರ್ತಿಸುತ್ತಾನಲ್ಲ?
– **ಹಾಗಾದ್ರೆ, ಆತ ನಿನ್ನನ್ನು ಗಾಢವಾಗಿ ಪ್ರೀತಿಸುತ್ತಿದ್ದಾನೆ ಅಂತಾಯ್ತು!**

ಅನ್ಯಗ್ರಹ ಜೀವಿಗಳು ಇವೆ, ಆದರೆ ಸಂಪರ್ಕಿಸುವುದು ಅಸಾಧ್ಯ

ಸಂದರ್ಶಕರು

ಹರೀಶ್ ಕೇರ, ರೂಪಾ ಗುರುರಾಜ್



ಪೂರ್ವದ ನೊಬೆಲ್ ಖ್ಯಾತಿಯ ಶಾ ಪ್ರಶಸ್ತಿ ಪುರಸ್ಕೃತ ಶ್ರೀನಿವಾಸ ಆರ್. ಕುಲಕರ್ಣಿ ಸಂದರ್ಶನ

- ನಮ್ಮ ಸೂರ್ಯ ಸೂಪರ್‌ನೋವಾಕ್ಕೆ ಒಳಗಾದರೆ ಅದು ಸೌರವ್ಯೂಹದ ಕೊನೆ ಎನ್ನಬಹುದು. ಅದಕ್ಕೆ ಇನ್ನೂ ಐನೂರು ಕೋಟಿ ವರ್ಷಗಳಾಗಬಹುದು. ಆದರೆ ಅದಕ್ಕೂ ಮೊದಲೇ ನಮ್ಮ ಭೂಮಿ ಬೇರೆ ಬೇರೆ ಕಾರಣಗಳಿಗಾಗಿ ನಾಶ ಆಗುತ್ತದೆ.
- ನನ್ನನ್ನೂ ಸೇರಿದಂತೆ ತುಂಬಾ ವಿಜ್ಞಾನಿಗಳು, ಇತರ ಗ್ರಹಗಳಲ್ಲಿ ಜೀವಿಗಳಿರಬಹುದು ಎಂಬುದನ್ನು ನಂಬುತ್ತೇವೆ. ನಮ್ಮ ಗ್ಯಾಲಕ್ಸಿಯಲ್ಲೇ ಇರಬಹುದು. ಆದರೆ ದೂರಪ್ರಯಾಣ ಅಸಾಧ್ಯವಾದ್ದರಿಂದ ಸಂಪರ್ಕಿಸಲು ಸಾಧ್ಯವಾಗಿಲ್ಲ.
- ರಿಸರ್ಚ್ ಅನ್ನೋದು ಗ್ಲೋಬಲ್ ಚಟುವಟಿಕೆ. ಅದಕ್ಕೆ ಹಣ ಬೇಕು, ಜತೆಗೆ ಮಿದುಳು ಕೂಡ ಬೇಕು. ನೀವು ಬೆಸ್ಟ್ ಮಿದುಳುಗಳನ್ನು ಹುಡುಕಬೇಕು.

- **ನಿಮಗೆ ಖಗೋಳಶಾಸ್ತ್ರವನ್ನೇ ಕಲಿಯಬೇಕು ಅನ್ನಿಸಿದ್ದು ಹೇಗೆ?**

– ಹುಬ್ಬಳ್ಳಿ ಸೆಂಟ್ರಲ್ ಸ್ಕೂಲಿನಲ್ಲಿದ್ದಾಗ ವಿಜ್ಞಾನದಲ್ಲಿ ಆಸಕ್ತಿ ಇತ್ತು. ಧಾರವಾಡ ಯೂನಿವರ್ಸಿಟಿ ಲೈಬ್ರರಿಯಲ್ಲಿ 'ಸೈಂಟಿಫಿಕ್ ಅಮೆರಿಕನ್' ಮೊದಲಾದ ಜರ್ನಲ್‌ಗಳನ್ನು ಓದ್ತಾ ಸ್ವಲ್ಪ ಆಸಕ್ತಿ ಬಂತು. ಶಾಲೆಯಲ್ಲಿ ಆ ಸಬ್ಜೆಕ್ಟ್ ಇರಲಿಲ್ಲ. ರಿಸರ್ಚ್ ಮಾಡಬೇಕೆಂಬ ಮನಸಿತ್ತು. ನಮ್ಮ ತಂದೆ ಡಾಕ್ಟರ್. ಅವರು ಒಮ್ಮೆ ಆಪರೇಶನ್ ಥಿಯೇಟರ್‌ಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಸಿ ಸೆಕ್ಷನ್ ಮಾಡುವಾಗ ಹರಿದ ರಕ್ತ ನೋಡಿ ತಲೆತಿರುಗಿ ಬಿದ್ದುಬಿಟ್ಟೆ. ಅಲ್ಲಿಗೆ ಜೀವಶಾಸ್ತ್ರದ ಸಹವಾಸ ಬೇಡ ಅನಿಸಿತು. ಉಳಿದದ್ದು ಫಿಸಿಕ್ಸ್. ಎಂಜಿನಿಯರಿಂಗ್ ಫಿಸಿಕ್ಸ್ ಮಾಡುತ್ತಿದ್ದಾಗ ನನಗೆ 'ನ್ಯಾಷನಲ್ ಸೈನ್ಸ್ ಟ್ಯಾಲೆಂಟ್' ಎಂಬ ಸ್ಕಾಲರ್‌ಶಿಪ್ ದೊರೆಯಿತು. ಹಣಕಾಸಿನ ಜತೆಗೆ ಬೇರೆ ಬೇರೆ ಸಂಸ್ಥೆಗಳಿಗೆ ಹೋಗಿ ಕಲಿಯುವ ಅವಕಾಶ ದೊರೆಯಿತು. ಬೆಂಗಳೂರಿನ ರಾಮನ್ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದ ಒಂದು ಪ್ರದರ್ಶನಕ್ಕೆ ಹೋದಾಗ ನನ್ನ ಕ್ಷೇತ್ರ ಇದೇ ಅನಿಸಿತು. ನಂತರ ಬರ್ಕ್ಲಿಗೆ ಹೋಗಿ ರೇಡಿಯೋ ಆಸ್ಟ್ರೋನಮಿ ತೆಗೆದುಕೊಂಡೆ.

- **ಕಂದು ಕುಬ್ಜಗಳ (Brown Dwarfs) ಬಗೆಗಿನ ನಿಮ್ಮ ಅಧ್ಯಯನ ಮಹತ್ವದ್ದು. ಅದರ ಬಗ್ಗೆ ತಿಳಿಸಿ.**

– ನಮ್ಮ ಸೂರ್ಯ, ಗುರು ಗ್ರಹ ಇವೆಲ್ಲ ಅನಿಲಗಳ ಮೊತ್ತ. ಸೂರ್ಯನೊಳಗೆ ಇರುವ ಜಲಜನಕ, ಹೀಲಿಯಂ ಮತ್ತಿತರ ಅನಿಲಗಳು ಗುರುವಿನೊಳಗೂ ಇವೆ. ಆದರೆ ಸೂರ್ಯನಿಂದ ಬೃಹತ್ ಶಕ್ತಿ ಹಾಗೂ ಬೆಳಕು ಹೊಮ್ಮುತ್ತದೆ. ಇದಕ್ಕೆ ಕಾರಣ, ಸೂರ್ಯನಲ್ಲಿ ನ್ಯೂಕ್ಲಿಯರ್ ಫ್ಯೂಶನ್ ಆಗಿ ಜಲಜನಕ ಹೀಲಿಯಂ ಆಗಿ ಪರಿವರ್ತನೆಯಾಗುತ್ತದೆ. ಇದು ಶಕ್ತಿ ಹಾಗೂ ಬೆಳಕನ್ನು ಹೊಮ್ಮಿಸುತ್ತದೆ. ಆದರೆ ಗುರುವೆಂಬ ಅನಿಲದ ಉಂಡೆ ತಣ್ಣಗಾಗುತ್ತ ಹೊರಟಿದೆ. ಭಾರತೀಯ ಮೂಲದ ಶಿವಕುಮಾರ್ ಎಂಬ ಖಗೋಳಶಾಸ್ತ್ರಜ್ಞ ಒಂದು ಪ್ರಮೇಯ ಮಂಡಿಸಿದ್ದರು- ಸೂರ್ಯ ತನ್ನ ಗಾತ್ರದ ಹತ್ತನೇ ಒಂದರಷ್ಟು ಸಣ್ಣದಾದರೆ ಅದರ ಶಕ್ತಿ, ಬೆಳಕು ಅಷ್ಟು ಕಡಿಮೆಯಾಗುತ್ತದೆ. ಅದನ್ನು ಕಂದು ಕುಬ್ಜ ಎನ್ನಲಾಗುತ್ತದೆ. ಇದು ಥಿಯರಿ ಆಗಿ ಇತ್ತು. ನಾವು ಅಧ್ಯಯನದ ಮೂಲಕ 1995ರಲ್ಲಿ ಇದನ್ನು ನಿಜ ಎಂದು ತೋರಿಸಿದೆವು. ಗುರು ಎಂದರೆ ಸೂರ್ಯನ ಸಾವಿರದ ಒಂದನೇ ಭಾಗ, ಕಂದು ಕುಬ್ಜ ಅಂದರೆ ಹತ್ತನೇ ಒಂದು ಭಾಗ. ನಕ್ಷತ್ರಗಳಲ್ಲಿ ವಿವಿಧ ಹಂತಗಳನ್ನು ರೂಪಿಸಲು ಈ ಅಧ್ಯಯನ ನೆರವಾಯಿತು.

- **ನಕ್ಷತ್ರಗಳ ಅಂತಿಮಹಂತವಾದ ಸೂಪರ್‌ನೋವಾಗಳ ಬಗೆಗೂ ನೀವು ಅಧ್ಯಯನ ಮಾಡಿದ್ದೀರಿ. ಸೂಪರ್‌ನೋವಾಗಳನ್ನು ಹೇಗೆ ಗುರುತಿಸಲಾಗುತ್ತದೆ?**

– ಸೂರ್ಯನಿಗಿಂತ ಹತ್ತು ಪಟ್ಟು ಗಾತ್ರದ ನಕ್ಷತ್ರಗಳು ಅಷ್ಟೇ ಪ್ರಮಾಣದ ಶಕ್ತಿ ಉತ್ಪಾದಿಸುತ್ತವೆ. ಆದರೆ ಅವುಗಳ ನ್ಯೂಕ್ಲಿಯರ್ ಫ್ಯೂಶನ್ ಆಗಿ ನ್ಯೂಟ್ರಾನ್ ಸ್ಟಾರ್ ಆಗುತ್ತದೆ. ನ್ಯೂಟ್ರಾನ್ ಸ್ಟಾರ್ ಅಂದರೆ ಅಲ್ಲಿ ಬರೀ ನ್ಯೂಟ್ರಾನ್ ಇರುತ್ತದೆ. ಅದರ ತೂಕ ಸೂರ್ಯನಷ್ಟೇ ಇರಬಹುದು, ಆದರೆ ಗಾತ್ರ ಬೆಂಗಳೂರಿಗಿಂತ ಕಡಿಮೆ ಇರುತ್ತದೆ. ಅಂತಿಮವಾಗಿ ಇದು ಸ್ಫೋಟಿಸುವುದೇ ಸೂಪರ್‌ನೋವಾ. ಇದು ನಕ್ಷತ್ರದ ಕೊನೆಯ ಹಂತ. ಸೂಪರ್ ನೋವಾ ಅನ್ನು ಗುರುತಿಸುವುದು ಹೇಗೆಂದರೆ, ಪ್ರತಿನಿತ್ಯ ಅವುಗಳ ಚಿತ್ರ ತೆಗೆಯುವುದು ಮತ್ತು ಅವುಗಳಲ್ಲಿ ಆಗುವ ಬದಲಾವಣೆ ಗುರುತಿಸುವುದು. ಸ್ಫೋಟಗೊಂಡ ನಂತರದ ನಕ್ಷತ್ರ ಶತಕೋಟಿ ಪಟ್ಟು ಹೆಚ್ಚಿನ ಬೆಳಕು ಸೂಸುತ್ತದೆ. 2015ಕ್ಕೂ ಮೊದಲು ವಿಶ್ವದಲ್ಲಿ ವರ್ಷಕ್ಕೆ ನೂರು ಸೂಪರ್‌ನೋವಾ ಕಾಣಸಿಗುತ್ತಿತ್ತು. ಈಗ ಪ್ರತಿರಾತ್ರಿ ಕನಿಷ್ಠ 10 ಕಾಣಸಿಗುತ್ತದೆ. ಇನ್ನು ನಾವಿರುವ ನಕ್ಷತ್ರಪಥದಲ್ಲಿ (Galaxy) ಸುಮಾರು ನೂರು ವರ್ಷಕ್ಕೊಂದು ಸೂಪರ್‌ನೋವಾ ಸಂಭವಿಸಬಹುದು ಅಷ್ಟೆ.

- **ಸೂರ್ಯನ ಸೂಪರ್‌ನೋವಾ ಯಾವಾಗ? ಆಗ ಭೂಮಿಯೂ ನಾಶವಾಗುತ್ತದಲ್ಲವೇ?**

– ನಮ್ಮ ಸೂರ್ಯ ಸೂಪರ್‌ನೋವಾಕ್ಕೆ ಒಳಗಾದರೆ ಅದು ಸೌರವ್ಯೂಹದ ಕೊನೆ ಎನ್ನಬಹುದು. ಅದಕ್ಕೆ ಇನ್ನೂ ಐನೂರು ಕೋಟಿ ವರ್ಷಗಳಾಗಬಹುದು. ಆದರೆ ಅದಕ್ಕೂ ಮೊದಲೇ ನಮ್ಮ ಭೂಮಿ ಬೇರೆ ಬೇರೆ ಕಾರಣಗಳಿಗಾಗಿ ನಾಶ ಆಗುತ್ತದೆ. ಕ್ಷುದ್ರಗ್ರಹಗಳ ಡಿಕ್ಕಿಯಿಂದ ಇರಬಹುದು, ಡೈನೋಸಾರ್‌ಗಳ ನಾಶ ಆದದ್ದು ಹಾಗೆಯೇ. ಕ್ಷುದ್ರಗ್ರಹಗಳು ಯಾವಾಗ ಭೂಮಿಗೆ ಅಪ್ಪಳಿಸಬಹುದು ಎಂದು ತಿಳಿಯಲು ನೂರು ಶೇಕಡಾ ನಿಖರ ತಂತ್ರಜ್ಞಾನ ನಮಗಿನ್ನೂ ಲಭ್ಯವಾಗಿಲ್ಲ.

- **ಅನ್ಯಗ್ರಹ ಜೀವಿಗಳು ಇದ್ದಾರಾ? ಅದರ ಬಗ್ಗೆ ಅಧ್ಯಯನ ಮಾಡಲು ಅಮೆರಿಕದಲ್ಲಿ ದೊಡ್ಡ ಮೊತ್ತದ ಹಣ ಹೂಡಲಾಗಿದೆ ಎಂಬುದು ನಿಜವೇ?**

– ನಿಜ. ಖಾಸಗಿಯವರು ಈ ವಿಚಾರದಲ್ಲಿ 'ಸೆಟಿ' (ಸರ್ಚ್ ಫಾರ್ ಎಕ್ಸ್‌ಟ್ರಾ ಟೆರೆಸ್ಟ್ರಿಯಲ್ ಇಂಟೆಲಿಜೆನ್ಸ್) ಎಂಬ ಸಂಸ್ಥೆ ಮಾಡಿಕೊಂಡಿದ್ದಾರೆ. ಅದು ಅತ್ತಲಿಂದ ಬರಬಹುದಾದ ರೇಡಿಯೋ ಸಿಗ್ನಲ್‌ಗಳ ಬಗೆಗೆಲ್ಲ ಅಧ್ಯಯನ ಮಾಡುತ್ತಿದೆ. ಅಮೆರಿಕ ಸರಕಾರ ಅಂಥ ಜೀವಿಗಳಿರಬಹುದಾದ ಗ್ರಹಗಳ ಬಗ್ಗೆ ಅಧ್ಯಯನ ಮಾಡುವತ್ತ ಗಮನ ಕೊಟ್ಟಿದೆ. ಈಗ ನಾವು ದೂರದಿಂದ ಭೂಮಿಯನ್ನು ನೋಡಿದರೆ ಇಲ್ಲಿ ವಿಶಿಷ್ಟ ಅನಿಲಗಳು ಇರುವುದನ್ನು ಹೇಳಬಹುದು- ಆಮ್ಲಜನಕ, ಜಲಜನಕ, ಮೀಥೇನ್ ಹೀಗೆ. ಇಂಥ ಕಾಂಬಿನೇಶನ್ ಜೀವ ಬದುಕುಳಿಯಲು ಅಗತ್ಯ. ನನ್ನನ್ನೂ ಸೇರಿದಂತೆ ತುಂಬಾ ವಿಜ್ಞಾನಿಗಳು, ಇತರ ಗ್ರಹಗಳಲ್ಲಿ ಜೀವಿಗಳಿರಬಹುದು ಎಂಬುದನ್ನು ನಂಬುತ್ತೇವೆ. ನಮ್ಮ ಗ್ಯಾಲಕ್ಸಿಯಲ್ಲೇ ಇರಬಹುದು. ಆದರೆ ದೂರಪ್ರಯಾಣ ಅಸಾಧ್ಯವಾದ್ದರಿಂದ ಸಂಪರ್ಕಿಸಲು ಸಾಧ್ಯವಾಗಿಲ್ಲ. ನಮ್ಮ ಅತಿ ಹತ್ತಿರದ ನಕ್ಷತ್ರವೇ ನಮ್ಮಿಂದ ನಾಲ್ಕು ಬೆಳಕಿನ ವರ್ಷಗಳಷ್ಟು ದೂರವಿದೆ. ಇನ್ನು ಜೀವ ಇರುವ ಹತ್ತಿರದ ಇನ್ನೊಂದು ಗ್ರಹ ನಮಗಿಂತ ಸಾವಿರ ಬೆಳಕಿನ ವರ್ಷ ದೂರವಿರಬಹುದು. ಆದರೆ ಅಷ್ಟು ವರ್ಷ ಭೂಮಿಯ ಮೇಲೆ ನಾವೇ ಇರುತ್ತೇವೋ ಇಲ್ಲವೋ ಹೇಳಲಾಗದು. ಇಂದಿಗೆ ಹತ್ತು ಸಾವಿರ ವರ್ಷಗಳ ಹಿಂದೆ ಮನುಷ್ಯರೇ ಈಗಿರುವಂತೆ ಇರಲಿಲ್ಲ. ಜಾಗತಿಕ ತಾಪಮಾನ, ಕ್ಷುದ್ರಗ್ರಹಗಳ ಡಿಕ್ಕಿ ಸೇರಿದಂತೆ ಯಾವುದೇ ಅನಾಹುತ ನಮ್ಮನ್ನು ನಾಶ ಮಾಡಬಹುದು.

> ಇನ್ನು 10,000 ವರ್ಷಗಳಲ್ಲಿ ಭೂಮಿಯ ಮೇಲೆ ಮನುಷ್ಯ ಇರುವುದೇ ಅನುಮಾನ

- **ಬಾಹ್ಯಾಕಾಶ ಯೋಜನೆಗಳಂಥ ಕ್ಷೇತ್ರದಲ್ಲಿ ಭಾರತ ತಾಂತ್ರಿಕವಾಗಿ ಸಾಕಷ್ಟು ಮುಂದಿದೆ ಅನಿಸುತ್ತಿಲ್ಲವೇ?**

– ನಮಗೇನು ಬೇಕು ಎಂಬ ಸ್ಪಷ್ಟ ಕಲ್ಪನೆ ಸರಕಾರಕ್ಕೆ ಇದ್ದಾಗ ಸಾಕಷ್ಟು ಪ್ರಗತಿ ಆಗಿದೆ. ಉದಾಹರಣೆಗೆ 50 ವರ್ಷದ ಹಿಂದೆ ನಮಗೆ ನಮ್ಮದೇ ಸಂಪರ್ಕ ವ್ಯವಸ್ಥೆಗಾಗಿ ಹಾಗೂ ಕೃಷಿ ಸುಧಾರಣೆಗಾಗಿ ಉಪಗ್ರಹಗಳು ಬೇಕು ಅಂದಾಗ ಸರಕಾರ ದೃಢನಿಶ್ಚಯ ಮಾಡಿತು. ಇಸ್ರೋ ಸಾಕಷ್ಟು ಕೆಲಸ ಮಾಡಿತು. ಅದು ರಾಕೆಟ್ ವ್ಯವಸ್ಥೆ, ಸಂಪರ್ಕ ಉಪಗ್ರಹ ವ್ಯವಸ್ಥೆ ಇದರಲ್ಲೆಲ್ಲ ಉತ್ಕೃಷ್ಟತೆ ಸಾಧಿಸಿತು. ಪರಮಾಣು ಶಕ್ತಿಯ ಬಗ್ಗೆಯೂ ಹೀಗೇ ಆಯಿತು. ಆದರೆ ರಿಸರ್ಚ್ ಅನ್ನೋದು ಬೇರೆ. ಸಂಶೋಧನೆ ವಲಯದಲ್ಲಿ 'ನಂಬರ್ ಒನ್'ಗಿಂತ ಕೆಳಗಿನದಕ್ಕೆ ಜಾಗವೇ ಇಲ್ಲ. ಉದಾಹರಣೆಗೆ ನಾವು 1995ರಲ್ಲಿ ಕಂದು ಕುಬ್ಜಗಳನ್ನು ಅಮೆರಿಕದಲ್ಲಿ ಕಂಡುಹುಡುಕಿದವು. ಆದರೆ ಒಂದು ವರ್ಷದ ನಂತರ ಭಾರತದಲ್ಲಿ ನಾವು ಇದನ್ನು ಹುಡುಕಿದೆವು ಎಂದರೆ ಅದಕ್ಕೆ ಅರ್ಥವಿಲ್ಲ. ರಿಸರ್ಚ್ ಅನ್ನೋದು ಗ್ಲೋಬಲ್ ಚಟುವಟಿಕೆ. ಅದಕ್ಕೆ ಹಣ ಬೇಕು, ಜತೆಗೆ ಮಿದುಳು ಕೂಡ ಬೇಕು. ನೀವು ಬೆಸ್ಟ್ ಮಿದುಳುಗಳನ್ನು ಹುಡುಕಬೇಕು.

- **ನಮ್ಮಲ್ಲಿ ಖಗೋಳವಿಜ್ಞಾನ ಓದಿ ರಿಸರ್ಚ್ ಮಾಡುತ್ತೇನೆ ಅನ್ನುವವರಿಗೆ ದೇಶ ಬಿಟ್ಟು ಹೋಗುವುದು ಅನಿವಾರ್ಯವಾಗಿದೆಯಾ? ನಿಮ್ಮ ಹಾಗೆ?**

– ಹಿಂದೆ ನಾವಿದ್ದಾಗ ಖಗೋಳಶಾಸ್ತ್ರ ಶಾಲೆಯಲ್ಲೂ ಕಾಲೇಜಿನಲ್ಲೂ ಇರಲಿಲ್ಲ. ಈಗ ಭಾರತದಲ್ಲೂ ಅದು ಬೆಳೆಯುತ್ತಿದೆ. ಪುಣೆಯಲ್ಲಿ ಜಿಎಂಆರ್‌ಟಿ, ಲಡಾಖ್‌ನಲ್ಲಿ ಆಪ್ಟಿಕಲ್ ಟೆಲಿಸ್ಕೋಪ್, ಸ್ಪೇಸ್‌ನಲ್ಲಿ ನಮ್ಮದೇ ಆಸ್ಟ್ರೋಸ್ಯಾಟ್ ಎಲ್ಲ ಇವೆ. ಇದೆ. ಥಿಯರಿಟಿಕಲ್ ಖಗೋಳಶಾಸ್ತ್ರ ಬೋಧಿಸುವ ಹಲವು ಸಂಸ್ಥೆಗಳಿವೆ. ಪುಣೆಯಲ್ಲಿ 'ಇಂಟರ್ ಯುನಿವರ್ಸಿಟಿ ಸೆಂಟರ್ ಫಾರ್ ಆಸ್ಟ್ರೋನಮಿ' ಇದೆ. ಆದರೆ ಪ್ರಾಥಮಿಕ ಶಾಲೆಯಲ್ಲಿ ಖಗೋಳಶಾಸ್ತ್ರ ಕಲಿಸುತ್ತಿಲ್ಲ ಅಂತ ಯಾರೋ ಹೇಳಿದರು. ಶಾಲೆಯಿಂದಲೇ ಶುರುಮಾಡಬೇಕು. ಜಪಾನ್, ಕೊರಿಯಾ, ತೈವಾನ್‌ನಂಥ ಸಣ್ಣ ದೇಶಗಳು ತುಂಬಾ ವೇಗದಲ್ಲಿ ಈ ಕ್ಷೇತ್ರದಲ್ಲಿ ಮುಂದುವರಿಯುತ್ತಿವೆ. ಈ ಅಂತರವನ್ನು ಗುರುತಿಸಿ ಸರಿಪಡಿಸಿಕೊಳ್ಳಬೇಕು.

- **ನಮ್ಮ ಶಿಕ್ಷಣ ಪದ್ಧತಿಯಲ್ಲಿ ಯಾವ ಸುಧಾರಣೆ ಮಾಡಿಕೊಳ್ಳಬೇಕು?**

– ದುರದೃಷ್ಟವಶಾತ್ ನಮ್ಮ ವ್ಯವಸ್ಥೆ ಪ್ರತಿಭೆಯ ಪರವಾಗಿ ಇಲ್ಲ. ಯಾವುದೇ ಭಾರತೀಯ ವಿವಿ ವಿಶ್ವದ ಟಾಪ್ 500 ವಿದ್ಯಾಸಂಸ್ಥೆಗಳ ರ್‍ಯಾಂಕಿಂಗ್‌ನಲ್ಲಿ ಇಲ್ಲ. ಇದೇ ನಾವು ಹಿಂದುಳಿಯಲು ಕಾರಣ. ಇದರ ಬಗ್ಗೆ ಪ್ರಾಮಾಣಿಕ ಚರ್ಚೆ ಆಗಬೇಕು.

- **ಈ ವಿಶ್ವ, ಬ್ರಹ್ಮಾಂಡವನ್ನೆಲ್ಲಾ ಗಮನಿಸುತ್ತಾ, ಇದರ ಹಿಂದೆ ಒಂದು 'ಬುದ್ಧಿವಂತ ಮಿದುಳಿನ' ವಿನ್ಯಾಸ ಇರಬಹುದು ಅನಿಸಿಲ್ವಾ?**

– ಇಂಥ ಏನೇನೋ ಕಲ್ಪನೆಗಳನ್ನು ನಾವು ಮಾಡಿಕೊಳ್ಳಬಹುದು. ಆದರೆ ಸರಳ ಪ್ರಮೇಯ ಏನು? ಇದು ಸಹಜ ವಿಕಾಸ ಇರಬಹುದಲ್ವಾ? ಡಿಎನ್‌ಎ ಬಗ್ಗೆ ತಿಳಿದುಬಂದಾಗ, ಇದನ್ನು ದೇವರೇ ಮಾಡಿರಬೇಕು ಅಂದರು. ಆದರೆ ಡಾರ್ವಿನ್ ಥಿಯರಿಯಿಂದ ನಮ್ಮ ವಿಕಾಸ ಹೀಗಾಯ್ತು ಅಂತ ಗೊತ್ತಾಯಿತು. ಆಗ, ಇದೆಲ್ಲಕ್ಕೂ ಮೂಲವಾದ ಬ್ಯಾಕ್ಟೀರಿಯಾಗಳೇ ದೇವರ ಸೃಷ್ಟಿ ಅಂದರು. ಇಂಥ ಜನ ಈ ವಾದವನ್ನು ಬಿಡುವುದೇ ಇಲ್ಲ. ನಾವು ಯಾವುದಕ್ಕಾದರೂ ವೈಜ್ಞಾನಿಕ ವಿವರಣೆ ಕೊಟ್ಟರೆ ಅದಕ್ಕೂ ಹಿಂದೆ ಚಲಿಸುತ್ತಾರೆ. ವಿಶ್ವ ಸೃಷ್ಟಿಯಾದದ್ದು ಬಿಗ್ ಬ್ಯಾಂಗ್‌ನಿಂದ ಅಂದರೆ ಪ್ರಶ್ನೆ ತೂರಿಬರುತ್ತದೆ- ಅದಕ್ಕೂ ಮೊದಲೇ ಏನಿತ್ತು ಅಂತ. ಇಂಥ ಪ್ರಶ್ನೆ ಪ್ರತಿಯೊಂದಕ್ಕೂ ಬರುತ್ತದೆ. ಆದರೆ ಅರ್ಥಪೂರ್ಣವಾದ ನಿಜವಾದ ಪ್ರಗತಿ ಅಂದರೆ, ಮಹಾಸ್ಫೋಟದಿಂದ ಈ ವಿಶ್ವ ಶುರುವಾಯಿತು ಅನ್ನುವುದು. ಅದಕ್ಕೆ ಹಿಂದೆ ಯಾವುದೇ ಶಕ್ತಿ ಇದೆ ಅನ್ನುವುದೆಲ್ಲ ಬರಿಯ ಹೇಳಿಕೆಗಳಷ್ಟೇ.

- **ಇಷ್ಟು ವರ್ಷ ಸಂಶೋಧನೆ ಆಯ್ತು, ಇನ್ನು ಮುಂದಿನ ನಿಮ್ಮ ಯೋಜನೆಗಳೇನು?**

– ಇಷ್ಟು ವರ್ಷ ತಂಡಗಳಲ್ಲಿ ಸಂಶೋಧನೆ, ಅಧ್ಯಯನ ಮಾಡಿದ್ದೇನೆ. ಈಗ ಏಕವ್ಯಕ್ತಿಯಾಗಿ ಥಿಯರಿಟಿಕಲ್ ರಿಸರ್ಚ್ ಮಾಡುತ್ತಿದ್ದೇನೆ. ಜತೆಗೆ ಟೀಚಿಂಗ್. ಪ್ರತಿವರ್ಷ ಬೇರೆ ಬೇರೆ ವಿಷಯಗಳನ್ನು ಕಲಿಸುತ್ತೇನೆ. ಯಾಕೆಂದರೆ ಅದು ನನಗೂ ಕಲಿಯಲು ಅವಕಾಶ ಮಾಡಿಕೊಡುತ್ತದೆ. ಅಲ್ಟ್ರಾವಯಲೆಟ್ ಸ್ಪೇಸ್ ಮಿಶನ್ ಎಂಬ ವಿಶ್ವದ ಅಧ್ಯಯನ ಮಾಡುವ ಪ್ರಾಜೆಕ್ಟ್ ಬಗ್ಗೆ ಪ್ರಪೋಸಲ್ ಮಾಡುತ್ತಿದ್ದೇನೆ. ಈ ಐಡಿಯಾ ಬಂದದ್ದು ನಾರಾಯಣಮೂರ್ತಿ ಅವರಿಂದ.

- **ನಿಮ್ಮ ಓದುವಿಕೆಯ ರೀತಿ ಹೇಗೆ, ಯಾವ ಪುಸ್ತಕಗಳನ್ನು ಹೆಚ್ಚಿಗೆ ಓದುತ್ತೀರಿ?**

– ಸಣ್ಣವರಿದ್ದಾಗ ನಾನು ಮತ್ತು ಸುಧಾ ಲೈಬ್ರರಿಗೆ ಹೋಗಿ ಮುಂಜಾನೆಯಿಂದ ಸಂಜೆವರೆಗೂ ಓದುತ್ತಿದ್ದೆವು. ಸುಧಾಗೆ ಇನ್ನೂ ಆ ಆಸಕ್ತಿ ಇದೆ. ನನಗೆ ನನ್ನ ಸಬ್ಜೆಕ್ಟ್ ಮೇಲೆ ಆಸಕ್ತಿ ಹೆಚ್ಚಾದಂತೆ ಇತರ ಓದು ಕಡಿಮೆಯಾಯಿತು. ವಿಶೇಷವಾಗಿ ಕರೆಂಟ್ ಅಫೇರ್ಸ್, ನ್ಯೂಯಾರ್ಕ್ ಟೈಮ್ಸ್, ಇಕಾನಮಿಸ್ಟ್ ಓದುತ್ತಿರುತ್ತೇನೆ. ಇನ್ನೊಂದು ಆಸಕ್ತಿ ಅಂದರೆ ಕಂಪನಿಗಳು, ದೇಶಗಳ ಏಳುಬೀಳು. ಕೆಲವು ಕಂಪನಿಗಳು, ದೇಶಗಳು ಯಾಕೆ ಚೆನ್ನಾಗಿ ಬೆಳೆಯುತ್ತವೆ, ಕೆಲವು ಯಾಕೆ ಪತನ ಹೊಂದುತ್ತವೆ- ಈ ವಿಷಯದ ಆಸಕ್ತಿ.

- **ಆತ್ಮಕತೆ, ಖಗೋಳಶಾಸ್ತ್ರದ ಬಗ್ಗೆ ಗ್ರಂಥ ಬರೆಯುವ ಬಗ್ಗೆ ಯೋಚಿಸಿದ್ದೀರಾ?**

– ಮುಖ್ಯವಾಗಿ ನಾನು ಪ್ರಾಜೆಕ್ಟ್‌ಗಳ ಜತೆಗೆ ಎಂಜಿನಿಯರಿಂಗ್ ಮಾಡಿದವನು. ನಾವು ಮಾಡಿದ ಪ್ರಾಜೆಕ್ಟ್‌ಗಳೆಲ್ಲವೂ ಉನ್ನತ ಫಲಿತಾಂಶ ನೀಡಿವೆ. ಒಂದು ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಳ್ಳುವುದು ಎಂದರೆ ಹೊಸ ಕಂಪನಿ ಆರಂಭಿಸಿದಷ್ಟೇ ತ್ರಾಸದಾಯಕ. ಪ್ರಾಜೆಕ್ಟ್ ಗಳನ್ನು ಆಯ್ಕೆ ಮಾಡುವುದು, ಅವುಗಳನ್ನು ಯಶಸ್ವಿಯಾಗಿ ಈಡೇರಿಸುವುದು ಹೇಗೆ ಎಂಬ ಬಗ್ಗೆ ಒಂದು ಕೃತಿ ಬರೆಯಲು ಮುಂದಾಗಿದ್ದೇನೆ. ಆತ್ಮಕತೆ ಬರೆಯುವ ಯೋಚನೆ ಇಲ್ಲ, ಐನ್‌ಸ್ಟೀನ್ ಅಂಥವರಾದರೆ ಬರೆಯಬೇಕು. ನಾನು ಅವರ ಸಾವಿರದ ಒಂದಂಶವೂ ಇಲ್ಲ.

- **ಭಾರತಕ್ಕೆ ಬಂದಾಗ ಹೇಗಿರುತ್ತೀರಿ? ನಿಮ್ಮ ಸೋದರಿ ಸುಧಾ ಮೂರ್ತಿ ಜತೆಗಿನ ಮಾತುಕತೆಗಳೆಲ್ಲ ಹೇಗಿರುತ್ತವೆ?**

– ಸಾಮಾನ್ಯವಾಗಿ ಭಾರತದ ಸ್ಥಿತಿಗತಿ, ಇದನ್ನು ಹೇಗೆ ಸುಧಾರಣೆ ಮಾಡಬಹುದು ಇತ್ಯಾದಿಗಳೆಲ್ಲ ಇರುತ್ತವೆ. ಇನ್ನೊಂದು, ನಮ್ಮಲ್ಲಿ ಪ್ರಾಣಿಗಳೆಂದರೆ ಎಲ್ಲರಿಗೂ ಇಷ್ಟ. ಗೋಪಿ ಎಂಬ ನಾಯಿ ಇದೆ, ಅದರ ಕುರಿತು ಮಾತುಕತೆ ಹೆಚ್ಚಿಗೆ ಇರುತ್ತದೆ. ಹಳೇ ನೆನಪುಗಳು ಇರುತ್ತವೆ.

ಅರ್ಧಸತ್ಯಗಳು ಸುಳ್ಳಿಗಿಂತಲೂ ಮಹಾ ಅಪಾಯಕಾರಿ

ಅರ್ಧಸತ್ಯಗಳ ಸಮಸ್ಯೆಯನ್ನು ನಿಭಾಯಿಸುವ ಕೆಲಸವು ಜನರಿಂದಲೇ ಆಗಬೇಕಿರುವಂಥದ್ದು. ಸುದ್ದಿಯ ಶೀರ್ಷಿಕೆ ನೋಡಿ ಸಾರಾಸಗಟು ನಿರ್ಧಾರಕ್ಕೆ ಬರುವ ಮೊದಲು ಆ ಸುದ್ದಿಯನ್ನು ಆಳವಾಗಿ ಅಧ್ಯಯನ ಮಾಡಿ ಸತ್ಯಾಸತ್ಯತೆಯನ್ನು ಅರಿಯಲು ಯತ್ನಿಸಬೇಕು. ದಾರಿ ತಪ್ಪಿಸುವ ಸುದ್ದಿಯ ಮೂಲವನ್ನು ಪ್ರಶ್ನಿಸಬೇಕು. ಸುದ್ದಿಯಲ್ಲಿ ತಪ್ಪಿಹೋಗಿರುವ ಅಂಶಗಳನ್ನು ಕಲೆಹಾಕಬೇಕು, ವಾಸ್ತವಿಕ ಪುರಾವೆಯನ್ನು ಒದಗಿಸಬೇಕು ಮತ್ತು ಸುಳ್ಳು ನಿರೂಪಣೆಗೆ ಸವಾಲೊಡ್ಡಬೇಕು.

ವಿಚಾರ ವೇದಿಕೆ

ಗಣೇಶ್‌ಭಟ್ ವಾರಾಣಸಿ
vveditoped@gmail.com

ಸುಳ್ಳುಗಳನ್ನು ಹೇಗೋ ಪತ್ತೆಹಚ್ಚಬಹುದು, ಆದರೆ ಅರ್ಧಸತ್ಯಗಳನ್ನು ಕಂಡುಹಿಡಿಯುವುದು ಬಹಳ ಕಷ್ಟ. ಅರ್ಧಸತ್ಯಗಳು ಜನರನ್ನು ದಾರಿ ತಪ್ಪಿಸುವ ಅಪಾಯಗಳೇ ಹೆಚ್ಚು. ಅರ್ಧಸತ್ಯಗಳು ಮೇಲ್ನೋಟಕ್ಕೆ ಸತ್ಯದಂತೆಯೇ ಭಾಸವಾಗುತ್ತವೆ, ಏಕೆಂದರೆ ಇವುಗಳನ್ನು ಬಹಳ ಕುಶಲತೆಯಿಂದ ಹೊಸೆಯಲಾಗಿರುತ್ತದೆ. ಕೂಲಂಕಷವಾಗಿ ಪರಿಶೀಲಿಸಿದರೆ ಮಾತ್ರವೇ 'ಇವು ಸತ್ಯದ ತೊಗಲನ್ನು ಹೊದ್ದಿರುವ ಸುಳ್ಳುಗಳು' ಎಂಬುದು ಅರ್ಥವಾಗುತ್ತದೆ. ಬಹಳಷ್ಟು ಜನರು ಸುದ್ದಿಯ/ಮಾಹಿತಿಯ ಶೀರ್ಷಿಕೆಯನ್ನಷ್ಟೇ ಓದಿ ನಿರ್ದಿಷ್ಟ ಅಭಿಪ್ರಾಯಕ್ಕೆ ಬರುತ್ತಾರೆ. ಮತ್ತೆ ಕೆಲವರಲ್ಲಿ, ತಾವು ಓದಿದ ವಿಷಯವನ್ನು ವಿಮರ್ಶಿಸಿ, ಅದು ಸತ್ಯವೋ ಸುಳ್ಳೋ ಎಂದು ಗ್ರಹಿಸುವ ವ್ಯವಧಾನ ಕಡಿಮೆ. 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು' ಎಂಬ ಜಾಣನುಡಿಯಿದ್ದರೂ, ಜನರು ಸುದ್ದಿಯ ಶೀರ್ಷಿಕೆಯನ್ನಷ್ಟೇ ಅಥವಾ ಮೊದಲರ್ಧವನ್ನಷ್ಟೇ ನೋಡಿ ಅದೇ ಸತ್ಯವೆಂದು ನಂಬುತ್ತಾರೆ. ಇದರಿಂದಾಗಿ ಅವರಲ್ಲಿ ತಪ್ಪುಗ್ರಹಿಕೆಗಳು ತುಂಬಿಕೊಂಡುಬಿಡುತ್ತವೆ. ಒಟ್ಟಾರೆ ಹೇಳುವುದಾದರೆ, 'ಅರ್ಧಸತ್ಯ'ಗಳು ಸುಳ್ಳಿಗಿಂತಲೂ ಅಪಾಯಕಾರಿಯಾಗಿಬಿಡುತ್ತವೆ.

ತಮಿಳುನಾಡಿನ ಪಾನಿಪುರಿ ಮಾರಾಟಗಾರನೊಬ್ಬನಿಗೆ ಜಿಎಸ್‌ಟಿ ನೋಟಿಸ್ ಬಂದ ವಿಚಾರ ಇತ್ತೀಚೆಗೆ ಎಲ್ಲಾ ಮಾಧ್ಯಮಗಳಲ್ಲೂ ವೈರಲ್ ಆಗಿತ್ತು. ಜಿಎಸ್‌ಟಿ ಸಂಬಂಧಿತ ಈ ನಡೆಯ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಬಹಳ ಟೀಕೆಗಳು ಹೊಮ್ಮಿದ್ದವು. ಪಾನಿಪುರಿ ಮಾರಾಟಗಾರರು ಬಹಳ ಬಡವರಿರುತ್ತಾರೆ ಎಂಬ ಕಲ್ಪನೆಯಲ್ಲಿ, ನೋಟಿಸ್ ಪಡೆದಾತನ ಮೇಲೆ ಅನುಕಂಪದ ಹೊಳೆಯೇ ಹರಿದಿತ್ತು. ವಾಸ್ತವವೇನೆಂದರೆ, ಕಳೆದೊಂದು ವರ್ಷದ ಅವಧಿಯಲ್ಲಿ ಆತನ ಬ್ಯಾಂಕ್ ಖಾತೆಗೆ ಯುಪಿಐ ಪಾವತಿ ಮೂಲಕ 40 ಲಕ್ಷ ರುಪಾಯಿಗಿಂತ ಹೆಚ್ಚು ಮೊತ್ತ ಸಂದಾಯವಾಗಿತ್ತು. ಬಹುತೇಕರಿಗೆ ಗೊತ್ತಿರುವಂತೆ, ಯುಪಿಐ ಮತ್ತು ಬ್ಯಾಂಕ್‌ಗಳ ಮೂಲಕ ನಡೆದ ವಹಿವಾಟುಗಳು ಅಧಿಕೃತವಾಗಿ ದಾಖಲಾಗುತ್ತವೆ. ಪಾನಿಪುರಿ ವ್ಯಾಪಾರಿಯ ವಿಷಯದಲ್ಲಿ ಆಗಿದ್ದೂ ಅದೇ. ಜಿಎಸ್‌ಟಿ ಕಾನೂನಿನ ಪ್ರಕಾರ, 40 ಲಕ್ಷ ರು.ವರೆಗಿನ ಸರಕು ವ್ಯವಹಾರ ಮತ್ತು 20 ಲಕ್ಷ ರು.ವರೆಗಿನ ಸೇವಾ ವ್ಯವಹಾರಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ಇರುತ್ತದೆ. 40 ಲಕ್ಷಕ್ಕಿಂತ ಹೆಚ್ಚು ಮೊತ್ತದ ಆರ್ಥಿಕ ವ್ಯವಹಾರಗಳು ನಡೆಯುವುದಿದ್ದರೆ ಅಂಥ 'ಸರಕು ವ್ಯವಹಾರದ ಸಂಸ್ಥೆ'ಗಳು ಜಿಎಸ್‌ಟಿ ನೋಂದಣಿ ಮಾಡಿಸಿಕೊಳ್ಳಬೇಕು ಹಾಗೂ ನಿಗದಿತ ಜಿಎಸ್‌ಟಿ ಪಾವತಿಸಬೇಕು. ವಹಿವಾಟು 40 ಲಕ್ಷ ರು. ಮಿತಿಯನ್ನು ದಾಟಿದಾಗ ನಿಯಮಾನುಸಾರವಾಗಿ ಕಂಪ್ಯೂಟರ್‌ನಿಂದ ಸ್ವಯಂಚಾಲಿತ ನೋಟಿಸ್ ಹೊಮ್ಮುತ್ತದೆ! ಇದೊಂದು ಸಹಜ ಪ್ರಕ್ರಿಯೆ. ಅಲ್ಲಿಗೆ, ವಹಿವಾಟಿನ ನಿಗದಿತ ಮಿತಿಯನ್ನು ದಾಟಿದ ಪಾನಿಪುರಿ ವ್ಯಾಪಾರಿ ಜಿಎಸ್‌ಟಿಯನ್ನು ಪಾವತಿಸಲೇಬೇಕು. ಆದರೆ ಈ ವಿಚಾರವಾಗಿ ಪ್ರಕಟವಾದ ಸುದ್ದಿಶೀರ್ಷಿಕೆಗಳು ಸರಕಾರದ ವಿರುದ್ಧ ಕೊಂಚ ಆಕ್ರೋಶ ಮೂಡಿಸಿದ್ದಂತೂ ಸತ್ಯ.

ಹೀಗೊಬ್ಬ ವ್ಯಾಪಾರಿಗೆ ಜಿಎಸ್‌ಟಿ ನೋಟಿಸ್ ಬಂದಿರುವುದರಿಂದ, ಇನ್ನು ಮುಂದೆ ಅಂಥ ವ್ಯಾಪಾರಿಗಳೆಲ್ಲರೂ ಆನ್‌ಲೈನ್/ಯುಪಿಐ ಮೂಲಕ ಹಣ ಸ್ವೀಕರಿಸಲು ನಿರಾಕರಿಸಬಹುದು ಎಂಬ ಮಾತೂ ಕೇಳಿಬರುತ್ತಿದೆ; ಆದರೆ ಯಾರೇ ವ್ಯಾಪಾರಿ ಹಾಗೆ ನಿರಾಕರಿಸಿದಲ್ಲಿ ಅದು ಆತನ ಪಾಲಿಗೆ ನಷ್ಟದ ದಾರಿಯಾಗಬಹುದು. ಏಕೆಂದರೆ, ನಮ್ಮಲ್ಲಿ ಪ್ರತಿ ಮೂವರಲ್ಲಿ ಇಬ್ಬರಂತೂ ಯುಪಿಐ ಪಾವತಿಗೆ ಮುಂದಾಗುವವರೇ ಆಗಿರುವುದರಿಂದ, ಅಂಗಡಿಯಾತ ಅದನ್ನು ನಿರಾಕರಿಸಿದರೆ ಗ್ರಾಹಕನನ್ನು ಕಳೆದುಕೊಳ್ಳಬೇಕಾಗುತ್ತದೆ, ಅಷ್ಟೇ!

ಮುಕೇಶ್ ಅಂಬಾನಿ ಮಾಲೀಕತ್ವದ 'ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್' ಕಂಪನಿಯು ನವಿ ಮುಂಬೈ ವಿಮಾನ ನಿಲ್ದಾಣ ಸಮೀಪದ 5286 ಎಕರೆ ಪ್ರದೇಶವನ್ನು 2200 ಕೋಟಿ ರು.ಗಳಿಗೆ ಸ್ವಾಧೀನಪಡಿಸಿಕೊಂಡಿದೆ ಎಂಬ ಸುದ್ದಿಯು ಇತ್ತೀಚೆಗೆ ಮಾಧ್ಯಮಗಳಲ್ಲಿ ಬಂದಿತ್ತು.



ರಿಲಯನ್ಸ್ ಕಂಪನಿಯು ಕಡಿಮೆ ಮೊತ್ತಕ್ಕೆ ಇದನ್ನು ಕಬಳಿಸಿದೆ ಎಂಬ ಅರ್ಥ ಬರುವಂತೆ ಶಿರೋನಾಮೆ ನೀಡಿ ಸುದ್ದಿ ಪ್ರಕಟಿಸಿ ಕೆಲ ಮಾಧ್ಯಮಗಳು ಜನರನ್ನು ದಾರಿತಪ್ಪಿಸುವ ಕೆಲಸವನ್ನು ಮಾಡಿದವು. ಇದನ್ನು ಆಧರಿಸಿ ವಿಪಕ್ಷಗಳು ಸಾಮಾಜಿಕ ಮಾಧ್ಯಮಗಳಲ್ಲಿ, 'ಕೇಂದ್ರ ಸರಕಾರ ಹಾಗೂ ಮಹಾರಾಷ್ಟ್ರ ರಾಜ್ಯ ಸರಕಾರ ಜತೆಗೂಡಿ ದೇಶದ ಆಸ್ತಿಯನ್ನು ಜುಜುಬಿ ಮೊತ್ತಕ್ಕೆ ಅಂಬಾನಿಗೆ ಮಾರುತ್ತಿವೆ' ಎಂದು ಹುಯಿಲೆಬ್ಬಿಸತೊಡಗಿದವು. ಚದರಡಿಗೆ 97 ರುಪಾಯಿಗಳನ್ನು ಮಾತ್ರ ಪಡೆಯಲಾಗಿದೆ, ಇದು 'ಕ್ರೋನಿ ಕ್ಯಾಪಿಟಲಿಸಂ' ಎಂದೂ ದೂರಲಾಯಿತು. ಆದರೆ ಈ ಸುದ್ದಿಯನ್ನು ಸರಿಯಾಗಿ ವಿಶ್ಲೇಷಿಸಿದರೆ, ಈ ಜಾಗವನ್ನು ಅಂಬಾನಿಗೆ ಮಾರಿದ್ದು ಆನಂದ್ ಜೈನ್ ಮಾಲೀಕತ್ವದ 'ಜೈ ಕಾರ್ಪ್' ಎಂಬ ಖಾಸಗಿ ಸಂಸ್ಥೆಯೇ ವಿನಾ ಕೇಂದ್ರ ಅಥವಾ ರಾಜ್ಯ ಸರಕಾರಗಳಲ್ಲ ಎಂಬುದು ತಿಳಿಯುತ್ತದೆ.

ಅದಾನಿ ಸಂಸ್ಥೆಯಂತೂ ಇಂಥ ಅರ್ಧಸತ್ಯಗಳ ದಾಳಿಗೆ ಸಿಲುಕುವುದು ಇತ್ತೀಚೆಗೆ ಸಾಮಾನ್ಯವಾಗಿಬಿಟ್ಟಿದೆ. 'ಭಾರತದ ಕೆಲ ರಾಜ್ಯಗಳಲ್ಲಿ ಸೋಲಾರ್ ಎನರ್ಜಿ ಸಂಬಂಧಿತ ಚಟುವಟಿಕೆಗಳ ಗುತ್ತಿಗೆ ಪಡೆಯಲು ಅದಾನಿ ಸಂಸ್ಥೆಯವರು ಆಯಾ ರಾಜ್ಯಗಳ ಸರಕಾರಿ ಅಧಿಕಾರಿಗಳಿಗೆ 265 ಮಿಲಿಯನ್ ಡಾಲರ್‌ನಷ್ಟು ಲಂಚ ನೀಡಿದ್ದಾರೆ' ಎನ್ನಲಾದ ದೋಷಾರೋಪ ಪಟ್ಟಿಯನ್ನು ನ್ಯೂಯಾರ್ಕಿನ ಜಿಲ್ಲಾ ನ್ಯಾಯಾಲಯವೊಂದು ಕಳೆದ ನವೆಂಬರ್‌ನಲ್ಲಿ ಅಂಗೀಕರಿಸಿತು. ಆರೋಪವು ಸಾಬೀತಾಗುವವರೆಗೂ ಸಂಸ್ಥೆಯವರನ್ನು ನಿರಪರಾಧಿಗಳೆಂದೇ ಪರಿಗಣಿಸಬೇಕೆಂದೂ ಅದೇ ಕೋರ್ಟ್ ಹೇಳಿತ್ತು. ಆದರೆ ಭಾರತದ ಒಂದಷ್ಟು ಮಾಧ್ಯಮಗಳ ಮುಖಪುಟದಲ್ಲಿ 'ಅಮೆರಿಕದ ನ್ಯಾಯಾಲಯದಿಂದ ಗೌತಮ್ ಅದಾನಿಯ ಮೇಲೆ ಅರೆಸ್ಟ್ ವಾರಂಟ್' ಎಂಬರ್ಥದ ಸುದ್ದಿ ಪ್ರಕಟವಾಗಿತ್ತು. 'ದೋಷಾರೋಪಣೆ'ಯನ್ನೇ 'ಅರೆಸ್ಟ್ ವಾರಂಟ್' ಎಂಬುದಾಗಿ ತಿರುಚಿ ಹರಿಬಿಡಲಾದ ಸುದ್ದಿಯದು. ಇದಕ್ಕೂ ಸಾಕಷ್ಟು ತಿಂಗಳು ಮೊದಲು ಅಮೆರಿಕದ ಹಿಂಡನ್‌ಬರ್ಗ್ ಸಂಸ್ಥೆಯು ಅದಾನಿಯವರನ್ನು ಗುರಿಯಿಟ್ಟುಕೊಂಡು ಮಾಡಿದ್ದ ಆರೋಪವು ಸುಳ್ಳೆಂಬುದು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಸಾಬೀತಾಗಿತ್ತು. ಅಮೆರಿಕದ ಜೋ ಬೈಡನ್ ಸರಕಾರದ ಮೇಲೆ ಬಹಳ ಪ್ರಭಾವವನ್ನು ಹೊಂದಿದ್ದ ಜಾರ್ಜ್ ಸೊರೋಸ್ ಎಂಬ ಜಾಗತಿಕ ಆರ್ಥಿಕ ಭಯೋತ್ಪಾದಕನು, ನರೇಂದ್ರ ಮೋದಿ ಸರಕಾರದ ಮತ್ತು ಅದಾನಿ ಸಂಸ್ಥೆಯ ವಿರುದ್ಧ ನಿರಂತರ ಮಸಲತ್ತು ನಡೆಸುತ್ತಿರುವ ವಿಚಾರ ಗೊತ್ತಿದ್ದರೂ ಕೆಲ ಮಾಧ್ಯಮಗಳು ಅದಾನಿ ಬಗೆಗಿನ ನಕಾರಾತ್ಮಕ ವರದಿಗಳನ್ನು ಪ್ರಕಟಿಸಿದ್ದವು.

ಕ್ಯಾರಮೆಲ್ ಪಾಪ್‌ಕಾರ್ನ್ ಮತ್ತು ಸೆಕೆಂಡ್‌ಹ್ಯಾಂಡ್ ಕಾರುಗಳ ಮಾರಾಟದ ಮೇಲೆ ಶೇ.18ರಷ್ಟು ಜಿಎಸ್‌ಟಿ ಹೇರಲಾಗಿದೆ ಎಂದು ಇತ್ತೀಚೆಗೆ ಸುದ್ದಿಗಳು ಪ್ರಕಟವಾಗಿದ್ದುಂಟು ಮತ್ತು ಕೇಂದ್ರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್‌ರ ಕುರಿತು ಟೀಕೆಗಳು ಹೊಮ್ಮುವುದಕ್ಕೂ ಅವು ಕಾರಣವಾಗಿದ್ದುಂಟು. 'ಉಪ್ಪು ಸೇರಿಸಲಾಗಿರುವ ಪಾಪ್‌ಕಾರ್ನ್ ಮೇಲೆ ಕೇವಲ ಶೇ.12ರಷ್ಟು ಜಿಎಸ್‌ಟಿ ಇರುವಾಗ, ಕ್ಯಾರಮೆಲ್ ಪಾಪ್‌ಕಾರ್ನ್‌ಗೆ ಶೇ.18ರಷ್ಟು ತೆರಿಗೆ ವಿಧಿಸಿದ್ದು ಎಷ್ಟು ಸರಿ?' ಎಂಬ ಪ್ರಶ್ನೆ ಈ ವೇಳೆ ಉದ್ಭವಿಸಿದ್ದುಂಟು. ಆದರೆ, ಕ್ಯಾರಮೆಲ್ ಪಾಪ್‌ಕಾರ್ನ್‌ಗೆ ಜಿಎಸ್‌ಟಿ ನಿಯಮದ ಪ್ರಕಾರವೇ ಶೇ.18ರ ತೆರಿಗೆ ವಿಧಿಸಲಾಗಿದೆ ಎಂಬ ವಿಷಯವನ್ನು ಕೆಲ ಮಾಧ್ಯಮಗಳು ಮುಚ್ಚಿಟ್ಟವೆ. ಜಿಎಸ್‌ಟಿ ನಿಯಮದಂತೆ ಹಾಲಿನಪುಡಿ, ಸಕ್ಕರೆ ಮೊದಲಾದ ಪದಾರ್ಥಗಳ ಸೇರ್ಪಡೆಯೊಂದಿಗೆ ತಯಾರಾಗುವ ಸಂಸ್ಕರಿತ ಆಹಾರವಸ್ತುಗಳು ಶೇ.18ರ ತೆರಿಗೆಗೆ ಒಳಗಾಗುತ್ತವೆ. ಕ್ಯಾರಮೆಲ್ ಪಾಪ್‌ಕಾರ್ನ್ ಕೂಡ ಈ ವರ್ಗಕ್ಕೆ ಸೇರಿದೆ ಎಂಬುದು ಗಮನಾರ್ಹ. ಇನ್ನು, ಜನರು ವೈಯಕ್ತಿಕ ನೆಲೆಯಲ್ಲಿ ಸೆಕೆಂಡ್‌ಹ್ಯಾಂಡ್ ಕಾರುಗಳನ್ನು ಮಾರುವಾಗ ಯಾವುದೇ ಜಿಎಸ್‌ಟಿ ಹೇರಲ್ಪಡುವುದಿಲ್ಲ; ಇಂಥ ಮಾರಾಟದಲ್ಲಿ ತೊಡಗಿರುವ ಕಂಪನಿಯೊಂದು ಹಾಗೆ ಕಾರನ್ನು ಮಾರಿದಾಗ, ಗಳಿಸಿದ ಲಾಭದ ಮೇಲೆ ಶೇ.18ರ ಜಿಎಸ್‌ಟಿ ಅನ್ವಯವಾಗುತ್ತದೆ. ಕಾರಿನ ಬೆಲೆಯ ಆಧಾರದಲ್ಲಿ ಹೇರಲ್ಪಡುವ ತೆರಿಗೆಯಲ್ಲ ಇದು.

ಇನ್ನು 'ಕೆಟ್ಟ ಸಾಲ'ಗಳನ್ನು ಬ್ಯಾಂಕುಗಳು 'ರೈಟ್-ಆಫ್' ಮಾಡುವ ಪ್ರಕ್ರಿಯೆಯನ್ನೂ, 'ಕೇಂದ್ರ ಸರಕಾರವು ಉದ್ಯಮಿಗಳ ಸಾಲವನ್ನು ಮನ್ನಾ ಮಾಡುತ್ತಿದೆ' ಎಂದು ಅಪಪ್ರಚಾರ ಮಾಡುವುದುಂಟು. 'ನಾನ್ ಪರ್ಫಾರ್ಮಿಂಗ್ ಅಸೆಟ್' (ಎನ್‌ಪಿಎ) ಮೇಲಿನ ಅನವಶ್ಯಕ ತೆರಿಗೆಯನ್ನು ತಪ್ಪಿಸಲಿಕ್ಕಾಗಿ ಬ್ಯಾಂಕುಗಳು ಕೆಟ್ಟ ಸಾಲವನ್ನು ತಮ್ಮ ಬ್ಯಾಲೆನ್ಸ್ ಶೀಟ್‌ನಿಂದ ಹೊರತೆಗೆದು ಪ್ರತ್ಯೇಕವಾಗಿ ತೋರಿಸುವ ಪ್ರಕ್ರಿಯೆಯನ್ನು 'ರೈಟ್-ಆಫ್' ಎನ್ನಲಾಗುತ್ತದೆ. ಇದು 'ಸಾಲ ಮನ್ನಾ' ಅಲ್ಲ. ರೈಟ್-ಆಫ್ ಆದ ಸಾಲವೂ ಮರುಪಾವತಿ ಅಥವಾ ವಸೂಲಾತಿಯಿಂದ ವಿನಾಯಿತಿ ಪಡೆಯುವುದಿಲ್ಲ; ಕೆಟ್ಟ ಸಾಲಗಳನ್ನೂ ಸರಕಾರವು ವಸೂಲಿ ಮಾಡಿಯೇ ಮಾಡುತ್ತದೆ. 2016ರಲ್ಲಿ ಸರಕಾರವು, Insolvency and Bankruptcy Code, 2016 ಎಂಬ ಕಾನೂನನ್ನು ಜಾರಿಗೆ ತಂದು, ಕೆಟ್ಟ ಸಾಲಗಾರರ ಆಸ್ತಿಯನ್ನು ಮಾರಾಟಮಾಡಿ ಅಥವಾ ಪರಭಾರೆ ಮಾಡಿ, ಸಾಲದ ಮೊತ್ತವನ್ನು ವಸೂಲಿ ಮಾಡುತ್ತಿದೆ. ಈ ಕಾನೂನಿನ ಸಹಾಯದಿಂದ ಕಳೆದ 8 ವರ್ಷಗಳಲ್ಲಿ 10 ಲಕ್ಷ ಕೋಟಿ ರುಪಾಯಿಯಷ್ಟು ಕೆಟ್ಟ ಸಾಲಗಳ ವಸೂಲಿಯಾಗಿದೆ. 2013-14ರಲ್ಲಿ ಭಾರತದ ಬ್ಯಾಂಕುಗಳ ಎನ್‌ಪಿಎ ಪ್ರಮಾಣವು ಶೇ.5.32ರಷ್ಟಿದ್ದುದು ಪ್ರಸ್ತುತ ಶೇ.2.6ಕ್ಕೆ ಇಳಿದಿದೆ. ಆದರೆ 'ರೈಟ್ ಆಫ್' ಪ್ರಕ್ರಿಯೆಯನ್ನು 'ಸಾಲ ಮನ್ನಾ' ಎಂದು ಬಿಂಬಿಸಿ ಜನರಲ್ಲಿ ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ಬಗ್ಗೆ ಕೆಟ್ಟಭಿಪ್ರಾಯ ತರಿಸುವ ಯತ್ನಗಳಾಗುತ್ತಿವೆ.

ಇದೇ ರೀತಿಯಲ್ಲಿ, 'ಭಾರತ ಸರಕಾರವು 2 ಟ್ರಿಲಿಯನ್ ಡಾಲರ್‌ನಷ್ಟು ಸಾಲದ ಸುಳಿಯಲ್ಲಿ ಸಿಲುಕಿದೆ' ಎಂಬ ಸುದ್ದಿಗೆ ಬರೋಣ. ಇಷ್ಟು ಸಾಲವಿರುವುದು ನಿಜವೇ, ಆದರೆ ಈ ಸುದ್ದಿಯ ಜತೆಗೆ ಇನ್ನೊಂದಿಷ್ಟು ವಿವರಗಳಿವೆ. ಈ ಒಂದಿಡೀ ಮೊತ್ತಕ್ಕೆ ಕೇಂದ್ರ ಸರಕಾರವಷ್ಟೇ ಬಾಧ್ಯಸ್ಥನಲ್ಲ, ರಾಜ್ಯ ಸರಕಾರಗಳೂ ಸೇರಿವೆ. ಅಂದರೆ, ಕೇಂದ್ರ ಮತ್ತು ರಾಜ್ಯ ಸರಕಾರಗಳು, ದೇಶಿ-ವಿದೇಶಿ ವಿತ್ತ ಸಂಸ್ಥೆಗಳಿಂದ ಮಾಡಿದ ಸಾಲಗಳು ಇದರಲ್ಲಿ ಸೇರಿವೆ. 2 ಟ್ರಿಲಿಯನ್ ಸಾಲವು ಭಾರತದ ಪ್ರಸಕ್ತ ವಾರ್ಷಿಕ ಜಿಡಿಪಿಯ (4 ಟ್ರಿಲಿಯನ್) ಅರ್ಧದಷ್ಟು ಮಾತ್ರ ಇದೆ. ಜಪಾನ್‌ನ ಸಾಲವು, ಆ ದೇಶದ ಜಿಡಿಪಿಗಿಂತ 2.5 ಪಟ್ಟು ಹೆಚ್ಚಿದೆ. ಅಮೆರಿಕ ಮತ್ತು ಐರೋಪ್ಯ ದೇಶಗಳ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಈ ದೇಶಗಳ ಸಾಲದ ಪರಿಸ್ಥಿತಿಯನ್ನು ಅವಲೋಕಿಸಿದರೆ ಭಾರತದ ಸಾಲವು ಒಂದು ಗಂಭೀರ ವಿಷಯವೇ ಅಲ್ಲ!

'ಅರ್ಧಸತ್ಯಗಳ ಸಮಸ್ಯೆ'ಯನ್ನು ನಿಭಾಯಿಸುವ ಕೆಲಸವು ಜನರಿಂದಲೇ ಆಗಬೇಕಿರುವಂಥದ್ದು. ಸುದ್ದಿಯ ಶೀರ್ಷಿಕೆ ನೋಡಿ ಸಾರಾಸಗಟು ನಿರ್ಧಾರಕ್ಕೆ ಬರುವ ಮೊದಲು ಆ ಸುದ್ದಿಯನ್ನು ಆಳವಾಗಿ ಅಧ್ಯಯನ ಮಾಡಿ ಸತ್ಯಾಸತ್ಯತೆಯನ್ನು ಅರಿಯಲು ಯತ್ನಿಸಬೇಕು. ದಾರಿ ತಪ್ಪಿಸುವ ಸುದ್ದಿಯ ಮೂಲವನ್ನು ಪ್ರಶ್ನಿಸಬೇಕು. ಸುದ್ದಿಯಲ್ಲಿ ತಪ್ಪಿಹೋಗಿರುವ ಅಂಶಗಳನ್ನು ಕಲೆಹಾಕಬೇಕು, ವಾಸ್ತವಿಕ ಪುರಾವೆಯನ್ನು ಒದಗಿಸಬೇಕು ಮತ್ತು ಸುಳ್ಳು ನಿರೂಪಣೆಗೆ ಸವಾಲೊಡ್ಡಬೇಕು. ಹೀಗೆ ಮಾಡಿದರೆ ಮಾತ್ರವೇ ನಾವು ಅರ್ಧಸತ್ಯಗಳನ್ನು ಸಮರ್ಥವಾಗಿ ನಿಭಾಯಿಸಬಹುದು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಹುಟ್ಟುಗುಣ ಸುಟ್ರೂ ಹೋಗಲ್ಲ!

ಇದು ಮಹಾರಾಷ್ಟ್ರದಿಂದ ಬಂದಿರುವ ಸುದ್ದಿ ಮಾರಾಯ್ರೇ! ಅಲ್ಲಿ ಇತ್ತೀಚೆಗಷ್ಟೇ ವಿಧಾನಸಭಾ ಚುನಾವಣೆ ನಡೆದು, ಹೊಸ ಸರಕಾರವೂ ಅಸ್ತಿತ್ವಕ್ಕೆ ಬಂದಿದ್ದು ನಿಮಗೆ ಗೊತ್ತಿದೆ. ಆದರೆ ಆ ಸಂದರ್ಭದಲ್ಲಿ ಘಟಿಸಿದ ಒಂದು ಸ್ವಾರಸ್ಯಕರ ಘಟನೆ ನಿಮ್ಮ ಅರಿವಿಗೆ ಬಂದಂತಿಲ್ಲ ಎಂಬುದು ನಾರದರ ಸ್ಪಷ್ಟಗ್ರಹಿಕೆ. ಅದು ಎನ್‌ಸಿಪಿಯ ಮತ್ತೊಂದು ಬಣದ ಘಟಾನುಘಟಿ ಹಾಗೂ ಮಹಾರಾಷ್ಟ್ರದ ಉಪಮುಖ್ಯಮಂತ್ರಿಗಳಲ್ಲಿ ಒಬ್ಬರಾಗಿರುವ ಅಜಿತ್ ಪವಾರ್ ಅವರ ಕುರಿತದ್ದು ಎನ್ನಿ. ವಿಧಾನಸಭಾ ಚುನಾವಣೆಯಲ್ಲಿ ಸದರಿ ಪವಾರರ ತಂಡವು ಪ್ರಖ್ಯಾತ ರಾಜಕೀಯ ತಂತ್ರಗಾರರನ್ನು ನೇಮಿಸಿಕೊಂಡಿತ್ತಂತೆ. 'ಕಾಸಿಗೆ ತಕ್ಕಂತೆ ಕಜ್ಜಾಯವನ್ನೂ ಕೊಡಬೇಕು' ಎಂಬ ಮಾತಿನಂತೆ ಆ ತಂತ್ರಗಾರರು ನೀಡಿದ ಒಂದಷ್ಟು ಸಲಹೆ-ಸೂಚನೆಗಳಲ್ಲಿ, ''ಸಾರ್ವಜನಿಕ ಸಭೆಯಲ್ಲಿ ಭಾಗಿಯಾಗಿದ್ದಾಗ ಅಜಿತ್ ಪವಾರರು ನಯವಾಗಿ ಮಾತಾಡಬೇಕು, ಯಾವಾಗಲೂ 'ಕಿಲಕಿಲ' ಅಂತ ನಗುತ್ತಾ ಇರಬೇಕು'' ಎಂಬ ಕಿವಿಮಾತೂ ಸೇರಿತ್ತಂತೆ! ಅದನ್ನು ಪವಾರರು ತಮ್ಮ 'ಶಕ್ತ್ಯಾನುಸಾರ' ಪಾಲಿಸಿದ್ದೂ ಆಯ್ತಂತೆ. ಆದರೆ ಫಲಿತಾಂಶ ಬಂದಿದ್ದೇ ಬಂದಿದ್ದು, ಪವಾರರು ತಮ್ಮ ಸಹಜಸ್ವಭಾವಕ್ಕೆ ಮರಳಿಬಿಟ್ಟರಂತೆ. ಬಾರಾಮತಿ ಕ್ಷೇತ್ರದಲ್ಲಿ ನಡೆದ ಸಭೆಯೊಂದು ಇದನ್ನು ಪುಷ್ಟೀಕರಿಸಿದೆ. ಸಭೆಯಲ್ಲಿ ಪಾಲ್ಗೊಂಡಿದ್ದ ಕೆಲವರು, ''ಆ ಯೋಜನೆ ಬೇಕು, ಈ ಕೆಲಸವಾಗಬೇಕು, ಇಂಥ ಕಾರ್ಯಕ್ರಮ ಜಾರಿಯಾಗಬೇಕು'' ಎಂದೆಲ್ಲಾ ಆಗ್ರಹಗಳ ಪಟ್ಟಿಯನ್ನು ಬೆಳೆಸುತ್ತಲೇ ಹೋದರಂತೆ. ಶುರುವಿನಲ್ಲಿ ತಣ್ಣಗಿದ್ದ ಪವಾರ್ ಮಹಾಶಯರು, ಕೆಲ ಕ್ಷಣದ ನಂತರ ವೇದಿಕೆಯಿಂದಲೇ ಕೆಂಡವನ್ನು ಉಗುಳಲು ಶುರುಮಾಡಿದರಂತೆ. ''ನೀವು ನನಗೆ ವೋಟು ನೀಡಿರಬಹುದು ಕಣ್ರಪ್ಪಾ, ಹಾಗಂತ ನನ್ನನ್ನು ಖರೀದಿಸಿಬಿಟ್ಟಿದ್ದೀರಿ ಅಥವಾ ನನ್ನ ಮಾಲೀಕರಾಗಿಬಿಟ್ಟಿದ್ದೀರಿ ಅಂತ ಅರ್ಥವಾ? ನೀವು ನನ್ನ ಧಣಿಗಳೂ ಅಲ್ಲ, ನಾನು ನಿಮ್ಮ ಗುತ್ತಿಗೆ ಕಾರ್ಮಿಕನೂ ಅಲ್ಲ'' ಎಂದು ಅಬ್ಬರಿಸಿಬಿಟ್ಟರಂತೆ ಅಜಿತ್ ಪವಾರರು.

ಯಾರಾದರೂ ಪತ್ತೇದಾರಿ ಕಾದಂಬರಿಕಾರರು, 'ಅಜಿತನ ಸಾಹಸಗಳು' ಸರಣಿಯಲ್ಲಿ ಮತ್ತೊಂದು ಪುಸ್ತಕವನ್ನು ಲೋಕಾರ್ಪಣೆ ಮಾಡಲು ಇದು ಸಕಾಲ ಎಂಬುದು ನಾರದರ 'ಪ್ರಾಸಂಗಿಕ ಫಿಟಿಂಗು'..!!

ನಾರಾಯಣ ನಾರಾಯಣ!

ಒಂದು ಪೈಸೆಯ ನೂರು 'ಚಿಲ್ಲರೆ' ಸೇರಿದರೆ ಮಾತ್ರವೇ ಒಂದು ರುಪಾಯಿಯ 'ಬಂದಾ' ಆಗೋದು, ಅದರಲ್ಲಿ ಒಂದೇ ಒಂದು ಪೈಸೆ ಕಡಿಮೆಯಾದರೂ ಅದು 'ಒಂದು ರುಪಾಯಿಯ ಬಂದಾ' ಎನಿಸಿಕೊಳ್ಳುವುದಿಲ್ಲ. 'ಚಿಲ್ಲರೆ'ಯ ಈ ಮಹತ್ವ ಗೊತ್ತಿದ್ದರೂ ಕೆಲವರು ಅದರ ಕುರಿತು ಹೀಗಳೆಯುವುದಿದೆ. ''ಕೊನೆಗೂ ತೋರಿಸಿಬಿಟ್ರಲ್ಲಾ 'ಚಿಲ್ಲರೆ' ಬುದ್ಧಿ..?'' ಅಂತ ಮತ್ತೊಬ್ಬರನ್ನು ಹಂಗಿಸೋದ್ರಿಂದ ಮೊದಲ್ಗೊಂಡು, ''ನಿನ್ನ ಈ ದವಲತ್ತಿಗೆ ನನ್ ಹತ್ರ 'ಚಿಲ್ಲರೆ' ಇಲ್ಲ ಗುರೂ...'' ಎಂದು ಹೇಳುವಷ್ಟರ ಮಟ್ಟಿಗೆ 'ಚಿಲ್ಲರೆ'ಯು 'ಚಿತ್ರಾನ್ನ' ಆಗುವುದಿದೆ! ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿಯು ಶೇ.6.4ಕ್ಕೆ ಕುಸಿಯುವ ಸಾಧ್ಯತೆಯಿದೆ ಎಂದು ಅಂದಾಜಿಸಿರುವ ಬೆನ್ನಲ್ಲೇ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ವಿಪಕ್ಷಗಳು, ''ಚಿಲ್ಲರೆ ರಾಜಕಾರಣ ಮಾಡುವುದನ್ನು ಬಿಟ್ಟು, ಜನಕಲ್ಯಾಣಕ್ಕೆ ಆದ್ಯತೆ ನೀಡಿ'' ಎಂದು ಕುಟುಕಿರುವುದು ಇದಕ್ಕೊಂದು ಲೇಟೆಸ್ಟ್ ಉದಾಹರಣೆ! ಇದಕ್ಕೆ ನೀವೇನಂತೀರೋ?

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 247

ಸಮಾಚಾರ ಸಣ್ಣದಲ್ಲ

ಛೋಟಾ ರಾಜನ್ ಆಸ್ಪತ್ರೆಗೆ ದಾಖಲು

ದೆಹಲಿ: ತಿಹಾರ್ ಜೈಲಿನಲ್ಲಿರುವ ಭೂಗತ ಪಾತಕಿ ಛೋಟಾ ರಾಜನ್‌ನನ್ನು ಅನಾರೋಗ್ಯದ ಕಾರಣದಿಂದಾಗಿ ಶುಕ್ರವಾರ ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂಲಗಳ ಪ್ರಕಾರ, ರಾಜನ್‌ಗೆ ಸೈನಸ್ ಸಮಸ್ಯೆ ಇದ್ದು, ಶಸ್ತ್ರಚಿಕಿತ್ಸೆಗೆ ಒಳಪಡಿಸಬಹುದು ಎಂದು ತಿಳಿದು ಬಂದಿದೆ. ದಾವೂದ್ ಇಬ್ರಾಹಿಂನ ಆಪ್ತ ಸಹಾಯಕನಾಗಿದ್ದ ರಾಜನ್, 2001ರಲ್ಲಿ ಹೊಟೇಲ್ ಉದ್ಯಮಿ ಜಯ ಶೆಟ್ಟಿ ಕೊಲೆಗೆ ಸಂಬಂಧಿಸಿದಂತೆ 2024 ರಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ. 2024ರ ಅಕ್ಟೋಬರ್‌ನಲ್ಲಿ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಂಬೆ ಹೈಕೋರ್ಟ್ ಜೀವಾವಧಿ ಶಿಕ್ಷೆಯನ್ನು ರದ್ದುಗೊಳಿಸಿತ್ತು. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ಸಿಕ್ಕಿದ್ದರೂ, ಇತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಿಡುಗಡೆ ದೊರಕಿರಲಿಲ್ಲ.

ಬಾಂಬ್ ಬೆದರಿಕೆ: ವಿದ್ಯಾರ್ಥಿಯ ಕೈವಾಡ

ದೆಹಲಿ: ಇಲ್ಲಿನ ವಿವಿಧ ಶಾಲೆಗಳಿಗೆ ಬಂದ ಬಾಂಬ್ ಬೆದರಿಕೆಯ ಹಿಂದೆ ದ್ವಿತೀಯ ಪಿಯುಸಿ ವಿದ್ಯಾರ್ಥಿಯ ಕೈವಾಡವಿದೆ ಎಂಬುದು ತಿಳಿದುಬಂದಿದ್ದು, ಈ ಕುರಿತು ಪೊಲೀಸರು ಮಾಹಿತಿ ನೀಡಿದ್ದಾರೆ. ತಾನು ಈ ಹಿಂದೆಯೂ ಬೆದರಿಕೆ ಇ-ಮೇಲ್‌ಗಳನ್ನು ಕಳುಹಿಸಿದ್ದಾಗಿ ಒಪ್ಪಿಕೊಂಡಿದ್ದಾನೆ ಎಂದು ದಕ್ಷಿಣ ಡಿಸಿಪಿ ಅಂಕಿತ್ ಚೌಹಾಣ್, ದೆಹಲಿ ಪೊಲೀಸರನ್ನು ಉಲ್ಲೇಖಿಸಿ ಎಎನ್‌ಐ ವರದಿ ಮಾಡಿದೆ. ಬಾಂಬ್ ಬೆದರಿಕೆಗಳು ಶಾಲಾ ಅಧಿಕಾರಿಗಳಲ್ಲಿ ಭೀತಿಯನ್ನು ಉಂಟು ಮಾಡಿತ್ತು. ದೆಹಲಿ ಪೊಲೀಸರು ಈ ವಾರ ಇಂತಹ ಬಿಕ್ಕಟ್ಟುಗಳನ್ನು ಎದುರಿಸಲು ಶಿಕ್ಷಕರು ಮತ್ತು ಶಾಲಾ ಸಿಬ್ಬಂದಿಗೆ ತರಬೇತಿ ನೀಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಎಲ್ಲಾ ಸರಕಾರಿ ಮತ್ತು ಖಾಸಗಿ ಶಾಲೆಗಳ ಶಿಕ್ಷಕರಿಗೆ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಪೊಲೀಸರು ವಿಚಾರ ಸಂಕಿರಣವನ್ನು ಆಯೋಜಿಸಿದ್ದಾರೆ ಎಂದು ಅಧಿಕಾರಿ ತಿಳಿಸಿದರು. ಶಾಲೆಗಳಲ್ಲಿ ಬಾಂಬ್ ಬೆದರಿಕೆಯ ಸಂದರ್ಭದಲ್ಲಿ ಶಾಂತವಾಗಿರುವುದು, ಪ್ರತಿಕ್ರಿಯಿಸುವುದು ಮತ್ತು ಪೊಲೀಸರೊಂದಿಗೆ ಸಮನ್ವಯ ಸಾಧಿಸುವುದು ಹೇಗೆ ಎಂಬುದರ ಕುರಿತು ಈ ಸೆಮಿನಾರ್ ಇದೆ. ಬುಧವಾರ ಬೆಳಗ್ಗೆ ದೆಹಲಿಯ ಕನಿಷ್ಠ 16 ಶಾಲೆಗಳಿಗೆ ಇಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಬಾಂಬ್ ಪತ್ತೆ ದಳಗಳು ಶಾಲೆಗಳಲ್ಲಿ ಸಮೀಕ್ಷೆ ನಡೆಸಿದ್ದು, ಅನುಮಾನಾಸ್ಪದವಾಗಿ ಏನೂ ಸಿಗದ ಹಿನ್ನೆಲೆಯಲ್ಲಿ ಸುಳ್ಳು ಬೆದರಿಕೆ ಎಂದು ಹೇಳಿದ್ದಾರೆ.

ರಾಷ್ಟ್ರ ಮೊದಲೆಂಬ ಮನೋಭಾವವಿರಲಿ | ನಿಖಿಲ್ ಕಾಮತ್ ಪಾಡ್‌ಕಾಸ್ಟ್‌ನಲ್ಲಿ ಪ್ರಧಾನಿ

ನಾನೂ ಮನುಷ್ಯ, ದೇವರಲ್ಲ: ಮೋದಿ

ದೆಹಲಿ: ನಾನು ಕೂಡ ಮನುಷ್ಯ, ದೇವರಲ್ಲ. ತಪ್ಪುಗಳು ಸಂಭವಿಸುವುದು ಸಹಜ, ನಾನು ಕೂಡ ತಪ್ಪುಗಳನ್ನು ಮಾಡಬಹುದು ಎಂದು ಪ್ರಧಾನಿ ಮೋದಿ ಹೇಳಿಕೊಂಡಿದ್ದಾರೆ.

ಯುವ ಉದ್ಯಮಿ ನಿಖಿಲ್ ಕಾಮತ್ ನಡೆಸಿಕೊಟ್ಟ ಪೀಪಲ್ ಬೈ ಡಬ್ಲ್ಯುಟಿಎಫ್ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ ಮೋದಿ, ಯವಕರು ದೇಶಕ್ಕೆ ಏನಾದರೂ ಮಾಡ ಬೇಕು ಎಂಬ ಧ್ಯೇಯೋದ್ದೇಶದೊಂದಿಗೆ ರಾಜಕೀಯಕ್ಕೆ ಬರಬೇಕೇ ವಿನಃ ಯಾವುದೋ ಸ್ವಾರ್ಥ ಮಹತ್ವಾಕಾಂಕ್ಷೆಯೊಂದಿಗೆ ಬರುವುದು ಸರಿಯಲ್ಲ ಎಂದಿದ್ದಾರೆ. ರಾಜಕೀಯಕ್ಕೆ ಬರುವುದೇ ಬೇರೆ, ರಾಜಕೀಯದಲ್ಲಿ ಯಶಸ್ವಿಯಾಗುವುದೇ ಬೇರೆ. ರಾಜಕೀಯದಲ್ಲೂ ಅಷ್ಟೇ ಕ್ರೀಡೆಯಂತೆ ತಂಡದ ಆಟಗಾರರಾಗಿದ್ದರೆ ಸಾಲದು, ಯಶಸ್ವಿಯಾಗಬೇಕಾದರೆ ಒಳ್ಳೆಯ ಉದ್ದೇಶದೊಂದಿಗೆ ಇರಬೇಕಾಗುತ್ತದೆ ಎಂದೂ ಹೇಳಿದ್ದಾರೆ.

ಉದ್ಯಮಿಯಾಗಬೇಕೆನ್ನುವವರು ತಮ್ಮ ಕಂಪನಿಯ ಬೆಳವಣಿಗೆಯನ್ನು ನೋಡುತ್ತಾರೆ. ಆದರೆ ರಾಜಕಾರಣಿಯಾಗಬೇಕೆನ್ನುವವರು ತಮಗೆ ರಾಷ್ಟ್ರ ಮೊದಲು ಎನ್ನುತ್ತಾ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಲು ಸಿದ್ಧರಾಗಿರಬೇಕು, ಆಗ ಅವರನ್ನು ಸಮಾಜ ಒಪ್ಪಿಕೊಳ್ಳುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ, ಸಮಾಜದ ಎಲ್ಲಾ ವರ್ಗಗಳ ಹಲವಾರು ನಾಯಕರು ಭಾಗವಹಿಸಿದ್ದರು. ಅವರೆಲ್ಲರ ಚಳವಳಿಯು ದೇಶಭಕ್ತಿಯ ಉತ್ಸಾಹದಿಂದ ಪ್ರೇರಿತವಾಗಿತ್ತು. ಅದರಲ್ಲಿ ಒಂದು ಗುಂಪು ಮಾತ್ರ ರಾಜಕೀಯದತ್ತ ಮುಖ ಮಾಡಿತ್ತು, ಏಕೆಂದರೆ ಆ ನಾಯಕರು ವಿಭಿನ್ನ ಆಲೋಚನೆಗಳು ಮತ್ತು ಪ್ರಬುದ್ಧತೆಯನ್ನು ಹೊಂದಿದ್ದರು. ಆ ಹೋರಾಟಗಾರರೂ ದೇಶಕ್ಕಾಗಿ ತ್ಯಾಗ ಮಾಡಲು ಬಯಸಿದ್ದರು ಎಂದೂ ಮೋದಿ ಹೇಳಿಕೊಂಡಿದ್ದಾರೆ.

ಪಾಡ್‌ಕಾಸ್ಟ್‌ನಲ್ಲಿ ತಮ್ಮ ಮಾತು ಮುಂದುವರೆಸಿದ ಅವರು, ಅಹಿಂಸೆಯ ಬಗ್ಗೆ ಮಾತನಾಡುತ್ತಿದ್ದ ಮಹಾತ್ಮ ಗಾಂಧಿಯವರು ತಮ್ಮಗಿಂತ ಎತ್ತರದ ಕೋಲನ್ನು ಒಯ್ಯುತ್ತಿದ್ದರು, ಅದು ಅವರ ಸಂವಹನ ಶಕ್ತಿಯಾಗಿತ್ತು. ಅವರು ಎಂದಿಗೂ ಟೋಪಿ ಧರಿಸಿರಲಿಲ್ಲ, ಆದರೆ ಜಗತ್ತು ಗಾಂಧಿಟೋಪಿಯನ್ನು ಧರಿಸುತ್ತದೆ. ಗಾಂಧಿಯವರು ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದರು, ಅವರು ಎಂದಿಗೂ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ ಎಂದು ಮೋದಿ ಪಾಡ್‌ಕಾಸ್ಟ್ ಸಂದರ್ಶನದಲ್ಲಿ ಹೇಳಿದ್ದಾರೆ.

ನಿಖಿಲ್ ಕಾಮತ್ ನಡೆಸಿದ ಪೂರ್ಣ ಸಂದರ್ಶನವು ಜನವರಿ-14ರಂದು ಸಂಕ್ರಾಂತಿಯ ದಿನ ಬಿಡುಗಡೆಯಾಗಬಹುದು ಎಂಬ ನಿರೀಕ್ಷೆ ಇದೆ.

> ಇಂದಿನ ದಿನಮಾನಗಳಲ್ಲಿ ನಾಯಕರ ಕುರಿತ ವ್ಯಾಖ್ಯಾನವೇ ಬದಲಾಗಿದೆ. ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದ ಮಹಾತ್ಮ ಗಾಂಧಿಯವರು ನಾಯಕರ ಕುರಿತಾಗಿರುವ ಇವತ್ತಿನ ವ್ಯಾಖಾನಕ್ಕೆ ತದ್ವಿರುದ್ಧವಾಗಿದ್ದರು. ಅವರು ಮೃದು ಸ್ವಭಾವಿಯಾಗಿದ್ದರಲ್ಲದೆ, ಹೆಚ್ಚು ಮಾತನಾಡುತ್ತಿರಲಿಲ್ಲ. ಆದರೆ ಅವರ ಮಾತನಾಡದೇ ಇದ್ದರೂ ಸಹ ಅವರನ್ನು ಇಡೀ ದೇಶವೇ ಇಂಬಾಲಿಸುತ್ತಿತ್ತು.
> -ನರೇಂದ್ರ ಮೋದಿ, ಪ್ರಧಾನಿ

ಯುದ್ಧಗಳ ಬಗ್ಗೆ ಮೋದಿ ವ್ಯಾಖ್ಯಾನ

ಪಾಡ್‌ಕ್ಯಾಸ್ಟ್‌ನಲ್ಲಿ ನಿಖಿಲ್ ಕಾಮತ್ ಅವರು ಪ್ರಧಾನಿ ಮೋದಿಗೆ, ವಿಶ್ವದಲ್ಲಿ ನಡೆಯುತ್ತಿರುವ ವಿವಿಧ ದೇಶಗಳ ನಡುವಿನ ಯುದ್ಧಗಳ ಬಗ್ಗೆಯೂ ಪ್ರಶ್ನೆ ಕೇಳಿ ಜಗತ್ತಿನಲ್ಲಿ ಏನು ನಡೆಯುತ್ತಿದೆ ಎಂದು ನಾವು ಚಿಂತಿಸಬೇಕೇ ಎಂದು ಕೇಳಿದರು. ಆ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಮೋದಿ, ಈ ಬಿಕ್ಕಟ್ಟಿನ ಸಂದರ್ಭದಲ್ಲಿ ನಾವು ತಟಸ್ಥರಾಗಿ ಇರಬಾರದು ಎಂದು ನಿರಂತರವಾಗಿ ಹೇಳುತ್ತಲೇ ಬಂದಿದ್ದೇನೆ, ನಾನು ಯಾವಾಗಲೂ ಶಾಂತಿಗಾಗಿ ಇದ್ದೇನೆ ಎಂದು ಹೇಳಬಯಸುತ್ತೇನೆ ಎಂದಿದ್ದಾರೆ.

ನಿಖಿಲ್ ಕಾಮತ್ ಹಿನ್ನೆಲೆ

ಮೂಲತ ಬೆಂಗಳೂರಿನವರಾದ ನಿಖಿಲ್ ಕಾಮತ್ ಯುವ ಉದ್ಯಮಿ. ಜೆರೋಧ ಸಹ ಸಂಸ್ಥಾಪಕರಲ್ಲಿ ಒಬ್ಬರಾಗಿರುವ ಅವರು ದೇಶದ ಸಿರಿವಂತ ಪಟ್ಟಿಯಲ್ಲಿ ಪ್ರಮುಖರೆನಿಸಿಕೊಂಡಿದ್ದಾರೆ. ಫೋರ್ಬ್ಸ್ ಪ್ರಕಾರ ಅವರೀಗ ಸುಮಾರು 25,850 ಕೋಟಿ ರೂ. (3.1 ಬಿಲಿಯನ್ ಡಾಲರ್) ಒಡೆಯರಾಗಿದ್ದಾರೆ. . ತಮ್ಮದೇ ಆದ ಯಂಗ್ ಇಂಡಿಯನ್ ಫಿಲಾಂತ್ರೊಪಿಕ್ ಫೌಂಡೇಶನ್ ಹೊಂದಿರುವ ಅವರು, ತಮ್ಮ ಸಂಪತ್ತಿನ ಅರ್ಧದಷ್ಟನ್ನು ದತ್ತಿ ಕಾರ್ಯಗಳಿಗೆ ದಾನ ಮಾಡುವ ವಾಗ್ದಾನ ಮಾಡಿದ್ದಾರೆ. ಈ ರೀತಿ ನಿರ್ಧಾರ ತೆಗೆದುಕೊಂಡಿರುವ ನಾಲ್ಕನೇ ಹಾಗೂ ಅತಿ ಕಿರಿಯ ಭಾರತೀಯ ಎನಿಸಿಕೊಂಡಿದ್ದಾರೆ

ದೆಹಲಿಯಲ್ಲಿ ದಟ್ಟ ಮಂಜು

100ಕ್ಕೂ ಹೆಚ್ಚು ವಿಮಾನಗಳು ವಿಳಂಬ

ದೆಹಲಿ: ರಾಜಧಾನಿ ದೆಹಲಿಯಲ್ಲಿ ಶುಕ್ರವಾರ ದಟ್ಟವಾದ ಮಂಜಿನ ಹೊದಿಕೆ ಆವರಿಸಿದ್ದು, ವಿಮಾನ ಮತ್ತು ರೈಲು ಕಾರ್ಯಾಚರಣೆಯ ಮೇಲೆ ಪರಿಣಾಮ ಬೀರಿದೆ.

ಇಂದಿರಾ ಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 100ಕ್ಕೂ ಹೆಚ್ಚು ವಿಮಾನಗಳು ವಿಳಂಬವಾಗಿವೆ ಮತ್ತು 26 ರೈಲುಗಳು ತಡವಾಗಿ ಚಲಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದಟ್ಟ ಮಂಜಿನಿಂದಾಗಿ, ವಿಮಾನ ನಿರ್ಗಮನದ ಮೇಲೆ ಪರಿಣಾಮ ಬೀರಿದೆ. ಭಾರತೀಯ ಹವಾಮಾನ ಇಲಾಖೆ ಪ್ರಕಾರ, ಶುಕ್ರವಾರ ನಸುಕಿನ ಜಾವ 4.3ರಿಂದ ಪಾಲಂ ಮೇಲೆ ಶೂನ್ಯ ಗೋಚರತೆ ಇದ್ದು, ಗಂಟೆಗೆ 6-8 ಕಿ.ಮೀ ವೇಗದಲ್ಲಿ ಗಾಳಿ ಬೀಸಿದೆ. ಸಫ್ದರ್ಜಂಗ್‌ನಲ್ಲಿ ಬೆಳಿಗ್ಗೆ 5.30ರಿಂದ ಶಾಂತ ಗಾಳಿಯೊಂದಿಗೆ ದಟ್ಟವಾದ ಮಂಜಿನಲ್ಲಿ ಗೋಚರತೆ ಕನಿಷ್ಠ 50 ಮೀಟರ್‌ಗೆ ಸೀಮಿತವಾಗಿದೆ ಎಂದು ಹೇಳಿದೆ. ದೆಹಲಿಯಲ್ಲಿ ಕನಿಷ್ಠ ತಾಪಮಾನ 6 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ಸಾಮಾನ್ಯಕ್ಕಿಂತ 0.9 ಡಿಗ್ರಿ ಕಡಿಮೆಯಾಗಿದೆ, ಆದರೆ ಗಾಳಿಯ ಗುಣಮಟ್ಟ ತೀವ್ರ ವರ್ಗದಲ್ಲಿ ದಾಖಲಾಗಿದೆ. ಕನಿಷ್ಠ ತಾಪಮಾನ 6 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ಗರಿಷ್ಠ ತಾಪಮಾನವು ತುಂಬಾ ದಟ್ಟವಾದ ಮಂಜು ಜೊತೆಗೆ 16 ಡಿಗ್ರಿ ಸೆಲ್ಸಿಯಸ್ ಇದೆ. ದೆಹಲಿ ನಗರ ಆಶ್ರಯ ಸುಧಾರಣಾ ಮಂಡಳಿಯು ನಿರಾಶ್ರಿತರಿಗೆ ಆಶ್ರಯ ನೀಡಲು 235 ಪಗೋಡಾ ಟೆಂಟ್‌ಗಳನ್ನು ಸ್ಥಾಪಿಸಲಾಗಿದೆ. ಏಮ್ಸ್, ಲೋಧಿ ರಸ್ತೆ ಮತ್ತು ನಿಜಾಮುದ್ದೀನ್ ಫ್ಲೈಓವರ್ ಸೇರಿದಂತೆ ರಾಷ್ಟ್ರ ರಾಜಧಾನಿಯ ಹಲವಾರು ಪ್ರದೇಶಗಳಲ್ಲಿ ರಾತ್ರಿ ಆಶ್ರಯಗಳನ್ನು ಸ್ಥಾಪಿಸಲಾಗಿದೆ.

ವಾಯುಮಟ್ಟದಲ್ಲೂ ತೀವ್ರ ಇಳಿಕೆ

ರಾಷ್ಟ್ರ ರಾಜಧಾನಿಯಲ್ಲಿ ಗಾಳಿಯ ಗುಣಮಟ್ಟ ತೀವ್ರ ಇಳಿಕೆಯಾಗಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಪ್ರಕಾರ, ದೆಹಲಿಯಲ್ಲಿ ಶುಕ್ರವಾರ ಬೆಳಗ್ಗೆ 9 ಗಂಟೆಗೆ ವಾಯು ಗುಣಮಟ್ಟ ತೀವ್ರವಾಗಿ ಇಳಿದಿದ್ದು 312 ಎಂಬುದಾಗಿ ದಾಖಲಾಗಿದೆ. ಶೂನ್ಯ ಮತ್ತು 50ರ ನಡುವಿನ ವಾಯು ಗುಣಮಟ್ಟವನ್ನು ಉತ್ತಮ, 51 ಮತ್ತು 100 ತೃಪ್ತಿದಾಯಕ, 101 ಮತ್ತು 200 ಮಧ್ಯಮ, 201 ಮತ್ತು 300 ಕಳಪೆ, 301 ಮತ್ತು 400 ತುಂಬಾ ಕಳಪೆ ಮತ್ತು 401 ಮತ್ತು 500 ತೀವ್ರ ಎಂದು ಪರಿಗಣಿಸಲಾಗಿದೆ.

ಮೂರು ಮಕ್ಕಳು ಸೇರಿ ಒಂದೇ ಕುಟುಂಬದ ಐವರ ಸಾವು

ಲಖನೌ: ಉತ್ತರ ಪ್ರದೇಶದಲ್ಲಿ ದುರ್ಘಟನೆಯೊಂದು ನಡೆದಿದ್ದು, ಒಂದೇ ಕುಟುಂಬದ ಐವರು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ. ಮೀರತ್‌ನ ಲಿಸಾರಿ ಗೇಟ್‌ನ ಮನೆಯೊಂದರಲ್ಲಿ ದಂಪತಿ ಹಾಗೂ ಅವರ ಮೂರು ಹೆಣ್ಣು ಮಕ್ಕಳ ಶವ ಪತ್ತೆಯಾಗಿದೆ. ದಂಪತಿಯ ಶವ ನೆಲದ ಮೇಲೆ ಪತ್ತೆಯಾಗಿದ್ದರೆ, ಮಕ್ಕಳ ಶವಗಳು ಹಾಸಿಗೆಯ ಮೇಲೆ ಪತ್ತೆಯಾಗಿವೆ. ಬುಧವಾರ ಸಂಜೆಯಿಂದ ಕುಟುಂಬದವರು ಕಾಣಲಿಲ್ಲ ಎಂದು ನೆರೆಹೊರೆಯವರು ಗಮನಿಸಿ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಬಂದ ಅಧಿಕಾರಿಗಳಿಗೆ ಮನೆಗೆ ಹೊರಗಿನಿಂದ ಬೀಗ ಹಾಕಿರುವುದು ಕಂಡು ಬಂದಾಗ, ಅಧಿಕಾರಿಗಳು ಛಾವಣಿ ಬಳಸಿ ಮನೆಯೊಳಗೆ ಪ್ರವೇಶಿಸಿದಾಗ ಕುಟುಂಬಸ್ಥರು ಮೃತಪಟ್ಟಿರುವುದು ಕಂಡು ಬಂದಿದೆ. ದಂಪತಿಯ ದೇಹ ನೆಲದ ಮೇಲೆ ಪತ್ತೆಯಾಗಿದ್ದರೆ, ಮಕ್ಕಳ ದೇಹ ಹಾಸಿಗೆಯಲ್ಲಿ ಪತ್ತೆಯಾಗಿದೆ.

ಎನ್‌ಸಿಪಿ ಸಭೆಯಲ್ಲಿ ಆರೆಸ್ಸೆಸ್‌ಗೆ ಪ್ರಶಂಸೆ

ಮುಂಬೈ: ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಶುಕ್ರವಾರ ತಮ್ಮ ಪಕ್ಷದ ಕಾರ್ಯಕರ್ತರೊಂದಿಗಿನ ಸಭೆಯಲ್ಲಿ ಬಿಜೆಪಿಯ ಸೈದ್ಧಾಂತಿಕ ಮಾರ್ಗದರ್ಶಕ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಅನ್ನು ಹೊಗಳಿದ್ದಾರೆ. ಬಿ.ಆರ್. ಅಂಬೇಡ್ಕರ್, ಶಾಹು ಮಹಾರಾಜ್, ಮಹಾತ್ಮ ಫುಲೆ ಮತ್ತು ಮೊದಲ ಮಹಾರಾಷ್ಟ್ರ ಮುಖ್ಯಮಂತ್ರಿ ಯಶವಂತರಾವ್ ಚವಾಣ್ ಅವರ ಸಿದ್ಧಾಂತದ ಬಗ್ಗೆ ಅಚಲ ಬದ್ಧತೆ ಯೊಂದಿಗೆ ಕಾರ್ಯಕರ್ತರ ನೆಲೆಯನ್ನು ನಿರ್ಮಿಸುವಂತೆ ಶರದ್ ಪವಾರ್ ಸೂಚಿಸಿದ್ದಾರೆ. ದಕ್ಷಿಣ ಮುಂಬೈನಲ್ಲಿ ನಡೆದ ಸಭೆಯಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿ ಶರದ್ ಪವಾರ್, ನವೆಂಬರ್‌ನಲ್ಲಿ ಮಹಾರಾಷ್ಟ್ರದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಎಸ್‌ಪಿ ಅನುಭವಿಸಿದ ತೀವ್ರ ಸೋಲಿನ ಬಗ್ಗೆಯೂ ಚಿಂತನೆ ನಡೆಸಿದರು. ಈ ವೇಳೆ ಆರ್‌ಎಸ್‌ಎಸ್ ಅನ್ನು ಹೊಗಳಿರುವ ಶರದ್ ಪವಾರ್ ಅವರು ಆರ್‌ಎಸ್‌ಎಸ್ ತನ್ನ ಸಿದ್ಧಾಂತಕ್ಕೆ ಅಚಲ ನಿಷ್ಠೆಯನ್ನು ತೋರಿಸುವ ಮತ್ತು ಏನೇ ಬಂದರೂ ತಮ್ಮ ಮಾರ್ಗದಿಂದ ವಿಮುಖರಾಗದ ಬದ್ಧ ಕಾರ್ಯಕರ್ತರನ್ನು ಹೊಂದಿದೆ.

ಮಾಜಿ ಶಾಸಕನಿಗೆ ಮುಳುವಾದ ಮೊಸಳೆ

ಭೋಪಾಲ್: ಮಧ್ಯಪ್ರದೇಶದ ಬಿಜೆಪಿಯ ಮಾಜಿ ಶಾಸಕ ಮನೆಯೊಬ್ಬರ ಮೇಲೆ ಅರಣ್ಯ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಕಾಡುಪ್ರಾಣಿಗಳನ್ನು ಸಾಕುವುದು ಅಕ್ರಮ ಎಂದು ತಿಳಿದಿದ್ದರೂ ಮಾಜಿ ಶಾಸಕ ಹರ್ವಂಶ್ ಸಿಂಗ್ ರಾಥೋಡ್ ತಮ್ಮ ಮನೆಯಲ್ಲಿ ಮೊಸಳೆಯನ್ನು ಸಾಕಿದ್ದರು. ಶುಕ್ರವಾರ ಅವರ ಮನೆಗೆ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.

ರಾಥೋಡ್ ಮನೆಯ ಆವರಣದಲ್ಲಿ ನಿರ್ಮಿಸಲಾದ ಕೃತಕ ಕೊಳದ ಬಳಿ ಮೊಸಳೆಗಳನ್ನು ತೋರಿಸುವ ವೀಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದ್ದು, ನೆಟ್ಟಿಗರನ್ನು ಬೆಚ್ಚಿ ಬೀಳಿಸಿದೆ. ಸದ್ಯ ಕೊಳದ ಪರಿಶೀಲನೆ ನಡೆಸಲಾಗುತ್ತಿದ್ದು, ಆಳವಾದ ಕೊಳವಾದ್ದರಿಂದ ಎಷ್ಟು ಮೊಸಳೆಗಳಿವೆ ಎಂಬುದು ಇನ್ನೂ ತಿಳಿದು ಬಂದಿಲ್ಲ. ಅಕ್ರಮವಾಗಿ ಸಾಕಲಾಗುತ್ತಿರುವ ಮೊಸಳೆಗಳ ಪತ್ತೆಗೆ ಶೋಧ ಕಾರ್ಯ ನಡೆಯುತ್ತಿದೆ ಎಂದು ಉತ್ತರ ಸಾಗರದ ಜಿಲ್ಲಾ ಅರಣ್ಯಾಧಿಕಾರಿ ಚಂದ್ರಶೇಖರ್ ಮಾಧ್ಯಮಗಳಿವೆ ತಿಳಿಸಿದ್ದಾರೆ. ಶೋಧ ಕಾರ್ಯಾಚರಣೆಯ ನಂತರ ಮೊಸಳೆಗಳನ್ನು ನೌರದೇಹಿ ಅಭಯಾರಣ್ಯಕ್ಕೆ ಬಿಡಲಾಗುವುದು ಎಂದೂ ಅವರು ತಿಳಿಸಿದ್ದಾರೆ. ಹೆಚ್ಚುವರಿಯಾಗಿ, ಆರೋಪ ಸಾಬೀತಾದರೆ ಮಾಲೀಕರ ವಿರುದ್ಧ ವನ್ಯಜೀವಿ ಕಾನೂನುಗಳ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

ಕಾರ್ಮಿಕ ಇಲಾಖೆ

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬೆಂಗಳೂರು-560029.
ದೂರವಾಣಿ ಸಂಖ್ಯೆ: 080-29753354, 29653354, 29543646 ವೆಬ್‌ಸೈಟ್: https://karbwwb.karnataka.gov.in

ಸಾರ್ವಜನಿಕ ಪ್ರಕಟಣೆ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಅಡಿಯಲ್ಲಿ ರಚಿಸಲಾಗಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ, ಕಟ್ಟಡ ಮತ್ತು ಇತರೆ ನಿರ್ಮಾಣಗಾರರು ಹಾಗೂ ನಿಯೋಜಕರಿಂದ ನಿರ್ಮಾಣ ವೆಚ್ಚದ ಮೇಲೆ ಶೇ.1ರಷ್ಟು ಸುಂಕ ಸಂಗ್ರಹ ಮಾಡಲು ಕೇಂದ್ರ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, 1996ನ್ನು ಜಾರಿಗೆ ತಂದಿರುತ್ತದೆ. ಭೂಮಿಯ ಬೆಲೆ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923 ರಡಿ ಕಾರ್ಮಿಕರು ಅಥವಾ ಅವರ ಅವಲಂಬಿತರಿಗೆ ನೀಡಲಾಗುವ ಪರಿಹಾರ ಮೊತ್ತವನ್ನು ಹೊರತುಪಡಿಸಿ, ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚದ ಮೇಲೆ ಶೇ.1ರಷ್ಟು ಸುಂಕವನ್ನು ಮಾಲೀಕರು/ಗುತ್ತಿಗೆದಾರರು ಪಾವತಿಸಬೇಕೆಂದು ಕೇಂದ್ರ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯನ್ವಯ ಕರ್ನಾಟಕದಲ್ಲಿ ಕೂಡ ಶೇ.1ರಷ್ಟು ಸುಂಕವನ್ನು ನಿರ್ಮಾಣ ವೆಚ್ಚದ ಮೇಲೆ ಪಾವತಿಸುವುದನ್ನು ಕಡ್ಡಾಯಗೊಳಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಕಾಯ್ದೆಯ ಅನ್ವಯಿಸುವಿಕೆ (ಮಂಡಳಿಗೆ ಸುಂಕ ಪಾವತಿಸಬೇಕಾದ ವ್ಯಕ್ತಿಗಳು/ಸಂಸ್ಥೆಗಳು)

ಹಿಂದಿನ 12 ತಿಂಗಳ ಅವಧಿಯಲ್ಲಿ 10 ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯಗಳಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡ ಸಂಸ್ಥೆಗಳು.

ಹಾಗೂ

ಎಲ್ಲಾ ಸರ್ಕಾರಿ ಇಲಾಖೆಗಳು, ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ಇತರೆ ಸರ್ಕಾರಿ ಸಂಸ್ಥೆಗಳು ಮುಖ್ಯ ಕಾಯಿದೆಯ ಸೆಕ್ಷನ್ 2(ಡಿ) ಅಡಿಯಲ್ಲಿ ಬರುವ ಯಾವುದೇ ಕಟ್ಟಡ ಅಥವಾ ಇತರೆ ನಿರ್ಮಾಣ ಕಾರ್ಯಗಳನ್ನು ಗುತ್ತಿಗೆದಾರರ ಮೂಲಕ ಕೈಗೊಂಡರೆ ಗುತ್ತಿಗೆದಾರರಿಗೆ ಮೊತ್ತವನ್ನು ಪಾವತಿ ಮಾಡುವ ಸಮಯದಲ್ಲಿ ಟೆಂಡರ್ ಅಧಿಸೂಚನೆಯ ಪ್ರಕಾರ ಅನುಮೋದಿಸಲಾದ ವೆಚ್ಚದ ಮೊತ್ತದಲ್ಲಿ ಶೇ.1ರಷ್ಟು ಮೊತ್ತವನ್ನು ಕಡಿತಗೊಳಿಸುವುದು.

ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಳು ಎಂದರೆ

ಕಟ್ಟಡ, ರಸ್ತೆಗಳು, ನೀರಾವರಿ, ಒಳಚರಂಡಿ, ವಿದ್ಯುತ್ ತಂತಿ, ಅಣೆಕಟ್ಟು, ಕಾಲುವೆಗಳು, ಜಲಾಶಯಗಳು ಇತ್ಯಾದಿಗಳ ಸಹಿತ ಎಲ್ಲಾ ನಿರ್ಮಾಣ, ಬದಲಾವಣೆ, ದುರಸ್ಥಿಕಾರ್ಯ ಕಾಮಗಾರಿಗಳು ಒಳಗೊಂಡಿರುತ್ತವೆ.

ಸುಂಕ ಪಾವತಿ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ಮತ್ತು ನಿಯಮಗಳು 1998 ರನ್ವಯ ಕಟ್ಟಡ ಮತ್ತು ಇತರೆ ನಿರ್ಮಾಣಗಾರರು ಹಾಗೂ ನಿಯೋಜಕರಿಂದ ನಿರ್ಮಾಣ ವೆಚ್ಚದ ಮೇಲೆ ಶೇ.1 ರಷ್ಟು ಸುಂಕ ಸಂಗ್ರಹ ಮಾಡಲು ಕೇಂದ್ರ ಸರ್ಕಾರವು ಈ ಕಾಯ್ದೆ / ನಿಯಮಗಳನ್ನು ಜಾರಿಗೆ ತಂದಿರುತ್ತದೆ. ಈ ಕಾಯ್ದೆಯಲ್ಲಿ ಭೂಮಿಯ ಬೆಲೆ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923 ರಡಿ ಕಾರ್ಮಿಕರ ಅಥವಾ ಅವರ ಅವಲಂಬಿತರಿಗೆ ನೀಡಲಾಗುವ ಪರಿಹಾರ ಮೊತ್ತವನ್ನು ಹೊರತುಪಡಿಸಲಾಗಿರುತ್ತದೆ. ಮಾಲೀಕರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸುಂಕ ನಿಯಮ 1998ರ ನಿಯಮ 6(1) ರನ್ವಯ ಕಾಮಗಾರಿ ಆರಂಭವಾಗಿರುವ ಅಥವಾ ಸುಂಕ ಮೊತ್ತವನ್ನು ಪಾವತಿ ಮಾಡಿರುವ ಬಗ್ಗೆ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಸುಂಕ ನಿರ್ಧರಣಾ ಅಧಿಕಾರಿಗಳಿಗೆ ನಿರ್ಮಾಣ ಕಾಮಗಾರಿಯ ವಿವರಗಳನ್ನು ಒಳಗೊಂಡ ನಮೂನೆ-1 ನ್ನು ಕಡ್ಡಾಯವಾಗಿ 30 ದಿನಗಳೊಳಗಾಗಿ ಸಲ್ಲಿಸಬೇಕಾಗಿರುತ್ತದೆ.

ಸುಂಕ ಪಾವತಿ ಮಾಡಬೇಕಾಗಿರುವ ಮಂಡಳಿಯ ಖಾತೆಯ ವಿವರ

- ಖಾತೆದಾರರ ಹೆಸರು : Karnataka Building & Other Construction Workers Welfare Board.
- ಖಾತೆದಾರರ ಬ್ಯಾಂಕಿನ ಹೆಸರು : ಕೆನರಾ ಬ್ಯಾಂಕ್, ಕಾರ್ಮಿಕರ ಕಲ್ಯಾಣ ಮಂಡಳಿ ಶಾಖೆ, ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬೆಂಗಳೂರು-560029
- ಖಾತೆ ಸಂಖ್ಯೆ : 1371101079786
- ಬ್ಯಾಂಕ್ IFSC ಕೋಡ್ ಸಂಖ್ಯೆ : CNRB0007295

ಖಜಾನೆ ಇಲಾಖೆಯ ಕೆ-2 ತಂತ್ರಾಂಶದ ಮೂಲಕ ಮೊತ್ತವನ್ನು ವರ್ಗಾವಣೆ/ಸಂದಾಯ ಮಾಡುವ ಸಂಸ್ಥೆಗಳು ಮಂಡಳಿಯ ಠೇವಣಿ ಖಾತೆ ಸಂಖ್ಯೆ: 26572E181 ಗೆ ಸಂದಾಯ ಮಾಡತಕ್ಕದ್ದು,

ದಂಡಗಳು :

1) **ಸುಂಕ ಪಾವತಿ ವಿಳಂಬವಾದಲ್ಲಿ ಪಾವತಿಸಬೇಕಾದ ಬಡ್ಡಿ:** ಪಾವತಿಸಬೇಕಾದ ಮೊತ್ತದ ಮೇಲೆ ತಿಂಗಳಿಗೆ ಶೇ.2 ರಷ್ಟು.
2) **ಸೆಸ್ ಪಾವತಿಸದಿದ್ದಲ್ಲಿ ದಂಡ:** ಪಾವತಿಸಬೇಕಾದ ಸೆಸ್ ಮೊತ್ತವನ್ನು ಮೀರದಂತೆ ಪ್ರಾಧಿಕಾರವು ದಂಡವನ್ನು ವಿಧಿಸಬಹುದು.
3) **ಯಾವುದೇ ಉದ್ಯೋಗದಾತರು /ಗುತ್ತಿಗೆದಾರರು ಯಾವುದೇ ಸುಳ್ಳು ದಾಖಲೆಗಳನ್ನು ಒದಗಿಸಿದರೆ :** ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡನ್ನೂ ವಿಧಿಸಬಹುದು.
4) **ಉದ್ದೇಶಪೂರ್ವಕ ಸುಂಕ ವಂಚನೆ:** ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡನ್ನೂ ವಿಧಿಸಬಹುದು.
5) ಈ ಕಾಯಿದೆಯ ಅಡಿಯಲ್ಲಿ ಬಾಕಿ ಇರುವ ಯಾವುದೇ ಮೊತ್ತವನ್ನು [ಉದ್ಯೋಗದಾತರಿಂದ ಯಾವುದೇ ಬಡ್ಡಿ ಅಥವಾ ದಂಡವನ್ನು ಒಳಗೊಂಡಂತೆ] ಭೂಕಂದಾಯದ ಬಾಕಿ ಇರುವ ರೀತಿಯಲ್ಲಿಯೇ ವಸೂಲಿ ಮಾಡಲಾಗುವುದು.

ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು

DIPR/CP/4270/Zen/2024-25

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಕಾರ್ಮಿಕ ಸಹಾಯವಾಣಿ 155214, ಕಾರ್ಮಿಕ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ. ವೆಬ್‌ಸೈಟ್: https://karbwwb.karnataka.gov.in

ಸಂಭಾಲ್ ಮಸೀದಿ ಬಾವಿ: ಸುಪ್ರೀಂ ಕೋರ್ಟ್ ನೋಟಿಸ್

ದೆಹಲಿ: ಸಂಭಾಲ್‌ನ ಜಾಮಾ ಮಸೀದಿ ನಿರ್ವಹಣಾ ಸಮಿತಿ ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ಜಾರಿ ಮಾಡಿ, ಮಸೀದಿಯ ಪ್ರವೇಶದ್ವಾರದ ಬಳಿ ಇರುವ ಖಾಸಗಿ ಬಾವಿಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಂಡು ಹೋಗುವಂತೆ ಆದೇಶ ನೀಡಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನೊಳಗೊಂಡ ನ್ಯಾಯಪೀಠವು ಬಾವಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಅನುಮತಿಯಿಲ್ಲದೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಬಾರದು ಮತ್ತು ಇನ್ನೆರಡು ವಾರಗಳಲ್ಲಿ ಸ್ಥಿತಿ ವರದಿಯನ್ನು ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿತು. ಶಾಹಿ ಜಾಮಾ ಮಸೀದಿಯ ನಿರ್ವಹಣಾ ಸಮಿತಿಯು ಸಲ್ಲಿಸಿದ ಅರ್ಜಿಯಲ್ಲಿ ಮಸೀದಿಯ ಸಮೀಕ್ಷೆಗೆ ವಕೀಲ ಆಯುಕ್ತರನ್ನು ನೇಮಿಸಲು ಅನುಮತಿ ನೀಡಿದ ಸಂಭಾಲ್ ಹಿರಿಯ ವಿಭಾಗ ಸಿವಿಲ್ ನ್ಯಾಯಾಧೀಶರ ನವೆಂಬರ್ 19, 2024ರ ಆದೇಶವನ್ನು ಪ್ರಶ್ನಿಸಿತು.

ಬಾವಿಯ ಬಗ್ಗೆ ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ಸೂಚನೆಗಳನ್ನು ಜಾರಿಗೆ ತರಲಾಗುವುದಿಲ್ಲ ಎಂದು ಪೀಠ ಹೇಳಿದೆ. ಹಿಂದೂ ಪರ ಪ್ರತಿನಿಧಿಸುವ ವಕೀಲ ವಿಷ್ಣು ಶಂಕರ್ ಜೈನ್, ಬಾವಿಯು ಮಸೀದಿಯ ವ್ಯಾಪ್ತಿಯ ಹೊರಗಿದ್ದು, ಐತಿಹಾಸಿಕವಾಗಿ ಪೂಜೆಗೆ ಬಳಸಲಾಗುತ್ತಿದೆ ಎಂದು ಹೇಳಿದರು. ಗೂಗಲ್ ನಕ್ಷೆಗಳ ಚಿತ್ರವನ್ನು ಉಲ್ಲೇಖಿಸಿ ಬಾವಿ ಮಸೀದಿ ಆವರಣದ ಒಳಗೆ ಮತ್ತು ಹೊರಗೆ ಭಾಗಶಃ ಇದೆ ಎಂದು ಅಹ್ಮದಿ ಹೇಳಿದರು. ಮಸೀದಿಯ ಮೆಟ್ಟಿಲುಗಳ ಪ್ರವೇಶ ದ್ವಾರದ ಬಳಿ ಇರುವ ಖಾಸಗಿ ಬಾವಿಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ನ್ಯಾಯಾಲಯದ ಸೂಕ್ತ ಅನುಮತಿಯಿಲ್ಲದೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದಂತೆ ಸಂಭಾಲ್ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಸೂಕ್ತ ನಿರ್ದೇಶನ ನೀಡಿ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಮಹಿಳಾ ಮೀಸಲಾತಿ: ವಿಚಾರಣೆಗೆ ನಕಾರ

ದೆಹಲಿ: ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮೀಸಲಿಡುವ 2023ರ ನಾರಿ ಶಕ್ತಿ ವಂದನ್ ಕಾಯ್ದೆಯಲ್ಲಿನ ಮರು ಹಂಚಿಕಾ ನಿಯಮ ವಿರುದ್ಧ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

ಸಂವಿಧಾನದ 32ನೇ ವಿಧಿ ಅಡಿ ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ ಮತ್ತು ಜಯಾ ಠಾಕೂರ್ ಸಲ್ಲಿಸಿದ್ದ ಮನವಿಗಳ ವಿಚಾರಣೆಗೆ ನ್ಯಾಯಮೂರ್ತಿಗಳಾದ ಬೇಲಾ ಎಂ ತ್ರಿವೇದಿ ಮತ್ತು ಪಿ.ಬಿ. ವರಾಳೆ ನೇತೃತ್ವದ ಪೀಠ ನಿರಾಕರಿಸಿದೆ. ಜಯಾ ಠಾಕೂರ್ ಅವರ ಅರ್ಜಿಯು ಕಾಯ್ದೆಯಾಗಿ ಮಾರ್ಪಟ್ಟಿರುವ ಮಸೂದೆಯನ್ನು ಪ್ರಶ್ನಿಸಿದೆ. ಮನವಿಗೆ ಸಂಬಂಧಿಸಿದಂತೆ ನ್ಯಾಯಪೀಠ, ನಿಮ್ಮ ಅರ್ಜಿಯನ್ನು ಸ್ವೀಕರಿಸಲು ಸಾಧ್ಯವಿಲ್ಲ, ನೀವು ಹೈಕೋರ್ಟ್ ಅಥವಾ ಇತರ ಸೂಕ್ತ ವೇದಿಕೆಗೆ ಹೋಗಬಹುದು ಎಂದು ಸಂಸ್ಥೆಗೆ ಸೂಚಿಸಿತು. 2023ರ ಕಾಯ್ದೆಯ 334 ಎ (1) ಮತ್ತು ಷರತ್ತು 5 ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿತ್ತು. 2023ರ ನವೆಂಬರ್‌ನಲ್ಲಿ ಜಯಾ ಠಾಕೂರ್ ಅವರ ಅರ್ಜಿ ವಿಚಾರಣೆ ವೇಳೆ, ಜನಗಣತಿಯ ನಂತರ ಜಾರಿಗೆ ಬರಲಿರುವ ಮಹಿಳಾ ಮೀಸಲಾತಿ ಕಾನೂನಿನ ಒಂದು ಭಾಗವನ್ನು ರದ್ದುಗೊಳಿಸುವುದು ನ್ಯಾಯಾಲಯಕ್ಕೆ ತುಂಬಾ ಕಷ್ಟ ಎಂದು ಸುಪ್ರೀಂಕೋರ್ಟ್ ಹೇಳಿತ್ತು. ಈ ಸಂಬಂಧ ಜಯಾ ಠಾಕೂರ್ ಅವರ ಮನವಿಗೆ ಸುಪ್ರೀಂಕೋರ್ಟ್ ನೋಟಿಸ್ ನೀಡದೇ, ಕೇಂದ್ರವನ್ನು ಪ್ರತಿನಿಧಿಸುವ ವಕೀಲರಿಗೆ ಅರ್ಜಿಯ ಪ್ರತಿಯನ್ನು ನೀಡಲು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿತ್ತು.

ಸಾವರ್ಕರ್ ಕುರಿತು ಹೇಳಿಕೆ: ಜಾಮೀನು



ಪುಣೆ: ಹಿಂದುತ್ವವಾದಿ ವಿ.ಡಿ ಸಾವರ್ಕರ್ ಅವರ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಕ್ಕಾಗಿ ದಾಖಲಿಸಲಾದ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಪುಣೆ ವಿಶೇಷ ನ್ಯಾಯಾಲಯವು ಶುಕ್ರವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಜಾಮೀನು ಮಂಜೂರು ಮಾಡಿದೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ನ್ಯಾಯಾಲಯದ ಮುಂದೆ ಹಾಜರಾದ ನಂತರ ಸಂಸದ/ಶಾಸಕರ ವಿಶೇಷ ನ್ಯಾಯಾಲಯವು 25,000 ರು.ಗಳ ಶ್ಯೂರಿಟಿ ಬಾಂಡ್ ಆಧಾರದ ಮೇಲೆ ಜಾಮೀನು ನೀಡಿದೆ.

ಹಿರಿಯ ಕಾಂಗ್ರೆಸ್ ನಾಯಕ ಮೋಹನ್ ಜೋಶಿ ಅವರು ನ್ಯಾಯಾಲಯದ ಮುಂದೆ ಶ್ಯೂರಿಟಿ ನೀಡಿದರು. ರಾಹುಲ್ ಪರವಾಗಿ ವಾದ ಮಂಡಿಸಿದ ವಕೀಲ ಮಿಲಿಂದ್ ಪವಾರ್, ನ್ಯಾಯಾಲಯವು ಕಾಂಗ್ರೆಸ್ ನಾಯಕನಿಗೆ ನ್ಯಾಯಾಲಯದ ಮುಂದೆ ಹಾಜರಾಗುವುದರಿಂದ ಶಾಶ್ವತ ವಿನಾಯಿತಿ ನೀಡಿದೆ ಎಂದು ತಿಳಿಸಿದರು. ಈ ಪ್ರಕರಣವನ್ನು ಈಗ ಫೆಬ್ರವರಿ 18 ರಂದು ವಿಚಾರಣೆ ನಡೆಸಲಾಗುವುದು ಎಂದು ಪವಾರ್ ಹೇಳಿದ್ದಾರೆ. 2023ರ ಮಾರ್ಚ್‌ನಲ್ಲಿ ಲಂಡನ್‌ನಲ್ಲಿ ರಾಹುಲ್ ಗಾಂಧಿ ತಮ್ಮ ಭಾಷಣದಲ್ಲಿ ಸಾವರ್ಕರ್ ಅವರು ತಮ್ಮ ಸ್ನೇಹಿತರೊಂದಿಗೆ ಮುಸ್ಲಿಂ ವ್ಯಕ್ತಿಯನ್ನು ಹೊಡೆದು ಖುಷಿಪಟ್ಟಿದ್ದಾಗಿ ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ ಎಂದು ಆರೋಪಿಸಿದ್ದರು. ಈ ಸಂಬಂಧ ಸಾವರ್ಕರ್ ಅವರ ಮೊಮ್ಮಗ ರಾಹುಲ್ ಗಾಂಧಿ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ತ.ನಾಡು ಮಸೂದೆ ಮಂಡನೆ

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ತಮಿಳುನಾಡು ವಿಧಾನಸಭೆಯಲ್ಲಿ ಮಂಡಿಸಿದ ತಿದ್ದುಪಡಿ ಮಸೂದೆಗಳು ಮಹಿಳೆಯರ ವಿರುದ್ಧದ ಅಪರಾಧಗಳಿಗೆ ಶಿಕ್ಷೆಗಳಿಗೆ ಹಲವಾರು ಬದಲಾವಣೆಗಳಿಗೆ ಕಾರಣವಾಗಬಹುದೆಂದು ನಿರೀಕ್ಷಿಸಲಾಗಿದೆ. ತಮಿಳುನಾಡು ಮಹಿಳೆಯರ ಕಿರುಕುಳ ನಿಷೇಧ ಕಾಯ್ದೆ, 1998ಗೆ ಶಿಕ್ಷೆಯ ನಿಯಮಗಳನ್ನು ಹೆಚ್ಚು ಕಠಿಣಗೊಳಿಸಲು ಪ್ರಸ್ತಾಪಿಸಲಾಯಿತು. ಮಹಿಳೆಯರ ಮೇಲಿನ ಅತ್ಯಾಚಾರಕ್ಕೆ ಕನಿಷ್ಠ ಜೈಲು ಶಿಕ್ಷೆಯನ್ನು ಹೆಚ್ಚಿಸುವುದರ ಜೊತೆಗೆ, ತಮಿಳುನಾಡಿನಲ್ಲಿ ಬಿಎನ್‌ಎಸ್ ಅಡಿಯಲ್ಲಿ ಜೀವಾವಧಿ ಶಿಕ್ಷೆ ಏನನ್ನು ಒಳಗೊಂಡಿರುತ್ತದೆ ಎಂಬುದನ್ನು ಸ್ಪಷ್ಟಪಡಿಸುವುದು ಸೇರಿದೆ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಇಂದು 1998ರ ತಮಿಳುನಾಡು ಮಹಿಳಾ ಕಿರುಕುಳ ನಿಷೇಧ ಕಾಯ್ದೆಗೆ ಮತ್ತಷ್ಟು ತಿದ್ದುಪಡಿ ತರಲು ಮಸೂದೆಯನ್ನು ಮಂಡಿಸಿದ್ದಾರೆ. ಈ ಮಸೂದೆಯು ಮಹಿಳೆಯ ಘನತೆಗೆ ಧಕ್ಕೆ ತರುವುದಕ್ಕೆ 3ರಿಂದ 5 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಬಹುದು ಎಂದು ಪ್ರಸ್ತಾಪಿಸಿದೆ. ಪರಿಷ್ಕೃತ ಮಸೂದೆಯು ಅತ್ಯಾಚಾರಕ್ಕೆ ಕನಿಷ್ಠ ಜೈಲು ಶಿಕ್ಷೆಯನ್ನು 10ರಿಂದ 14 ವರ್ಷಗಳಿಗೆ ಹೆಚ್ಚಿಸಲು ಪ್ರಸ್ತಾಪಿಸುತ್ತದೆ. ಇದರಡಿ ಜೀವಾವಧಿ ಶಿಕ್ಷೆ ಎಂಬ ಪದವನ್ನು ಸಹ ವಿವರಿಸಲಾಗಿದೆ. ಈ ಮಸೂದೆಯು ವ್ಯಕ್ತಿಯ ನೈಸರ್ಗಿಕ ಜೀವನದ ಉಳಿದ ಅವಧಿಯನ್ನು ಸೂಚಿಸುತ್ತದೆ ಎಂದು ಸ್ಪಷ್ಟಪಡಿಸುತ್ತದೆ. ಒಂದೇ ಮಹಿಳೆಯ ಪುನರಾವರ್ತಿತ ಅತ್ಯಾಚಾರ ಪ್ರಕರಣಗಳಲ್ಲಿ, ಮಸೂದೆಯು ಈಗ ಕನಿಷ್ಠ 20 ವರ್ಷಗಳ ಜೈಲು ಶಿಕ್ಷೆಯನ್ನು ಪ್ರಸ್ತಾಪಿಸಲಾಗಿದೆ.

ಹಸೀನಾ ಪಾಸ್‌ಪೋರ್ಟ್ ರದ್ದುಗೊಳಿಸಿ

ದೆಹಲಿ: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರ ಪಾಸ್‌ಪೋರ್ಟ್ ರದ್ದುಗೊಳಿಸುವಂತೆ ಒತ್ತಾಯಿಸಿ, ಮುಹಮ್ಮದ್ ಯೂನಸ್ ನೇತೃತ್ವದ ಬಾಂಗ್ಲಾದೇಶದ ಮಧ್ಯಂತರ ಸರಕಾರವು ಭಾರತ ಸರ್ಕಾರಕ್ಕೆ ಮನವಿಯನ್ನು ಮಾಡಿದೆ. ಮಾಧ್ಯಮಗಳಲ್ಲಿ ಅವರ ವೀಸಾ ವಿಸ್ತರಣೆಯ ವರದಿಗಳು ಬಂದ ನಂತರ ಬಾಂಗ್ಲಾದೇಶ ಈ ಬಗ್ಗೆ ಭಾರತವನ್ನು ಒತ್ತಾಯಿಸಿದೆ. ಈಗಾಗಲೇ ಬಾಂಗ್ಲಾದೇಶ ಶೇಖ್ ಹಸೀನಾ ಪಾಸ್‌ಪೋರ್ಟ್ ಅನ್ನು ರದ್ದುಗೊಳಿಸಿದೆ. ಹೀಗಾಗಿ, ಈ ಬಗ್ಗೆ ಹೇಳಿಕೆ ನೀಡಿರುವ ಬಾಂಗ್ಲಾದ ವಿದೇಶಾಂಗ ಸಚಿವಾಲಯದ ವಕ್ತಾರ ಮೊಹಮ್ಮದ್ ಆಲಂ, ಪಾಸ್‌ಪೋರ್ಟ್ ರದ್ದಾದ ನಂತರ ವೀಸಾ ವಿಸ್ತರಣೆಗೆ ಯಾವುದೇ ಬೆಲೆ ಇರುವುದಿಲ್ಲ ಎಂದಿದ್ದಾರೆ.

ಸಮಾಚಾರ ಸಣ್ಣದಲ್ಲ

ಶ್ರೀ ವೆಂಕಟೇಶ್ವರಸ್ವಾಮಿ ದರ್ಶನ ಪಡೆದ ಭಕ್ತರು

ರಾಯಚೂರು: ವೈಕುಂಠ ಏಕಾದಶಿ ಅಂಗವಾಗಿ ನವೋದಯ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಉತ್ತರ ದ್ವಾರದ ಮೂಲಕ ಪ್ರವೇಶಿಸಿ ಸ್ವಾಮಿ ದರ್ಶನ ಪಡೆದು ಭಕ್ತರು ಧನ್ಯತೆ ಅನುಭವಿಸಿದರು. ಬೆಳಿಗಿನ ಜಾವ ಐದು ಗಂಟೆಗೆ ವೆಂಕಟೇಶ್ವರ ಸ್ವಾಮಿ ಪೂಜೆ ಕೈಂಕರ್ಯಗಳು ಜರುಗಿದವು. ನವೋದಯ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್ ಆರ್ ರಡ್ಡಿ ಪತ್ನಿಯೊಂದಿಗೆ ಗೋ ಪೂಜೆ ನೆರವೇರಿಸಿ, ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದರು. ವೈಕುಂಠ ಏಕಾದಶಿ ದಿನದಂದು ವೆಂಕಟೇಶ್ವರ ದರ್ಶನ ಪಡೆದರೆ ಸ್ವರ್ಗ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯಿಂದ ಸಾವಿರಾರು ಭಕ್ತರು ಆಗಮಿಸಿ ಸ್ವಾಮಿಯ ದರ್ಶನ ಪಡೆದರು. ಬೆಳಗ್ಗೆ 6 ಗಂಟೆಯಿಂದ ರಾತ್ರಿ 11 ಗಂಟೆ ವರೆಗೆ ದೇವರ ದರ್ಶನ ಪಡೆಯಲು ಅವಕಾಶ ಕಲ್ಪಿಸಲಾಗಿದ್ದು, ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಲಾಗಿತ್ತು. ದೇವಸ್ಥಾನವನ್ನ ಬಗೆ ಬಗೆಯ ಹೂಗಳಿಂದ ಅಲಂಕಾರ ಮಾಡಲಾಗಿದ್ದು, ದೇವರ ದರ್ಶನದ ಜೊತೆಗೆ ಮನಮೋಹಕ ಹೂಗಳ ಅಲಂಕಾರ ಭಕ್ತರ ಮನ ಸೂರೆಗೊಳ್ಳುವಂತೆ ಮಾಡಿತ್ತು.

ಗಣಿ, ಭೂವಿಜ್ಞಾನ ಅಧಿಕಾರಿಗಳಿಗೆ ತರಾಟೆ

ಕೊಪ್ಪಳ: ಪರಮಾಣು ವಿದ್ಯುತ್ ಸ್ಥಾವರಕ್ಕೆ ಸ್ಥಳ ಪರಿಶೀಲನ ಮಾಡುತ್ತಿದ್ದಾರೆ ಎಂದು ತಪ್ಪಾಗಿ ಅರ್ಥ ಮಾಡಿಕೊಂಡು, ತಾಲೂಕಿನ ಅರಸಿನಕೇರಿ ಗ್ರಾಮಸ್ಥರು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳನ್ನು ಗುರುವಾರ ತರಾಟೆಗೆ ತೆಗೆದುಕೊಂಡಿದ್ದಾರೆ. ಅಧಿಕಾರಿಗಳು ನಿಕ್ಷೇಪ ಪತ್ತೆ ಸರ್ವೆಗಾಗಿ ಅರಸಿನಕೇರಿಗೆ ತೆರಳಿದ್ದಾಗ ಗ್ರಾಮಸ್ಥರು ಅಧಿಕಾರಿಗಳ ವಾಹನದ ಮುಂದೆ ಕುಳಿತು ತರಾಟೆಗೆ ತೆಗೆದುಕೊಂಡಿದ್ದಾರೆ. ನಾವು ಪರಮಾಣು ಸ್ಥಾವರದ ಬಗ್ಗೆ ಸರ್ವೆ ಮಾಡಲು ಬಂದಿಲ್ಲ. ಭೂಮಿಯಲ್ಲಿರುವ ಖನಿಜದ ಬಗ್ಗೆ ಮಾಹಿತಿ ಸಂಗ್ರಹಿಸಲು ಮಾತ್ರ ಬಂದಿದ್ದೇವೆ ಎಂದು ಅಧಿಕಾರಿಗಳು ಮೇಲಿಂದ ಮೇಲೆ ಹೇಳಿದರೂ ಗ್ರಾಮಸ್ಥರು ಕೇಳಲಿಲ್ಲ. ಆತಂಕಗೊಂಡ ಅಧಿಕಾರಿಗಳು ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದ ಕಂದಾಯ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿ ಗ್ರಾಮಸ್ಥರಿಗೆ ತಿಳಿ ಹೇಳಿದ ಬಳಿಕ ಪರಿಸ್ಥಿತಿ ಶಾಂತವಾಯಿತು. ಜಿಲ್ಲಾಧಿಕಾರಿ ನಲಿನ್ ಅತುಲ್ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ 1200 ಎಕರೆ ಭೂಮಿ ಹುಡುಕುವಂತೆ ತಹಶೀಲ್ದಾರ್‌ಗಳಿಗೆ ಪತ್ರ ಬರೆದಿದ್ದರು. ಆರಂಭದಲ್ಲಿ ಅರಸನಕೇರಿ ಭಾಗದಲ್ಲಿ ಭೂಮಿ ಹುಡುಕಲಾಗುತ್ತಿತ್ತು. ಈಗಲೂ ಅದೇ ಕಾರಣಕ್ಕೆ ಅಧಿಕಾರಿಗಳು ಬಂದಿದ್ದಾರೆ ಎಂದು ಗ್ರಾಮಸ್ಥರು ಆತಂಕಗೊಂಡಿದ್ದರು.

ರೈಲ್ವೇ ಮೇಲ್ಸೇತುವೆ ಲೋಕಾರ್ಪಣೆ ಡಿ.14ಕ್ಕೆ

ಕೊಪ್ಪಳ: ಕ್ರೆಡಿಟ್ ಪಾಲಿಟಿಕ್ಸ್ ನಿಂದ ರದ್ದಾಗಿದ್ದ ನಗರದ ಕುಷ್ಟಗಿ ರಸ್ತೆಯಲ್ಲಿನ ರೈಲ್ವೇ ಮೇಲ್ಸೇತುವೆ ಡಿ.14ಕ್ಕೆ ಲೋಕಾರ್ಪಣೆ ಆಗಲಿದೆ.

ಬಿಜೆಪಿ ಕಾರ್ಯಕಾರಿಣಿ ಸದಸ್ಯ ಡಾ.ಬಸವರಾಜ ಕ್ಯಾವಟರ್ ಹಾಗೂ ಎಂಎಲ್ಸಿ ಹೇಮಲತಾ ನಾಯಕ ಅವರು ರೈಲ್ವೇ ರಾಜ್ಯ ಸಚಿವ ವಿ.ಸೋಮಣ್ಣ ಅವರನ್ನು ಭೇಟಿ ಮಾಡಿ, ರೈಲ್ವೇ ಮೇಲ್ಸೇತುವೆಯನ್ನು ಜನರ ಅನುಕೂಲಕ್ಕಾಗಿ ಹಾಗೂ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶೀಘ್ರ ಲೋಕಾರ್ಪಣೆ ಮಾಡಬೇಕು ಎಂದು ಮನವಿ ಸಲ್ಲಿಸಿದರು. ಈ ಹಿನ್ನೆಲೆ ಜ. 14 ರಂದು ಉದ್ಘಾಟನೆ ಮಾಡಲು ದಿನಾಂಕ ನಿಗದಿಯಾಗಿದೆ. ಮನವಿಗೆ ಸ್ಪಂದಿಸಿದ ಸಚಿವರು ಮೇಲ್ಸೇತುವೆ ಉದ್ಘಾಟನೆ ಮಾಡಲು ಒಪ್ಪಿಗೆ ಸೂಚಿಸಿದ್ದಾರೆ. ಮೇಲ್ಸೇತುವೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಕೇಂದ್ರ ರೈಲ್ವೆ ಸಚಿವರಾದ ವಿ. ಸೋಮಣ್ಣ ಕೂಡ ಭಾಗವಹಿಸಿ ಮೇಲ್ಸೇತುವೆಯನ್ನು ಉದ್ಘಾಟನೆ ಮಾಡಲಿದ್ದಾರೆ. ಇದರ ಜತೆಗೆ ಕೊಪ್ಪಳ, ಹುಲಗಿ, ಮುನಿರಬಾದ್ ರೈಲು ನಿಲ್ದಾಣಗಳ ಕಾಮಗಾರಿಯನ್ನು ಆದಷ್ಟು ಬೇಗನೇ ಪೂಣ9ಗೊಳಿಸಬೇಕು. ಇನ್ನೂ ರದ್ದಾಗಿರುವ ಬೆಳಗಾವಿ ಹೈದರಾಬಾದ್ ರೈಲನ್ನು ಪುನರಾಂಭ ಮಾಡಬೇಕು. ಸಾಮಾಜಿಕವಾಗಿ, ಆಥಿ9ಕ. ಪ್ರಗತಿಗಾಗಿ ಕುಷ್ಟಗಿ ಗೋಕಾಕ, ರಾಯಚೂರ ಬೆಳಗಾವಿ ಹೊಸ ರೈಲು ಮಾರ್ಗಗಳನ್ನು ಸರ್ವೇ ಕಾರ್ಯ ಪ್ರಾರಂಭಿಸಬೇಕು ಎಂದು ಮನವಿ ಸಲ್ಲಿಸಿದರು.

ಡಿವೈಡರ್ ಸರ್ವಿಸ್ ರಸ್ತೆ ಕಾಮಗಾರಿಗೆ ಅಡ್ಡಿ

ಮಸ್ಕಿ: ಪಟ್ಟಣದಲ್ಲಿ ನಡೆಯುತ್ತಿರುವ ಡಿವೈಡರ್ ಸರ್ವಿಸ್ ರಸ್ತೆ ಕಾಮಗಾರಿಗೆ ಖಾಸಗಿ ವ್ಯಕ್ತಿಯೊಬ್ಬರು ಅಡ್ಡಿಪಡಿಸುತ್ತಿದ್ದನ್ನು ತಾಲೂಕ ಆಡಳಿತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಸರ್ವಿಸ್ ರಸ್ತೆ ಕಾಮಗಾರಿ ಆರಂಭಿಸಿದರು. ಪಟ್ಟಣದ ಬಸವೇಶ್ವರ ನಗರದಿಂದ ಅಶೋಕ ವೃತ್ತದವರೆಗೆ ನಡೆಯುತ್ತಿರುವ 10 ಕೋಟಿ ವೆಚ್ಚದ ಕಾಮಗಾರಿಗೆ ವ್ಯಕ್ತಿಯೊಬ್ಬರು ಸರ್ವಿಸ್ ರಸ್ತೆ ನಮ್ಮ ಜಮೀನು ವ್ಯಾಪ್ತಿಗೆ ಬರುತ್ತದೆ. ಪರಿಹಾರ ಕೊಟ್ಟಿಲ್ಲ ಎಂದು ಕೆಲ ಕಾಲ ಅಡ್ಡಿಪಡಿಸಿದ್ದರು.

{ಎನ್.ಎಸ್.ಭೋಸರಾಜು } ಸಚಿವ

ಬಿಜೆಪಿಯಲ್ಲಿ ಮೊದಲು ಮೂರು ಬಾಗಿಲಿತ್ತು. ಈಗ ಆರು ಬಾಗಿಲುಗಳಾಗಿವೆ. ಎಚ್.ಡಿ ಕುಮಾರಸ್ವಾಮಿ ಏಳನೆ ಬಾಗಿಲಾಗಿ ತಮ್ಮ ಮೇಲೆ ಸವಾರಿ ಮಾಡಬಹುದು ಎಂಬ ಭಯ ಬಿಜೆಪಿಯ ನಾಯಕರಲ್ಲಿದೆ. ಕಾಂಗ್ರೆಸ್ ಸರಕಾರ ಸುಭದ್ರವಾಗಿದೆ. ಡಿನ್ನರ್ ಸಭೆಗೆ ಮಹತ್ವ ನೀಡಬೇಕಾದ ಅಗತ್ಯವಿಲ್ಲ.



ಚನ್ನಬಸವ ಶಿವಯೋಗಿಗಳ 79ನೇ ಸ್ಮರಣೋತ್ಸವ | ಭರದಿಂದ ಸಾಗಿದ ರಥೋತ್ಸವದ ಅಲಂಕಾರ ಕಾರ್ಯ

ಯೋಗಿ ಚನ್ನಬಸವ ತಾತನ ಜಾತ್ರೆ ಇಂದು

ವಿಶ್ವನಾಥ ಬೆಳಗಲ್ಲಮಠ, ಗಂಗಾವತಿ

ನಗರ ಸೇರಿ ಸುತ್ತಲಿನ ಹತ್ತಾರು ಗ್ರಾಮದಲ್ಲಿ ವಾಕ್ ಸಿದ್ಧಿಯಿಂದಲೇ ಪ್ರತಿದ್ಧಿ ಆಗಿದ್ದ ಕಾಯಕ ಯೋಗಿ ಚನ್ನಬಸವ ತಾತನವರ 79ನೇ ಮಹಾ ರಥೋತ್ಸವಕ್ಕೆ ಕ್ಷಣ ಗಣನೆ ಆರಂಭವಾಗಿದ್ದು, ಕೊನೆ ಕ್ಷಣದ ಸಿದ್ಧತೆಗಳು ಭರದಿಂದ ಸಾಗಿವೆ. ಇಂದು ಶನಿವಾರ ಸಂಜೆ ಗೋಧೂಳಿ ಸಮಯಕ್ಕೆ ಜೋಡು ರಥೋತ್ಸವ ಜರುಗಲಿದೆ.

ಮಲ್ಲಿಕಾರ್ಜುನ ಮಠದ ಆವರಣದಿಂದ ಚಾಲನೆಗೊಳ್ಳುವ ರಥೋತ್ಸವ ಮಹಾತ್ಮಗಾಂಧಿ ವೃತ್ತದ ಮೂಲಕ ಬಸವಣ್ಣ ವೃತ್ತದ ಪಾದ ಗಟ್ಟೆ ತಲುಪಲಿವೆ. ನಂತರ ಶ್ರೀಮಠದ ಮೂಲ ಸ್ಥಾನಕ್ಕೆ ಬರಲಿದೆ. ತಾತನವರ 79ನೇ ಪುಣ್ಯ ಸ್ಮರಣೋತ್ಸವದ ನಿಮಿತ್ತ ನಡೆಯುವ ಜಾತ್ರೋತ್ಸವ ನಡೆಯಲಿದ್ದು, ಕಳೆದೊಂದು ವಾರದಿಂದ ಧಾರ್ಮಿಕ ಕಾರ್ಯಕ್ರಮ ಆರಂಭವಾಗಿವೆ. ಕರೋನ ನಂತರ ಕಳೆಗುಂದಿದ್ದ ಜಾತ್ರೋತ್ಸವ ಇದೀಗ ಮತ್ತೇ ಕಳೆಗಟ್ಟುತ್ತಿದೆ. ತಾತನ ಪುಣ್ಯ ಸ್ಮರಣೋತ್ಸವ ಹಾಗೂ ರಥೋತ್ಸವಕ್ಕೆ ದೊಡ್ಡ ಪ್ರಮಾಣದಲ್ಲಿ ಭಕ್ತರು ಸೇರುತ್ತಿದ್ದು, ಮೆರಗು ನೀಡುತ್ತಿದ್ದಾರೆ.

ಪ್ರಸಾದ ವ್ಯವಸ್ಥೆ: ತಾತನ ಜಾತ್ರೆ ಗಂಗಾವತಿ ಸುತ್ತಲಿನ ಹತ್ತಾರು ಗ್ರಾಮದಿಂದ ಸಾವಿರಾರು ಭಕ್ತರು ಪಾದಯಾತ್ರೆ ಮೂಲಕ ಬರುವುದು ವಾಡಿಕೆ. ಶುಕ್ರವಾರ ರಾತ್ರಿ ಇಡೀ ಪಾದಯಾತ್ರೆ ಮೂಲಕ ಬರುವ ಭಕ್ತರು ಶನಿವಾರ ಚನ್ನಬಸವ ತಾತನವರ ಕತ್ರ ಗದ್ದುಗೆಯ ದರ್ಶನ ಮಾಡುತ್ತಾರೆ. ಈ ಹಿನ್ನೆಲೆ ಮಲ್ಲಿಕಾರ್ಜುನ ಮಠದಿಂದ ದೊಡ್ಡ ಮಟ್ಟದಲ್ಲಿ ತಯಾರಿ ಮಾಡಿಕೊಳ್ಳಲಾಗಿದೆ.

ಧಾರ್ಮಿಕ ಕಾರ್ಯಕ್ರಮಗಳ ವೇದಿಕೆ ನಿರ್ಮಾಣ, ಭಕ್ತರ ದರ್ಶನಕ್ಕೆ ಮಾರ್ಗದ ವ್ಯವಸ್ಥೆಯ ಸಿದ್ಧತೆಗಳು ಪೂರ್ಣಗೊಂಡಿವೆ. ಗ್ರಾಮೀಣ ಭಾಗದಿಂದ ಬರುವ ಭಕ್ತರಿಗೆ ಚನ್ನಬಸವ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಬೆಳಗ್ಗೆ 6 ಗಂಟೆಯಿಂದ ಉಪಹಾರ, ಬೆಳಗ್ಗೆ 11 ಗಂಟೆ ಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಗಂಗಾವತಿಯ ಚನ್ನಬಸವ ತಾತನವರ ರಥೋತ್ಸವದ ಹಿನ್ನೆಲೆ ರಥದ ಕೊನೆ ಕ್ಷಣದ ನಿರ್ಮಾಣ ಕಾರ್ಯ ನಡೆದಿವೆ.

ವಾಕ್ ಸಿದ್ಧಿ ಪುರುಷ ಚನ್ನಬಸವ ತಾತ

ಕಳೆದ 7 ದಶಕದ ಹಿಂದೆ ಶ್ರೀ ಚನ್ನಬಸವ ತಾತನವರು ತಮ್ಮ ವಾಕ್ ಸಿದ್ಧಿಗೆ ಪ್ರಸಿದ್ಧಿಯಾಗಿದ್ದರು. 'ಗಂಗಾವತಿ ನಗರ ವಾಣಿಜ್ಯ ಕ್ಷೇತ್ರದಲ್ಲಿ ಮುಂಚೂಣಿಗೆ ಬರುತ್ತದೆ. ಛೋಟಾ ಬಾಂಬೆ ಎಂದು ಗುರುತಿಸಿಕೊಳ್ಳುತ್ತದೆ' ಎಂದು ಚನ್ನಬಸವ ಶಿವಯೋಗಿಗಳು 7 ದಶಕದ ಹಿಂದೆಯೇ ಭವಿಷ್ಯ ನುಡಿದಿದ್ದರು. ಅವರ ಭವಿಷ್ಯ ವಾಣಿಯಂತೆ ಗಂಗಾವತಿ ಸದ್ಯ ಹಲವು ಕ್ಷೇತ್ರದಲ್ಲಿ ಸಾಧನೆ ಮಾಡಿದೆ.

ಮುತ್ತಿನ ಪಲ್ಲಕ್ಕಿ , ಹೂವಿನ ಪಲ್ಲಕ್ಕಿ ಉತ್ಸವ ಸಂಪನ್ನ

ರಥೋತ್ಸವದ ಹಿನ್ನೆಲೆ ಈಗಾಗಲೇ ಮುತ್ತಿನ ಪಲ್ಲಕ್ಕಿ ಹಾಗೂ ಹೂವಿನ ಪಲ್ಲಕ್ಕಿ ಉತ್ಸವ ಕಾರ್ಯಕ್ರಮ ಸಂಭ್ರಮದಿಂದ ನಡೆದವು. ಮಠದ ಆವರಣದಲ್ಲಿ ಮಡಿ ತೇರಿನ ರಥೋತ್ಸವ, ಬೆಳ್ಳಿ ರಥೋತ್ಸವದ ಸಂಭ್ರಮವೂ ಕಳಕಟ್ಟಿತ್ತು. ಇದೇ ಮೊದಲ ಬಾರಿಗೆ ಯಾಂತ್ರೀಕೃತ ತಿರುಗುವ ಹೂವಿನ ಪಲ್ಲಕ್ಕಿ ಮೆರವಣಿಗೆ ನಡೆಸಲಾಯಿತು. ಇದು ಭಕ್ತರ ಆಕರ್ಷಣೆಯ ಕೇಂದ್ರವಾಗಿತ್ತು. ಶುಕ್ರವಾರ ಮುತ್ತಿನ ಪಲ್ಲಕ್ಕಿ, ಶನಿವಾರ ಹೂವಿನ ಪಲ್ಲಕ್ಕಿ ಉತ್ಸವ ನಡೆದಿದ್ದು. ಇಂದು ಜೋಡು ರಥೋತ್ಸವ ನಡೆಯಲಿದೆ.

ಒತ್ತುವರಿ ಜಾಗ ಮಾರಾಟಕ್ಕೆ ಕಡಿವಾಣ ಬೀಳಲಿ

ಮಸ್ಕಿ: ನೀರಾವರಿ ಇಲಾಖೆಯ ಜಾಗವನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡು ಲಕ್ಷಾಂತರ ರೂಪಾಯಿಗೆ ಮಾರಾಟ ಮಾಡಲು ಮುಂದಾಗಿದ್ದನ್ನು ತಡೆಯಬೇಕು ಹಾಗೂ ಅಕ್ರಮ ಚಟುವಟಿಕೆ, ಜೂಜಾಟಕ್ಕೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿ ಕನ್ನಡಪರ ಸಂಘಟನೆ ಮುಖಂಡರು ತಹಸೀಲ್ದಾರ್ ಮಲ್ಲಪ್ಪ ಯರಗೋಳ ಅವರಿಗೆ ಗುರುವಾರ ಮನವಿ ಸಲ್ಲಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿ ಮುಂದೆ ಕೆಲ ಕಾಲ ಪ್ರತಿಭಟಿಸಿ, ಅಧಿಕಾರಿಗಳ ವಿರುದ್ಧ ಅಕ್ರೋಶ ಹೊರ ಹಾಕಿದರು. ಸರ್ವೆ ನಂ. 11, 12, 13ರಲ್ಲಿ ಟಿಬಿಪಿಗೆ ಸೇರಿದ ಸರಕಾರಿ ಜಾಗದ ಮೇಲೆ ನಿವೇಶನಗಳು ನಿರ್ಮಿಸಿ ಲಕ್ಷಾಂತರ ರೂಪಾಯಿಗೆ ಮಾರಾಟ ಮಾಡಲು ಮುಂದಾಗಿದ್ದಾರೆ. ಇದರಲ್ಲಿ ಕಂದಾಯ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ಶಾಮೀಲು ಆಗಿದ್ದಾರೆ ಎಂಬುದು ಅನುಮಾನ ಇದೆ. ಈ ಪ್ರಕರಣ ತನಿಖೆಗೆ ಒಳಪಡಿಸಬೇಕು.

ಪಟ್ಟಣದ ಎಪಿಎಂಸಿಯಲ್ಲಿ ವ್ಯಾಪಾರ ವಹಿವಾಟು ಮಾಡಲು ನೀಡಿರುವ ಮಳಿಗೆಗಳನ್ನು ಕಿರಾಣಿ, ಏಜೆನ್ಸಿ, ಸಪ್ಲಾಯರ್, ಗುತ್ತಿಗೆದಾರರಿಗೆ ಬಾಡಿಗೆ ನೀಡಿದ್ದು ಕಂಡು ಬಂದಿದೆ. ಅವುಗಳನ್ನು ತೆರವುಗೊಳಿಸಿ ವ್ಯಾಪಾರ ವಹಿವಾಟ ನಡೆಸಲು ಅನುಮತಿ ನೀಡಬೇಕು. ತಾಲೂಕಿನ ಎಲ್ಲಾ ಹಳ್ಳಿಯ ಡಬ್ಬಿ, ಅಂಗಡಿಗಳಲ್ಲಿ ಅಕ್ರಮ ಮಧ್ಯೆ ಮಾರಾಟ ತಡೆಯಬೇಕು. ಮಧ್ಯವನ್ನ ಎಂಆರ್ ಪಿ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ ಬಾರ್‌ಗಳ ಮೇಲೆ ಕ್ರಮ ಕೈಗೊಳ್ಳಬೇಕು.

ತಾಲೂಕಿನ ಬೈಲಗುಡ್ಡ ಗ್ರಾಮದ ಸರ್ವೆ ನಂ, 13ರಲ್ಲಿ ಸರಕಾರಿ ಗೈರಾಣಿ ಭೂಮಿಯಲ್ಲಿ ಅಕ್ರಮವಾಗಿ ಅತಿಕ್ರಮಣ ಮಾಡಿರುವ ಎಚ್. ಎಸ್ ಅಮ್ಮಾಪೂರ ಕಂಪನಿ ಮಾಲೀಕರ ವಿರುದ್ಧ ಪ್ರಕರಣ ದಾಖಲಾಸಿಕೊಳ್ಳಬೇಕು, ಈ ಎಲ್ಲಾ ಬೇಡಿಕೆಗಳನ್ನು ವಾರದೊಳಗೆ ಕ್ರಮ ಜರುಗಿಸದೇ ಇದ್ದಲ್ಲಿ ತಾಲೂಕು ಕಚೇರಿ ಮುಂದೆ ಕರವೇ ಸಂಘಟನೆಯಿಂದ ಉಗ್ರವಾಗಿ ಹೋರಾಟ ಮಾಡಬೇಕಾಗುತ್ತದೆ ಎಂದು ಹೋರಾಟಗಾರರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಶಿವರಾಮೆಗೌಡ ಬಣದ ಕರವೇ ತಾಲೂಕ ಘಟಕ ಅಧ್ಯಕ್ಷ ಆರ್.ಕೆ ನಾಯಕ, ನಾರಾಯಣಗೌಡ ಬಣದ ಕರವೇ ತಾಲೂಕು ಅಧ್ಯಕ್ಷ ದುರ್ಗರಾಜ ವಟಗಲ್ಲ, ಸಿದ್ದಪ್ಪ ಮೇಟಿ, ದೇವಣ್ಣ, ಮುದಿಯಪ್ಪ, ವೆಂಕಟೇಶ ಮಂಗನಾಳ, ಬಸವರಾಜ ಸೇರಿದಂತೆ ಇನ್ನಿತರಿದ್ದರು.

ಕನ್ನಡಪರ ಸಂಘಟನೆ ಮುಖಂಡರು ತಹಸೀಲ್ದಾರ್ ಮಲ್ಲಪ್ಪ ಯರಗೋಳ ಅವರಿಗೆ ಮನವಿ ಸಲ್ಲಿಸಿದರು.

ಕಳಪೆ ಕಾಮಗಾರಿ ಪರಿಶೀಲಿಸಿ ಕ್ರಮ ಕೈಗೊಳ್ಳಿ

ಡಾಬಗಳಲ್ಲಿ ಅಕ್ರಮ ಮಧ್ಯೆ ಮಾರಾಟ ಮಾಡುತ್ತಿರುವುದನ್ನು ತಡೆಯಬೇಕು. ಅಕ್ರಮ ಮರಳು, ಮಟ್ಕಾ, ಇಸ್ಪೀಟ್ ದಂಧೆಗಳಿಗೆ ಕಡಿವಾಣ ಹಾಕಬೇಕು, ತಾಲೂಕಿನ ಬಸ್ಸಾಪೂರ ಗ್ರಾಮದಲ್ಲಿ ನಡೆದ ಕಾಮಗಾರಿ ಕಳಪೆ ಮಟ್ಟದಿಂದ ಕೂಡಿದ್ದು, ಕಳಪೆ ಕಾಮಗಾರಿ ಪರಿಶೀಲಿಸಿ ಅಧಿಕಾರಿ, ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು.

ತಾತನ ಪುಣ್ಯಾರಾಧನೆ, ಜಾನಪದ ಗಾಯನ

ಕಾರ್ಯಕ್ರಮದಲ್ಲಿ ಬಸನಗೌಡ ಜಿನ್ನಾಪುರ ತಂಡದವರಿಂದ ಜಾನಪದ ಕಾರ್ಯಕ್ರಮ ನಡೆಯಿತು.

ಮಸ್ಕಿ: ತಾಲೂಕಿನ ಹೂವಿನಭಾವಿ ಹಾಗೂ ಅಂಕುಶದೊಡ್ಡಿ ಗ್ರಾಮದಲ್ಲಿ ಜಾನಪದ ಸಾಂಸ್ಕೃತಿಕ ಟ್ರಸ್ಟ್ ಹಸಮಕಲ್ ಹಾಗೂ ಶ್ರೀ ಶಿವ ಸುಖಮುನಿ ತಾತ ಟ್ರಸ್ಟ್ ವತಿಯಿಂದ ಶ್ರೀ ಶಿವ ಸುಖಮುನಿ ತಾತನವರ 7ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮ ನಿಮಿತ್ಯ ಜಾನಪದ ಸಂಭ್ರಮ ಕಾರ್ಯಕ್ರಮವು ಅದ್ದೂರಿಯಾಗಿ ನೆರವೇರಿತು. ಕಾರ್ಯಕ್ರಮದಲ್ಲಿ ಬಸನಗೌಡ ಜಿನ್ನಾಪುರ ತಂಡದವರಿಂದ ಜಾನಪದ ಗಾಯನ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಲ್ಲಯ್ಯ ತಾತ ಎಲೆಕೂಡ್ಲಿಗಿ, ಟ್ರಸ್ಟ್ ನ ಅಧ್ಯಕ್ಷ ಶ್ರೀ ಶಿವ ಸುಖಮುನಿ ತಾತ, ಚಂದ್ರಶೇಖರಪ್ಪ ವಂದ್ಲಿ ಅಂಕುಶದೊಡ್ಡಿ, ಅಮರೇಶ್ ಪೂಜಾರಿ ಅಂಕುಶದೊಡ್ಡಿ, ರೆಡ್ಡಪ್ಪ ಪೂಜಾರಿ ಹೂವಿನಬಾವಿ, ಬಸವರಾಜ್ ಎಲೆಕೂಡ್ಲಿಗಿ, ಜಾನಪದ ಸಾಂಸ್ಕೃತಿಕ ಟ್ರಸ್ಟ್ ನ ಅಧ್ಯಕ್ಷ ಹನುಮಂತ ಹಸಮಕಲ್, ಅಮರೇಶ ಹಸಮಕಲ್ ಸೇರಿದಂತೆ ಗ್ರಾಮದ ಸುತ್ತಮುತ್ತಲಿನ ಭಕ್ತಾದಿಗಳು ಕಲಾ ಬಳಗದವರು ಇದ್ದರು.

ಇಂದಿನಿಂದ ಹಳೆಯ ವಿದ್ಯಾರ್ಥಿಗಳ ಸಮ್ಮೇಳನ

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ನಿಶಾಂತ್ ಜಿ ಎಲಿಯವರು ಮಾತನಾಡಿದರು.

ರಾಯಚೂರು: ಜನವರಿ 11 ರಿಂದ 12 ರವರೆಗೆ ನಗರದ ಪ್ರತಿಷ್ಠಿತ ಸಂಸ್ಥೆಯ ಸರ್.ಎಂ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ 1984 ರಿಂದ 2015 ರವರೆಗೆ ಅಭ್ಯಾಸ ಮಾಡಿದ ಹಳೆಯ ವಿದ್ಯಾರ್ಥಿಗಳ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ನಿಶಾಂತ್ ಜಿ ಎಲಿಯವರು ಹೇಳಿದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಈಗಾಗಲೇ ತಾಂತ್ರಿಕ ಮಹಾವಿದ್ಯಾಲಯದಲ್ಲಿ 6500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ಮಾಡಿ ದೇಶ , ವಿದೇಶದಲ್ಲಿ ಕೆಲಸ ಮಾಡುತಿದ್ದು, ಇವರೆಲ್ಲರೂ ಈ ಸಮಾವೇಶದಲ್ಲಿ ಭಾಗವಹಿಸಲಿದ್ದು ರಿನೂನಿಯನ್ ರೆಂಡ್ಜ್ 2025 ಎಂಬ ವಾಕ್ಯದಡಿ ಹಳೇ ವಿದ್ಯಾರ್ಥಿಗಳ ಸಮ್ಮೇಳನವು ಜನವರಿ 11 ಕ್ಕೆ ಬೆಳಗ್ಗೆ ಕಾರ್ಯಕ್ರಮ ಆರಂಭವಾಗಲಿದ್ದು, ಕಲಬುರಗಿಯ ಎಚ್.ಕೆ.ಇ.ಸಂಸ್ಥೆ ಅಧ್ಯಕ್ಷ ಶಶೀಲ್ ಜಿ ನಮೋಶಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಹಲವು ಗಣ್ಯರು ಭಾಗವಹಿಸಲಿದ್ದಾರೆ. ನಂತರ ಸಂಜೆ ಖ್ಯಾತ ಹಾಸ್ಯ ಕಲಾವಿದರಾದ ರಾಘವೇಂದ್ರ ಆಚಾರ್ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ. ಈಗಾಗಿ ಹಳೇ ವಿದ್ಯಾರ್ಥಿಗಳ ಸಮ್ಮೇಳನದಲ್ಲಿ ಸಮಗ್ರ ಶೈಕ್ಷಣಿಕ ಉನ್ನತಿ, ಉತ್ತಮ ಸಾಮಾಜಿಕ ಸಂಬಂಧ, ಒಳ್ಳೆಯ ಮಾರ್ಗದರ್ಶನ ಹಾಗೂ ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಉದ್ಯಮವಲಯದಲ್ಲಿ ಒಳ್ಳೆಯ ಅವಕಾಶಗಳನ್ನು ಒದಗಿಸಿಕೊಡುವುದು ಇದರ ಮುಖ್ಯ ಉದ್ದೇಶವಾಗಿದೆ. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಟಿಯಲ್ಲಿ ಕಾಲೇಜಿನ ಪ್ರಾಚಾರ್ಯ ಆರ್. ಬಸವರಾಜ್, ಕಾಶೀನಾಥ್, ಅಮರೇಶ ಪಾಟೀಲ್ ಡಾ. ಆರ್.ವಿಶ್ವನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಅಭಿವೃದ್ಧಿ ಕಾಮಗಾರಿಗೆ ಚಾಲನೆ | ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಭರವಸೆ

ಭಾಗ್ಯನಗರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ

ಕೊಪ್ಪಳ: ತಾಲೂಕಿನ ಭಾಗ್ಯನಗರವನ್ನು ಸರ್ವಾಂಗೀಣ ಅಭಿವೃದ್ಧಿ ಮಾಡುವ ಮೂಲಕ ಮಾದರಿ ಪಟ್ಟಣವಾಗಿ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಹೇಳಿದರು.

> **ಭಾಗ್ಯನಗರ ಜಿಲ್ಲೆಯಲ್ಲೇ ವೇಗವಾಗಿ ಬೆಳೆಯುತ್ತಿರುವ ಪಟ್ಟಣ. ಮೆಡಿಕಲ್ ಕಾಲೇಜಿನಿಂದ ಭಾಗ್ಯನಗರ ಮಾರ್ಗವಾಗಿ ರಿಂಗ್ ರೋಡ್ ಅಗತ್ಯ ಇದೆ. ಈ ಯೋಜನೆ ಜಾರಿ ಮಾಡುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದೇನೆ.**
> – ಕೆ.ರಾಜಶೇಖರ ಹಿಟ್ನಾಳ, ಸಂಸದ

ತಾಲೂಕಿನ ಭಾಗ್ಯನಗರ ಪಟ್ಟಣದಲ್ಲಿ ನಗರೋತ್ಥಾನದ 4ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಶುಕ್ರವಾರ ಮಾತನಾಡಿದರು.

ಪಟ್ಟಣದ ಸಾರ್ವಜನಿಕರು ಅಗತ್ಯ ಸೌಲಭ್ಯಕ್ಕೆ ವ್ಯವಸ್ಥಿತ ಹೋರಾಟ ಮಾಡುವ ಮೂಲಕ ಆಡಳಿತಕ್ಕೆ ಚುರುಕು ಮುಟ್ಟಿಸುತ್ತಿದ್ದಾರೆ. ಮೇಲ್ಸೇತುವೆ ಮತ್ತು ಪಟ್ಟಣ ಪಂಚಾಯತ್ ನಿರ್ಮಾಣಕ್ಕೆ ಮಾತ್ರವಲ್ಲದೇ ರಸ್ತೆ ಅಭಿವೃದ್ಧಿ, ಪದವಿ ಕಾಲೇಜು ಸೇರಿ ಎಲ್ಲ ಅಭಿವೃದ್ಧಿ ಕಾರ್ಯಗಳಿಗೆ ಹೋರಾಟ ಮಾಡಿದರು. ಇದರ ಪರಿಣಮವಾಗಿ ನಗರೋತ್ಥಾನದ 4ನೇ ಹಂತದ ಕಾಮಗಾರಿ ಆರಂಭವಾಗಿವೆ ಅನುದಾನದಲ್ಲಿ ಎಂದು ತಿಳಿಸಿದರು.

ಮುಂದೆ 190 ಕೋಟಿ ರು. ಅನುದಾನದಲ್ಲಿ 450 ಹಾಸಿಗೆಯ ಆಸ್ಪತ್ರೆ ನಿರ್ಮಾಣ ಕಾರ್ಯಕ್ಕೆ ಸಿಎಂ ಸಿದ್ದರಾಮಯ್ಯ ಲೋಕಾರ್ಪಣೆ ಮಾಡುತ್ತಾರೆ. ಕುಡಿವ ನೀರಿಗೆ 145 ಕೋಟಿ ರೂ. ವೆಚ್ಚದಲ್ಲಿ ತುಂಗಭದ್ರ ಹಿನ್ನೀರಿನಿಂದ ದಿನದ 24 ಗಂಟೆ ಕುಡಿವ ನೀರು ಒದಗಿಸುವ ಯೋಜನೆ ರೂಪಿಸಲಾಗಿದೆ. ಇ-ಲೈಬ್ರರಿ, ಪದವಿ ಕಾಲೇಜು, ಇಂಟರ್ ನ್ಯಾಷನಲ್ ಮಾದರಿಯ ಶಾಲೆ ಮಂಜೂರು ಮಾಡುತ್ತೇವೆ ಎಂದು ಭರವಸೆ ನೀಡಿದರು.

ಮಾಜಿ ಸಂಸದ ಸಂಗಣ್ಣ ಕರಡಿ ಮಾತನಾಡಿ, ಭಾಗ್ಯನಗರ ಮೇಲ್ಸೇತುವೆ ಅಭಿವೃದ್ಧಿ ಕೈಗೊಂಡ ಬಗ್ಗೆ ಸ್ಮರಿಸಿದರು. ಭಾಗ್ಯನಗರಕ್ಕೆ ಪದವಿ ಕಾಲೇಜು ಮಂಜೂರು ಮಾಡುವ ಅಗತ್ಯ ಇದೆ. ಸರ್ಕಾರಗಳು ಈ ಬೇಡಿಕೆ ಈಡೇರಿಸಬೇಕು ಎಂದರು. ಸಂಸದ ಕೆ.ರಾಜಶೇಖರ ಹಿಟ್ನಾಳ ಮಾತನಾಡಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸ ಗುಪ್ತಾ, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಹೊನ್ನುರಸಾಬ್ ಬಯ್ಯಾಪುರ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಮರೇಗೌಡ ಬಯ್ಯಾಪುರ, ಗೂಳಪ್ಪ ಹಲಿಗೇರಿ , ಕಾಂಗ್ರೆಸ್ ಜಿಲ್ಲಾ ಪ್ರದಾನ ಕಾರ್ಯದರ್ಶಿ ಕೃಷ್ಣ ಇಟ್ಟಂಗಿ, ಮುಖಂಡ ಯಮನಪ್ಪ ಕಬ್ಬೇರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕಾಟನ್ ಪಾಷಾ, ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಗಾಳೆಪ್ಪ ಪೂಜಾರ, ಪಟ್ಟಣ ಪಂಚಾಯಿತಿ ಸದಸ್ಯರು ಇದ್ದರು.

ಕೊಪ್ಪಳ ತಾಲೂಕು ಭಾಗ್ಯನಗರ ಪಟ್ಟಣದಲ್ಲಿ ನಗರೋತ್ಥಾನದ 4ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಶಾಸಕ ರಾಘವೇಂದ್ರ ಹಿಟ್ನಾಳ ಶುಕ್ರವಾರ ಚಾಲನೆ ನೀಡಿದರು.

ಜೆಜೆಎಂ ಕಾಮಗಾರಿ ಪರಿಶೀಲನೆ

ಮುದಗಲ್: ಪಟ್ಟಣ ಸಮೀಪದ ವಿವಿಧ ಗ್ರಾಮಗಳಲ್ಲಿ ನಡೆಯುತ್ತಿರುವ ಜೆಜೆಎಂ ಕಾಮಗಾರಿಯನ್ನು ಲಿಂಗಸುಗೂರು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಇಲಾಖೆ ಅಭಿಯಂತರ ಮಹಾದೇವಪ್ಪ ಭೇಟಿ ನೀಡಿ ಪರಿಶೀಲನೆ ಮಾಡಿದರು. ಕುಡಿಯುವ ನೀರು ಹಾಗೂ ನೈರ್ಮಲ್ಯ ಉಪ ವಿಭಾಗ ಲಿಂಗಸುಗೂರು ವತಿಯಿಂದ ನಡೆಯುತ್ತಿರುವ ಜಲ್ ಜೀವನ್ ಮಿಷನ್ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿ ಸಂಪೂರ್ಣ ಕಳಪೆಯಾಗಿದೆ ಎಂದು ದೂರು ಕೇಳಿಬಂದಿರುವ ಹಿನ್ನಲೆಯಲ್ಲಿ ರಾಮತ್ನಾಳ ಗ್ರಾಮಕ್ಕೆ ಇಲಾಖೆ ಅಭಿಯಂತರ ಮಹಾದೇವಪ್ಪ ಭೇಟಿ ನೀಡಿ ಗುಣಮಟ್ಟ ಪರಿಶೀಲನೆ ಮಾಡಿದರು. ಸಂಬಂಧಿಧಪಟ್ಟ ಮೇಲಾಧಿಕಾರಿಗೆ ಪರಿಶೀಲನಾ ವರದಿ ನೀಡಲಾಗುವುದು ಎಂದು ಹೇಳಿದರು. ವಿವಿಧ ಗ್ರಾಮಗಳಲ್ಲಿ ನಡೆಯತ್ತಿರುವ ಜೆಜೆಎಂ ಕಾಮಗಾರಿ ಕಳಪೆಯಾಗಿದ್ದು, ಗುತ್ತಿಗೆದಾರನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ರಾಮಾಯಣ ಬಯಲಾಟ ಜ.16ರಂದು

ಕೊಪ್ಪಳ: ನಗರದ ಜೆ.ಪಿ. ಮಾರುಕಟ್ಟೆ ಸಮೀಪದ ಡಾ.ಬಾಬು ಜನಜೀವನ ರಾಮ್ ವೃತ್ತದ ಬಳಿ, ಶ್ರೀ ಗವಿಸಿದ್ದೇಶ್ವರ ಜಾತ್ರೋತ್ಸವದ ಪ್ರಯುಕ್ತ ಜ.16ರ ರಾತ್ರಿ 9.30ಕ್ಕೆ ಸಂಪೂರ್ಣ ರಾಮಾಯಣ ಬಯಲಾಟ ಪ್ರದರ್ಶನ ನಡೆಯಲಿದೆ. ಇಲ್ಲಿನ ಬಸವೇಶ್ವರಬನಗರದ ಶ್ರೀ ಮಾರುತೇಶ್ವರ ಬಯಲಾಟ ಸಂಘದಿಂದ ಪ್ರತಿ ವರ್ಷದಂತೆ ಈ ಬಾರಿ ಬಯಲಾಟ ಉಚಿತ ಪ್ರದರ್ಶನ ನಡೆಯಲಿದೆ ಎಂದು ಕಲಾವಿದ ನಿಂಗಪ್ಪ ದೊಡ್ಡಮನಿ ಹೇಳಿದರು.

ನಗರದ ಕೊಪ್ಪಳ ಮೀಡಿಯಾ ಕ್ಲಬ್‌ನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದ ಶ್ರೀ ಬಸವೇಶ್ವರ ನಗರದ ಮಾದಿಗ ಸಮಾಜದ ಹಿರಿಯರು ಸುಮಾರು 55 ರಿಂದ 60 ವರ್ಷದಿಂದ ವಿವಿಧ ಬಯಲಾಟದ ಕಥೆಗಳನ್ನು ಉಚಿತವಾಗಿ ಪ್ರದರ್ಶನ ಮಾಡುತ್ತಾ ಬಂದಿದ್ದಾರೆ ಎಂದರು.

ಬಯಲಾಟದಲ್ಲಿ ಸ್ತ್ರೀ ಮತ್ತು ಪುರುಷ ಪಾತ್ರಗಳನ್ನು ಪುರುಷರೇ ನಿರ್ವಹಣೆ ಮಾಡುತ್ತಿರುವುದು ವಿಶೇಷ. ಬಯಲಾಟದ ಹಾರ್ಮೋನಿಯಂ ಮಾಸ್ತರ್ ಆಗಿ ದೇವಪ್ಪ ಹಳ್ಳಿಕೇರಿ, ಮದಲಿ (ಮೃದಂಗ) ಮಾಸ್ತರರಾಗಿ ಗೋವಿಂದಪ್ಪ ಹ್ಯಾಟಿ, ಕಥೆಗಾರ ಮಾಸ್ತರರಾಗಿ ಹನುಮಂತಪ್ಪ ಲೇಬಗೇರಿ, ಚನ್ನಬಸಪ್ಪ ಹೊಳೆಯಪ್ಪನವರ, ಹಿಂಮ್ಯಾಳದ ಪ್ರಮುಖರಾಗಿ ಗವಿಸಿದ್ದಪ್ಪ ಗಿಣಿಗೇರಿ, ವಿರುಪಾಕ್ಷಪ್ಪ ಕಂದಾರಿ, ಹನುಮಂತಪ್ಪ ಗಿಣಿಗೇರಿ ಇತರರು ಸಹಕರಿಸಲಿದ್ದಾರೆ ಎಂದು ತಿಳಿಸಿದರು.

ನಾಟಕದಲ್ಲಿ ದಶರಥನಾಗಿ ದುರುಗಪ್ಪ ಕಂದಾರಿ, ಕೌಶಲದೇವಿಯಾಗಿ ರವಿಕುಮಾರ್ ಕಿರುಬಂಡಿ, ಕೈಕೆಯಾಗಿ ದುರುಗಪ್ಪ ಈರಪ್ಪ ಕಂದಾರಿ, ಶ್ರೀ ರಾಮಚಂದ್ರನಾಗಿ ನಿಂಗಪ್ಪ ದೊಡ್ಡಮನಿ, ಲಕ್ಷ್ಮಣನಾಗಿ ನೀಲಪ್ಪ ಮ್ಯಾಗಳಮನಿ, ಸೀತಾದೇವಿಯಾಗಿ ರಾಜಶೇಖರ ದೊಡ್ಡಮನಿ, ಸೂರ್ಪನಖಿಯಾಗಿ ಚಿರಂಜೀವಿ ದೊಡ್ಡಮನಿ, ಮಾಯಾ ಸ್ತ್ರೀಯಾಗಿ ದೇವಪ್ಪ ಗಿಣಿಗೇರಿ ಕಾಣಿಸಿಕೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ಚನ್ನಬಸಪ್ಪ ಹೊಳೆಪ್ಪನವರ, ಗವಿಸಿದ್ದಪ್ಪ ಕಟ್ಟಿಮನಿ, ರಾಜಶೇಖರ ದೊಡ್ಡಮನಿ, ಗವಿಸಿದ್ದಪ್ಪ ಗಿಣಿಗೇರಿ ಇದ್ದರು.

ಯುವ ದಿನಾಚರಣೆ ಮ್ಯಾರಥಾನ್ ನಾಳೆ

ರಾಯಚೂರು: ಸ್ವಾಮಿ ವಿವೇಕಾನಂದರ 162 ನೇ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಯುವ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಹಾಗೂ ವಿವೇಕಾನಂದರ ವಿಚಾರ ಧಾರೆಗಳನ್ನು ಮುಟ್ಟಿಸುವ ನಿಟ್ಟಿನಲ್ಲಿ ನಗರದಲ್ಲಿ 5 ಕಿ.ಮೀ ಮ್ಯಾರಾಥಾನ್ ಓಟವನ್ನು ರನ್ ಫಾರ್ ಹ್ಯೂಮಾನಿಟಿ ಎಂಬ ಘೋಷ ವ್ಯಾಖ್ಯೆದಡಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಡಳಿತಾಧಿಕಾರಿ ರಾಕೇಶ್ ರಾಜಲಬಂಡಿ ಅವರು ಹೇಳಿದರು. ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ವೇದಾಂತ ಪದವಿ ಮಹಾವಿದ್ಯಾಲಯ ರಾಯಚೂರು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು. ಎನ್.ಎಸ್.ಎಸ್ ಘಟಕ, ರೋಟರಿ ಕ್ಲಬ್ ಕಾಟನ್ ಸಿಟಿ ರಾಯಚೂರು, ಜೆಸಿಐ ರಾಯಚೂರು ಹಾಗೂ ವಾಸವಿ ಇಂಟರ್ ನ್ಯಾಷನಲ್ ಕ್ಲಬ್ ಇವರುಗಳ ಸಹಯೋಗದೊಂದಿಗೆ ಆಯೋಜಿಸಲಾಗಿದ್ದು, ಜನವರಿ 12 ಬೆಳಗ್ಗೆ 6 ಗಂಟೆ 30 ನಿಮಿಷಕ್ಕೆ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ, ಕಾಂಗ್ರೆಸ್ ಯುವ ಮುಖಂಡ ರವಿಭೋಸರಾಜು ಇವರು ಚಾಲನೆ ನೀಡಲಿದ್ದಾರೆ. ಈ ಕಾರ್ಯಕ್ರಮದಲ್ಲಿ 400 ಕ್ಕೂ ಯುವಜನರು ಭಾಗವಹಿಸಲಿದ್ದಾರೆ. ಸುದ್ದಿಗೋಷ್ಟಿಯಲ್ಲಿ ಡಾ.ಸುರೇಶ್ ಸಗರದ ಪ್ರಭಣ್ಣಗೌಡ, ಸಿಟಿ , ಸಂದೀಪ್ ಜೈನ್ ಅಧ್ಯಕ್ಷರು ಜೆ.ಸಿ.ಐ , ಡಾ.ಬಿ.ಕೆ ದೇಸಾಯಿ ಲಯನ್ಸ್ ಕ್ಲಬ್, ಅಣ್ಣ ಶ್ರೀಕಾಂತ್ ಅಧ್ಯಕ್ಷರು ವಾಸವಿ ಕ್ಲಬ್ , ರಾಮು ಸಿ.ಎ , ನಿಖಿಲ್ , ವಿನೋದ್ ಇದ್ದರು.

ಹಾಲುಮತ ಸಂಸ್ಕೃತಿ ವೈಭವ ಕೈ ಬಿಡಿ: ಆಗ್ರಹ

ರಾಯಚೂರು: ಇಂದಿನಿಂದ ತಿಂಥಿಣಿ ಬ್ರಿಜ್ ನ ಕಾಗಿನೆಲೆ ಕನಕ ಗುರು ಪೀಠದಲ್ಲಿ ಆಯೋಜಿಸಿರುವ ಹಾಲುಮತ ಸಂಸ್ಕೃತಿ ವೈಭವಕ್ಕೆ ಮಾಜಿ ಸಚಿವ ಹಾಗೂ ವಿದಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ ಪತ್ರಿಕಾ ಪ್ರಕಟಣೆ ಮೂಲಕ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ದೇವದುರ್ಗ ತಾಲೂಕಿನ ತಿಂಥಿಣಿ ಬ್ರಿಜ್ ನ ಕಾಗಿನೆಲೆ ಕನಕ ಗುರು ಪೀಠದ ಸಿದ್ದರಾಮನಂದ ಸ್ವಾಮಿಜಿ ಅವರ ನೇತೃತ್ವದಲ್ಲಿ ಆಯೋಜಿಸಿರುವ ಹಾಲಮತ ಸಂಸ್ಕೃತಿ ವೈಭವ ಕಾರ್ಯಕ್ರಮ ಮಾಡಬಾರದು. ಹಾಲುಮತ ಎನ್ನುವ ಹೆಸರನ್ನ ಬಳಸಿದರೆ ಕುರುಬ ಸಮಾಜದ ಸೌಲಭ್ಯಗಳು ಕೈ ತಪ್ಪಲಿವೆ. ಶತಮಾನಗಳಿಂದಲೂ ಕುರುಬ ಸಮಾಜವನ್ನ ಹಾಲುಮತ ಸಮಾಜ ಎಂದು ಕರೆಯುತ್ತಾರೆ ನಿಜ. ಆದರೆ ಸ್ವಾತಂತ್ರ್ಯ ನಂತರ ಸರಕಾರ ನಾಡಿನ ಜಾತಿ ಜನಾಂಗಗಳ ಪಟ್ಟಿಯಲ್ಲಿ ಹಾಲುಮತ ಬದಲಾಗಿ ಎಲ್ಲ ಕಡೆಯು ಕುರುಬ – ಕುರುಬರು ಎಂದು ಸೇರಿಸಲಾಗಿದೆ. ಹಾವನೂರು ವರದಿ ಸೇರಿದಂತೆ ಯಾವುದೇ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಹಾಲುಮತ ಎನ್ನುವ ಹೆಸರಿಲ್ಲ.

ಈಗಾಗಲೇ ಹಿಂದುಳಿದ ವರ್ಗಗಳ 2 ಎ ಮೀಸಲಾತಿ ಪಟ್ಟಿಯಲ್ಲಿರುವ ಕುರುಬ ಸೌಕರ್ಯಗಳನ್ನ ಬಲಾಢ್ಯ ಜಾತಿಗಳು ರಾಜಕೀಯ ಬಲದಿಂದ ತಮ್ಮ ಜಾತಿಗಳನ್ನ 2 ಎ ಮೀಸಲಾತಿಗೆ ಸೇರಿಸಿ, ಕುರುಬ ಜಾತಿ ಸೇರಿದಂತೆ 2 ಎ ಮೀಸಲಾತಿ ಪಡೆಯುವ ಜಾತಿಗಳಿಗೆ ಅನ್ಯಾಯ ಮಾಡಲಾಗಿದೆ. ಪಂಚಮಸಾಲಿ ಸಮಾಜವನ್ನ 2 ಎ ಗೆ ಸೇರಿಸಬೇಕೆಂದು ಮಠಾಧೀಶರ ನೇತೃತ್ವದಲ್ಲಿ ಹೋರಾಟ ನಡೆಸುತ್ತಿದ್ದಾರೆ.

ಸರಕಾರದ ಉನ್ನತ ಹುದ್ದೆಗಳಲ್ಲಿ ಕುರುಬ ಸಮಾಜಕ್ಕೆ ಧಕ್ಕಬೇಕಾದ ಪಾಲು ಸಿಗದಂತಾಗಿದೆ ಎಂದು ಅಸಮಧಾನ ಹೊರ ಹಾಕಿದ್ದಾರೆ.

ಸಿದ್ದರಾಮನಂದಪುರಿ ಸ್ವಾಮಿಜಿ ಬಗ್ಗೆ ಸಮಾಜದಲ್ಲಿ ಅಪಾರ ಗೌರವವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಕ್ಷಮದಲ್ಲಿ ಹಾಗೂ ಕಾಗಿನೆಲೆ ಕನಕ ಗುರುಪೀಠದ ಜಗದ್ಗುರು ನಿರಂಜನಾನಂದ ಪುರಿ ಸ್ವಾಮಿಜಿಯವ ಅಧ್ಯಕ್ಷತೆಯಲ್ಲಿ ತೆಗೆದುಕೊಂಡ ತೀರ್ಮಾನಕ್ಕೆ ಗೌರವ ಕೊಡುವುದರ ಜತೆಗೆ ಸಮಾಜದ ಹಿತಕ್ಕಾಗಿ ಹಮ್ಮಿಕೊಂಡಿರುವ ಹಾಲುಮತ ಸಂಸ್ಕೃತಿ ವೈಭವ ಕಾರ್ಯಕ್ರಮವನ್ನ ಆಚರಿಸಬಾರದೆಂದು ತಿಳಿಸಿದ್ದಾರೆ.



> **ಸರಕಾರದ ಸೌಲಭ್ಯಗಳನ್ನ ಮಕ್ಕಳು, ವೃದ್ದರು ಕುರುಬ ಹೆಸರಿನಲ್ಲೇ ಪಡೆಯುತ್ತಿದ್ದಾರೆ ಹೊರತು ಹಾಲಮತ ಎಂಬ ಹೆಸರಿನಿಂದಲ್ಲ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇಲ್ಲದ ಹಾಲುಮತ ಎನ್ನುವ ಹೆಸರಿನ ಬಳಕೆಯಿಂದ ಇಡೀ ಸಮಾಜ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗುವ ಅಪಾಯವಿದೆ.**
> – ಎಚ್.ವಿಶ್ವನಾಥ, ವಿಧಾನ ಪರಿಷತ್ ಸದಸ್ಯ

ದುರ್ನಡತೆ ಆರೋಪ: ನೌಕರನ ಅಮಾನತು

ಗಂಗಾವತಿ: ನಗರದ ಟಿಎಚ್‌ಒ ಕಚೇರಿಯ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವಿಜಯಪ್ರಸಾದ್ ರನ್ನು ಅಮಾನತು ಮಾಡಿ ಡಿಎಚ್‌ಒ ಡಾ.ಲಿಂಗರಾಜು ಆದೇಶಿಸಿದ್ದಾರೆ. ಕಳೆದ ಜ. 8 ರಂದು ಕೊಪ್ಪಳದ ಡಿಎಚ್‌ಒ ಕಚೇರಿಯಲ್ಲಿ ನಡೆದ ಜಿಲ್ಲಾ ಮಟ್ಟದ ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅನುಚಿತ ವರ್ತನೆ ತೋರಿದ ಆರೋಪದಡಿ ಅಮಾನತು ಮಾಡಲಾಗಿದೆ. ಕಾರ್ಯಕ್ರಮಗಳ ಅಂಕಿ ಅಂಶ ತಾಳೆ ಹೊಂದಿಸಿ ಜಿಲ್ಲಾ ಮಟ್ಟಕ್ಕೆ ಸರಿಯಾಗಿ ನೀಡದೇ ಪ್ರತಿಯೊಂದು ಮಾಹಿತಿಗೆ ಟಿಎಚ್‌ಒ ಕೇಳಬೇಕು ಎಂದು ಬೇಜವಾಬ್ದಾರಿ ಉತ್ತರ ನೀಡಿದ್ದಾರೆ. ಸಭೆಯ ಅಧ್ಯಕ್ಷತೆ ವಹಿಸಿದ್ದ ಡಿಎಚ್‌ಒ ಲಿಂಗರಾಜು ಅವರೊಂದಿಗೆ ಎಲ್ಲ ಅಧಿಕಾರಿಗಳ ಮುಂದೆ ವಾಗ್ವಾದಕ್ಕೆ ಇಳಿದಿದ್ದಾರೆ. ಏರು ಧ್ವನಿಯಲ್ಲಿ ಮತ್ತು ಏಕ ವಚನದಲ್ಲಿ ಮಾತಮಾಡಿ, ಡಿಎಚ್‌ಒಹೆ ಧಮ್ಕಿ ಹಾಕಿ ಹ ಸಭೆಗೆ ಅಗೌರವ ಉಂಟು ಮಾಡಿರುತ್ತಾರೆ. ಈ ಮೂಲಕ ಕರ್ತವ್ಯದಲ್ಲಿ ದುರ್ನಡತೆ ಮತ್ತು ಕರ್ತವ್ಯಲೋಪ ಎಸಗಿದ್ದಾರೆ. ಈ ಹಿನ್ನೆಲೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ), ನಿಯಮಗಳು 1957 ರ ನಿಯಮ 10(1) ರ ಪ್ರಕಾರ ಅಮಾನತು ಮಾಡಲಾಗಿದೆ.



ಆರಾಮ

ಬೆಂಗಳೂರು ಶನಿವಾರ 11।01।2025

ವಿಶ್ವವಾಣಿ

ಎಲ್ಲರ ನೆಟ್‌ವರ್ಕ್ ಒಮ್ಮೆಲೇ ಹೋದರೆ ಹೇಗೆ?

1950ರಿಂದ ಇಲ್ಲಿಯವರೆಗೆ 50 ಸಾವಿರ ಟನ್‌ಗಿಂತಲೂ ಹೆಚ್ಚಿನ ತೂಕದ ವಸ್ತುಗಳು ಭೂಮಿಯಿಂದ ಈಗಾಗಲೇ ಅಂತರಿಕ್ಷವನ್ನು ಸೇರಿದ್ದಾವೆ. 2024ರಲ್ಲಿ 13 ಸಾವಿರಕ್ಕೂ ಟನ್‌ಗಿಂತಲೂ ಹೆಚ್ಚಿನ ತೂಕದ ವಸ್ತುಗಳು ಚಾಲ್ತಿಯಲ್ಲಿದೆ.

● ವಿನಯ್ ಖಾನ್

ಒಂದು ಕ್ಷಣ ಯೋಚಿಸಿ, ಯಾರ ಫೋನ್‌ಗೂ ನೆಟ್‌ವರ್ಕ್ ಇಲ್ಲ, ಬರೀ ನೆಟ್‌ವರ್ಕ್ ಇಲ್ಲದಿರುವ ಪ್ರದೇಶದಲ್ಲಿ ಅಷ್ಟೇ ಅಲ್ಲ. ಇಡೀ ವಿಶ್ವದಲ್ಲೇ ನೆಟ್‌ವರ್ಕ್ ಇಲ್ಲ. ಯಾರ ಫೋನ್‌ಗೂ ಡೇಟಾ ಕನೆಕ್ಟ್ ಇಲ್ಲ, ಟಿವಿಯಲ್ಲಿ ಏನೂ ಬರುತ್ತಿಲ್ಲ. ವೈಫೈ ಇಲ್ಲ, ಏನು ಅಂದರೆ ಏನೂ ಇಲ್ಲ. ಅದು ಒಂದೇ ಕ್ಷಣಕ್ಕೆ ನಮಗೆಲ್ಲ ವಿಚಿತ್ರ ಅನ್ನಿಸುತ್ತದೆ. ಇದೆಲ್ಲ ಬರೀ ಒಂದು ದಿನಕ್ಕಲ್ಲ, ಮುಂದೆಯೂ ಹೀಗೇ ಆದರೆ, ಮೊದಲಿನ ರೀತಿ ಪೋಸ್ಟ್ ಬಳಕೆ ಬಂದರೆ, ಕೇಬಲ್ ಕನೆಕ್ಷನ್ ವೈರ್ ಬಂದರೆ, ಮೊಬೈಲ್ ಬರೀ ಫೋಟೋ ತಗೆದುಕೊಳ್ಳುವ ಒಂದು ಸಾಧನೆ ಅಷ್ಟೇ ಆದರೆ, ಜೀವನ ಹೇಗಿರಬಹುದು ಯೋಚಿಸಿ?

ಪ್ರಪಂಚದಲ್ಲಿ ಎಷ್ಟೊಂದು ಸಿಮ್ ಕಂಪನಿಗಳಿದ್ದಾವೆ ಗೊತ್ತಾ? ಭಾರತದಲ್ಲೇ 8-10 ಇರಬಹುದು. ಇದರ ಜತೆಗೆ ಇಲಾನ್ ಮಸ್ಕ್‌ನ ಸ್ಟಾರ್‌ಲಿಂಕ್ಸ್ ಹಾಗೂ ಯೂಟೆಲ್‌ಸಾಟ್‌ನವರ ಒನ್ ವೆಬ್‌ಗಳು ಉಪಗ್ರಹಗಳಿಂದ ಸೀದಾ ಮೊಬೈಲ್‌ಗೆ ನೆಟ್‌ವರ್ಕ್ ಸಿಗುವ ರೀತಿಯಲ್ಲಿ ವಿನೂತನ ತಂತ್ರಜ್ಞಾನವನ್ನು ರಚಿಸಿದ್ದಾರೆ. ಅದರೊಟ್ಟಿಗೇನೇ ಬಾಹ್ಯಾ ಕಾಶ ಸಂಸ್ಥೆಗಳಿಂದಲೂ ಹಲವಾರು ಉಪಗ್ರಹಗಳು ಉಡಾವಣೆಯಾಗಿ, ಎಷ್ಟೋ ಉಪಗ್ರಹಗಳು ಬಾಹ್ಯಾಕಾಶದಲ್ಲೇ ತೇಲಾಡುತ್ತಿವೆ. ಅದರೊ ಟ್ಟಿಗೆ 36 ಸಾವಿರಕ್ಕೂ ಹೆಚ್ಚು ತ್ಯಾಜ್ಯ (debris) ಬಾಹ್ಯಾಕಾಶದಲ್ಲಿ ತುಂಬಿಕೊಂಡಿದೆ. ಇಲ್ಲಿ ಕುಳಿತು ಓದುವಾಗ ಇದು ದೊಡ್ಡ ಸಮಸ್ಯೆಯೇ ಅಲ್ಲ, ಆದರೆ, ಸ್ಯಾಟಲೈಟ್‌ಗಳ ಘರ್ಷಣೆಯಾಗಿ, ಒಂದಕ್ಕೊಂದು ಡಿಕ್ಕಿ ಹೊಡೆದು, ಯಾವ ಇಂಟರ್ನೆಟ್ ಕೆಲಸ ಮಾಡದೇ ಇದ್ದಾಗ, ಎಲ್ಲರಿ ಗೂ ಅಂದರೇ ಪ್ರಪಂಚದ ಪ್ರತಿಯೊಬ್ಬರಿಗೂ ತೊಂದರೆ ತಪ್ಪಿದ್ದಲ್ಲ!

ಕೆಸ್ಲರ್ ಎಫೆಕ್ಟ

ನಾಸಾದ ವಿಜ್ಞಾನಿ ಡೊನಾಲ್ಡ್ ಜೆ. ಕೆಸ್ಲರ್ ಪ್ರಕಾರ ಭೂಮಿಯ ಕಕ್ಷೆಯಲ್ಲಿ ಈಗಾಗಲೇ ಇರುವ ಉಪಗ್ರಹಗಳ ನಡುವೆ ಡಿಕ್ಕಿಯಾಗಬಹುದು. ಅದರಿಂದ ಮತ್ತಷ್ಟು ಕಸದ ತುಣುಕುಗಳು ಉಂಟಾಗಬಹುದು. ಹೀಗೆ ಕಸದ ಪ್ರಮಾಣ ಹೆಚ್ಚುತ್ತಾ ಹೋದರೆ, ಮತ್ತಷ್ಟು ಡಿಕ್ಕಿಗಳಾಗುತ್ತವೆ. ಇದು ಹೀಗೇ ಚೈನ್ ರಿಯಾಕ್ಷನ್ ರೀತಿಯಲ್ಲಿ ನಡೆದು, ಕೊನೆಗೆ ಭೂಮಿಯ ಲೋ ಅರ್ಥ್ ಆರ್ಬಿಟ್ ಮತ್ತು ಜಿಯೋಸ್ಟಾಟಿಕ್ ಆರ್ಬಿಟ್‌ಗಳು ಕಸದಿಂದ ತುಂಬಿ, ಉಪಗ್ರಹ ಮತ್ತು ಇತರ ಬಾಹ್ಯಾಕಾಶ ಸಾಧನೆಗಳನ್ನು ಬಳಸಲು ಆಗದೇಯೂ ಇರಬಹುದು ಎಂದು ಹೇಳಿದ್ದರು. ಅವರ ಆ ಮಾತನ್ನು ಕೆಸ್ಲರ್ ಎಫೆಕ್ಟ್ ಅಥವಾ ಕೆಸ್ಲರ್ ಥೇರಿ ಅಂತಲೂ ಕರೆಯವಹುದು. ನಿಜ ಹೇಳಬೇಕೆಂದರೆ, ಇಂದಿನ ದಿನಗಳಲ್ಲಿ ಕೆಸ್ಲರ್ ಥೇರಿ ಬಗ್ಗೆ ಹಲವಾರು ಚರ್ಚೆ ನಡೆಯುತ್ತಿದೆ. ಕೆಸ್ಲರ್ ಥೇರಿ ಒಂದು ವೇಳೆ ನಡೆದರೆ, ಭೂಮಿಯ ಸುತ್ತ ಬರೀ ಕಸದ ಕಾರ್ಮೋಡ ಹುಟ್ಟಿದರೆ, 5ಜಿ, 6ಜಿ ನೆಟ್ ವರ್ಕ್‌ಗಳೆಲ್ಲ ಒಮ್ಮಲೇ ಕೈಕೊಟ್ಟರೆ, ಬಾಹ್ಯಾಕಾಶ ಸಂಚಾರಕ್ಕೆ ಅನುವು ಆಗದಿದ್ದರೆ, ಭೂಮಿಯ ಮೇಲೆ ಮೋಡಗಳ ಬದಲು ಬಾಹ್ಯಾಕಾಶಗಳ ಕಸ ಕಾಣುತ್ತಿದ್ದರೆ ಹೀಗೆ ಹಲವಾರು ಪ್ರಶ್ನೆಗಳು ವಿಜ್ಞಾನಿಗಳಿಗೆ, ಬಾಹ್ಯಾಕಾಶ ಸಂಸ್ಥೆಗಳಿಗೆ ದೊಡ್ಡ ಪ್ರಶ್ನೆಯಾಗಿದೆ! 1950ರಿಂದ ಇಲ್ಲಿಯವರೆಗೆ 50 ಸಾವಿರ ಟನ್‌ಗಿಂತಲೂ ಹೆಚ್ಚಿನ ತೂಕದ ವಸ್ತುಗಳು ಭೂಮಿಯಿಂದ ಈಗಾಗಲೇ ಅಂತರಿಕ್ಷವನ್ನು ಸೇರಿದ್ದಾವೆ. 2024ರಲ್ಲಿ 13 ಸಾವಿರಕ್ಕೂ ಟನ್‌ಗಿಂತಲೂ ಹೆಚ್ಚಿನ ತೂಕದ ವಸ್ತುಗಳು ಚಾಲ್ತಿಯಲ್ಲಿದೆ. ಇದೆಲ್ಲವನ್ನೂ ಕೂಡಿಸಿ ಇಂಗ್ಲಿಷ್‌ನಲ್ಲಿ ಗ್ರಾ ್ಯವಿಟಿ ಅಂತ ಒಂದು ಸಿನಿಮಾನೂ ಬಂದಿತ್ತು. ಅದನ್ನು ನೋಡಿದವರಿಗೆ ಕೆಸ್ಲರ್ ಎಫೆಕ್ಟ್ ಅತಿ ಬೇಗ ಅರ್ಥವಾಗುತ್ತದೆ.

ಎಷ್ಟೋ ಬಾರಿ ನಡೆದಿದೆ

2009

ಅಮೆರಿಕದ ಸಕ್ರಿಯ ಸ್ಯಾಟಲೈಟ್ ಇರಿಡಿಯಮ್ 33 ಮತ್ತು ರಷ್ಯಾದ ಅಸಕ್ರಿಯ ಸ್ಯಾಟಲೈಟ್ ಕಾಸ್ಮೋಸ್ 2251ರ ನಡುವೆ ಡಿಕ್ಕಿ ಹೊಡೆದು 2000ಕ್ಕೂ ಹೆಚ್ಚು ಕಸದ ತುಣುಕುಗಳು ಸೃಷ್ಟಿಯಾಗಿತ್ತು

2007

ಚೀನಾದ ಮಿಲಿಟರಿ ತಮ್ಮದೇ ದೇಶದ ಫೆನ್ ಗ್ಯುನ್-1ಸಿ ಉಪಗ್ರಹವನ್ನು ಮಿಸ್ಸೈಲ್‌ನಿಂದ ಡಿಕ್ಕಿ ಹೊಡೆದು ಅದನ್ನು ನಾಶ ಮಾಡಿದ್ದರು. ಇದರಿಂದ 3000ಕ್ಕೂ ಹೆಚ್ಚು ಟ್ರಾ ್ಯಕೇಬಲ್ ಕಸ ಉತ್ಪತ್ತಿಯಾಗಿತ್ತು.

2019

ಭಾರತದಲ್ಲೇ ಮಿಷನ್ ಶಕ್ತಿ ಮೂಲಕ ನಮ್ಮ ದೇಶದ್ದೇ ಒಂದು ಉಪಗ್ರಹವನ್ನು ನಾಶ ಮಾಡಲಾಗಿತ್ತು. ಇದರಿಂದ 400ಕ್ಕೂ ಹೆಚ್ಚು ತುಣುಕುಗಳು ಉತ್ಪತ್ತಿಯಾಗಿತ್ತು.

1996

ಪೆಗಾಸಸ್‌ನ ರಾಕೆಟ್ ಫ್ರೆಂಚ್ ಮಿಲಿಟರಿ ಸ್ಯಾಟಲೈಟ್ ಜತೆ ಸಂಘರ್ಷ ಉಂಟಾಗಿ ಉಪಗ್ರಹ ಕೆಟ್ಟುಹೋಗಿತ್ತು.

2021

ಇತ್ತೀಚೆಗೆ ಎರಡು ಸ್ಟಾರ್‌ಲಿಂಕ್‌ನ ಉಪಗ್ರಹಗಳು ಡಿಕ್ಕಿಯಾಗುವ ಸಂಭವನೀಯತೆ ಹೆಚ್ಚಿತ್ತು. ಆದರೆ, ಸಣ್ಣದರಲ್ಲೇ ಮಿಸ್ ಆಗಿ ಹೋಗಿತ್ತು.

ಕೆಸ್ಲರ್ ಎಫೆಕ್ಟ ನಿಜವಾಗಬಹುದಾ?

ಹೇಳಬೇಕೆಂದರೆ, ಬಾಹ್ಯಾಕಾಶ ಭೂಮಿಗಿಂತಲೂ ದೊಡ್ಡದಾಗಿದೆ, ಆದರೆ, ಅಲ್ಲಿ ಬರೀ ಉಪಗ್ರಹಗಳನ್ನು ತುಂಬುತ್ತಾ ಹೋದರೆ, ಅಲ್ಲಿನ ಸಾಂದ್ರತೆ ಹೆಚ್ಚಿ, ಸಂಘರ್ಷಗಳಾಗಬಹುದು. ಈಗಾಗಲೇ ಲೋ ಅರ್ಥ್ ಆರ್ಬಿಟ್‌ನ ಕೆಲ ಸ್ಥಳಗಳಲ್ಲಿ ಮಿತಿ ಮೀರಿ ಉಗ್ರಹಗಳಳು ತುಂಬಿಕೊಂಡಿದೆ. ಹಾಗೇ, ಈ ಡಿಕ್ಕಿಗಳು ಅಪರೂಪ, ಹಾಗಂತ ಆಗುವುದೇ ಇಲ್ಲ ಎಂದು ಹೇಳಲಿಕ್ಕಾಗುವುದಿಲ್ಲ.

ಹೆಚ್ಚುತ್ತಿರುವ ಅಪಾಯಗಳು

- ಈಗಾಗಲೇ 10 ಸೆಮಿಗಿಂತ ಹೆಚ್ಚಿನ ಉದ್ದದ 36 ಸಾವಿರಕ್ಕೂ ಹೆಚ್ಚು ಟ್ರಾ ್ಯಕ್ ಮಾಡಬಹುದಾದ ಕಸ (ಡೆಬ್ರಿ)ಗಳು ಸೇರಿದೆ, ಇದರಿಂದಲೇ ಸಮಸ್ಯೆ ಹೆಚ್ಚು.
- ಇತ್ತೀಚೆಗೆ ಉಪಗ್ರಹಗಳ ಉಡಾವಣೆಯ ಸಂಖ್ಯೆಗಳೂ ಹೆಚ್ಚಾಗುತ್ತಿದೆ, ಸ್ಟಾರ್ ಲಿಂಕ್ ಮತ್ತು ಒನ್‌ವೆಬ್ ಸಂಸ್ಥೆಗಳು ಸಾವಿರಾರು ಉಪಗ್ರಹಗಳನ್ನು ಉಡಾವಣೆ ಮಾಡುವ ಯೋಜನೆಯಲ್ಲಿದೆ. ಇದರಿಂದ ಲೋ ಅರ್ಥ್ ಆರ್ಬಿಟ್‌ನಲ್ಲಿ ಸಾಂದ್ರತೆ ಹೆಚ್ಚಾಗಬಹುದು.

ಪದಬಂಧ



ಎಡದಿಂದ ಬಲಕ್ಕೆ

1. ಜೋರಾಗಿ ಅಳುವುದು ಎಂದರ್ಥ (4)
3. ತಿರುಗಿ ಬಂದ ಜೋಡಿ (3)
6. ಉಪಯೋಗವಿಲ್ಲದ ಎಂದರ್ಥ ತಿರುಗಿ ಬಂದಿದೆ (4)
7. ಕೆಟ್ಟದಾದ ಅದೃಷ್ಟ (4)
9. ಸೊಕ್ಕಿಗೆ ಮತ್ತೊಂದು ಹೆಸರು (3)
11. ರೋಗವನ್ನು ಗುಣಪಡಿಸುವಿಕೆ (3)
13. ಕೆಳಕ್ಕೆ ಬೀಳುವಿಕೆ (3)
15. ಆತನಿಗೆ ದೊರಕಿದ ಜಹಗೀರು (3)
17. ಮುಖವನ್ನು ತಾವರೆಗೆ ಹೋಲಿಸುವಾಗ ಈ ಶಬ್ದವೂ ಬರುತ್ತದೆ (4)
18. ಮದುವೆಯ ಗಂಡಿನೊಂದಿಗೆ ಬಂದಿರುವ ಆದಾಯ (4)
19. ಹೊಸತಾಗಿ ಕಂಡಿದೆ ಒಂದು ಬಗೆಯ ಧಾನ್ಯ (3)
20. ಎಲ್ಲೆ ಮೀರುವಾಗ ಕಂಡಿತು ಅವಸರ (4)

ಎಡದಿಂದ ಬಲಕ್ಕೆ

2. ಕುಬೇರನ ಒಂಭತ್ತು ಐಶ್ವರ್ಯಗಳು (4)
4. ಪಕ್ಷದ ಎಂಟನೆಯ ದಿನ ಅಸ್ತವ್ಯಸ್ತವಾಗಿದೆ (3)
5. ಕಷ್ಟವೋ ಸುಖವೋ ನಡೆಯಬೇಕಲ್ಲ ಜೀವನ (3)
6. ಕೇಳಲು ಒರಟಾದ ಸದ್ದು (3)
8. ಉದಾಹರಣೆಗೆ ಮತ್ತೊಂದು ಹೆಸರು (3)
10. ದೇಶದಲ್ಲಿ ಜನಪ್ರಿಯವಾದ ವಾಹನ ತಯಾರಿಕೆಯ ಒಂದು ಬ್ರಾಂಡ್ (3)
12. ರಾಷ್ಟ್ರಪಕ್ಷಿ ಮರದ ಮಧ್ಯೆ ನಿಂತಿದೆ (3)
14. ಎರಡು ಕಡೆಯಿಂದ ನೋಡಿದರೂ ಕಣ್ಣು (3)
15. ವನದಲ್ಲಿ ದನ ಹುಡುಕುವಾಗ ಕಂಡ ಮುಖ (3)
16. ದೇವಸ್ಥಾನದ ಸಭಾಮಂಟಪ (4)
17. ಮಧ್ಯಮ ಪಾಂಡವ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 3. ಅಭ್ಯಾಸ 5. ಮದಗಜ 7. ಮಡದಿ 8. ಅಪಕಾರ 10. ರಗಳೆ 12. ಸಬಳ 14. ಲಾವಣ್ಯ 15. ಭಾವುಕ 17. ಅವನಿ 19. ಸವಿನಯ 21. ಅಸುರ 22. ಮಮಕಾರ 24. ತುಮಿಸ

ಎಡದಿಂದ ಬಲಕ್ಕೆ: 1. ನಮಸ್ಕಾರ 2. ಮಗ 4. ಸಮರಸ 6. ಜಅ 9. ಪರ್ಯವಸಾನ 11. ಗಡುವು 13. ಬಡವ 16. ಕಸರತ್ತು 18. ನಿವಾರಣೆ 20. ಯಮ 23. ಮರ್ಮ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ವೈಕುಂಠ ಏಕಾದಶಿಯ ಮಹತ್ವ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಮ್ಮೆ ಮಹಾಪ್ರಳಯದ ನಂತರ ಭಗವಂತನು ಚಿಕ್ಕ ಶಿಶುವಿನ ರೂಪದಲ್ಲಿ ಒಂದು ಆಲದ ಎಲೆಯ ಮೇಲೆ ಪ್ರಳಯ ಕಾಲದ ಜಲದಲ್ಲಿ ತೇಲಾಡುತ್ತಿದ್ದನು. ಅವನು ಚತುರ್ಮುಖ ಬ್ರಹ್ಮನನ್ನು ಸೃಷ್ಟಿಸಿ, ಸೃಷ್ಟಿಕಾರ್ಯವನ್ನು ಪ್ರಾರಂಭಿಸಲು ಆದೇಶಿಸಿದನು.

ಆದರೆ ಸ್ವಲ್ಪ ಸಮಯದಲ್ಲೇ ಬ್ರಹ್ಮದೇವರು ತಮ್ಮ ಶಕ್ತಿಗಳ ಮೂಲನಾದ ಭಗವಂತನನ್ನು ಮರೆತು, ಅಹಂಕಾರದಿಂದ ಸೃಷ್ಟಿಕಾರ್ಯವನ್ನು ಮಾಡಲಾರಂಭಿಸಿದರು. ಆ ಸಮಯದಲ್ಲಿ ಲೋಕ ಮತ್ತು ಕಂಠ ಎಂಬ ಇಬ್ಬರು ರಾಕ್ಷಸರು ಭಗವಂತನ ಕಿವಿಗಳಿಂದ ಉದ್ಭವಿಸಿದರು.

ಆ ರಾಕ್ಷಸರು ಅಹಂಕಾರ ಮತ್ತು ಅಪರಾಧ ಭಾವಗಳಿಂದ ತುಂಬಿದ್ದ ಬ್ರಹ್ಮದೇವರನ್ನು ಸಂಹರಿಸಲು ಹೊರಟರು.ಆಗ ಬ್ರಹ್ಮದೇವರು ಕೂಡಲೇ ತಮ್ಮ ಅಪರಾಧವನ್ನು ಅರಿತು ರಕ್ಷಣೆಗಾಗಿ ತಮ್ಮ ತಂದೆಯಾದ ಭಗವಂತನನ್ನು ಕುರಿತು ಪ್ರಾರ್ಥಿಸಿದರು. ಆಗ ಭಗವಂತನು ಬ್ರಹ್ಮದೇವರನ್ನು 'ಕ್ಷಮಿಸಿ, ಆ ಇಬ್ಬರು ರಾಕ್ಷಸರಿಗೆ ವರಗಳನ್ನು ನೀಡಬಯಸಿದನು. ಆಗ ರಾಕ್ಷಸರು ಒಂದು ಮಾಸದವರೆಗೆ ನಿನ್ನೊಂದಿಗೆ ಯುದ್ಧ ಮಾಡಿ, ಮರಣಾನಂತರ ನಿನ್ನ ಪವಿತ್ರವಾದ ಪಾದಪದ್ಮಗಳ ಆಶ್ರಯವನ್ನು ಪಡೆಯುವಂತೆ ವರವನ್ನು ಅನುಗ್ರಹಿಸು ಸ್ವಾಮಿ' ಎಂದು ಭಗವಂತನಲ್ಲಿ ಪ್ರಾರ್ಥಿಸಿದರು.

ಅವರ ಕೋರಿಕೆಯಂತೆಯೇ ಭಗವಂತನು ಆಶೀರ್ವದಿಸಿದನು. ಹಾಗೂ ಅವರಿಬ್ಬರನ್ನೂ ಶಂಖ ಮತ್ತು ಚಕ್ರಗಳಾಗಿ ಬದಲಾಯಿಸಿ, ವೈಕಂಠದಲ್ಲಿ ತನ್ನ ಶಾಶ್ವತ ಸೇವಕರಾಗುವಂತೆ ಅವಕಾಶ ನೀಡಿದನು.

ಆ ಸಮಯದಲ್ಲಿ ಲೋಕ ಮತ್ತು ಕಂಠರಿಬ್ಬರೂ ಭಗವಂತನಿಗೆ ಈ ರೀತಿಯಲ್ಲಿ ಹೇಳಿದರು, 'ಓ ಶ್ರೀಮನ್ನಾರಯಣನೇ! ಸ್ವತಃ ನಿನ್ನ ಕೈಗಳಿಂದ ನಮ್ಮನ್ನು ಸಂಹರಿಸುವ ಮೂಲಕ ನಮಗೆ ಮುಕ್ತಿಯನ್ನು ನೀಡಿರುವೆ. ನಮಗೆ ವೈಕುಂಠದಲ್ಲಿ ನಿವಾಸವನ್ನು ನೀಡಿ, ನಿನ್ನ ಶಾಶ್ವತ ಸೇವೆಯನ್ನು ಮಾಡುವಂತಹ ಭಾಗ್ಯವನ್ನು ಕರುಣಿಸಿರುವೆ. ಈ ಧನುರ್ಮಾಸದಲ್ಲಿ ಬರುವ ಶುಕ್ಲ ಪಕ್ಷದ ದಿವಸದಂದು ವೈಕುಂಠಧಾಮದ ಉತ್ತರದ್ವಾರವನ್ನು ತೆರೆದಿಡುವ ಮೂಲಕ ನಮ್ಮನ್ನು ವೈಕುಂಠಕ್ಕೆ ಆಹ್ವಾನಿಸಿರುವೆ. ಆದರೆ ನೀನು ನಮಗೆ ಮತ್ತೊಂದು ವರವನ್ನು ಅನುಗ್ರಹಿಸಬೇಕು. ಎಲ್ಲ ಪ್ರಜೆಗಳು ನಮ್ಮನ್ನು ಮತ್ತು ಈ ದಿನವನ್ನು ವೈಕುಂಠ ಏಕಾದಶಿಯೆಂದು ಶಾಶ್ವತವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಭೂಲೋಕದಲ್ಲಿ ಯಾವ ಮನುಷ್ಯರು ವೈಕುಂಠ ಏಕಾದಶಿಯಂದು ಉತ್ತರದ್ವಾರದಿಂದ ಅತಿ ಪವಿತ್ರವಾದ ನಿನ್ನ ಆಲಯವನ್ನು ಪ್ರವೇಶಿಸುತ್ತಾರೋ, ಅವರಿಗೆ ಮರಣಾನಂತರ ವೈಕುಂಠ ಪ್ರಾಪ್ತಿಯು ಲಭಿಸಲಿ ಮತ್ತು ವೈಕುಂಠದಲ್ಲಿ ಎಲ್ಲ ಶಾಶ್ವತ ಸೇವಕರಂತೆ, ಅವರಿಗೂ ನಿನ್ನ ಶಾಶ್ವತ ಸೇವೆ ದೊರಕಲಿ' ಎಂದನು.

ಆಗ ನಾರಾಯಣನು ಲೋಕ ಮತ್ತು ಕಂಠರು ಕೋರಿದ ವರವನ್ನು ಅನುಗ್ರಹಿಸಿದನು.

ಆ ದಿನದಂದು ನಾರಾಯಣನು ಅತಿಪವಿತ್ರವಾದ ವೈಕುಂಠ ಏಕಾದಶಿಯಂದು ಉತ್ತರದ್ವಾರದಿಂದ ತನ್ನ ಆಲಯವನ್ನು ಪ್ರವೇಶಿಸುವ ಮನುಷ್ಯರಿಗೆ, ಅವರ ಮರಣದ ನಂತರ ಮೋಕ್ಷವನ್ನು ನೀಡಿ ವೈಕುಂಠ ಪ್ರಾಪ್ತಿಯನ್ನು ಪ್ರಸಾದಿಸುತ್ತಾನೆ

ಈ ರೀತಿಯಲ್ಲಿ ಏಕಾದಶಿಯು ಮೋಕ್ಷಕ್ಕೆ ಸಂಬಂಧಿಸಿರುವುದರಿಂದ, ಈ ಏಕಾದಶಿಯನ್ನು ಮೋಕ್ಷೋತ್ಸವ ಎಂದೂ ಕರೆಯುತ್ತಾರೆ. ವೈಕುಂಠ ಏಕಾದಶಿಯು, ಮಾರ್ಗಶಿರ ಮಾಸದಲ್ಲಿ ಅಮಾವಾಸ್ಯದ ನಂತರ ಬರುವ ಹನ್ನೊಂದನೆಯ ದಿನ.

ಹುಣ್ಣಿಮೆ ಮತ್ತು ಅಮಾವಾಸ್ಯೆಯ ನಂತರ ಬರುವ ಹನ್ನೊಂದನೆಯ ದಿನವೇ ಏಕಾದಶಿ. ಈ ದಿನವು ಶ್ರೀಹರಿಗೆ ಅತ್ಯಂತ ಪ್ರಿಯವಾದದ್ದು. ಮೂರು ಲೋಕಗಳಲ್ಲಿಯೂ ಏಕಾದಶಿ ವ್ರತಕ್ಕಿಂತ ಮಿಗಿಲಾದ ವ್ರತವು ಮತ್ತೊಂದಿಲ್ಲ ಎನ್ನುತ್ತಾರೆ.

ಏಕಾದಶಿಯಂದು ನಾವು ಎಲ್ಲ ಪಾಪಕಾರ್ಯಗಳಿಂದ ದೂರವಿದ್ದು, ಇಂದ್ರಿಯ ತೃಪ್ತಿಯ ಕೆಲಸಗಳನ್ನು ತ್ಯಜಿಸಿ, ಭಗವಂತನ ಸಮೀಪದಲ್ಲಿ ಇರಬೇಕು.ಏಕಾದಶಿಯ ದಿನದಂದು ಉಪವಾಸವನ್ನು ಆಚರಿಸುವವರು ತಮ್ಮೆಲ್ಲ ಪಾಪಕರ್ಮಗಳ ಫಲವನ್ನು ಕಳೆದುಕೊಂಡವನಾಗಿ, ಭಕ್ತಿಸೇವೆಯಲ್ಲಿ ಮುಂದುವರೆಯುತ್ತಾರೆ ಎಂದು ಬ್ರಹ್ಮವೈವರ್ತ ಪುರಾಣವು ತಿಳಿಸುತ್ತದೆ.

ಉಪವಾಸ ಮಾಡುವ ಮುಖ್ಯ ಉದ್ದೇಶವು, ದೈಹಿಕ ಅವಶ್ಯಕತೆಯನ್ನು ಕಡಿಮೆ ಮಾಡಿಕೊಂಡು,ನಮ್ಮ ಹೆಚ್ಚಿನ ಸಮಯವನ್ನು ಶ್ರೀಕೃಷ್ಣನ ಸೇವೆಯಲ್ಲಿ ತೊಡಗಿಸುವುದೆ ಆಗಿದೆ.

ಇಂತಹ ನಮ್ಮ ಸನಾತನ ಆಚರಣೆಗಳ ಮಹತ್ವವನ್ನು ತಿಳಿದುಕೊಂಡು, ಕೈಲಾದಷ್ಟು ಆಚರಿಸುತ್ತಾ ದೇಹ ಶುದ್ಧಿ, ಮನಃಶುದ್ಧಿಯನ್ನು ಸಾಧಿಸಿ, ಬದುಕನ್ನು ಮತ್ತಷ್ಟು ಅರ್ಥಪೂರ್ಣಗೊಳಿಸಿಕೊಳ್ಳೋಣ.

ಹುಟ್ಟು ಸಾವು: ಭ್ರಮಾತ್ಮಕ ಬಂಧ



ನಿತ್ಯಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ ● ಕೆ.ಶಿವಪ್ರಸಾದ್

ದ್ವಂದ್ವಾತೀತ ಸ್ಥಿತಿಯನ್ನು ತಲುಪಲು ಹಾಗೂ ಜನನ ಮರಣಗಳ ಬಂಧನದಿಂದ ಮುಕ್ತರಾಗಲು ವಿವೇಕವುಳ್ಳ ವ್ಯಕ್ತಿಗಳು ತಮ್ಮ ಸಮಚಿತ್ತವನ್ನು ಉಪಯೋಗಿಸುತ್ತಾರೆ. ಮತ್ತು ಕರ್ಮಫಲವನ್ನು ತ್ಯಾಗ ಮಾಡುತ್ತಾರೆಂದು ಕೃಷ್ಣ ತಿಳಿಸುತ್ತಾನೆ. (2.21)

ಬಹಳ ಕಾಲದವರೆಗೆ ಮಾನವರು ಸೂರ್ಯನು ಅಚಲವಾದ ಭೂಮಿಯನ್ನು ಸುತ್ತುತ್ತಾನೆ ಎಂದು ನಂಬಿದ್ದರು. ನಂತರ ಸೂರ್ಯನ ಸುತ್ತ ತಿರುಗುವುದು ಭೂಮಿ ಎಂದು ಕಂಡುಕೊಳ್ಳಲಾಯಿತು. ಅಂತಿಮವಾಗಿ ನಮ್ಮ ತಿಳುವಳಿಕೆಯು ಜೀವಂತ ಸತ್ಯದೊಡನೆ ಸೇರಿಕೊಂಡಿತು. ಇದರ ಅರ್ಥ ನಮ್ಮ ಇಂದ್ರಿಯಗಳ ಇತಿಮಿತಿ ಗಳಿಂದಾಗಿ ಉದ್ಭವಿಸಿದ ಭ್ರಮೆಯಿಂದಾಗಿ ನಾವು ಸತ್ಯವನ್ನು ತಪ್ಪು ವ್ಯಾಖ್ಯಾನ ಮಾಡಿದ್ದೆ ಈ ಸಮಸ್ಯೆಗೆ ಕಾರಣ ಎಂಬುದು. ಜನನ ಮರಣಗಳ ಬಗ್ಗೆ ನಮ್ಮ ಭ್ರಮೆಯು ಇದೇ ರೀತಿ ಇದೆ. ಸರ್ವ ವ್ಯಾಪಿಯಾಗಿರುವ, ಜನಿಸದ, ಶಾಶ್ವತವಾದ, ಪರಿವರ್ತನೆಗೊಳ್ಳದ ಹಾಗೂ ಪ್ರಾಚೀನವಾದ ದೇಹೀ (ದೇಹದಲ್ಲಿರುವ ಆತ್ಮ)ದ ಬಗ್ಗೆ ವಿವರಣೆ ಮಾಡುತ್ತಾ ಕೃಷ್ಣ ಭಗವದ್ಗೀತೆಯನ್ನು ಪ್ರಾರಂಭಿಸುತ್ತಾನೆ. (2.20) ನಾವು ಹರಿದ ಬಟ್ಟೆಗಳನ್ನು ಬಿಸಾಡಿ ಹೊಸ ಬಟ್ಟೆಯನ್ನು ಧರಿಸುವಂತೆ ಆತ್ಮವು ದೇಹಗಳನ್ನು ಬದಲಾಯಿಸುತ್ತದೆ ಎಂದು ಮುಂದುವರೆದು ಅವನು ಹೇಳುತ್ತಾನೆ. (2.22) ಸಮತೋಲಿತ ಬುದ್ಧಿಯಿಂದ ವ್ಯಕ್ತಿ ಜನನದ ಬಂಧನದಿಂದ ಮುಕ್ತಿ ಹೊಂದುತ್ತಾನೆಂದು ಅವನು ಹೇಳಿದಾಗ ಅಸ್ತಿತ್ವದಲ್ಲಿರುವ ಸತ್ಯವಾದ ದೇಹಿ/ ಆತ್ಮದೊಂದಿಗೆ ಅವನು ಮಿಲನಗೊಂಡಿದ್ದಾನೆಂದು ಅರ್ಥ. ಸೂರ್ಯನು ಭೂಮಿಯ ಸುತ್ತ ತಿರುಗುತ್ತಿರುತ್ತಾನೆ ಎಂಬ ಭ್ರಮೆಯಿಂದ ಹೊರಬಂದು ಭೂಮಿಯು ಸೂರ್ಯ ಸುತ್ತ ತಿರುಗುತ್ತದೆ ಎಂಬ ನಿಜ ಸತ್ಯದೊಡನೆ ಹೊಂದಿಕೊಂಡಂತೆ ಇದು ಇದೆ.

ಬಹುಮತದೊಂದಿಗೆ ಗುರುತಿಸಿಕೊಳ್ಳುವುದು ನಮ್ಮ ಪ್ರವೃತ್ತಿ ಯಾಗಿದೆ. ಆದರೆ ಆ ಬಹುಜನರು (ನಮಗೆ ಜನನ ಮರಣ ಇದೆ ಎಂದು ನಂಬುವವರು) ದೇಹಿ /ಆತ್ಮವೆಂಬ ಅಸ್ತಿತ್ವದಲ್ಲಿರುವ ಸತ್ಯದ ಕಡೆಗೆ ನಮ್ಮನ್ನು ಮುನ್ನಡೆಸಲಾರರು. ಇದು ಸಮತೋಲಿತ ಬುದ್ಧಿಯಿಂದ ಮಾತ್ರ ಸಾಧ್ಯ. ದ್ವಂದ್ವತೀತವಾದ ಸ್ಥಿತಿಯ ಬಗ್ಗೆಯೂ ಕೃಷ್ಣ ತಿಳಿಸುತ್ತಾನೆ. ಸಾಮಾನ್ಯವಾಗಿ ಇದನ್ನು ಸ್ವರ್ಗವೆಂದು ವರ್ಣಿಸಲಾಗಿದೆ ಹಾಗೂ ಕೆಲವೊಮ್ಮೆ ಇದನ್ನು ಹೊರಗೆಲ್ಲಿಯೋ ಇರುವ ಅತಿ ಶ್ರೇಷ್ಠ ಮಾರ್ಗ (ಪರಮಪಥ)ಎಂದು ಕರೆಯಲಾಗಿದೆ. ಈ ಮಾರ್ಗವು ನಮ್ಮ ಒಳಗೆ ಇದೆ ಎಂದು ಈ ಶ್ಲೋಕ ಹೇಳುತ್ತದೆ. ನಮ್ಮ ಕಾರ್ಯ ಕೃತಿಗಳನ್ನು ತ್ಯಜಿಸದೆ ಕರ್ಮಫಲವನ್ನು ಮಾತ್ರ ತ್ಯಜಿಸುವ ಮಾರ್ಗವೇ ಇದಾಗಿದೆ.

ಆಡಿಕೊಳ್ಳುವವರ ಮಾತು ಅವರ ಬಾಯಲ್ಲೇ!



ಜೀವನದಲ್ಲಿ ಎಲ್ಲವನ್ನು ಸಕಾರಾತ್ಮಕವಾಗಿ ತೆಗೆದುಕೊಂಡು ಹೋಗುತ್ತಿದ್ದರೂ ಕೆಲವು ಬಾರಿ ಜಿಗುಪ್ಸೆ ಎನಿಸುತ್ತೆ. ಬೆನ್ನ ಹಿಂದಿನ ಮಾತುಗಳು ಅರೆಕ್ಷಣದಲ್ಲಿ ಚಿತ್ತದ ಪಿತ್ತವನ್ನು ಕೆರಳಿಸಿ ಬಿಡುತ್ತವೆ. ಹಣದ ಸಹಾಯವನ್ನು ಬೇಡಿರುವುದಿಲ್ಲ. ಕೆಲಸ ಮಾಡಿಕೊಳ್ಳಲಾಗುತ್ತಿಲ್ಲ ಬಂದು ಮಾಡಿಕೊಡಿ ಎಂದು ಕೇಳಿರುವುದಿಲ್ಲ. ನೀವೇನು ಅವರ ತಂಟೆಗೆ ಹೋಗಿರುವುದಿಲ್ಲ ಆದರೂ ನಿಮ್ಮ ಬಗ್ಗೆ ಬಾಯಿಗೆ ಬಂದಿದ್ದು ಮಾತನಾಡುತ್ತಾರೆ. ಇಂಥ ಮಾತುಗಳು ನಿಮ್ಮನ್ನು ಮಾನಸಿಕವಾಗಿ ಕುಗ್ಗಿಸಿ ಖಿನ್ನತೆಗೆ ದೂಡುತ್ತವೆ. ಆರ್ಥಿಕ ಪರಿಸ್ಥಿತಿ ಕೆಳಗುರುಳಿದರೆ ಇದ್ದಾಗ ತುಂಬಾ ಮೆರಿತಿದ್ರು ಅಂತಾರೆ. ಯಶಸ್ಸನ್ನು ಅದೃಷ್ಟವೆಂದೊ, ಬೇರೆಯವರ ಕೃಪಾಕಟಾಕ್ಷವಿರಬೇಕೆಂದು ಹೀಗಳೆಯುತ್ತಾರೆ. ಅನಾರೋಗ್ಯವನ್ನು ಆಡಿಕೊಳ್ಳುತ್ತಾ ಕರುಣೆ ತೋರದೆ ಮನುಷ್ಯತ್ವವನ್ನೆ ಮರೆತು ಬಿಡುತ್ತಾರೆ. ಸ್ವತಂತ್ರವಾಗಿ ಸ್ವಾಭಿಮಾನದಿಂದ ಬದುಕುತ್ತಿದ್ದರೆ ಒಂಟಿ ಗೂಬೆಯ ಹಾಗೆ ಯಾರ ಸಹವಾಸವು ಬೇಡ ಇವರಿಗೆ ಎನ್ನುತ್ತಾರೆ. ಈ ಅತಿರಂಜಿತ ನುಡಿಗಳಿಗೆ ಪ್ರತಿಕ್ರಿಯಿಸದೆ ಸಾವಧಾನದಿಂದಿರಿ. ಅವರು ಹೀಗೆಂದರೆಂದು ಚಿಂತಿಸದಿರಿ. ನಿಮ್ಮ ಬೆನ್ನು ನಿಮಗೆ ಕಾಣಿಸೋದಿಲ್ಲ, ಅದು ತಪ್ಪಾಗಿದ್ದರೆ ಖಂಡಿತ ತಿದ್ದಿಕೊಳ್ಳಿ. ಸುಖ-ದುಃಖವನ್ನು ಸಮನಾಗಿ ಸ್ವೀಕರಿಸಬೇಕು, ಈ ನಿಂದನೆಗಳನ್ನು ತಿರಸ್ಕಾರ ಮಾಡಬೇಕು. ಎಲ್ಲರನ್ನೂ ಮೆಚ್ಚಿಸಲು ಆ ಭಗವಂತನಿಗೂ ಸಾಧ್ಯವಿಲ್ಲ, ಇನ್ನು ನೀವ್ಯಾವ ಲೆಕ್ಕ? 'ನುಡಿದರೆ ಲಿಂಗ ಮೆಚ್ಚಿ ಅಹುದಹುದು' ಎನ್ನಬೇಕೆಂದು ಬಸವಣ್ಣನವರು ಹನ್ನೆರಡನೇ ಶತಮಾನದಲ್ಲಿ, 'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ' ಎಂದು ದಾಸಶ್ರೇಷ್ಠರಾದ ಪುರಂದರ ದಾಸರು ಹದಿನಾಲ್ಕನೇ ಶತಮಾನದಲ್ಲೇ ಹೇಳಿದ್ದಾರೆ. ಅದು ಇಪ್ಪತ್ತನೇ ಶತಮಾನದಲ್ಲೂ ಅದು ಸಾಧ್ಯವಾಗಿಲ್ಲ. ಬೆನ್ನ ಹಿಂದಿನ ಮಾತುಗಳು ಜಾಸ್ತಿಯಾದರೆ ಜೀವನ ನಿರ್ವಹಣೆಯಲ್ಲಿ ನೀವು ಅವರಿಗಿಂತ ಒಂದ್ಹೆಜ್ಜೆ ಮುಂದೆ ಇದ್ದೀರಿ ಎಂತಲೇ ಅರ್ಥ. ಗಾಳಿಮಾತುಗಳು ನಿಜವಲ್ಲ ಅವುಗಳಿಗೆ ತಲೆಕೆಡಿಸಿಕೊಳ್ಳದೆ ನಿರ್ಲಕ್ಷಿಸಿ. 'ಮಾಡಿದವರ ಪಾಪ ಆಡಿದವರ ಬಾಯಲ್ಲಿ' ಎಂಬ ಗಾದೆ ಮಾತಿನಂತೆ ಕೊಂಕು ಮಾತುಗಳು ನಿಮ್ಮ ಪಾಪವನ್ನು ಕಡಿಮೆ ಮಾಡುತ್ತವೆಂದು ಹಾಯಾಗಿರಿ. ನಿಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳುವಲ್ಲಿ ನಿಮ್ಮ ಪ್ರಯತ್ನವಿರಲಿ. ಸಾಧ್ಯವಾದರೆ ಬೇರೆಯವರಿಗೆ ಸಹಾಯ ಮಾಡಿ ಇಲ್ಲವಾದರೆ ಬಿಟ್ಟುಬಿಡಿ. ಕೆಟ್ಟದ್ದನ್ನು ಬಯಸಿ ಕೆಟ್ಟದ್ದು ಮಾಡಬೇಡಿ. ಚಾಡಿಮಾತುಗಳಿಗೆ ಕಿವಿಯಾಗದೆ, ಕೊರಗದೆ ಉತ್ಸಾಹದಿಂದಿರಿ. ಬದುಕಿನ ಭರವಸೆಯನ್ನು ಕಳೆದುಕೊಳ್ಳಬೇಡಿ. ನಿಮ್ಮ ಸಂತೋಷದ ಕೀಲಿಕೈಯನ್ನು ಮತ್ತೊಬ್ಬರಿಗೆ ಕೊಡಬೇಡಿ.

● ವಾಣಿ ಹುಗ್ಗಿ

ಸಮಾಚಾರ ಸಣ್ಣದಲ್ಲ

ವಿಶೇಷಚೇತನರಿಗೆ ವ್ಹೀಲ್‌ಚೇರ್ ಅರ್ಜಿ

ಹೊಸಪೇಟೆ: ಪ್ರಸಕ್ತ ಸಾಲಿನಲ್ಲಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ದೈಹಿಕ ವಿಕಲಚೇತನರಿಗಾಗಿ ಅನುಷ್ಠಾನಗೊಳಿಸುತ್ತಿರುವ ವ್ಹೀಲ್‌ಚೇರ್ ಯೋಜನೆಯಡಿ ಬ್ಯಾಟರಿ ಚಾಲಿತ ವ್ಹೀಲ್‌ಚೇರ್‌ಗಾಗಿ ಅರ್ಹ ದೈಹಿಕ ವಿಕಲಚೇತನರಿಂದ ಆನ್‌ಲೈನ್‌ನಲ್ಲಿ ಅರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅವಿನಾಶಲಿಂಗ ಎಸ್.ಗೊಟಖಿಂಡಿ ತಿಳಿಸಿದ್ದಾರೆ. ಅರ್ಹ ದೈಹಿಕ ವಿಕಲಚೇತನರು ತಮ್ಮ ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್‌ನ SEVASINDU WEBSITE https://suvidha.karnataka.gov.in/ ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಜ.21 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಪಂ ವ್ಯಾಪ್ತಿಯ ವಿಆರ್‌ಡಬ್ಲ್ಯೂ, ನಗರಸಭೆ, ಪುರಸಭೆ, ಪ.ಪಂಗಳಲ್ಲಿ ಯುಆರ್‌ಡಬ್ಲ್ಯೂ, ತಾಪಂ ವ್ಯಾಪ್ತಿಯ ಎಂಆರ್ ಡಬ್ಲ್ಯೂಗಳನ್ನು ಸಂಪರ್ಕಿಸಬಹುದು. ಹೊಸಪೇಟೆ-9945252991, ಹಗರಿಬೊಮ್ಮನಹಳ್ಳಿ-9741185924, ಕೂಡ್ಲಿಗ್ಗಿ-821762636, ಹೂವಿನಹಡಗಲಿ-9900890403, ಕೊಟ್ಟೂರು-7353974518, ಹರಪನಹಳ್ಳಿ-9901182525 ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ಪಡೆಯಬಹುದು.

ಲೋಕ ಅದಾಲತ್ ಮಾ.8 ರಂದು

ಹೊಸಪೇಟೆ: ನಗರದ ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ಮಾ.8 ರಂದು ಬೆ.10 ರಿಂದ ಸಂಜೆ 5 ಗಂಟೆಯವರೆಗೆ ರಾಷ್ಟ್ರೀಯ ಲೋಕ ಅದಾಲತ್ ನ್ಯಾಯಾಲಯದ ಆವರಣದಲ್ಲಿ ನಡೆಯಲಿದ್ದು, ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಇರುವವರು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ರಾಜಿ, ಸಂಧಾನದ ಮೂಲಕ ತಮ್ಮ ಪ್ರಕರಣಗಳನ್ನು ಶೀಘ್ರವಾಗಿ ಬಗೆಹರಿಸಿಕೊಳ್ಳಬಹುದು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸ್ ಪ್ರಯಾಣ ದರ ಹೆಚ್ಚಳ: ದಳ ಪ್ರತಿಭಟನೆ

ಬಳ್ಳಾರಿ: ಅವೈಜ್ಞಾನಿಕವಾಗಿ ಬಸ್ ಪ್ರಯಾಣ ದರವನ್ನು 15% ಏರಿಕೆ ಮಾಡಿರುವುದನ್ನು ಜನತಾದಳ (ಜಾತ್ಯಾತೀತ) ಪಕ್ಷವು ಖಂಡಿಸುತ್ತದೆ, ರಾಜ್ಯ ಸರಕಾರ ಈ ಕೂಡಲೇ ಬಸ್ ದರ ಹೆಚ್ಚಳ ಹಿಂಪಡೆಯಬೇಕು ಎಂದು ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರು ಒತ್ತಾಯಿಸಿದ್ದಾರೆ. ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಬಸ್ ದರ ಹೆಚ್ಚಳ ಖಂಡಿಸಿ ಜೆಡಿಎಸ್ ಪಕ್ಷದ ಜಿಲ್ಲಾ ಘಟಕದ ವತಿಯಿಂದ ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಜುಬೇರ್ ಅವರಿಗೆ ಮನವಿ ಸಲ್ಲಿಸಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು. ರಾಜ್ಯ ಸರಕಾರ ಅವೈಜ್ಞಾನಿಕ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಜನಸಾಮಾನ್ಯರ ಮೇಲೆ ದರ ಹೆಚ್ಚಳದ ಹೊರೆ ಹೊರಿಸಿದೆ. ಸುಭದ್ರವಾಗಿದ್ದ ಕರ್ನಾಟಕದ ಆರ್ಥಿಕತೆಯನ್ನು ಹದಗೆಡಿಸಿರುವ ಸರಕಾರ, ಸಾರಿಗೆ ಪ್ರಯಾಣ ದರವನ್ನು ಶೇ.15% ಹೆಚ್ಚಳ ಮಾಡಿ ಈಗ ಜನಸಾಮಾನ್ಯರ ಮೇಲೆ ಅನಗತ್ಯವಾಗಿ ಬೆಲೆ ಏರಿಕೆಯ ಬರೆ ಹಾಕುತ್ತಿದೆ. ಈ ಸಂದರ್ಭದಲ್ಲಿ ಮುಖಂಡರಾದ ರಾಜು ನಾಯ್ಕ್, ಲಕ್ಷ್ಮಿ ಕಾಂತ್ ರೆಡ್ಡಿ, ಕುರೆಕುಪ್ಪ ಸೋಮಪ್ಪ, ಹೊನ್ನೂರ ಸ್ವಾಮಿ, ಮಧುರೆ ವಿಜಯ್ , ರಾಮಾಂಜನೇಯಲು, ಕಿರಣ್ ಕುಮಾರ್, ನೀಲಾ, ಜಮೀಲಾ, ಮುತ್ತು ಇದ್ದರು.

ವಿವೇಕ ತೋರಣ ಉಪನ್ಯಾಸ ನಾಳೆ

ಬಳ್ಳಾರಿ: ಜ.12ರಂದು ನಗರದ ರಾಘವ ಕಲಾಮಂದಿರದಲ್ಲಿ ಭಾನುವಾರ ರಂಗ ತೋರಣ ವತಿಯಿಂದ ಸ್ವಾಮಿ ವಿವೇಕಾನಂದರ 162ನೇ ಜಯಂತಿ ನಿಮಿತ್ತ ವಿವೇಕ ತೋರಣ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರಂಗ ತೋರಣ ಕಾರ್ಯದರ್ಶಿ ಕಪ್ಪು ಗಲ್ಲು ಪ್ರಭುದೇವ್ ಅವರ ಹೇಳಿದರು. ಗದಗ ಮತ್ತು ವಿಜಯಪುರ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರಿಂದ ವಿವೇಕ ತೋರಣ ಉಪನ್ಯಾಸ ನೀಡಲಿದ್ದಾರೆ. ಕೃಷ್ಣ ದೇವರಾಯ ವಿವಿಯ ಕುಲಸಚಿವರಾದ ಎಸ್. ಎನ್. ರುದ್ರೇಶ್, ಉದ್ಯಮಿ ಕೆ.ಜಿ. ತಿಮ್ಮಾರೆಡ್ಡಿ, ತಜ್ಞ ವೈದ್ಯ ಡಾ.ಧರ್ಮ ರೆಡ್ಡಿ ಗೌರವ ಉಪಸ್ಥಿತಿಯ ಇರಲಿದ್ದಾರೆ. ಹಿಂದೂಸ್ತಾನಿ ಗಾಯಕ ರಾಘವೇಂದ್ರ ಗುಡದೂರು ಅವರಿಂದ ಮಧುರ ಭಕ್ತಿ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವೀರೇಶ್ ಕುರುಗೋಡು ಅವರಿಂದ ತಬಲಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಈ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ವಿಕಾಸ ಅಕಾಡೆಮಿ ಜಿಲ್ಲಾ ಸಂಚಾಲಕರಾದ ಡಾ.ಜಿ.ಆರ್. ವಸ್ತ್ರದ್, ನಗರ ಸಂಚಾಲಕ ವೆಂಕಟೇಶ್ ಬಡಿಗೇರ್, ರಂಗ ತೋರಣದ ಅಡವಿ ಸ್ವಾಮಿ ಇದ್ದರು.

{ಎನ್.ಎಸ್.ಭೋಸರಾಜು } ಸಚಿವ

ಬಿಜೆಪಿಯಲ್ಲಿ ಮೊದಲು ಮೂರು ಬಾಗಿಲಿತ್ತು. ಈಗ ಆರು ಬಾಗಿಲುಗಳಾಗಿವೆ. ಎಚ್.ಡಿ ಕುಮಾರಸ್ವಾಮಿ ಏಳನೆ ಬಾಗಿಲಾಗಿ ತಮ್ಮ ಮೇಲೆ ಸವಾರಿ ಮಾಡಬಹುದು ಎಂಬ ಭಯ ಬಿಜೆಪಿಯ ನಾಯಕರಲ್ಲಿದೆ. ಕಾಂಗ್ರೆಸ್ ಸರಕಾರ ಸುಭದ್ರವಾಗಿದೆ. ಡಿನ್ನರ್ ಸಭೆಗೆ ಮಹತ್ವ ನೀಡಬೇಕಾದ ಅಗತ್ಯವಿಲ್ಲ.



ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಪರ್ಯಾವರಣ ನೇತೃತ್ವದಲ್ಲಿ ಮಹಿಮಾ ಪಟೇಲ್ ಭಾಗಿ

ನಿರ್ಮಲ ತುಂಗಭದ್ರಾ ಅಭಿಯಾನ

ಹೊಸಪೇಟೆ: ನಮ್ಮ ಪರಿಸರ, ನಮ್ಮ ಆರೋಗ್ಯ ನಮ್ಮ ಕೈಯಲ್ಲೇ ಇದೆ. ಆದರೆ, ತುಂಗಭದ್ರೆ ಮಲಿನತೆಯಿಂದ ಕೆಳ ಭಾಗದ ಜನರಲ್ಲಿ ನಾನಾ ರೀತಿಯ ಆರೋಗ್ಯದ ಸಮಸ್ಯೆಗಳು ಕಂಡು ಬರುತ್ತಿವೆ. ಈ ಹಿನ್ನೆಲೆಯಲ್ಲಿ ಜೀವಜಲ ನೀಡುವ ನದಿಗಳು ಮಲಿನಗೊಳ್ಳದಂತೆ ನೋಡಿಕೊಳ್ಳುವುದು ಎಲ್ಲರ ಜವಾಬ್ದಾರಿ ಎಂದು ಮಾಜಿ ಶಾಸಕ ಮಹಿಮಾ ಪಟೇಲ್ ಹೇಳಿದರು.

ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಪರ್ಯಾವರಣ ಟ್ರಸ್ಟ ನೇತೃತ್ವದಲ್ಲಿ ನಡೆಯುತ್ತಿರುವ ನಿರ್ಮಲ ತುಂಗಭದ್ರಾ ಅಭಿಯಾನದ ಭಾಗವಾಗಿ ಹೊಸಪೇಟೆಯ ವಿಎನ್‌ಸಿ ಸ್ವತಂತ್ರ ಪಿಯು ಕಾಲೇಜ್ ನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಶುದ್ಧ ಗಾಳಿ ಮತ್ತು ನೀರು ಸೇವನೆಯಿಂದ ಎಂತಹ ರೋಗವನ್ನಾದರೂ ಎದುರಿಸಬಹುದು. ಅಲ್ಲದೇ, ತಾವು ಕಳೆದ 32 ವರ್ಷಗಳಿಂದ ಆಸ್ಪತ್ರೆಗೆ ಹೋಗಿಯೇ ಇಲ್ಲ ಎಂಬುದನ್ನು ತಿಳಿಸಿದ ಅವರು, ಜೀವನದಲ್ಲಿ ಕನಸು ಕಾಣಬೇಕು. ಆಗ ಅದನ್ನು ಈಡೇರಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ನಡೆಯುತ್ತದೆ. ತಾವು ಇಂತಹ ಕನಸು ಕಂಡಿದ್ದರಿಂದಲೇ ಪೈಲಟ್ ಆದುದು, ಪ್ಯಾರಾಚ್ಯೂಟ್‌ನೊಂದಿಗೆ ವಿಮಾನದಿಂದ ಧುಮುಕಿದ ಸಾಹಸವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು.

ರಾಷ್ಟ್ರೀಯ ಸ್ವಾಭಿಮಾನ ಆಂದೋಲನದ ಸಂಚಾಲಕ ಬಸವರಾಜ ಪಾಟೀಲ್ ವೀರಾಪುರ ಮಾತನಾಡಿ, ವಿವಿಧ ರೀತಿಯ ಮಾಲಿನ್ಯದಿಂದ ಅಪಾಯಕ್ಕೆ ಸಿಲುಕಿರುವ ದೇಶದ 71 ನದಿಗಳಲ್ಲಿ ತುಂಗಭದ್ರಾವೂ ಒಂದು. ನದಿಗಳ ಉಳಿವಿಗಾಗಿ ಟ್ರಸ್ಟ್ ಈಗಾಗಲೇ ದೇಶದಾದ್ಯಂತ 71 ಸಾವಿರ ಕಿ.ಮೀ ಕಾಲ್ನಡಿಗೆ ಜಾಥಾ ನಡೆಸಿದೆ. ರಾಜ್ಯದ ಇನ್ನೊಂದು ನದಿ ಭೀಮಾ, ಆಂಧ್ರದಲ್ಲಿ ಹರಿಯುವ ಗೋದಾವರಿ ನದಿಗಳಿಗೆ ಸಹ ಮಾಲಿನ್ಯದ ಅಪಾಯ ತೀವ್ರವಾಗಿದೆ. ನದಿಗಳ ಉಳಿವಿಗಾಗಿ ಕೈ ಜೋಡಿಸದಿದ್ದರೆ, ಭವಿಷ್ಯದಲ್ಲಿ ಚಿತ್ರ ಪಟಗಳಲ್ಲಿ ಮಾತ್ರ ಕಾಣುವಂತಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಪರಿಸರ ತಜ್ಞ ಶ್ರೀಪತಿ ರಾವ್ ದಿಕ್ಸೂಚಿ ಭಾಷಣ ಮಾಡಿದರು. ವಿವಿಧ ಸಂಘಟನೆಗಳ ಪ್ರಮುಖರಾದ ಗುಜ್ಜಲ್ ಗಣೇಶ್, ಶ್ರೀನಿವಾಸ ರೆಡ್ಡಿ, ಸಾಲಿ ಸಿದ್ದಯ್ಯ ಸ್ವಾಮಿ, ಗಂಟೆ ಸೋಮಶೇಖರ್, ವೈ.ಯಮುನೇಶ್, ವಿಜಯನಗರ ಕಾಲೇಜಿನ ಮಲ್ಲಿಕಾರ್ಜುನ, ಪಿ. ವೆಂಕಟೇಶ್ ಇದ್ದರು.

ಕಾರ್ಯಕ್ರಮದ ಬಳಿಕ ಪಾದಯಾತ್ರೆ, ಕಮಲಾಪುರ ಮೂಲಕ ಗಂಗಾವತಿ ತಾಲೂಕಿನತ್ತ ತೆರಳಿತು.

ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಪರ್ಯಾವರಣ ಟ್ರಸ್ಟ ನೇತೃತ್ವದಲ್ಲಿ ನಡೆಯುತ್ತಿರುವ ನಿರ್ಮಲ ತುಂಗಭದ್ರಾ ಅಭಿಯಾನದ ಹಮ್ಮಿಕೊಂಡಿದ್ದರು.

ಕೀನ್ಯಾದಲ್ಲೂ ಸ್ವಚ್ಛತೆ

ಆಫ್ರಿಕಾ ಖಂಡ ಅತ್ಯಂತ ಹಿಂದುಳಿದ ಪ್ರದೇಶ ಎಂಬುದು ಎಲ್ಲರ ಭಾವನೆಯಾಗಿದ್ದರೂ, ಜಲ ಮೂಲಗಳ ರಕ್ಷಣೆ ಬಗ್ಗೆ ಅವರಲ್ಲಿರುವ ಪ್ರಜ್ಞೆ ವಿಶ್ವಕ್ಕೆ ಮಾದರಿಯಾಗಿದೆ. ಅತ್ಯಂತ ಚಿಕ್ಕ ರಾಷ್ಟ್ರ ಕೀನ್ಯಾದಲ್ಲಿ ನದಿ ಮೂಲಗಳು ಪ್ಲಾಸ್ಟಿಕ್, ರಸಾಯನಿಕ ಯುಕ್ತ ತ್ಯಾಜ್ಯದಿಂದ ಮುಕ್ತವಾಗಿಟ್ಟಿದ್ದಾರೆ. ಆದರೆ, ಪ್ರಗತಿಶೀಲರು ಎನಿಸಿಕೊಳ್ಳುವ ನಾವು ಚರಂಡಿಗಳಲ್ಲಿ ಪ್ಲಾಸ್ಟಿಕ್, ಕಸದ ರಾಶಿ ತುಂಬಿ ತುಳುಕುತ್ತದೆ. ಚರಂಡಿ ನೀರು ನದಿಗಳಿಗೆ ಸೇರಿ, ಮಲಿನಗೊಳಿಸುತ್ತದೆ. ಅದಕ್ಕೆ ಪರಿಹಾರ ಕಂಡುಕೊಳ್ಳುವ ಗಂಭೀರ ಪ್ರಯತ್ನಗಳಾಗುತ್ತಿಲ್ಲ ಎಂದು ಪರಿಸರ ತಜ್ಞ ಶ್ರೀಪತಿ ರಾವ್ .

ಗಣರಾಜ್ಯೋತ್ಸವ ಆಚರಣೆ ಡಿಸಿ ಪೂರ್ವಭಾವಿ ಸಭೆ

ಗಣರಾಜ್ಯೋತ್ಸವ ಕಾರ್ಯಕ್ರಮ ಆಯೋಜನೆಯ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಮಾತನಾಡಿದರು.

ಬಳ್ಳಾರಿ: ಜಿಲ್ಲಾ ಕೇಂದ್ರದಲ್ಲಿ ಜನವರಿ 26ರಂದು ನಡೆಯುವ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣ ಹಾಗೂ ಅಚ್ಚುಕಟ್ಟಾಗಿ ಆಯೋಜಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮ ಆಯೋಜನೆಯ ಪೂರ್ವ ಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಜ.26ರಂದು ಬೆಳಿಗ್ಗೆ. 9ಕ್ಕೆ ನಗರದ ವಿಮ್ಸ್ ಮೈದಾನದಲ್ಲಿ ಮೈದಾನದಲ್ಲಿ ಆಚರಿಸಲಾಗುವುದು. ಶಿಷ್ಟಾಚಾರದ ನಿಯಮಗಳಂತೆ ಗಣ ರಾಜ್ಯೋತ್ಸವ ಸಮಾರಂಭದ ಆಹ್ವಾನ ಪತ್ರಿಕೆ ಮುದ್ರಿಸಿ, ಆಹ್ವಾನ ಪತ್ರಿಕೆಗಳನ್ನು ಜನಪ್ರತಿ ನಿಧಿಗಳಿಗೆ, ಗಣ್ಯರಿಗೆ ವಿತರಿಸಲು ಕ್ರಮವಹಿಸಬೇಕು ಎಂದರು.

ಗಣರಾಜ್ಯೋತ್ಸವ ಆಚರಣೆಗೆ ಸಂಬಂಧಿಸಿದಂತೆ ಸ್ವಾಗತ, ಶಿಷ್ಟಾಚಾರ, ಆಹ್ವಾನ ಪತ್ರಿಕೆ ಹಾಗೂ ವೇದಿಕೆ ಸಮಿತಿ, ಪೆರೇಡ್ ಸಮಿತಿ, ಸಾಂಸ್ಕೃತಿಕ ಕಾರ್ಯಕ್ರಮಗಳ ಸಮಿತಿ ಸೇರಿದಂತೆ ವಿವಿಧ ಸಮಿತಿಗಳನ್ನು ರಚಿಸಲಾ ಗಿದ್ದು, ಆಯಾ ಸಮಿತಿಯಲ್ಲಿರುವ ಅಧಿಕಾರಿ ಗಳು ತಮಗೆ ವಹಿಸಿದ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವ ಹಿಸಬೇಕು ಎಂದು ತಿಳಿಸಿದರು. ನಂತರ ಅಂದು ಸಂಜೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ ದೇಶ ಪ್ರೇಮ ಪ್ರಸ್ತುತ ಪಡಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿ ಬಿ.ನಾಗರಾಜ ಅವರಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

> **ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ವಿವಿಧ ಇಲಾಖೆಗಳು ಸಮನ್ವಯತೆಯಿಂದ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಗಣರಾಜ್ಯೋತ್ಸವವನ್ನು ಆಚರಿಸಬೇಕು.**
> -ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾಧಿಕಾರಿ

ಅಮಿತ್ ಶಾ ಹೇಳಿಕೆ ವಿರುದ್ಧ ಪ್ರತಿಭಟನೆ

ಹೂವಿನಹಡಗಲಿ ಪಟ್ಟಣದಲಾಲ್ ಬಹದ್ದೂರ್ ಶಾಸ್ತ್ರಿವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಹೂವಿನಹಡಗಲಿ: ಬಾಬಾ ಸಾಹೇಬ್‌ಅಂಬೇಡ್ಕರ್‌ಅವರಿಗೆ ಕೇಂದ್ರ ಗೃಹ ಸಚಿವ ಅವಹೇಳನಕಾರಿ ಹೇಳಿಕೆ ನೀಡಿರುವ ಹಿನ್ನೆಲೆಯಲ್ಲಿಅಮಿತ್ ಶಾ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕೆಂದು ಎಐಟಿಯುಸಿ ತಾಲೂಕು ಸಂಚಾಲಕ ಹಲಗಿ ಸುರೇಶ ಆಗ್ರಹಿಸಿದರು.

ಪಟ್ಟಣದ ಲಾಲ್ ಬಹದ್ದೂರ್ ಶಾಸ್ತ್ರಿವೃತ್ತದಲ್ಲಿ ಸಂವಿಧಾನ ರಕ್ಷಣಾ ಸಮಿತಿ ವತಿಯಿಂದ ಆಯೋಜಿಸಿದ್ದ ಬೃಹತ್ ಪ್ರತಿಭಟನೆ ಉದ್ದೇಶಿಸಿ ಅವರು ಮಾತನಾಡಿದರು.

ಆರ್‌ಎಸ್‌ಎಸ್ ಸಂಘಟನೆ ಮುಖಂಡರನ್ನು ಮೆಚ್ಚುಗೆಗೊಳಿಸಲು ಧೀಮಂತ ನಾಯಕ ಅಂಬೇಡ್ಕರ್ ರವರನ್ನುಅಪಮಾನ ಮಾಡಿರುವುದಕ್ಕೆ ಕ್ಷಮೆಯಾಚಿಸಬೇಕು ಎಂದರು. ಪತ್ರಕರ್ತಎಸ್.ನಿಂಗರಾಜ್ ಮಾತನಾಡಿ, ಪ್ರಧಾನ ಮಂತ್ರಿಗಳು ಗೃಹ ಸಚಿವರನ್ನು ಕೂಡಲೇ ಸಂಪುಟದಿಂದ ಕೈಬಿಡಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ವಿಜಯಕುಮಾರ್ ಹೊಳಗುಂದಿ, ಕಾಗದಗೌಸ್ ಮೊಹಿದ್ದೀನ್ ಮಾತನಾಡಿದರು.

ಪುರಸಭಾ ಸದಸ್ಯ ಷಫಿ, ಡಿ ಮುಕುಂದಗೌಡ, ಎಚ್ ಸ್ವಾಮಿ, ಎಚ್.ದಂಡೆಮ್ಮ, ಭರಮಪ್ಪ, ಎಂಟ್ಮನಿ ರಮೇಶ್, ದೇವೇಂದ್ರಪ್ಪ, ವಿ. ಜಯನಾಯ್ಕ್, ಬಿ.ಎಲ್.ಶ್ರೀಧರ್, ಚಲುವಾದಿ ಹೊನ್ನಪ್ಪ, ಚಲುವಾದಿ ದ್ಯಾಮಪ್ಪ, ಮರಿಯಪ್ಪ, ಸಂಘರ್ಷ ಉಪಸ್ಥಿತರಿದ್ದರು.

ತಹಸೀಲ್ದಾರ್ ಸಂತೋಷ್‌ಕುಮಾರ್‌ಗೆ ಮನವಿ ಪತ್ರ ಸಲ್ಲಿಸಿದರು.

> **ಭಾರತದ ದಲಿತ ಶೋಷಿತ ದಮನಿತ ಅಲ್ಪಸಂಖ್ಯಾತರ ಹಿಂದುಳಿದ ವರ್ಗ ತಳ ಸಮುದಾಯಗಳ ಏಳಿಗೆಗೆ ಕಾನೂನು ರೂಪಿಸಿ ನ್ಯಾಯ ಸ್ವಾತಂತ್ರ್ಯ ದೊರಕಿಸಿಕೊಟ್ಟ ಮಹಾನ್‌ಚೇತನಕ್ಕೆ ಅಗೌರವ ತೋರಿಸುವ ಮೂಲಕ ಅಗೌರವ ತೋರಿದ್ದಾರೆ.**
> -ಹಲಗಿ ಸುರೇಶ, ತಾಲೂಕು ಸಂಚಾಲಕ

ಕೃಷಿ ಸಂಘದ ಅಧ್ಯಕ್ಷ ಕೃಷ್ಣಕಾಂತ

ಹರಪನಹಳ್ಳಿ ಪಟ್ಟಣದ ಸಹಕಾರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರುಗಳಾಗಿ ಎಂ.ವಿ.ಕೃಷ್ಣಕಾಂತ ಹಾಗೂ ಉಮಾಮಹೇಶ್ವರಿ ಅವರನ್ನು ಕಾಂಗ್ರೆಸ್ ಪಕ್ಷದ ಮುಖಂಡರು, ಸಹಕಾರ ಸಂಘದ ನಿರ್ದೇಶಕರು ಅಭಿನಂದಿಸಿದರು.

ಹರಪನಹಳ್ಳಿ: ಪಟ್ಟಣದ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ವಿ.ಕೃಷ್ಣಕಾಂತ ಹಾಗೂ ಉಪಾಧ್ಯಕ್ಷರಾಗಿ ಬಿ.ಉಮಾಮಹೇಶ್ವರಿ ಗುರುವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಎಂ.ವಿ.ಕೃಷ್ಣಕಾಂತ ಹಾಗೂ ಬಿ. ಉಮಾಮಹೇಶ್ವರಿ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಜಿ.ಎಸ್. ಸುದೀಂದ್ರ ಘೋಷಿಸಿದರು.

13 ಜನ ನಿರ್ದೇಶಕರು ಹಾಗೂ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಿ.ಬಸವರಾಜ ಸಹ ಚುನಾವಣಾ ಪ್ರಕ್ರಿಯೆಯಲ್ಲಿ ಹಾಜರಿದ್ದರು.

ಅಧ್ಯಕ್ಷ ಹಾಗೂ ಉಪಾಧ್ಯಕ್ಷರುಗಳನ್ನು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಮುಖಂಡರಾದ ವೈ.ಕೆ.ಬಿ.ದುರುಗಪ್ಪ, ವಸಂತಪ್ಪ, ವಕೀಲರ ಸಂಘದ ಅಧ್ಯಕ್ಷ ಟಿ. ವೆಂಕಟೇಶ, ಟಿಎಚ್‌ಎಂ ಮಹೇಶ, ಕೊಟ್ಟೂರು ಪ್ರದೀಪ,ದಂಡಿನ ಹರೀಶ, ಅಬ್ದುಲ್ ರೆಹಮಾನ್, ಡಿಷ್ವೆಂಕಟೇಶ,ಲಾಟಿದಾದಾಪೀರ, ಗೊಂಗಡಿ ನಾಗರಾಜ ಇತರರು ಅಭಿನಂದಿಸಿದರು.

ವೈಕುಂಠ ಏಕಾದಶಿಗೆ ವೆಂಕಟೇಶ್ವರ ಪೂಜಾಲಂಕಾರ

ಬಳ್ಳಾರಿ: ವೈಕುಂಠ ಏಕಾದಶಿ ಪ್ರಯುಕ್ತ ಶುಕ್ರವಾರ ನಗರದಲ್ಲಿನ ಸರಳಾದೇವಿ ಕಾಲೇಜು ಪಕ್ಕದಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ವೆಂಕಟೇಶ್ವರ ಸ್ವಾಮಿಗೆ ವಿಶೇಷ ಪೂಜೆ, ಅಲಂಕಾರ ಮಾಡಲಾಗಿತ್ತು. ಬೆಳಗ್ಗಿಯಿಂದಲೇ ಭಕ್ತರು ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ನಗರದ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಹವನಗಳು ನಡೆಯಿತು. ವೈಕುಂಠ ಏಕಾದಶಿ ನಿಮಿತ್ತ ನಗರ ಸೇರಿದಂತೆ ಜಿಲ್ಲಾದ್ಯಂತ ಶ್ರೀವೆಂಕ ಟೇಶ್ವರ ದೇವರ ದೇವಾಲಯಗಳಲ್ಲಿ ಶುಕ್ರವಾರ ವಿಶೇಷ ಪೂಜೆ ನೆರವೇರಿಸಲಾ ಯಿತು. ವೈಕುಂಠ ಏಕಾದಶಿ ಹಿಂದೂ ಧರ್ಮದ ಪವಿತ್ರ ದಿನವಾಗಿದೆ ಮಾರ್ಗಶಿರ ಮಾಸದ ಶುಕ್ಲ ಪಕ್ಷದಲ್ಲಿ ಆಚರಿಸಲಾಗುತ್ತದೆ. ಈ ದಿನ ಶ್ರೀ ವಿಷ್ಣುವಿಗೆ ಸಮರ್ಪಿತವಾಗಿದೆ. ವೈಕುಂಠ ದ್ವಾರದ ಮೂಲಕ ದೇವರ ದರ್ಶನ ಪಡೆಯುವುದು ವಿಶೇಷವಾಗಿದೆ.

ಮಹಿಳಾ ಸಬಲೀಕರಣ ಸ್ವಾವಲಂಬನೆಗೆ ದಾರಿ

ಹೂವಿನಹಡಗಲಿ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಹಿಳೆಯರ ಸಬಲೀಕರಣಕ್ಕೆ ಮುಂದಾಗಿದೆ ಎಂದು ಪುರಸಭಾ ಸದಸ್ಯ ಲೀಲಾ ಆಟವಾಳಗಿ ಹೇಳಿದರು.

ಪಟ್ಟಣದ ಯೋಜನಾ ಕಚೇರಿ ವ್ಯಾಪ್ತಿಯ ಅಕ್ಕಿಪೇಟೆಗೋಣಿ ಬಸವೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿ ಮಹಿಳೆಯರಲ್ಲಿ ಸ್ವ ಉದ್ಯೋಗಕ್ಕೆ ಪ್ರೇರಣೆ ನೀಡಿ ಸ್ವಾವಲಂಬನೆಗೆ ದಾರಿ ಮಾಡಿಕೊಟ್ಟಿದೆಎಂದರು.

ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ ಮಾತನಾಡಿ, ಯೋಜನೆಯ ಕಾರ್ಯಕ್ರಮಗಳು, ಯೋಜನೆ ಬೆಳೆದು ಬಂದ ಹಂತಗಳ ಬಗ್ಗೆ ಮಾಹಿತಿ ನೀಡಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬಿ.ರಾಮನಗೌಡ ಮಾತನಾಡಿ, ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳು ಪ್ರತಿ ಹಳ್ಳಿ ಹಳ್ಳಿಯ ಜನರಿಗೆ ಮುಟ್ಟಿದೆ ಹಾಗೂ ನಮ್ಮ ತಾಲೂಕಿನಲ್ಲಿ ಜನರಿಗೆ ಅದ್ಭುತವಾಗಿ ಸಹಾಯಕವಾಗಿದೆ. ಗ್ರಾಮಾಭಿವೃದ್ಧಿ ಯೋಜನೆಯೊಂದಿಗೆ ಮಹಿಳಾ ಮತ್ತು ಮಕ್ಕಳ ಇಲಾಖೆಗಳು ಸೇರಿ ಸಮಾಜದಲ್ಲಿರುವ ಅನಿಷ್ಠ ಪಿಡುಗುಗಳಾದ ಬಾಲ್ಯ ವಿವಾಹ ಹಾಗೂ ಮಹಿಳೆಯರಿಗೆ ಸಂಬಂಧಿಸಿದ ಕೆಲವು ಅನಿಷ್ಟ ಪದ್ಧತಿ ತೊಡೆದು ಹಾಕಲು ಎಲ್ಲಾ ಸದಸ್ಯರು ಭಾಗಿಯಾಗೋಣ ಎಂದು ಕರೆ ನೀಡಿದರು.

ಪ್ರಾದೇಶಿಕ ವಿಭಾಗದ ಜ್ಞಾನವಿಕಾಸ ಯೋಜನಾಧಿಕಾರಿ ಸುಧಾಗಾವ್ಕರ್ ಮಾತನಾಡಿ, ಜ್ಞಾನ ವಿಕಾಸ ಕಾರ್ಯಕ್ರಮದ ಆಶಯ ಹಾಗೂ ಮಹಿಳೆಯರು ಜ್ಞಾನವಿಕಾಸ ಕಾರ್ಯಕ್ರಮಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ 25 ಜ್ಞಾನ ವಿಕಾಸ ಕೇಂದ್ರದ ಸದಸ್ಯರುಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ವಿಶೇಷವಾಗಿ ಅನುಭವ ಮಂಟಪದಲ್ಲಿ ಬಸವಣ್ಣ ಹಾಗೂ ಅಕ್ಕಮಹಾದೇವಿ ಸಂಭಾಷಣೆಯನ್ನುಉತ್ತಂಗಿ ಕೇಂದ್ರದ ಸದಸ್ಯರು ಅದ್ಭುತವಾಗಿ ನಡೆಸಿಕೊಟ್ಟರು. ಜಿಲ್ಲಾಜನಜಾಗೃತಿ ವೇದಿಕೆ ಸದಸ್ಯ ಸಂತೋಷ್‌ಜೈನ್, ಕೋಡಿಹಳ್ಳಿ ಕೊಟ್ರೇಶ್, ಯೋಜನಾಧಿಕಾರಿ ಸುಬ್ರಹ್ಮಣ್ಯ, ಒಕ್ಕೂಟದ ಅಧ್ಯಕ್ಷ ಗಂಗಮ್ಮ. ಜ್ಞಾನವಿಕಾಸ ಸಮನ್ವಯಧಿಕಾರಿ ರೇಷ್ಮಾ ಹಾಗೂ ಯೋಜನಾ ಕಚೇರಿ ವ್ಯಾಪ್ತಿಯ 25 ಜ್ಞಾನ ವಿಕಾಸ ಕೇಂದ್ರದ ಸದಸ್ಯರುಗಳು ಹಾಜರಿದ್ದರು.

ಹೂವಿನಹಡಗಲಿ ಪಟ್ಟಣದ ಯೋಜನಾ ಕಚೇರಿ ವ್ಯಾಪ್ತಿಯ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವನ್ನುಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ ಉದ್ಘಾಟಿಸಿದರು.

> **ಅಮ್ಮನವರ ನೆಚ್ಚಿನ ಕಾರ್ಯಕ್ರಮ ಜ್ಞಾನ ವಿಕಾಸ ಕಾರ್ಯಕ್ರಮದಲ್ಲಿ ಪ್ರತಿ ತಿಂಗಳು ಕೇಂದ್ರ ಸಭೆಯಲ್ಲಿ ಒಂದೊಂದು ವಿಷಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುವ ಬಗ್ಗೆ, ಜ್ಞಾನವಿಕಾಸ ಕೇಂದ್ರಗಳ ವಾರ್ಷಿಕೋತ್ಸವ, ನಿರ್ಗತಿಕರ ಮಸಾಶನ, ವಾತ್ಸಲ್ಯ ಕಾರ್ಯಕ್ರಮ, ಆರೋಗ್ಯ ತಪಾಸಣಾ ಶಿಬಿರಗಳು ಇನ್ನೂ ಮುಂತಾದ ಕಾರ್ಯಕ್ರಮಗಳನ್ನು ಜ್ಞಾನವಿಕಾಸ ಕೇಂದ್ರಗಳ ಮೂಲಕ ಸದಸ್ಯರು ಸದುಪಯೋಗ ಪಡೆದುಕೊಳ್ಳುತ್ತಿರುವುದು ಪ್ರಶಂಸಣೆ.**
> -ಸತೀಶ್ ಶೆಟ್ಟಿ, ಜಿಲ್ಲಾ ನಿರ್ದೇಶಕ

ಬಳ್ಳಾರಿ ಜಿಲ್ಲೆಯಲ್ಲಿ ಸುರಕ್ಷಿತ ಮಾತೃತ್ವ ಅಭಿಯಾನಕ್ಕೆ ಚಾಲನೆ

ಬಳ್ಳಾರಿ: ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಡಿ ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಗರ್ಭಿಣಿಯರ ತಪಾಸಣೆಯೊಂದಿಗೆ ಪೌಷ್ಟಿಕಯುಕ್ತ ಆಹಾರ ಒದಗಿಸುವ ವಿನೂತನ ಕಾರ್ಯಕ್ರಮವನ್ನು ಆರಂಭಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ ಬಾಬು ಅವರು ಹೇಳಿದ್ದಾರೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ಜಿಲ್ಲೆಯಾದ್ಯಂತ ಪ್ರತಿ ತಿಂಗಳು 09 ಮತ್ತು 24ನೇ ತಾರೀಖು ವರೆಗೆ ಗಂಡಾಂತರ ಗರ್ಭಿಣಿಯರ ಆರೋಗ್ಯ ತಪಾಸಣೆಯನ್ನು ಕೈಗೊಳ್ಳುವ ಕಾರ್ಯ ನಿರಂತರವಾಗಿ ಜರುಗುತಿದ್ದು, ಮೊದಲ ಬಾರಿಗೆ ಗ್ರಾಮೀಣ ಮತ್ತು ನಗರ ಭಾಗದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆಗೆ ಆಗಮಿಸಿದ ಗರ್ಭಿಣಿಯರಿಗೆ ಪ್ರಾಯೋಗಿಕವಾಗಿ ಜಿಲ್ಲಾಧಿಕಾರಿಗಳು ಮತ್ತು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಲಹೆಯಂತೆ ಪೌಷ್ಟಿಕಯುಕ್ತ ಆಹಾರ ಒಳಗೊಂಡ ಊಟದ ವ್ಯವಸ್ಥೆಯನ್ನು ಮಾಡುವ ಮೂಲಕ ಜಿಲ್ಲೆಯಲ್ಲಿ ಗರ್ಭಿಣಿ ತಾಯಂದಿರು ತಪಾಸಣೆ ಆಗಮಿಸಿ ಸಂತಸದಿಂದ ಮನೆಗೆ ಹಿಂತಿರುಗುವ ಕಾರ್ಯವನ್ನು ಮಾಡಲಾಗಿದ್ದು, ಇದರ ಸದುಪಯೋಗ ಪಡೆಯಬೇಕು ಎಂದು ಅವರು ತಿಳಿಸಿದ್ದಾರೆ. ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಟ 180, ಒಂದು ವೇಳೆ ರಕ್ತಹೀನತೆಯ ಪ್ರಮಾಣ ತೀವ್ರವಾಗಿದ್ದಲ್ಲಿ ದಿನಕ್ಕೆ 2 ರಂತೆ 360 ಮಾತ್ರೆಗಳನ್ನು 6 ತಿಂಗಳ ಅವಧಿಯಲ್ಲಿ ಸೇವಿಸಲು ಹಾಗು ಇದರ ಜತೆಗೆ ದೈಹಿಕವಾಗಿ ಸದೃಡವಾಗಿರಲು ಕ್ಯಾಲ್ಸಿಯಂ ಮಾತ್ರೆಗಳನ್ನು ಸಹ ನುಂಗಬೇಕು ಎಂದು ಅವರು ತಿಳಿಸಿದ್ದಾರೆ.

ಗಣೇಶ್ ಕುದ್ರೋಳಿರಿಂದ ಜಾಗೃತಿ ಜಾದೂ ಇಂದು

ಬಳ್ಳಾರಿ: ಜ.11ರಂದು ಸಂಜೆ ನಗರದ ರಾಘವ ಕಲಾ ಮಂದಿರದಲ್ಲಿ ಕಲ್ಯಾಣ ಕರ್ನಾಟಕ ವಿಕಾಸ ಅಕಾಡೆಮಿ ಹಾಗೂ ರಂಗ ತೋರಣ ಸಂಸ್ಥೆಯ ವತಿಯಿಂದ ಅಂತಾರಾಷ್ಟ್ರೀಯ ಖ್ಯಾತಿಯ ಕುದ್ರೋಳಿ ಗಣೇಶ್ ಅವರಿಂದ ಜಾಗೃತಿ ಜಾದೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರಂಗ ತೋರಣ ಕಾರ್ಯದರ್ಶಿಗಳಾದ ಕಪ್ಪು ಗಲ್ಲು ಪ್ರಭುದೇವ್ ಅವರ ಹೇಳಿದರು. ನಗರದ ಮರ್ಚೇಡು ಹೋಟೆಲ್‌ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲ್ಬುರ್ಗಿ ಜಿಲ್ಲೆಯ ಸೇಡಂನಲ್ಲಿ ಜ.28 ರಂದು ಫೆ.6ರ ವರೆಗೆ ನಡೆಯಲಿರುವ 7ನೇ ಭಾರತೀಯ ಸಂಸ್ಕೃತಿ ಉತ್ಸವ-7 ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಜಾದೂಗಾರ ಕುದ್ರೋಳಿ ಗಣೇಶ್ ಅವರು ಕಲ್ಯಾಣ ಕರ್ನಾಟಕ ಏಳು ಜಿಲ್ಲೆಗಳಲ್ಲಿ 20ಕ್ಕೂ ಹೆಚ್ಚಿನ ಕಾರ್ಯಕ್ರಮದ ಮೂಲಕ ಭಾರತೀಯ ಸಂಸ್ಕೃತಿ ಉತ್ಸವ-7 ಪ್ರಚಾರ ಮಾಡಲಿದ್ದಾರೆ. ಇದರ ಅಂಗವಾಗಿ ಜ.12 ರಂದು ಬಳ್ಳಾರಿಯ ರಾಘವ ಕಲಾಮಂದಿರದಲ್ಲಿ ಸಂಜೆ 6 ಕ್ಕೆ ಜಾಗೃತಿ ಜಾದೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಚೈತನ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಟಿ.ರಾಧಾಕೃಷ್ಣ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪತಂಜಲಿ ಯೋಗ ಸಮಿತಿ ಜಿಲ್ಲಾ ಅಧ್ಯಕ್ಷ ಇಸ್ವಿ ಪಂಪಾಪತಿ, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರ ಸಂಘದ ಜಿಲ್ಲಾಧ್ಯಕ್ಷ ಎಂ.ಶ್ರೀಶೈಲ್, ಕರ್ನಾಟಕ ಸಾವಿತ್ರಿ ಭಾಯಿ ಪುಲೆ ಸಂಘದ ಜಿಲ್ಲಾ ಅಧ್ಯಕ್ಷರಾದ ಬೋರಮ್ಮ ಕೆಂಭಾವಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಭೂ ದಾಖಲೆ ಡಿಜಿಟಲೀಕರಣಕ್ಕೆ ಉದ್ಘಾಟನೆ

ತಾಲೂಕು ಕಚೇರಿಯಲ್ಲಿ ಭೂ-ಸುರಕ್ಷಾ ಯೋಜನೆ ಕಾರ್ಯಕ್ಕೆ ಶಾಸಕ ನೇಮಿರಾಜ ನಾಯ್ಕ ಚಾಲನೆ ನೀಡಿದರು.

ಕೊಟ್ಟೂರು: ತಾಲೂಕು ಕಚೇರಿಯಲ್ಲಿ ಭೂ-ಸುರಕ್ಷಾ ಯೋಜನೆ ಕಾರ್ಯಕ್ಕೆ ಶಾಸಕ ನೇಮಿರಾಜ ನಾಯ್ಕ ಚಾಲನೆ ನೀಡಿದರು. ತಾಲೂಕು ಕಚೇರಿಗಳ ಭೂ-ದಾಖಲೆಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪಕ್ಕೆ ಪರಿವರ್ತಿಸಿ ಶಾಶ್ವತವಾಗಿ ಸಂಗ್ರಹಿಸಿ ಸಾರ್ವಜನಿಕರಿಗೆ ಸುಲಭ ಮತ್ತು ಶೀಘ್ರವಾಗಿ ಲಭ್ಯವಾಗುವಂತೆ ಮಾಡಲು ಕರ್ನಾಟಕ ಸರಕಾರದ ಕಂದಾಯ ಇಲಾಖೆಯು ತಾಲೂಕು ಕಚೇರಿಗಳ ಅಭಿಲೇಖಾಲಯದ ಭೂದಾಖಲೆಗಳ ಡಿಜಿಟಲೀಕರಣಕ್ಕಾಗಿ ಆರಂಭಿಸಿರುವ ಮಹತ್ವಾಕಾಂಕ್ಷೆ ಯೋಜನೆ ‘ಭೂ ಸುರಕ್ಷಾ ಯೋಜನೆ’ ಆಗಿದೆ. ಈ ವ್ಯವಸ್ಥೆಯಿಂದ ಹಳೆಯ ದುಸ್ಥಿತಿಯಲ್ಲಿರುವ ದಾಖಲೆಗಳ ಸಂರಕ್ಷಣೆ ಮಾಡುವುದರ ಜತೆಗೆ ದಾಖಲೆಗಳು ಕಳವಾಗಲು, ತಿದ್ದಲು ಅಸಾಧ್ಯವಾಗುವುದರ ಜತೆಗೆ ರೆಕಾರ್ಡ್ ರೂಂ ಗಳಿಂದ ಪಡೆದುಕೊಳ್ಳಲು ಇರುವ ತೊಂದರೆಗಳ ನಿವಾರಣೆಯಾಗಲಿದೆ. ಇಂತಹ ‘ಭೂ-ಸುರಕ್ಷಾ ಯೋಜನೆ’ಯಾದ ರೆಕಾರ್ಡ್ ರೂಂನ ಭೂದಾಖಲೆಗಳ ಡಿಜಿಟಲೀಕರಣ ಕಾರ್ಯವನ್ನು ಕೊಟ್ಟೂರು ತಾಲೂಕು ಕಚೇರಿಯಲ್ಲಿ ಪ್ರಾರಂಭಿಸಲಾಗಿದೆ. ನಂದಿಪುರ ಪುಣ್ಯ ಕ್ಷೇತ್ರದ ಡಾ. ಮಹೇಶ್ವರ ಸ್ವಾಮೀಜಿ, ಮುಖಂಡರಾದ ಎಂ.ಎಂ.ಜೆ. ಹರ್ಷವರ್ಧನ್, ತಹಶೀಲ್ದಾರರಾದ ಅಮರೇಶ್ ಜಿ.ಕೆ. ಗ್ರೇಡ್-2 ತಹಸೀಲ್ದಾರ್ ಪ್ರತಿಭಾ ಎಂ, ಶಿರಸ್ತೇದಾರ್ ರೇಖಾ. ಉಪತಹಶೀಲ್ದಾರ್ ಅನ್ನದಾನೇಶ ಬಿ ಪತ್ತಾರ್, ಸಿಬ್ಬಂದಿ ದೇವರಾಜ ಅರಸು ಹಾಗೂ ಸಾರ್ವಜನಿಕರು ಹಾಜರಿದ್ದರು. ಸಿ.ಮ.ಗುರುಬಸವರಾಜ ನಿರ್ವಹಿಸಿದರು.

ಅರಣ್ಯ ಇಲಾಖೆ ಕಚೇರಿ ಉದ್ಘಾಟನೆ

ಸಂಡೂರು: ಸಂಡೂರು ಸುಂದರ ಪರಿಸರವನ್ನು ಹೊಂದಿದೆ ಅದರ ಪೂರ್ಣ ಪರಿಚಯ ಮಕ್ಕಳಿಗೆ ಆಗಬೇಕು, ಅಲ್ಲದೆ ಪರಿಸರ ರಕ್ಷಣೆಯ ಜಾಗೃತಿಯನ್ನು ಪ್ರತಿಯೊಬ್ಬರಿಗೂ ನೀಡಬೇಕು, ಅದಕ್ಕೆ ಪ್ರತಿಯೊಬ್ಬರೂ ಕೈಜೋಡಿಸುವಂತಾಗಲಿ ಎಂದು ಶಾಸಕಿ ಈ. ಅನ್ನಪೂರ್ಣ ತುಕಾರಾಂ ತಿಳಿಸಿದರು. ಪಟ್ಟಣದಲ್ಲಿ ನೂತನ ಅರಣ್ಯ ಇಲಾಖೆಯ ಕಚೇರಿ ಕಟ್ಟಡ ಹಾಗೂ ವಸತಿ ಗೃಹವನ್ನು ಉದ್ಘಾಟಿಸಿ ಮಾತನಾಡಿ, ಕಚೇರಿ ಎಂದರೆ ಅಲ್ಲಿ ಅರಣ್ಯ ಇಲಾಖೆಯ ಪೂರ್ಣ ಮಾಹಿತಿ ಸಿಗುವಂತಹ ರೀತಿಯಲ್ಲಿ ಒಂದು ಗ್ಯಾಲರಿಯನ್ನು ನಿರ್ಮಿಸಲು ಹಾಗೂ ಇಡಿ ಸಂಡೂರಿನ ಪರಿಸರ ರಕ್ಷಣೆಯನ್ನು ಮಾಡಬೇಕು. ಇದರಿಂದ ಎಲ್ಲರೂ ಆರೋಗ್ಯವಂತರಾಗಿರಲು ಸಾಧ್ಯ, ಆದ್ದರಿಂದ ಇಂತಹ ಚಟುವಟಿಕೆಗಳು ಹೆಚ್ಚು ನಡೆಯಲಿ ಎಂದರು. ಈ ಸಂದರ್ಭದಲ್ಲಿ ಉಪವಲಯ ಸಂರಕ್ಷಣಾವಧಿಕಾರಿ ಸಂದೀಪ್ ಸೂರ್ಯವಂಶಿಯವರು ಸಂಡೂರಿನ ಕ್ಯಾನೋಪಿ ವಾಕ್ ಹಾಗೂ ಸಂಡೂರು ವಿವ್ ಪಾಯಂಟ್ ಅಭಿವೃದ್ಧಿಯ ಕುರಿತು ಮಾಹಿತಿ ನೀಡಿ, ಸಂಡೂರನ್ನು ಪ್ರವಾಸಿ ತಾಣವಾಗಿಸುವ ನಿಟ್ಟಿನಲ್ಲಿ ಪೂರ್ಣ ಪ್ರಮಾಣದ ಯೋಜನೆ ರೂಪಿಸಿ ಅಭಿವೃದ್ಧಿಯನ್ನು ಮಾಡುವ ಮೂಲಕ ಪ್ರವಾಸಿಗಳನ್ನು ಆಕರ್ಷಿಸುವ ಮೂಲಕ ಉತ್ತಮ ತಾಣವಾಗಿಸುತ್ತೇವೆ ಎಂದು ಹೇಳಿದರು. ಸಮಾರಂಭದಲ್ಲಿ ಸಂದೀಪ್ ಸೂರ್ಯವಂಶಿ, ಶರಣಕುಮಾರ್, ದಾದಾಖಲಂದರ್ ಹಾಗೂ ಸಿಬ್ಬಂದಿ, ಅನಿಲ್ ಕುಮಾರ್, ಷಡಾಕ್ಷರಯ್ಯ, ಸಿರಾಜ್ ಹುಸೇನ್, ಆಶಾಲತಾ ಸೋಮಪ್ಪ, ಪುರಸಭೆ ಸದಸ್ಯರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಯುವಿ ಕೆರಿಯರ್ ಅಂತ್ಯಕ್ಕೆ ಕೊಹ್ಲಿ ಕಾರಣ

ದೆಹಲಿ: ಭಾರತ 2007ರ ಟಿ20 ಹಾಗೂ 2011ರ ಏಕದಿನ ವಿಶ್ವಕಪ್ ಗೆಲ್ಲುವುದಕ್ಕೆ ಕಾರಣವಾಗಿದ್ದ ಯುವರಾಜ್ ಸಿಂಗ್ ಪ್ರಮುಖ ಪಾತ್ರವಹಿಸಿದ್ದರು. ಎರಡು ಐಸಿಸಿ ಈವೆಂಟ್‌ಗಳಲ್ಲಿ ಯುವರಾಜ್ ಸಿಂಗ್ ಅದ್ಭುತ ಪ್ರದರ್ಶನ ತೋರಿದ್ದರು. 2011ರ ವಿಶ್ವಕಪ್ ವೇಳೆ ಯುವರಾಜ್ ಸಿಂಗ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಅಮೆರಿಕಾದಲ್ಲಿ ಕ್ಯಾನ್ಸರ್‌ಗೆ ಸಿಕಿತ್ಸೆ ಪಡದು ಬಂದ ಯುವಿ ಟೀಮ್ ಇಂಡಿಯಾಗೆ ಅದ್ಭುತ ಕಮ್ ಬ್ಯಾಕ್ ಮಾಡಿ, ಶತಕವನ್ನು ಸಿಡಿಸಿ ಗಮನ ಸೆಳೆದಿದ್ದರು. ಆದರೆ ಅವರ ವೃತ್ತಿ ಜೀವನವನ್ನ ವಿರಾಟ್ ಕೊಹ್ಲಿ ನಾಯಕತ್ವದ ಸಮಯದಲ್ಲಿ ಅಂತ್ಯವಾಯಿಯಿತು. 2017ರ ಚಾಂಪಿಯನ್ಸ್ ಟ್ರೋಫಿ ನಂತರ ಯುವರಾಜ್ ಸಿಂಗ್ ರನ್ನು ತಂಡದಿಂದ ಕೈಬಿಡಲಾಯಿತು. ವಿರಾಟ್ ಕೊಹ್ಲಿ ಹಾಗೂ ಶಾಸ್ತ್ರಿ ನೇತೃತ್ವದ ಮ್ಯಾನೇಜ್‌ಮೆಂಟ್ ಯುವರಾಜ್ ಕೆರಿಯರ್ ಮುಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಭಾರತ ತಂಡದ ಮಾಜಿ ಕ್ರಿಕೆಟಿಗ, ಕನ್ನಡಿಗ ರಾಬಿನ್ ಉತ್ತಪ್ಪ ಆರೋಪಿಸಿದ್ದಾರೆ. ಕ್ಯಾನ್ಸರ್ ವಿರುದ್ಧ ಹೋರಾಡಿದ ನಂತರ 2017ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮರಳಿದಾಗ ಅವರಿಗೆ ಮ್ಯಾನೇಜ್‌ಮೆಂಟ್‌ನಿಂದ ಯಾವುದೇ ಬೆಂಬಲ ಸಿಗಲಿಲ್ಲ ಎಂದು ಅವರು ನೆನಪಿಸಿಕೊಂಡಿದ್ದಾರೆ. 'ವಿರಾಟ್ ಕೊಹ್ಲಿ ಅವರ ನಾಯಕತ್ವ ಶೈಲಿ ಇತರರಿಗಿಂತ ಭಿನ್ನವಾಗಿದೆ, ಅವರಿ ತಂಡದ ಪ್ರತಿಯೊಬ್ಬ ಆಟಗಾರನು ತನ್ನ ಮಾನದಂಡಗಳನ್ನು ಪೂರೈಸಬೇಕೆಂದು ಅವನು ಬಯಸುತ್ತಾರೆ.

ಪ್ರತಿಕಾ, ತೇಜಲ್ ಬ್ಯಾಟಿಂಗ್ ಅಬ್ಬರ, 35 ಓವರ್‌ಗಳಲ್ಲೇ ಗೆದ್ದ ವನಿತೆಯರು

ಐರ್ಲೆಂಡ್ ವಿರುದ್ಧ ಸುಲಭದ ಜಯ

ರಾಜ್ ಕೋಟ್: ಏಕದಿನ ಕ್ರಿಕೆಟ್‌ನಲ್ಲಿ ಭಾರತೀಯ ಮಹಿಳಾ ತಂಡದ ಉತ್ತಮ ಪ್ರದರ್ಶನ ಮುಂದುವರಿದಿದೆ. ತವರು ನೆಲದಲ್ಲಿ ಐರ್ಲೆಂಡ್ ಮಹಿಳಾ ತಂಡದೊಂದಿಗೆ ನಡೆಯುತ್ತಿರುವ ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ಸುಲಭ ಗೆಲುವು ಸಾಧಿಸಿದೆ. ಸ್ಮೃತಿ ಮಂಧಾನ ನಾಯಕತ್ವದಲ್ಲಿ ಶುಕ್ರವಾರ ರಾಜ್ ಕೋಟ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಟೀಮ್ ಇಂಡಿಯಾ 6 ವಿಕೆಟ್‌ಗಳಿಂದ ಐರ್ಲೆಂಡ್ ವಿರುದ್ಧ ಗೆಲುವು ಸಾಧಿಸಿತು. ಈ ಗೆಲುವಿನೊಂದಿಗೆ 3 ಪಂದ್ಯಗಳ ಸರಣಿಯನ್ನು ಭಾರತ 1-0ಯಲ್ಲಿ ಅಂತರದಲ್ಲಿ ಮುನ್ನಡೆ ಸಾಧಿಸಿದೆ.

ಪ್ರತಿಕಾ, ತೇಜಲ್ ಅರ್ಧಶತಕ: ತಂಡ ಆರಂಭಿಕ ಆಟಗಾರ್ತಿ ಪ್ರತಿಕಾ ರಾವಲ್ ತಮ್ಮ ವೃತ್ತಿ ಜೀವನದ ನಾಲ್ಕನೆ ಪಂದ್ಯದಲ್ಲೇ ಅತ್ಯುತ್ತಮವಾಗಿ ಬ್ಯಾಟ್ ಬೀಸಿದರು. 96 ಎಸೆತಗಳಲ್ಲಿ 10 ಬೌಂಡರಿ, 1 ಸಿಕ್ಸರ್ ಸಹಿತ 89 ರನ್ ಗಳಿಸಿ ಗೆಲುವಿಗೆ 7 ರನ್ ಗಳಿದ್ದಾಗ ಔಟ್ ಆದರು. ಇವರಿಗೆ ಸಾಥ್ ನೀಡಿದ ಸ್ಮೃತಿ ಮಂದಾನ ಮೊದಲ ವಿಕೆಟ್‌ಗೆ 70 ರನ್ ಸೇರಿಸಿದರು. ನಾಯಕಿ ಮಂಧಾನ 29 ಎಸೆತಗಳಲ್ಲಿ 6 ಬೌಂಡರಿ, 1 ಸಿಕ್ಸರ್ ಸಹಿತ 41 ರನ್ ಗಳಿಸಿ ಔಟಾದರು. ನಂತರ ಬಂದ ಹರ್ಲೀನ್ ಡಿಯೋಲ್ 32 ಎಸೆತಗಳಲ್ಲಿ 20 ರನ್ ಗಳಿಸಿದರೆ, ತೇಜಲ್ ಹಸಬ್ನಿಸ್ 46 ಎಸೆತಗಳಲ್ಲಿ 9 ಬೌಂಡರಿಗಳೊಂದಿಗೆ ಅಜೇಯ 53 ರನ್ ಗಳಿಸಿ ತಂಡವನ್ನ ಗೆಲುವಿನ ಗಡಿ ದಾಟಿಸಿದರು. ರಿಚಾ ಘೋಷ್ 2 ಎಸೆತಗಳಲ್ಲಿ 2 ಬೌಂಡರಿ ಸಹಿತ ಅಜೇಯ 8 ರನ್ ಗಳಿಸಿದರು.

ಐರ್ಲೆಂಡ್‌ಗೆ ನಾಯಕಿ ಆಸರೆ: ಇದಕ್ಕು ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಐರ್ಲೆಂಡ್ ತಂಡ 56 ರನ್ ಗಳಾಗುಷ್ಟರಲ್ಲಿ 4 ವಿಕೆಟ್ ಕಳೆದುಕೊಂಡಿತ್ತು. ಆದರೆ ನಂತರ ಜೊತೆಗೂಡಿದ ತಂಡದ ನಾಯಕಿ ಗ್ಯಾಬಿ ಲೂಯಿಸ್ 129 ಎಸೆತಗಳಲ್ಲಿ 15 ಬೌಂಡರಿಗಳೊಂದಿಗೆ 92 ಹಾಗೂ ಲೀ ಪಾಲ್ 73 ಎಸೆತಗಳಲ್ಲಿ 7 ಬೌಂಡರಿ ಸಹಿತ 59 ರನ್ ಗಳಿಸಿ ತಂಡದ ಮೊತ್ತವನ್ನು 200ರ ಗಡಿದಾಟಿಸಿದರು. ಈ ಜೋಡಿ 5ನೇ ವಿಕೆಟ್‌ಗೆ 117 ರನ್ ರನ್ ಸೇರಿಸಿತು. ಅರ್ಲೆನ್ ಕೆಲ್ಲಿ 25 ಎಸೆತಗಳಲ್ಲಿ 28 ರನ್‌ಗಳಿಸಿ ಕೊನೆಯಲ್ಲಿ ಸ್ಕೋರ್ ಹೆಚ್ಚಿಸಿದರು.

ಭಾರತೀಯ ಬೌಲರ್‌ಗಳ ಪೈಕಿ ಪ್ರಿಯಾ ಮಿಶ್ರಾ (2/56) ಎರಡು ವಿಕೆಟ್ ಪಡೆದರೆ, ಟೈಟಸ್ ಸಾಧು, ಸಯಾಲಿ, ದೀಪ್ತಿ ಶರ್ಮಾ ತಲಾ ಒಂದು ವಿಕೆಟ್ ಪಡೆದು ಮಿಂಚಿದರು. ಚೇಸಿಂಗ್ ಶುರು ಮಾಡಿದ ಭಾರತ ಮಹಿಳೆಯರು ತಂಡ 34.3 ಓವರ್ ಗಳಲ್ಲಿ 4 ವಿಕೆಟ್ ಗಳಿಗೆ 241 ರನ್ ಗಳಿಸಿ ತಂಡವನ್ನ ಗೆಲುವಿನ ಗಡಿ ದಾಟಿಸಿದರು.

ಟಿ20 ವಿಶ್ವಕಪ್ 2024 ಟೀಮ್ ಇಂಡಿಯಾ ತವರು ನೆಲದಲ್ಲಿ ನ್ಯೂಜಿಲ್ಯಾಂಡ್ ಹಾಗೂ ವೆಸ್ಟ್ ಇಂಡೀಸ್ ವಿರುದ್ಧ ಏಕದಿನ ಸರಣಿ ಗೆದ್ದಿದೆ. ಅದೇ ಪ್ರದರ್ಶನ ಮುಂದುವರಿಸುತ್ತಿದ್ದು, ಹ್ಯಾಟ್ರಿಕ್ ಸರಣಿ ಗೆಲುವಿನ ಮೇಲೆ ಭಾರತ ಕಣ್ಣಿಟ್ಟಿದೆ. ನಾಯಕಿ ಹರ್ಮನ್‌ಪ್ರೀತ್ ಕೌರ್ ಈ ಸರಣಿಯಿಂದ ವಿಶ್ರಾಂತಿ ಪಡೆದಿದ್ದು, ಆರಂಭಿಕ ಆಟಗಾರ್ತಿ ಸ್ಮೃತಿ ಮಂಧಾನ ಮುನ್ನಡೆಸುತ್ತಿದ್ದಾರೆ.

ವಿಶ್ವದ 3ನೇ ಆಟಗಾರ್ತಿ

ಇನ್ನು ಸ್ಮೃತಿ ಮಂದಾನ ಅವರು ಅತಿ ಕಡಿಮೆ ಇನ್ನಿಂಗ್ಸ್ ಗಳಲ್ಲಿ 4000 ರನ್ ಗಡಿ ದಾಟಿದ ವಿಶ್ವದ 3ನೇ ಆಟಗಾರ್ತಿಯಾಗಿದ್ದಾರೆ. ಈ ಹಿಂದೆ ಆಸ್ಟ್ರೇಲಿಯಾದ ಬೆಲಿಂಡಾ ಕ್ಲಾರ್ಕ್ 86 ಇನ್ನಿಂಗ್ಸ್ ಗಳಲ್ಲಿ ಮತ್ತು ಮೆಗ್ ಲ್ಯಾನಿಂಗ್ 87 ಇನ್ನಿಂಗ್ಸ್ ಗಳಲ್ಲಿ ಈ ಸಾಧನೆ ಮಾಡಿದ್ದರು.

4000 ರನ್ ಗಡಿ ದಾಟಿ ಇತಿಹಾಸ ಬರೆದ ಮಂದಾನ

ಭರ್ಜರಿ ಫಾರ್ಮ್ ನಲ್ಲಿರುವ ಭಾರತ ಮಹಿಳಾ ಕ್ರಿಕೆಟ್ ಸ್ಟಾರ್ ಸ್ಮೃತಿ ಮಂದಾನ ಮತ್ತೊಂದು ಇತಿಹಾಸ ನಿರ್ಮಿಸಿದ್ದಾರೆ. ಐರ್ಲೆಂಡ್ ಪಂದ್ಯದಲ್ಲಿ 41 ರನ್ ಗಳಿಸಿದ ಅವರು 4000 ರನ್ ಗಡಿ ದಾಟಿದ ಸಾಧನೆ ಮಾಡಿದ್ದಾರೆ. ಈ ಸಾಧನೆ ಮಾಡಿದ 2ನೇ ಆಟಗಾರ್ತಿ ಅವರಾಗಿದ್ದಾರೆ. ಜೊತೆಗೆ ವಿಶ್ವದಲ್ಲಿ ಅತ್ಯಂತ ವೇಗವಾಗಿ ಈ ಸಾಧನೆ ಮಾಡಿದ ಮೂರನೇ ಆಟಗಾರ್ತಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಮಹಿಳಾ ಕ್ರಿಕೆಟ್ ನ ದಂತಕತೆ ಮಿಥಾಲಿ ರಾಜ್ ಈ ಸಾಧನೆ ಮಾಡಿದ ಮೊದಲ ಭಾರತೀಯ ಆಟಗಾರ್ತಿಯಾಗಿದ್ದಾರೆ. ಮಿಥಾಲಿ ರಾಜ್ ಅವರು ಈ ಸಾಧನೆಗೆ 112 ಇನ್ನಿಂಗ್ಸ್‌ಗಳನ್ನು ತೆಗೆದುಕೊಂಡಿದ್ದರೆ, ಸ್ಮೃತಿ ಮಂದಾನ ಅವರು ಕೇವಲ 95 ಇನ್ನಿಂಗ್ಸ್ ಗಳಲ್ಲೇ ಈ ಗಡಿ ತಲುಪಿದರು.

ಆರ್‌ಸಿಬಿ ನೂತನ ನಾಯಕನ ಬಗ್ಗೆ ಹೆಡ್ ಕೋಚ್ ಆ್ಯಂಡಿ ಫ್ಲವರ್ ಹೇಳಿಕೆ

ಕೊಹ್ಲಿ ನಾಯಕತ್ವ ಚರ್ಚೆಯಾಗಿಲ್ಲ

ಬೆಂಗಳೂರು: ಹದಿನೆಂಟನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಮೆಗಾ ಹರಾಜಿಗೂ ಮುನ್ನ ವಿರಾಟ್ ಕೊಹ್ಲಿ ಅವರೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕರಾಗಿ ಮರಳಲಿದ್ದಾರೆಂಬ ನಿರೀಕ್ಷೆ ಅಭಿಮಾನಿಗಳಲ್ಲಿ ದಟ್ಟವಾಗಿದೆ. ಅದಕ್ಕೆ ತಕ್ಕಂತೆ ಹರಾಜಿನಲ್ಲಿ ಕೆ.ಎಲ್. ರಾಹುಲ್, ರಿಷಭ್ ಪಂತ್, ಶ್ರೇಯಸ್ ಅಯ್ಯರ್ ಸೇರಿದಂತೆ ನಾಯಕತ್ವದ ಗುಣವಿರುವ ಆಟಗಾರರ ಖರೀದಿಗೆ ಫ್ರಾಂಚೈಸಿ ಮುಂದಾಗಿರಲಿಲ್ಲ, ಆದರೆ ಈಗ ವಿರಾಟ್ ಕೊಹ್ಲಿ ಆರ್‌ಸಿಬಿ ತಂಡದ ನಾಯಕರಾಗುತ್ತಾರೆಯೇ ಎಂಬ ಪ್ರಶ್ನೆಗೆ ಹೆಡ್ ಕೋಚ್ ಆ್ಯಂಡಿ ಫ್ಲವರ್ ಉತ್ತರಿಸಿದ್ದಾರೆ.

ವಿರಾಟ್ ಕೊಹ್ಲಿಗೆ ವಿಶ್ವದ ಅತ್ಯಂತ ಶ್ರೀಮಂತ ಫ್ರಾಂಚೈಸಿ ಲೀಗ್‌ನಲ್ಲಿ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಾಯಕತ್ವ ವಹಿಸಿರುವ ಅಪಾರ ಅನುಭವವಿದೆ. ಅಲ್ಲದೆ ಪ್ರಸಕ್ತ ಆರ್‌ಸಿಬಿ ತಂಡದಲ್ಲಿರುವ ರಜತ್ ಪಾಟಿದಾರ್, ಭುವನೇಶ್ವರ್ ಕುಮಾರ್, ಕೃಣಾಲ್ ಪಾಂಡ್ಯ, ಫಿಲ್ ಸಾಲ್ಟ್ ಹಾಗೂ ಲಿಯಾಮ್ ಲಿವಿಂಗ್ ಸ್ಟೋನ್‌ಗೂ ತಂಡವನ್ನು ಮುನ್ನಡೆಸಿರುವ ಸ್ವಲ್ಪಮಟ್ಟಿಗೆ ಅನುಭವ ಹೊಂದಿದ್ದಾರೆ.

ಇತ್ತೀಚೆಗೆ ನೀಡಿದ ಸಂದರ್ಶನದಲ್ಲಿ ಆರ್‌ಸಿಬಿ ನಿರ್ದೇಶಕ ಬೊಬಾಟ್ ಅವರು ತಂಡದ ನಾಯಕತ್ವದ ಬಗ್ಗೆ ಇನ್ನೂ ತೀರ್ಮಾನಿಸಿಲ್ಲ ಎಂದು ಹೇಳಿದ್ದರು. ಆ್ಯಂಡಿ ಫ್ಲವರ್ ಅವರು ಕೂಡ ಇದೇ ನಿಲುವನ್ನು ತಿಳಿಸುವ ಮೂಲಕ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದ್ದಾರೆ.

'ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳೆಲ್ಲ ಫ್ರಾಂಚೈಸಿಯ ಅಂತಿಮ ನಿರ್ಧಾರಕ್ಕೆ ಭಾರೀ ಕುತೂಹಲದಿಂದ ಕಾಯುತ್ತಿದ್ದೀರಿ, ನಾವು ಈಗ ಮುಂದಿನ ಮೂರು ವರ್ಷಗಳ ಹೊಸ ಯುಗ ಆರಂಭಿಸಲು ಹೊರಟಿದ್ದೇವೆ. ಐಪಿಎಲ್ ಟೂರ್ನಿ ಆರಂಭಕ್ಕೂ ಮುನ್ನವೇ ನಿಮ್ಮಲ್ಲಿ ಸಾಕಷ್ಟು ಕ್ರೇಜ್ ಹುಟ್ಟಿದೆ ಎಂಬುದನ್ನು ಅರಿತಿದ್ದೇವೆ' ಎಂದು ಆರ್‌ಸಿಬಿ ಹೆಡ್ ಕೋಚ್ ಹೇಳಿದ್ದಾರೆ.

'ನೀವು ಈಗ ನನ್ನನ್ನು ಏನು ಬೇಕಾದರೂ ಕೇಳಬಹುದು. ಆದರೆ ಇದುವರೆಗೂ ಮುಂದಿನ ಆವೃತ್ತಿಯಲ್ಲಿ ಆರ್‌ಸಿಬಿ ತಂಡದ ನಾಯಕರು ಯಾರಾಗುತ್ತಾರೆ ಎಂಬುದರ ಕುರಿತು ಚರ್ಚೆಗಳಾಗಿಲ್ಲ' ಎಂದು ಆ್ಯಂಡಿ ಫ್ಲವರ್ ಸ್ಪಷ್ಟಪಡಿಸಿದ್ದಾರೆ.

2013ರ ನಂತರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಖಾಯಂ ನಾಯಕತ್ವ ವಹಿಸಿಕೊಂಡ ಕ್ಲಾಸ್ ಆಟಗಾರ ವಿರಾಟ್ ಕೊಹ್ಲಿ, 2016ರಲ್ಲಿ ತಂಡವನ್ನು ಫೈನಲ್ ಹಂತಕ್ಕೆ ತಲುಪಿಸಿದ್ದರು.

ಆದರೆ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಸೋತು ಚೊಚ್ಚಲ ಚಾಂಪಿಯನ್ ಪಟ್ಟ ಗೆಲ್ಲುವ ಅವಕಾಶ ತಪ್ಪಿಸಿಕೊಂಡರು. 2021ರ ನಂತರ ಆರ್‌ಸಿಬಿ ಕ್ಯಾಪ್ಟನ್ಸಿ ತೊರೆದ ನಂತರ ಫಾಫ್ ಡುಪ್ಲೆಸಿಸ್ ನೂತನ ಸಾರಥಿಯಾದರು. 2024ರ ಐಪಿಎಲ್ ಟೂರ್ನಿಯಲ್ಲಿ ಡುಪ್ಲೆಸಿಸ್ ಗಾಯಕ್ಕೆ ಒಳಗಾದ ಸಮಯದಲ್ಲಿ 4 ಪಂದ್ಯಗಳಲ್ಲಿ ವಿರಾಟ್ ಕೊಹ್ಲಿ ತಂಡವನ್ನು ಮುನ್ನಡೆಸಿದ್ದರು.

ಈಗ ಹದಿನೆಂಟನೇ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲೂ ವಿರಾಟ್ ಕೊಹ್ಲಿಗೆ ಮರಳಿ ಕ್ಯಾಪ್ಟನ್ಸಿ ನೀಡಿ ಚೊಚ್ಚಲ ಟ್ರೋಫಿ ಗೆಲ್ಲಲು ಫ್ರಾಂಚೈಸಿ ಮುಂದಾಗುತ್ತದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಕೊಡಗಿನಲ್ಲಿ ಸ್ಟೇಡಿಯಂ

ಮಡಿಕೇರಿ: ಕರ್ನಾಟಕದ ಕಾಶ್ಮೀರ ಎಂದೇ ಖ್ಯಾತಿ ಪಡೆದಿರುವ ಕೊಡಗು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಮುಂದಿನ 3-4 ವರ್ಷಗಳಲ್ಲೇ ಕೊಡಗಿನಲ್ಲಿ ಅಂತಾರಾಷ್ಟ್ರೀಯ ಪಂದ್ಯ ವೀಕ್ಷಿಸುವ ಅವಕಾಶ ಸಿಗಲಿದೆ. ಮಡಿಕೇರಿ ತಾಲೂಕಿನ ಪಾಲೆಮಾಡು ಗ್ರಾಮದ ಬಳಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ತಲೆ ಎತ್ತುತ್ತಿದೆ. ಈಗಾಗಲೆ ಮೈದಾನದ ನಿರ್ಮಾಣ ಕಾಮಗಾರಿ ಆರಂಭವಾಗಿದೆ. ಸುಮಾರು 50 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾಂಗಣಕ್ಕೆ ಜಿಲ್ಲಾಡಳಿತ 12 ಎಕರೆ ಜಾಗ ನೀಡಿದೆ. ಹಿಮಾಚಲ ಪ್ರದೇಶದ ಧರ್ಮಶಾಲಾ ಕ್ರೀಡಾಂಗಣ ಮಾದರಿಯಲ್ಲೇ ನಿರ್ಮಾಣ ಮಾಡುವ ಗುರಿ ಹೊಂದಲಾಗಿದ್ದು, ಅದಕ್ಕಾಗಿ ಈ ಪ್ರದೇಶದಲ್ಲಿ ಬೆಟ್ಟವನ್ನು ಸಮತಟ್ಟುಗೊಳಿಸಲಾಗುತ್ತಿದೆ. ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಮುಂದಿನ 3-4 ವರ್ಷಗಳಲ್ಲಿ ಮುಗಿಯಲಿದೆ. ಇದು ಸ್ಥಳೀಯ ಕ್ರೀಡಾಪಟುಗಳಿಗೂ ವರದಾನವಾಗಲಿದೆ. ಜಿಲ್ಲೆಯಲ್ಲಿ ಆಸ್ಟ್ರೋ ಟರ್ಫ್ ಹಾಕಿ ಕ್ರೀಡಾಂಗಣವಿದೆ. ಆದರೆ, ರಾಜ್ಯ ಮಟ್ಟದ ಕ್ರೀಡಾಕೂಟ ಆಯೋಜಿಸುವಂತಹ ಅಥ್ಲೆಟಿಕ್ ಕ್ರೀಡಾಂಗಣವಾಗಲಿ, ಕ್ರಿಕೆಟ್ ಮೈದಾನವಾಗಲಿ ಇಲ್ಲ. ಸದ್ಯ ಕ್ರಿಕೆಟ್ ಮೈದಾನ ತಲೆ ಎತ್ತುತ್ತಿದ್ದು, ಇದರೊಂದಿಗೆ ಕೊಡಗು ಜಿಲ್ಲೆ ಸಹ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲಿದೆ ಎಂದು ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ವರುಣ್ ಆರೋನ್ ವಿದಾಯ

ದೆಹಲಿ: ಟೀಂ ಇಂಡಿಯಾ ಆಟಗಾರ ವರುಣ್ ಆರೋನ್ ಎಲ್ಲಾ ಸ್ವರೂಪದ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಅವರು ತಮ್ಮ 35ನೇ ವಯಸ್ಸಿನಲ್ಲಿ ನಿವೃತ್ತಿ ಘೋಷಿಸಿದ್ದಾರೆ. ವರುಣ್ ಆರೋನ್ ಭಾರತ ಪರ 9 ಏಕದಿನ ಹಾಗೂ 9 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ತಮ್ಮ ಮಾರಕ ಬೌಲಿಂಗ್‌ಗೆ ಖ್ಯಾತರಾಗಿದ್ದರು. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿಯೂ ಅವರು ಉತ್ತಮ ದಾಖಲೆಯನ್ನು ಹೊಂದಿದ್ದಾರೆ. ಅವರು ದೇಶಿ ಕ್ರಿಕೆಟ್‌ನಲ್ಲಿ ಜಾರ್ಖಂಡ್ ಪರ ಆಡುತ್ತಿದ್ದರು. ಈ ವರ್ಷದ ಜನವರಿ 5ರಂದು ಗೋವಾ ವಿರುದ್ಧ ಜಾರ್ಖಂಡ್ ಪರ ಕೊನೆಯ ದೇಶಿ ಪಂದ್ಯವನ್ನು ಆಡಿದ್ದರು.

ಶುಕ್ರವಾರ ತಮ್ಮ ಅಧಿಕೃತ ಇನ್‌ಸ್ಟಾಗ್ರಾಮ್ ಪೋಸ್ಟ್ ಮೂಲಕ ಈ ನಿರ್ಧಾರವನ್ನು ಪ್ರಕಟಿಸಿದ್ದಾರೆ. 'ನಾನು ಕಳೆದ 20 ವರ್ಷಗಳಿಂದ ವೇಗದ ಬೌಲಿಂಗ್‌ನಲ್ಲಿ ಬದುಕಿದ್ದೇನೆ. ಇಂದು ನಾನು ಅಧಿಕೃತವಾಗಿ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸುತ್ತಿದ್ದೇನೆ. ದೇವರು, ಕುಟುಂಬ, ಸ್ನೇಹಿತರು, ಸಹ ಆಟಗಾರರು, ತರಬೇತುದಾರರು, ಸಹಾಯಕ ಸಿಬ್ಬಂದಿ ಮತ್ತು ಅಭಿಮಾನಿಗಳು ಇಲ್ಲದಿದ್ದರೆ ನನ್ನ ಈ ಪ್ರಯಾಣ ಸಾಧ್ಯವಾಗುತ್ತಿರಲಿಲ್ಲ. ನಾನು ಬಿಸಿಸಿಐ ಮತ್ತು ಜೆಎಸ್‌ಸಿಎಗೆ ಧನ್ಯವಾದ ಹೇಳುತ್ತೇನೆ' ಎಂದು ಅವರು ಬರೆದಿದ್ದಾರೆ.

ಅರೋನ್ ಸಾಧನೆ

ಅವರು ನವೆಂಬರ್ 2011ರಲ್ಲಿ ಭಾರತ ತಂಡದ ಪರ ತಮ್ಮ ಚೊಚ್ಚಲ ಟೆಸ್ಟ್ ಪಂದ್ಯವನ್ನು ಆಡಿದ್ದರು. ಆದರೆ ಅವರು ದೀರ್ಘಾವಧಿ ಭಾರತ ತಂಡದಲ್ಲಿ ಮುಂದುವರಿಯಲಿಲ್ಲ. 2015ರಲ್ಲಿ ಭಾರತ ಪರ ಕೊನೆಯ ಟೆಸ್ಟ್ ಆಡಿದ್ದರು. 2011ರ ಅಕ್ಟೋಬರ್‌ನಲ್ಲಿ ಏಕದಿನ ಕ್ರಿಕೆಟ್‌ಗೆ ವರುಣ್ ಆರೋನ್ ಪದಾರ್ಪಣೆ ಮಾಡಿದ್ದರುರು. ಆದರೆ 2014ರಲ್ಲಿಯೇ ಕೊನೆಯ ಏಕದಿನ ಪಂದ್ಯವನ್ನು ಆಡಿದ್ದರು. ಭಾರತ ಪರ 9 ಟೆಸ್ಟ್ ಪಂದ್ಯಗಳಲ್ಲಿ 18 ವಿಕೆಟ್ ಪಡೆದಿದ್ದಾರೆ. 9 ಏಕದಿನ ಪಂದ್ಯಗಳಲ್ಲಿ 11 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ವಿಟಾಕೀಸ್

ನೈದಿಲೆ ನೆನೆದ ತೇಜ್

ರವೈಂಡ್ ಸ್ಟೋರಿ ಹೇಳಿ ರಂಜಿಸಿದ್ದ ತೇಜ್, ರಾಮಾಚಾರಿ ಕಥೆ ಮರಳಿ ತೆರೆಗೆ ತಂದು ಮನಗೆದ್ದರು. ಈಗ ಅದೇ ತೇಜ್, ಡ್ಯೂಡ್ ಮೂಲಕ ಕ್ರೀಡಾ ಸ್ಫೂರ್ತಿ ಸಾರಲು ಸಿದ್ಧವಾಗಿದ್ದಾರೆ. ಡ್ಯೂಡ್ ಮಹಿಳಾ ಫುಟ್ಬಾಲ್ ತಂಡದ ಯಶೋಗಾಥೆಯನ್ನು ಹೊತ್ತು ಬರುತ್ತಿದೆ. ಡ್ಯೂಡ್ ಚಿತ್ರದ ಶೂಟಿಂಗ್ ಭರದಿಂದ ಸಾಗುತ್ತಿದ್ದು, ಅಂತಿಮ ಹಂತದ ಚಿತ್ರೀಕರಣ ಬಾಕಿದೆ. ಸದ್ಯ ಚಿತ್ರತಂಡ ನೈದಿಲೆ ಕಣ್ಣ ಕೋಮಲೆ.. ಹಾಡನ್ನು ಬಿಡುಗಡೆ ಮಾಡಿದೆ. ಆ ಮುಲಕ ಸಂಗೀತ ಪ್ರಿಯರ ಮನಗೆದ್ದಿದೆ. ಮಂಜು ಎಂ. ದೊಡ್ಮನೆ ಸಾಹಿತ್ಯದ ಈ ಗೀತೆಗೆ ನಿಶಾನ್ ರಾಜ್ ದನಿಯಾಗಿದ್ದಾರೆ. ಎಮಿಲ್ ಮಹಮ್ಮದ್ ಸಂಗೀತ ಸಂಯೋಜಿಸಿದ್ದಾರೆ. ತೇಜ್ ಹಾಗೂ ಸಾನ್ಯಾ ನೈದಿಲೆ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಇದು ನೈಜಘಟನೆ ಅಲ್ಲದಿದ್ದರೂ ಎಲ್ಲರ ಮನಕ್ಕೆ ಮುಟ್ಟುವಂತೆ ಕಥೆ ಹೆಣೆಯಲಾಗಿದೆ.

ತೇಜ್ ನಾಯಕನಾಗಿ ನಟಿಸುವ ಜತೆಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಪನೊರೋಮಿಕ್ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ದೊಡ್ಮನೆ ಮಗ ರಾಘವೇಂದ್ರ ರಾಜ್ ಕುಮಾರ್, ಸುಂದರ್ ರಾಜ್, ರಂಗಾಯಣ ರಘು, ಸ್ಪರ್ಶ ರೇಖಾ ಮುಂತಾದವರು ತಾರಾಗಣದಲ್ಲಿದ್ದಾರೆ. ಡ್ಯೂಡ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಕನ್ನಡ, ತಮಿಳು, ಹಿಂದಿ ಸೇರಿದಂತೆ ಪಂಚಭಾಷೆಗಳಲ್ಲಿ ನಿರ್ಮಾಣವಾಗಲಿದೆ. ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಸಿನಿಮಾ ತೆರೆಗೆ ಬರಲಿದೆ.

ಹೈನಾ ಲಿರಿಕಲ್ ಸಾಂಗ್ ರಿಲೀಸ್

ವೆಂಕಟ್ ಭಾರದ್ವಜ್ ನಿರ್ದೇಶನದ ಹೈನಾ ಆರಂಭದಿಂದಲೂ ಕುತೂಹಲ ಕೆರಳಿಸಿದ ಟೈಟಲ್‌ನಲ್ಲಿಯೇ ಕ್ಯೂರಿಯಾಸಿಟಿ ಮೂಡಿಸಿದ್ದ ಹೈನಾ ಚಿತ್ರದ ಲಿರಿಕಲ್ ಸಾಂಗ್ ರಿಲೀಸ್ ಆಗಿದೆ. ಹೈನಾ ಹಂಟ್.. ಎಂಬ ಸಾಂಗ್ ಇದಾಗಿದ್ದು, ಕಾರ್ತಿಕ್ ಗುಬ್ಬಿ ಸಾಹಿತ್ಯ ರಚಿಸಿದ್ದು, ಹಾಡಿಗೂ ದನಿಯಾಗಿದ್ದಾರೆ. ಲವ್ ಪ್ರಣ್ ಮೆಹತ ಸಂಗೀತ ಸಂಯೋಜಿಸಿದ್ದಾರೆ. ರ್ಯಾಪ್ ಶೈಲಿಯ ಈ ಅದ್ದೂರಿಯಾಗಿ ಮೂಡಿಬಂದಿದೆ. ಹೈನಾ ಭೇಟೆಯಾಡಲು ಹೊಂಚು ಹಾಕುತ್ತಿರುವ ಹಿಂಟ್ ಈ ಹಾಡಿನಲ್ಲಿದೆ. ಶಕ್ತಿಯುತ ಸಾಹಿತ್ಯ, ಮನಮೋಹಕ ದೃಶ್ಯಗಳು ಮತ್ತು ಹೃದಯಸ್ಪರ್ಶಿ ಸಂಗೀತದ ಅದ್ಭುತ ಸಂಯೋಜನೆ ಹಾಡಿಗೆ ಹೊಸತನ ತುಂಬಿದೆ.

ಸಸ್ಪೆನ್ಸ್, ಥ್ರಿಲ್ಲರ್ ಕಥೆಯ ಹೈನಾ ಗಟ್ಟಿ ಕಂಟೆಂಟ್ ಒಳಗೊಂಡಿದೆ ಎಂಬುದು ಹಾಡಿನಲ್ಲಿ ಸ್ಪಷ್ಟವಾಗುತ್ತದೆ.

ಹರ್ಷ ಅರ್ಜುನ್, ದಿಗಂತ ಸ್ವರೂಪ, ರಾಜ್ ಕಮಲ್, ಲಕ್ಷ್ಮಣ ಶಿವಶಂಕರ್, ನಂದಕಿಶೋರ್ ಮತ್ತು ಲಾರೆನ್ಸ್ ಪ್ರೀತಮ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಲಕ್ಷ್ಮಣ ಶಿವಶಂಕರ್ ಅವರ ಭಾವಪೂರ್ಣ ಕಥೆ ಮತ್ತು ಬಲವಾದ ಸಂಭಾಷಣೆ, ಲವ್ ಪ್ರಣ್ ಮೆಹತಾ ಅವರ ಸೊಗಸಾದ ಸಂಗೀತ, ನಿಶಾಂತ್ ನಾನಿ ಕಲಾ ನಿರ್ದೇಶನ ಹೈನಾಗೆ ಪವರ್ ತುಂಬಿದೆ. ವೆಂಕಟ್ ಭಾರದ್ವಜ್ ಮತ್ತು ರಾಜ್ ಕಮಲ್ ಜಂಟಿಯಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಈ ತಿಂಗಳಲ್ಲಿಯೇ ಹೈನಾ ತೆರೆಗೆ ಬರಲಿದೆ.

ಬಾಲಿವುಡ್‌ಗೆ ಶ್ರೀಲೀಲಾ

ಕಿಸ್ ಬೆಡಗಿ ಶ್ರೀಲೀಲಾ ಟಾಲಿವುಡ್‌ನಲ್ಲಿ ಬೇಡಿಕೆಯ ನಟಿಯಾಗಿದ್ದಾರೆ. ಪುಷ್ಪ 2ನಲ್ಲಿ ಐಟಂ ಹಾಡಿಗೆ ಭರ್ಜರಿ ಹೆಜ್ಜೆ ಹಾಕಿದ ಶ್ರೀಲೀಲಾ ಅಭಿಮಾನಿಗಳ ಮನಗೆದ್ದರು. ಈಗ ಬಾಲಿವುಡ್ ಅಂಗಳಕ್ಕೂ ಎಂಟ್ರಿಕೊಟ್ಟಿದ್ದಾರೆ. ಬಾಲಿವುಡ್ ನಟ ಸೈಫ್ ಅಲಿಖಾನ್ ಪುತ್ರ ಇಬ್ರಾಹಿಂ ನಾಯಕನಾಗಿ ನಟಿಸುತ್ತಿರುವ ಹೊಸ ಚಿತ್ರದಲ್ಲಿ ಶ್ರೀಲೀಲಾ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ಇಬ್ರಾಹಿಂ ಈ ಚಿತ್ರದ ಮೂಲಕ ನಟನೆಗೆ ಎಂಟ್ರಿಕೊಡುತ್ತಿದ್ದಾರೆ. ಹಾಗಾಗಿ ಇವರೊಂದಿಗೆ ಬಾಲಿವುಡ್‌ಗೆ ಹೊಸ ನಾಯಕಿಯನ್ನು ಪರಿಚಯಿಸುವ ನಿಟ್ಟಿನಲ್ಲಿ ಶ್ರೀಲೀಲಾ ಅವರನ್ನು ನಾಯಕಿಯಾಗಿ ಆಯ್ಕೆ ಮಾಡಲಾಗಿದೆ. ಈಗಾಗಲೇ ಕಥೆ ಕೇಳಿ ಮೆಚ್ಚಿರುವ ಶ್ರೀಲೀಲಾ, ನಟಿಸಲು ಗ್ರೀನ್ ಸಿಗ್ನಲ್ ನೀಡಿದ್ದಾರೆ. ಇದೊಂದು ಕಾಮಿಡಿ ಲವ್ ಸ್ಟೋರಿಯ ಕಥೆಯಾಗಿದ್ದು, ಒಂದಷ್ಟು ಥ್ರಿಲ್ಲರ್ ಅಂಶಗಳೂ ಬೆರೆತಿವೆ. ಇದು ಕೂಡ ಹೈಬಜೆಟ್ ಸಿನಿಮಾವಾಗಿದ್ದು, ಮ್ಯಾಡ್ ಲಾಕ್ ಸಂಸ್ಥೆ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದೆ. ಫೆಬ್ರವರಿಯಲ್ಲಿ ಹೊಸ ಚಿತ್ರ ಸೆಟ್ಟೇರಲಿದೆ. ಹಿಂದಿ ಸಿನಿಮಾದ ಜತೆಗೆ ತೆಲುಗು, ತಮಿಳು ಸಿನಿಮಾಗಳಲ್ಲಿಯೂ ಕಿಸ್ ಬೆಡಗಿ ಬ್ಯುಸಿಯಾಗಿದ್ದಾರೆ.

ಬನ್ಸಾಲಿ ಜತೆಯಾದ ಅಲ್ಲು

ಪುಷ್ಪ ಯಶಸ್ಸಿನ ಖುಷಿ ಯಲ್ಲಿರಬೇಕಾಗಿದ್ದ ಅಲ್ಲು ಅರ್ಜುನ್ ಸಂಧ್ಯಾ ಚಿತ್ರಮಂದಿರದಲ್ಲಿ ನಡೆದ ಘಟನೆಯಿಂದ ಸಂಕಷ್ಟಕ್ಕೆ ಸಿಲುಕಿದ್ದರು. ಈಗ ಎಲ್ಲಾ ನೋವುಗಳನ್ನು ಮರೆತು ಹೊರಬಂದಿರುವ ಅಲ್ಲು, ಹೊಸ ಚಿತ್ರದಲ್ಲಿ ನಟಿಸಲು ಸಿದ್ಧವಾಗಿದ್ದಾರೆ. ವಿಶೇಷ ಎಂದರೆ ಅಲ್ಲು ಈ ಬಾರಿ ಖ್ಯಾತ ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ ಜತೆಯಾಗಿದ್ದಾರೆ. ಸಂಜಯ್ ಲೀಲಾ ಬನ್ಸಾಲಿ ಲವ್ ಅಂಡ್ ವಾರ್ ಸಿನಿಮಾ ನಿರ್ದೇಶನಕ್ಕೆ ಹಿಂದಿನಿಂದಲೂ ಸಿದ್ಧತೆ ನಡೆಸಿದ್ದರು. ಈಗ ಲವ್ ಅಂಡ್ ವಾರ್ ಸೆಟ್ಟೇರಲಿದೆ. ಈ ಚಿತ್ರದಲ್ಲಿಯೇ ಅಲ್ಲು ನಾಯಕನಾಗಿ ನಟಿಸಲಿದ್ದಾರೆ ಎನ್ನಲಾಗುತ್ತಿದೆ. ಲವ್ ಅಂಡ್ ವಾರ್ ಲವ್ ಸ್ಟೋರಿಯ ಜತೆಗೆ ಆ್ಯಕ್ಷನ್ ಕಥೆಯನ್ನು ಒಳಗೊಂಡಿದೆ. ಇದು ಅಲ್ಲು ಅರ್ಜುನ್ ಗೆ ಹೇಳಿ ಮಾಡಿಸಿದ ಕಥೆಯಾಗಿದೆ.

ಸಂಜಯ್ ಲೀಲಾ ಬನ್ಸಾಲಿ ಈ ಹಿಂದಿನಿಂದಲೂ ದಕ್ಷಿಣದ ಸ್ಟಾರ್ ನಟರೊಂದಿಗೆ ಸಿನಿಮಾ ಮಾಡಬೇಕು ಎಂದು ಹಂಬಲ ಹೊಂದಿದ್ದರು. ಅದಕ್ಕಾಗಿಯೇ ಈ ಚಿತ್ರಕ್ಕೆ ಅಲ್ಲು ಅರ್ಜುನ್ ಅವರನ್ನು ನಾಯಕನಾಗಿ ಆಯ್ಕೆ ಮಾಡಿದ್ದಾರೆ. ಇನ್ನು ಈ ಚಿತ್ರದಲ್ಲಿ ನಾಯಕಿಯಾಗಿ ಯಾರು ನಟಿಸಲಿದ್ದಾರೆ ಎಂಬ ಕುತೂಹಲವಿತ್ತು. ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ ಈ ಚಿತ್ರದಲ್ಲಿ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ ಎನ್ನಲಾಗುತ್ತಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಏಪ್ರಿಲ್ ನಲ್ಲಿ ಚಿತ್ರ ಸೆಟ್ಟೇರಲಿದೆ. ಇದರ ಜತೆಗೆ ಅಲ್ಲು ಆಟ್ಲಿ ಜತೆಗೂ ಸಿನಿಮಾ ಮಾಡಲಿದ್ದಾರೆ. ನಿರ್ದೇಶಕ ಆಟ್ಲಿ, ಅಲ್ಲು ಅರ್ಜುನ್ ಗಾಗಿ ಈಗಾಗಲೇ ಕಥೆ ಹೆಣೆದಿದ್ದು ನಿರ್ದೇಶನಕ್ಕೆ ಸಿದ್ಧವಾಗಿದ್ದಾರೆ. ಅಂತು ಅಲ್ಲು ಎರಡು ಸ್ಟಾರ್ ನಿರ್ದೇಶಕರ ಸಿನಿಮಾದಲ್ಲಿ ನಟಿಸಲಿದ್ದಾರೆ.